॥ ಶ್ರೀಃ ॥

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ

ಶ್ರೀಮದ್ಭನುಮದ್ಭೀಮಮಧ್ವಾಂತರ್ಗತ ರಾಮಕೃಷ್ಣ ವೇದವ್ಯಾಸಾತ್ಮಕ ಶ್ರೀಲಕ್ಷ್ಮೀಹಯಗ್ರೀವಾಯ ನಮಃ

ಶ್ರೀ ಗುರುಭ್ಯೋನಮಃ

೧೮ ನೇ ಅಧ್ಯಾಯವು

ಯದಾರಾಮಾದವಾಪ್ತಾನಿ ದಿವ್ಯಾಸ್ತ್ರಾಣಿ ಪ್ರಪೇದಿರೇ ॥
ದ್ರೋಣಾತ್ಕುಮಾರಾಸ್ತೇಷ್ವಾಸೀತ್ಸರ್ವೇಷ್ವಪ್ಯಧಿಕೋऽರ್ಜುನಃ ॥೧॥

ದ್ರೋಣೇನ – ದ್ರೋಣಾಚಾರ್ಯರಿಂದ, ರಾಮಾತ್ – ಪರಶುರಾಮರದೆಶೆಯಿಂದ ಅವಾಪ್ತಾನಿ – ಹೊಂದಲ್ಪಟ್ಟ ದಿವ್ಯಾಸ್ತ್ರಾಣಿ – ಅಲೌಕಿಕಾಸ್ತ್ರಗಳನ್ನು, ಕುಮಾರಾಃ – ರಾಜಪುತ್ರರು, ಯದಾ – ಯಾವಾಗ ದ್ರೋಣಾತ್ – ದ್ರೋಣಾಚಾರ್ಯರ ದೆಶೆಯಿಂದ, ಪ್ರಪೇದಿರೇ – ಹೊಂದಿದರೋ, ತದಾ – ಆಗ, ತೇಷುಸರ್ವೇಷು – ಎಲ್ಲ ಆ ರಾಜಪುತ್ರರಲ್ಲಿ ಅರ್ಜುನಃ – ಅರ್ಜುನನು ಅಧಿಕಃ – ಶ್ರೇಷ್ಠನು ಆಸೀತ್ – ಆಗಿದ್ದನು. ॥ ೧ ॥

ಅವ : ಸರ್ವವಿದ್ಯಾಪ್ರವೀಣನಾದ ಭೀಮನಿರುವಾಗ ಅರ್ಜುನನು ಹೇಗೆ ಶ್ರೇಷ್ಠನಾದನು ಎಂಬ ಪ್ರಶ್ನೆಗೆ ಸಮಾಧಾನವನ್ನು ಹೇಳುತ್ತಾರೆ.

ನಿಜಪ್ರತಿಭಯಾ ಜಾನನ್ಸರ್ವಾಸ್ತ್ರಾಣಿ ತತೋऽಧಿಕಂ ॥
ನಾಸ್ತ್ರಯುದ್ಧಂ ಕ್ವಚಿದ್ಭೀಮೋಮನ್ಯತೇ ಧರ್ಮವಂಜಸಾ ॥ ೨ ॥

ನಿಜಪ್ರತಿಭಯಾ – ತನ್ನ ಸ್ವರೂಪ ಪ್ರಜ್ಞೆಯಿಂದ ತತಃ – ಆ ಅರ್ಜುನನಿಗಿಂತ ಅಧಿಕಂ–ಹೆಚ್ಚಾಗಿ, ಸರ್ವಾಸ್ತ್ರಾಣಿ–ಎಲ್ಲಾ ಅಸ್ತ್ರಗಳನ್ನೂ ಜಾನನ್ – ತಿಳಿದಿರುವ ಭೀಮಃ - ಭೀಮಸೇನನು ಆಸ್ತ್ರಯುದ್ಧಂ – ಆಸ್ತ್ರಯುದ್ಧವನ್ನು ಕ್ವಚಿತ್ – ಎಲ್ಲಿಯೂ ಅಂಜಸಾ – ಚೆನ್ನಾಗಿ ಧರ್ಮಂ – ಧರ್ಮಹನ್ನಾಗಿ ನಮನ್ಯತೇ – ತಿಳಿಯುವದಿಲ್ಲ. ಗುರುಗಳ ಅನುಗ್ರಹದಿಂದ ಅಸ್ತ್ರಜ್ಞಾನವನ್ನು ಹೊಂದಿದವರಲ್ಲಿ ಅರ್ಜುನನು ಶ್ರೇಷ್ಠನೆಂಬ ಅಭಿಪ್ರಾಯ ॥ ೨ ॥

ನಹಿ ಭಾಗವತೋಧರ್ಮೋ ದೇವತಾಭ್ಯುಪಯಾಚನಂ ॥
ಜ್ಞಾನಭಕ್ತೀ ಹರೇಸ್ತೃಪ್ತಿಂ ವಿನಾ ವಿಷ್ಣೋರಪಿ ಕ್ವಚಿತ್ ॥
ನಾಕಾಂಕ್ಷ್ಯಂ ಕಿಮುತಾನ್ಯೇಭ್ಯೋಹ್ಯಸ್ತ್ರಂ ಕಾಮ್ಯಫಲಪ್ರದಂ ॥ ೩–೪ ॥

ದೇವತಾಭ್ಯುಪಯಾಚನಂ – ಅಸ್ತ್ರಮಂತ್ರಗಳಿಂದ ದೇವತೆಗಳನ್ನು ಪ್ರಾರ್ಥಿಸುವುದು ಭಾಗವತಃ ಧರ್ಮಃ ನಹಿ – ಮುಖ್ಯವಾದ ಭಾಗವತ ಧರ್ಮವು ಅಲ್ಲವಷ್ಟೇ, ಹರೇಃ – ಪರಮಾತ್ಮನ ಜ್ಞಾನ, ಭಕ್ತೀ – ಜ್ಞಾನ ಮತ್ತು ಭಕ್ತಿಗಳನ್ನು ತೃಪ್ತಿಂ – ಪರಮಾತ್ಮನ ಪ್ರೀತಿಯನ್ನೂ ವಿನಾ – ಹೊರತು ವಿಷ್ಣೋರಪಿ – ಪರಮಾತ್ಮನ ಸಕಾಶದಿಂದಲೂ ಕೂಡ ಕ್ವಚಿತ್ –

ಎಲ್ಲಿಯೂ ಬೇರೆ ಯಾವುದೂ ನಾಕಾಂಕ್ಷ್ಯಂ – ಇಚ್ಚಿಸಲ್ಪಡಬಾರದು. ಅನ್ಯೇಭ್ಯಃಕಿಮುತ – ವಿಷ್ಣುವಿನಿಂದಲೇ ಅಪೇಕ್ಷಿಸಬಾರದಂದ ಮೇಲೆ ಇತರರಿಂದ ಅಪೇಕ್ಷಿಸಬಾರದೆಂದು ಏನು ಹೇಳತಕ್ಕದ್ದು. ಅಸ್ತಂ – ಅಸ್ತವಿದ್ಯೆಯು ಕಾಮ್ಯಫಲಪ್ರದಂ – ಕಾಮಿತ ಫಲವನ್ನು ಕೊಡತಕ್ಕದ್ದು ಹಿ – ಪ್ರಸಿದ್ಧ ॥ ೩–೪ ॥

ಶುದ್ಧೇ ಭಾಗವತೇಧರ್ಮೇ ನಿರತೋಯದ್ವೃಕೋದರಃ
ನಕಾಮ್ಯಕರ್ಮ ಕೃತ್ತಸ್ಮಾನ್ನಾಯಾಚದ್ದೇವ ಮಾನುಷಾನ್ ॥ ೫ ॥

ಯತ್ – ಯಾವ ಕಾರಣದಿಂದ **ವೃಕೋದರಃ** – ಭೀಮಸೇನನು **ಶುದ್ಧೇ** – ನಿರ್ದುಷ್ಟವಾದ ಭಾಗವತೇಧರ್ಮೇ – ಭಗವಂತನಿಗೆ ಪ್ರೀತಿಯನ್ನುಂಟು ಮಾಡುವ **ಧರ್ಮದಲ್ಲಿ** ನಿರತಃ – ಆಸಕ್ತನೋ **ತಸ್ಮಾತ್** – ಆಕಾರಣದಿಂದ **ಕಾಮ್ಯಕರ್ಮ ಕೃತ್** – ಕಾಮ್ಯಕರ್ಮವನ್ನು ಮಾಡಿ **ಅದರ ಫಲದಲ್ಲಿ** ಅಪೇಕ್ಷೆಯುಳ್ಳವನು **ನ** – ಆಗುವದಿಲ್ಲ ಆದ್ದರಿಂದಲೇ ದೇವಮಾನುಷಾನ್ – ದೇವತೆಗಳನ್ನೂ ಮನುಷ್ಯರನ್ನೂ **ನಾಯಾಚತ್** – ಬೇಡಲಿಲ್ಲ ॥ ೫ ॥

ಭಾವಾನುವಾದ

೧–೫ ರಾಜಕುಮಾರರು ದ್ರೋಣಾಚಾರ್ಯರ ಹತ್ತಿರ ಅಸ್ತ್ರಾಭ್ಯಾಸ ಮಾಡುವ ಸಮಯದಲ್ಲಿ ಅವರೆಲ್ಲರಲ್ಲಿಯೂ ಅರ್ಜುನನು ಶ್ರೇಷ್ಠನಾಗಿದ್ದನು. ಯದ್ಯಪಿ ಭೀಮಸೇನದೇವರು ಅರ್ಜುನನಿಗಿಂತ ಶ್ರೇಷ್ಠರು ನಿಜ; ಆದರೆ ಅವರು ದ್ರೋಣಾಚಾರ್ಯರಲ್ಲಿ ಅಸ್ತ್ರಾಭ್ಯಾಸ ಮಾಡಲಿಲ್ಲ. ಸ್ವಂತ ಪ್ರತಿಭೆಯಿಂದಲೇ ಎಲ್ಲವನ್ನು ತಿಳಿದಿದ್ದಾರೆ. ಅಭ್ಯಾಸ ಮಾಡಿದವರಲ್ಲಿ ಅರ್ಜುನನು ಶ್ರೇಷ್ಠನು ಎಂದು ಹೇಳಿದ್ದರಿಂದ ವಿರೋಧವಿಲ್ಲ. ಶ್ರೀ ಭೀಮಸೇನ ದೇವರು ಅಸ್ತ್ರಗಳನ್ನು ತಿಳಿದವರಾದರೂ ಯುದ್ಧದಲ್ಲಿ ಅವುಗಳ ಉಪಯೋಗವನ್ನೂ ಮಾಡುವದಿಲ್ಲ. ಹಾಗೆ ಉಪಯೋಗಿಸುವದು ಭಾಗವತ ಧರ್ಮವಲ್ಲ ಎಂದೇ ಶ್ರೀ ಭೀಮಸೇನದೇವರು ತಿಳಿದಿದ್ದರು.

ಜ್ಞಾನ, ಭಕ್ತಿ, ಹರಿಪ್ರೀತಿಗಳನ್ನು ಮಾತ್ರ ದೇವರಿಂದ ಪಡೆಯಬಹುದು. ಉಳಿದವನ್ನು ದೇವರಿಂದಲೂ ಕೂಡ ಅಪೇಕ್ಷಿಸಬಾರದು ಹಾಗಿರುವಾಗ ದೇವತೆಗಳಿಂದ ಕಃವ್ಯ ಫಲವನ್ನು ಅಪೇಕ್ಷಿಸುವದು ಹೇಗೆ ಧರ್ಮವಾದೀತು ? ಶುದ್ಧ ಭಾಗವತ ಧರ್ಮದಲ್ಲಿದ್ದವರು ಭೀಮಸೇನದೇವರೊಬ್ಬರು. ಆದ್ದರಿಂದ ಕಾಮ್ಯ ಕರ್ಮಗಳನ್ನು (ಮಾಡುವದಿಲ್ಲ) ಮಾಡಿಲ್ಲ ದೇವ ಮನುಷ್ಯರನ್ನು ಪ್ರಾರ್ಥಿಸಲಿಲ್ಲ.

ಹರಿಶ್ಚನಾರ್ಥಿತ ಸ್ತೇನ ಕದಾಚಿತ್ಕಾಮ್ಯಲಿಪ್ಸಯಾ
ಭಿಕ್ಷಾಮಟಂಶ್ಚ ಹುಂಕಾರಾತ್ಕರವದ್ವೈಶ್ಯತೋಽಗ್ರಹೀತ್ ॥ ೬ ॥

ತೇನ – ಆ ಭೀಮಸೇನನಿಂದ **ಕದಾಚಿತ್** ಯಾವಾಗಲೂ **ಕಾಮ್ಯಲಿಪ್ಸಯಾ** – ವಿಷಯ ಪ್ರಾಪ್ತೀಚ್ಛೆಯಿಂದ **ಹರಿಶ್ಚ** – ಪರಮಾತ್ಮನೂ ಕೂಡ **ನಾರ್ಥಿತಃ** – ಪ್ರಾರ್ಥಿಸಿಕೊಳ್ಳಲ್ಪಡಲಿಲ್ಲ. **ರಾಜಾ** – ರಾಜನು **ವೈಶ್ಯತಃ** – ವೈಶ್ಯರಿಂದ **ಕರವತ್** – ಕಪ್ಪವನ್ನು ಸ್ವೀಕರಿಸುವಂತೆ **ಹುಂಕಾರಾತ್** – ಹುಂಕಾರದಿಂದಲೇ **ಅಟನ್** – ಸಂಚರಿಸುವ **ಭೀಮನು ಭಿಕ್ಷಾಂ** ಭಿಕ್ಷೆಯನ್ನು **ಅಗ್ರಹೀತ್** – ಸ್ವೀಕರಿಸುತ್ತಿದ್ದನು. ॥ ೬ ॥

ನಾನ್ಯದೇವಾನತಾಸ್ತೇನ ವಾಸುದೇವಾನ್ನಪೂಜಿತಾಃ ॥
ನ ಪ್ರತೀಪಂಹರೇಃ ಕ್ವಾಪಿ ಸ ಕರೋತಿ ಕಥಂಚನ ॥ ೭ ॥

ತೇನ – ಆ ಭೀಮಸೇನನಿಂದ **ವಾಸುದೇವಾತ್** – ಪರಮಾತ್ಮನ ದೆಸೆಯಿಂದ **ಅನ್ಯದೇವಾಃ** – ಇತರ ದೇವತೆಗಳು **ನನತಾಃ** – ನಮಸ್ಕರಿಸಲ್ಪಡಲಿಲ್ಲ. **ನಪೂಜಿತಾಃ** - ಪೂಜಿಸಲ್ಪಡಲಿಲ್ಲ **ಸಃ** – ಆ ಭೀಮಸೇನನು **ಕ್ವಾಪಿ**–ಎಲ್ಲಿಯೂ ಕೂಡ **ಹರೇಃ** – ಪರಮಾತ್ಮನಿಗೆ **ಪ್ರತೀಪಂ** – ವಿರೋಧವನ್ನು **ಕಂಥಚನ**–ಯಾವ ರೀತಿಯಿಂದಲೂ **ನಕರೋತಿ** – ಮಾಡುವದಿಲ್ಲ. ॥ ೭ ॥

ಅನುಪಸ್ಕಾರಿಣೋಯುದ್ಧೇ ನಾಭಿಯಾತಿ ಹ್ಯುಪಸ್ಕರೀ ॥
ನಾಪಯಾತಿಯುಧಃ ಕ್ವಾಪಿ ನಕ್ವಚಿಚ್ಛದ್ಮ ಚಾಚರೇತ್ ॥ ೮ ॥

ಅನುಪಸ್ಕಾರಿಣಃ – ಕವಚ, ಅಸ್ತ್ರಾದಿರಹಿತರನ್ನು ಕುರಿತು ಯುದ್ಧೇ – ಯುದ್ಧದಲ್ಲಿ ಉಪಸ್ಕರೀಸನ್ – ತಾನು ಕವಚಾದಿಗಳುಳ್ಳವನಾಗಿ ನಾಭಿಯಾತಿ – ಹೋಗುವದಿಲ್ಲ. ಕ್ವಾಪಿ – ಎಲ್ಲಿಯೂ ಯುಧಃ – ಯುದ್ಧದ ದೆಸೆಯಿಂದ ನಾಪಯಾತಿ – ಹಿಂತಿರುಗಿ ಹೋಗುವದಿಲ್ಲ. ಕ್ವಚಿತ್ – ಎಲ್ಲಿಯೂ ಛದ್ಮ ಚ – ಕಪಟವನ್ನೂ ಕೂಡ ನಾಚರೇತ್ – ಆಚರಿಸುವದಿಲ್ಲ. ॥ ೮ ॥

ಸಊರ್ಧ್ವದೈಹಿಕಾನುಜ್ಞಾಮವೈಷ್ಣವ ಕೃತೇಽಕರೋತ್ ॥
ನಕರೋತಿಸ್ವಯಂ ನೈಷಾಂ ಪ್ರಿಯಮುಪಾಚರೇತ್ಕ್ವಚಿತ್ ॥ ೯ ॥

ಸಃ – ಭೀಮಸೇನನು ಅವೈಷ್ಣವಕೃತೇ – ವಿಷ್ಣುಭಕ್ತರಲ್ಲದ ದುರ್ಯೋಧನಾದಿಗಳಿಗೋಸ್ಕರ ಔರ್ಧ್ವದೈಹಿಕಾನುಜ್ಞಾಂ – ಶರೀರಪರಿತ್ಯಾಗಾನಂತರದಲ್ಲಿ ಮಾಡಲು ಯೋಗ್ಯವಾದ ಜಲಾಂಜಲಿ, ಶ್ರಾದ್ಧಾದಿಕರ್ಮಕ್ಕೆ ಅಪ್ಪಣೆಯನ್ನು ನಾಕರೋತ್ – ಮಾಡಲಿಲ್ಲ. ಸ್ವಯಂ – ತಾನುಸಹ ನಕರೋತಿ – ವಿಷ್ಣುದ್ವೇಷಿಗಳ ಅಂತ್ಯಕರ್ಮವನ್ನು ಮಾಡುವದಿಲ್ಲ. ಏಷಾಂ – ಈ ವಿಷ್ಣುದ್ವೇಷಿಗಳಿಗೆ ಕ್ವಚಿತ್ – ಎಲ್ಲಿಯೂ ಕೂಡ ಪ್ರಿಯಂ – ಪ್ರಿಯವನ್ನು ನಾಚರೇತ್ – ಮಾಡಲಿಲ್ಲ. ॥ ೯ ॥

ಸಖ್ಯಂ ನಾವೈಷ್ಣವೈಶ್ಚಕ್ರೇ ಪ್ರತೀಪಂ ವೈಷ್ಣವೇನತು ॥
ಪರೋಕ್ಷೇಽಪಿಹರೇರ್ನಿಂದಾಕೃತೋ ಜಿಹ್ವಾಂ ಛಿನತ್ತ್ಯಚ ॥ ೧೦ ॥

ಅವೈಷ್ಣವೈಃ – ವಿಷ್ಣುಭಕ್ತರಲ್ಲದ ದುರ್ಯೋಧನಾದಿಗಳಿಂದ ಸಖ್ಯಂ – ಮೈತ್ರ್ಯವನ್ನು ನಚಕ್ರೇ – ಮಾಡಲಿಲ್ಲ. ವೈಷ್ಣವೇ – ವಿಷ್ಣುಭಕ್ತನಲ್ಲಿ ಪ್ರತೀಪಂ – ವಿರೋಧವನ್ನು ನಚಕ್ರೇ – ಮಾಡಲಿಲ್ಲ. ಪರೋಕ್ಷೇಽಪಿ – ದೂರದಲ್ಲಿಯೂ ಕೂಡ ಹರೇಃ – ಪರಮಾತ್ಮನ ನಿಂದಾಕೃತಃ – ನಿಂದೆಯನ್ನು ಮಾಡತಕ್ಕವನ ಜಿಹ್ವಾಂ – ನಾಲಿಗೆಯನ್ನು ಛಿನತ್ತ್ಯಚ – ಕತ್ತರಿಸುತ್ತಾನೆ. ॥ ೧೦ ॥

೬–೧೦ ಅವರು ಐಹಿಕ ಕಾಮನೆಗಳಿಗಾಗಿ ದೇವರನ್ನೂ ಪ್ರಾರ್ಥಿಸಿಲ್ಲ. ಏಕಚಕ್ರದಲ್ಲಿರುವಾಗ ಭಿಕ್ಷೆಗಾಗಿ ಹೋದಾಗಲೂ ಕೂಡ ಹುಂಕಾರದಿಂದಲೇ ರಾಜರು ವೈಶ್ಯ (ವ್ಯಾಪಾರಿಜನ) ರಿಂದ ಕಪ್ಪ–ಕಾಣಿಕೆ ಸ್ವೀಕರಿಸುವಂತೆ ಸ್ವೀಕರಿಸುತ್ತಿದ್ದರು. ಶ್ರೀ ಹರಿಯನ್ನು ಬಿಟ್ಟು ಬೇರೆ ಯಾವ ದೇವತೆಗಳಿಗೂ ನಮಸ್ಕರಿಸಿಲ್ಲ. ಶ್ರೀ ಹರಿಯ ವಿರೋಧವನ್ನು ಎಂದೂ ಯಾವ ರೀತಿಯಿಂದಲೂ ಮಾಡಿಲ್ಲ. ಶಸ್ತ್ರಕವಚ ಇತ್ಯಾದಿಗಳಿಂದ ರಹಿತರಾದ ಯೋಧರ ಜೊತೆಗೆ, ತಾವು ಕವಚಾದಿಗಳಿಂದ ಕೂಡಿಕೊಂಡು ಯುದ್ಧಕ್ಕಾಗಿ ಹೋಗುತ್ತಿದ್ದಿಲ್ಲ. ಛೆದರಿ ಯುದ್ಧದಿಂದ ಹಿಂದಿರುಗಿ ಹೋಗಿಲ್ಲ. ಕಪಟವನ್ನು ಎಂದೂ ಕೂಡ ಆಚರಿಸಿಲ್ಲ. ದುರ್ಯೋಧನಾದಿಗಳಂಥ / ವಿಷ್ಣುದ್ವೇಷಿಗಳ ಸಂಸ್ಕಾರಕ್ಕಾಗಿ ಅನುಜ್ಞಾವನ್ನು ಕೊಡಲಿಲ್ಲ. ತಾವೂ ಅವರ ಸಂಸ್ಕಾರ ಮಾಡಲಿಲ್ಲ. ಅಂಥವರ ಸಂತೋಷಕರ ಕಾರ್ಯವನ್ನು ಎಂದೂ ಮಾಡಲಿಲ್ಲ. ವಿಷ್ಣು ದ್ವೇಷಿಗಳಿಂದ ಸಖ್ಯವನ್ನು ಮಾಡಲಿಲ್ಲ. ವಿಷ್ಣು ಭಕ್ತರ ವಿರೋಧವನ್ನು ಮಾಡಲಿಲ್ಲ. ತಮ್ಮ ಹಿಂಬದಿಯಲ್ಲಿ ದೂರದಲ್ಲಿ ಶ್ರೀ ಹರಿನಿಂದಾವನ್ನು ಮಾಡಿದವನ ನಾಲಿಗೆಯನ್ನೂ ಕೂಡ ಕತ್ತರಿಸುತ್ತಿದ್ದರು.

ಪ್ರತೀಪಕಾರಿಣೋ ಹಂತಿ ವಿಷ್ಣೋರ್ವೈತಾನಜೀಘನತ್ ॥
ನ ಸಂಶಯಂ ಕದಾಪ್ಯೇಷ ಧರ್ಮೇ ಜ್ಞಾನೇಪಿವಾ ಕರೋತ್ ॥ ೧೧ ॥

ಪ್ರತೀಪಕಾರಿಣಃ – ವಿಷ್ಣುವಿನ ದ್ವೇಷವಮಾಡತಕ್ಕವರನ್ನು ಹಂತಿ – ತಾನೇ ಕೊಲ್ಲುತ್ತಾನೆ. ವಾ – ಅಥವಾ ವಿಷ್ಣುವಿನ ವಿರೋಧ ಮಾಡತಕ್ಕವರನ್ನು ಅಜೀಘನತ್ ಇತರರಿಂದ ಕೊಲ್ಲಿಸುತ್ತಾನೆ. ಏಷಃ – ಈ ಭೀಮನು ಕದಾಪಿ – ಯಾವಾಗಲೂ ಕೂಡ ಧರ್ಮೇ – ಧರ್ಮದಲ್ಲಾಗಲೀ ಜ್ಞಾನೇ ಪಿವಾ – ಜ್ಞಾನದಲ್ಲಾಗಲೀ ಸಂಶಯಂ–ಸಂದೇಹವನ್ನು ನಾಕರೋತ್–ಮಾಡಲಿಲ್ಲ ॥ ೧೧ ॥

ವಿದ್ಮೋಽಪಜೀವನಂ ನೈವ ಚಕಾರಾಪದ್ಯಪಿ ಕ್ವಚಿತ್ ॥
ಆತೋ ನ ಧರ್ಮ ನಹುಷೌ ಪ್ರತ್ಯವಾಚ ಕಥಂಚನ ॥ ೧೨ ॥

ವಿದ್ಯೋಪಜೀವನಂ – ವಿದ್ಯೆಯಿಂದ ಉದರ ಪೂರಣವನ್ನು **ಆಪದ್ಯಪಿ** – ಕಷ್ಟಬಂದಾಗಲೂ **ಕೂಡ ಕ್ವಚಿತ್** – ಎಲ್ಲಿಯೂ **ನೈವಚಕಾರ** – ಮಾಡಲೇ ಇಲ್ಲ, **ಅತಃ** – ತಾನು ಬದುಕಬೇಕು ಎಂಬ ಇಚ್ಛೆಯಿಂದ ವಿದ್ಯೆಯಿಂದ ಉಪಜೀವನವು ಅಕಾರ್ಯವಾದ್ದರಿಂದ, ಭೀಮನು **ಧರ್ಮನಹುಷೌ** – ಬಕಪಕ್ಷಿರೂಪವುಳ್ಳ ಯಮನಿಗೂ ಸರ್ಪರೂಪವುಳ್ಳ ನಹುಷನಿಗೂ **ಕಥಂಚನ** – ತನಗೆ ಬಂಧನಾದಿಗಳಿಂದ ಕಷ್ಟವು ಪ್ರಾಪ್ತವಾದಾಗ್ಯೂ **ಕೂಡ ನಪ್ರತ್ಯುವಾಚ** – (ಅವರು ಮಾಡಿದ ಪ್ರಶ್ನೆಗೆ) ಉತ್ತರವನ್ನು ಕೊಡಲಿಲ್ಲ. ॥ ೧೨ ॥

೧೧–೧೨ ವಿಷ್ಣು ವಿರೋಧಿಗಳನ್ನು ಸ್ವಯಂ ಸಂಹರಿಸುತ್ತಿದ್ದರು ಅಥವಾ ಕೊಲ್ಲಿಸುತ್ತಿದ್ದರು. ಧರ್ಮ ಜ್ಞಾನಗಳಲ್ಲಿ ಸಂಶಯವನ್ನು ಎಂದಿಗೂ ಮಾಡಿಲ್ಲ. ವಿದ್ಯೆಯಿಂದ ಜೀವನ ರಕ್ಷಣವನ್ನು ಎಂಥ ಆಪತ್ತಿನಲ್ಲೂ ಕೂಡ ಮಾಡಿಕೊಳ್ಳಲಿಲ್ಲ. ಈ ಕಾರಣದಿಂದಲೇ ಬಕರೂಪನಾಗಿ ಬಂದ ಯಮಧರ್ಮನ, ಹಾಗೂ ಹೆಬ್ಬಾವಿನ ರೂಪದಲ್ಲಿದ್ದ ನಹುಷನ ಪ್ರಶ್ನೆಗಳಿಗೆ ಉತ್ತರ ಕೊಡಲಿಲ್ಲ.

ಅವ ಭೀಮನು ಅಸ್ತ್ರ ಯುದ್ಧವನ್ನು ಧರ್ಮವನ್ನಾಗಿ ತಿಳಿಯು**ವದಿಲ್ಲವೆಂದು** ಹಿಂದೆ ಹೇಳಲ್ಪಟ್ಟಿದೆ. ಹಾಗಾದರೆ ಅಶ್ವತ್ಥಾಮ ಮತ್ತು ಅಲಂಬುಸ ರಾಕ್ಷಸನಿಂದ ಕೂಡಿ ಅಸ್ತ್ರಯುದ್ಧವನ್ನು **ಹೇಗೆ ಮಾಡಿದನು** ಎಂಬ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾರೆ.

ಆಜ್ಞಯೈವಹರೇ ದ್ರೌಣೇ ರಸ್ತ್ರಾಣ್ಯಸ್ತ್ರೈರಶಾಮಯತ್ ॥
ಅದೃಶ್ಯೋಽಲಂಬುಸೋ ಭಗ್ನೋ ನಾನ್ಯತ್ರತು ಕಥಂಚನ ॥ ೧೩ ॥

ಹರೇಃ – ಶ್ರೀಕೃಷ್ಣನ ಆಜ್ಞಯೈವ – ಆಜ್ಞೆಯಿಂದಲೇ ದ್ರೌಣೇಃ – ಅಶ್ವತ್ಥಾಮನ ಅಸ್ತ್ರಾಣಿ – ಅಸ್ತ್ರಗಳನ್ನು ಅಸ್ತ್ರೈಃ – ಅಸ್ತ್ರಗಳಿಂದಲೇ ಅಶಾಮಯತ್ – ಪರಿಹರಿಸಿದನು. ಪರಮಾತ್ಮನ ಆಜ್ಞೆಯಿಂದಲೇ ಅದೃಶ್ಯಃ – ಮಾಯೆಯಿಂದ ಕಣ್ಣಿಗೆ ಕಾಣದಿರುವ ಅಲಂಬುಸಃ – ಅಲಂಬುಸನೆಂಬ ರಾಕ್ಷಸನು ಭಗ್ನಃ – ಪರಾಜಿತನಾದನು. ಅನ್ಯತ್ರ – ಇವರಿಬ್ಬರನ್ನು ಬಿಟ್ಟು ಬೇರೆ ಕಡೆಯಲ್ಲಿ ಕಥಂಚನ – ಯಾವ ರೀತಿಯಿಂದಲೂ ನತು – ಅಸ್ತ್ರಗಳನ್ನು ಸ್ವೀಕರಿಸಲಿಲ್ಲ. ॥ ೧೩ ॥

ಅವ – ಹರಿಯು ಆಜ್ಞೆಯನ್ನು ಕೊಡಲು ಕಾರಣವನ್ನು ಹೇಳುತ್ತಾರೆ.

ನಹ್ಯಸ್ತ್ರ ಯುದ್ಧೇ ಸದೃಶೋ ದ್ರೌಣೇರಸ್ತ್ರಾರ್ಜುನಾದೃತೇ ।
ಸರ್ವವಿತ್ವಂತತೋಭೀಮೇ ಪ್ರದರ್ಶಯಿತುಮೀಶ್ವರಃ ॥
ಅದಾದಾಜ್ಞಾಮಸ್ತ್ರಯುದ್ಧೇ ತಥೈವಾಲಂಬುಸಂಪ್ರತಿ ॥ ೧೪ ॥

ಅಸ್ತ್ರಯುದ್ಧೇ – ಅಸ್ತ್ರಯುದ್ಧದಲ್ಲಿ ಅರ್ಜುನಾತ್ – ಅರ್ಜುನನಿಂದ ಋತೇ – ಹೊರತು ದ್ರೌಣೇಃ – ಅಶ್ವತ್ಥಾಮನಿಗೆ ಸದೃಶಃ – ಸಮಾನನಾದವನು ನಹಿ – ಇಲ್ಲ. ತತಃ – ಆದ್ದರಿಂದ ಈಶ್ವರಃ – ಸ್ವಾಮಿಯಾದ ಶ್ರೀಕೃಷ್ಣನು ಭೀಮೇ – ಭೀಮನಲ್ಲಿ ಸರ್ವವಿತ್ವಂ – ಸರ್ವಜ್ಞತ್ವವನ್ನು ಪ್ರದರ್ಶಯಿತುಂ ತೋರಿಸುವುದಕ್ಕೋಸ್ಕರ ತಥಾ – ಹಾಗೆಯೇ ಅಲಂಬುಸಂಪ್ರತಿ – ಅಲಂಬುಸನನ್ನುಕುರಿತು ಅಸ್ತ್ರಯುದ್ಧೇ – ಅಸ್ತ್ರಯುದ್ಧದಲ್ಲಿ ಆಜ್ಞಾಂ – ಆಪ ಣೆಯನ್ನು ಅದಾತ್ – ಕೊಟ್ಟನು ॥ ೧೪ ॥

ಪ್ರತ್ಯಕ್ಷೀಭೂತದೇವೇಷು ಬಂಧು ಜ್ಯೇಷ್ಠೇಷುವಾನತಿಂ ॥
ಮಾರ್ಯಾದಾಸ್ಥಿತಯೇಽಶಾಸದ್ಭಗವಾನ್ಪುರುಷೋತ್ತಮಃ ॥ ೧೫ ॥

ಪುರುಷೋತ್ತಮಃ – ಕ್ಷರಾಕ್ಷರಪುರುಷರ ದೆಸೆಯಿಂದ **ಉತ್ತಮನಾದ** ಭಗವಾನ್ – ಷಡ್ಗುಣೈಶ್ವರ್ಯ ಸಂಪನ್ನನಾದ ಹರಿಯು ಪ್ರತ್ಯಕ್ಷೀಭೂತದೇವೇಷು – ಪ್ರತ್ಯಕ್ಷರಾಗಿ ಬಂದ **ದೇವತೆಗಳಲ್ಲಿ** ಬಂಧುಜ್ಯೇಷ್ಠೇಷು – ಬಂಧುಗಳಾಗಿ ವಯಸ್ಸಿನಲ್ಲಿ ಅಧಿಕರಾದ ಕುಂತೀ, ಯುಧಿಷ್ಠಿರಾದಿಗಳಲ್ಲಾಗಲೀ **ಮರ್ಯಾದಾಸ್ಥಿತಯೇ** ಲೋಕದಲ್ಲಿ ಸಣ್ಣವರು ದೊಡ್ಡವರಿಗೆ ನಮಸ್ಕರಿಸಬೇಕು ಎಂಬ ನಿಯಮ ರಕ್ಷಣೆಗಾಗಿ **ಅಶಾಸತ್** – ನಮಸ್ಕಾರಮಾಡುವಂತೆ ಶಿಕ್ಷಿಸಿದನು. ॥ ೧೫ ॥

ತತ್ರಾಪಿವಿಷ್ಣುಮೇವಾಸೌ ನಮೇನ್ನಾನ್ಯಂ ಕಥಂಚನ ॥
ಆಜ್ಞಯೈವಾಸ್ತ್ರದೇವಾಂಶ್ಚ ಪ್ರೇರಯಾಮಾಸ ನಾರ್ಥನಾತ್ ॥ ೧೬ ॥

ತತ್ರಾಪಿ ಪ್ರತ್ಯಕ್ಷೀಭೂತ ದೇವತೆಗಳಲ್ಲಿಯೂ ಬಂಧು ಜ್ಯೇಷ್ಠರಲ್ಲಿಯೂ ಕೂಡ ಅಸೌ – ಈ ಭೀಮನು **ವಿಷ್ಣುಮೇವ**– **ಶ್ರೀ ಹರಿಯನ್ನೇ ನಮೇತ್** - ನಮಸ್ಕರಿಸುವನು. ಅನ್ಯಂ – ವಿಷ್ಣುವಿನಿಂದ ಇತರರನ್ನು **ಕಥಂಚನ** – ಯಾವ ರೀತಿಯಿಂದಲೂ **ನನಮೇತ್** - ನಮಸ್ಕರಿಸಲಾರನು. ಅಸ್ತ್ರದೇವಾನ್ – ಅಸ್ತ್ರಯುದ್ಧದಲ್ಲಿ ಅಸ್ತ್ರಾಭಿಮಾನಿ ದೇವತೆಗಳನ್ನು **ಆಜ್ಞಯೈವ** – ಭೃತ್ಯರನ್ನು ಹೇಗೋ ಹಾಗೆ ಅಪ್ಪಣೆಯಿಂದಲೇ ಪ್ರೇರಯಾಮಾಸ – ಪ್ರೇರಿಸುತ್ತಿದ್ದನು. ನಾರ್ಥನಾತ್ – ಪ್ರಾರ್ಥನೆಯಿಂದ ಅಲ್ಲ. ॥ ೧೬ ॥

ಭಾ.ಅ. ೧೩–೧೬ ಶ್ರೀಕೃಷ್ಣನ ಅಪ್ಪಣೆಯ ಪ್ರಕಾರ ೧] ಅಶ್ವತ್ಥಾಮಾಚಾರ್ಯರ ಜೊತೆಗೆ ಅಸ್ತ್ರಯುದ್ಧ ಮಾಡಿದ್ದಾರೆ. **ಅವರ ಅಸ್ತ್ರಗಳನ್ನು** ಪ್ರತ್ಯಸ್ತ್ರಗಳಿಂದ ಪರಿಹರಿಸಿದ್ದಾರೆ. ೨] ಅಸ್ತ್ರಗಳಿಂದ ಅಲಂಬುಸ ಎಂಬ ರಾಕ್ಷಸನನ್ನು ಪರಾಜಯಿಸಿದ್ದಾರೆ. ಇವರಡು ಸಂದರ್ಭಗಳನ್ನು ಬಿಟ್ಟು ಬೇರೆ ಯಾವ ಸಂದರ್ಭದಲ್ಲಿಯೂ ಅಸ್ತ್ರಯುದ್ಧವನ್ನು ಮಾಡಿರುವದಿಲ್ಲ. ಇವರಿಬ್ಬರ ಜೊತೆಗೂ ಕೂಡ ಅಸ್ತ್ರಯುದ್ಧಕ್ಕಾಗಿ ದೇವರು ಆಜ್ಞಾಪಿಸಿದ್ದು ಏಕೆ ಎಂಬ ಪ್ರಶ್ನೆ ಬರಬಹುದು. ಅದಕ್ಕೆ ಸರ್ವಜ್ಞರಾದ ಆಚಾರ್ಯರು ಹೀಗೆ ಉತ್ತರಿಸುತ್ತಾರೆ. ಅಸ್ತ್ರಯುದ್ಧದಲ್ಲಿ ಅರ್ಜುನನ್ನು ಬಿಟ್ಟರೆ ಅಶ್ವತ್ಥಾಮಾಚಾರ್ಯರಿಗೆ ಸದೃಶರಾದವರು ಇಲ್ಲ. ಅಂಥವರ ಜೊತೆಗೆ ಅಸ್ತ್ರಯುದ್ಧವನ್ನು ಮಾಡಿ ಸೋಲಿಸಿದಾಗ ಶ್ರೀ ಭೀಮಸೇನದೇವರ ಸರ್ವಜ್ಞತ್ವವು ಪ್ರಕಟವಾಗುವದು ಎಂಬ ಅಭಿಪ್ರಾಯದಿಂದ ಅಸ್ತ್ರಯುದ್ಧಕ್ಕೆ ಆಜ್ಞಾಪಿಸಿದನು. ಪ್ರತ್ಯಕ್ಷವಾಗಿ ಮೂಲ ರೂಪದ ದೇವತೆಗಳು ಎದುರಿಗೆ ಬಂದಾಗ ಆ ದೇವತೆಗಳಿಗೆ ಹಾಗು ತಾಯಿ, ಅಣ್ಣ ಇತ್ಯಾದಿ ಹಿರಿಯರಿಗೆ ನಮಸ್ಕಾರ ಮಾಡಬೇಕೆಂದು ಶ್ರೀ ಹರಿಯೇ ವಿಧಿಸಿದ್ದಾನೆ. (ಲೋಕದಲ್ಲಿ ದೇವತೆಗಳಿಗೆ, ಹಿರಿಯರಿಗೆ ನಮಸ್ಕರಿಸುವ ಪದ್ಧತಿಯ ರಕ್ಷಣೆಯಾಗುವದಕ್ಕಾಗಿ). ಅದರ ಪ್ರಕಾರ ನಮಸ್ಕಾರ ಮಾಡುವ ಸಂದರ್ಭದಲ್ಲಿಯೂ ಕೂಡ ಆಯಾ ದೇವತಾ–ಹಿರಿಯರಲ್ಲಿ ಅಂತರ್ಯಾಮಿಯಾದ ಶ್ರೀ ವಿಷ್ಣುವಿಗೇ ನಮಸ್ಕರಿಸುತ್ತಿದ್ದರು. ಹೀಗೆ ಯಾವ ಸಂದರ್ಭದಲ್ಲಿಯೂ ಕೂಡ ಇತರರಿಗೆ ನಮಸ್ಕರಿಸಿಲ್ಲ. ಎರಡು ಸಂದರ್ಭಗಳಲ್ಲಿ ಅಸ್ತ್ರಯುದ್ಧ ಮಾಡುವಾಗ ಕೂಡ ಅಸ್ತ್ರಾಭಿಮಾನಿ ದೇವತೆಗಳಿಗೆ ಆಜ್ಞಾಮಾಡಿ ಕೆಲಸ ಮಾಡಿಸಿದ್ದೇ ಹೊರತಾಗಿ, ಪ್ರಾರ್ಥನೆಯಿಂದಲ್ಲ.

ಏನಮೇನತದ್ಧರ್ಮೇ ಕೃಷ್ಣೈಕಾ ಸಂಸ್ಥಿತಾಸದಾ ॥
ಧೃತರಾಷ್ಟ್ರಾದಪಿವರಂ ತತೋನಾತ್ಮಾರ್ಥಮಗ್ರಹೀತ್ ॥ ೧೭ ॥

ಏನಂ – ಈ ಭೀಮಸೇನನನ್ನು ಅನು – ಅನುಸರಿಸಿ ಏಕಾಕೃಷ್ಣೈವ – ದ್ರೌಪದಿಯೋಬ್ಬಳೇ ತದ್ಧರ್ಮೇ – ಶ್ರೀ ಕೃಷ್ಣನ ಧರ್ಮಾಚರಣೆಯಲ್ಲಿ ಸದಾ – ಯಾವಾಗಲೂ ಸ್ಥಿತಾ – ಇರತಕ್ಕವಳು ತತಃ – ಭೀಮನಿಗೆ ಅನುಕೂಲವಾದ ಧರ್ಮವುಳ್ಳವರಾದ್ದರಿಂದ ಧೃತರಾಷ್ಟ್ರಾದಪಿ – (ಮೋಸದಿಂದ ಸೊಸೆಯು ತನಗಾಗಿ ವರಪಡೆಯಬಹುದೆಂದು ಶಾಸ್ತ್ರವಿದ್ದರೂ) ಧೃತರಾಷ್ಟ್ರನಿಂದ, ಆತ್ಮಾರ್ಥಂ – ತನ್ನ ಪ್ರಯೋಜನಕ್ಕೋಸ್ಕರ ವರಂ – ವರವನ್ನು ನಾಗ್ರಹೀತ್ – ಸ್ವೀಕರಿಸಲಿಲ್ಲ. ॥ ೧೭ ॥

ನಾಶಪದಾರ್ತರಾಷ್ಟ್ರಾಂಶ್ಚ ಮಹಾಪದ್ಯಪಿ ಸಾತತಃ ॥
ನವಾಚಾ ಮನಸಾ ವಾಪಿ ಪ್ರತೀಪಂ ಕೇಶವೇಽಚರತ್ ॥ ೧೮ ॥
ಅನ್ಯೇಭಾಗವತತ್ವೇಪಿ ಭಿನ್ನಧರ್ಮಾಃ ಕ್ವಚಿತ್ಕ್ವಚಿತ್ ॥ ೧೯ ॥

ತತಃ—ಭೀಮಾನುಕೂಲಧರ್ಮವುಳ್ಳವಳಾದ್ದರಿಂದ ಸಾ – ಆ ದ್ರೌಪದಿಯು ಮಹಾಪದ್ಯಪಿ – ಬಹಳವಾದ ಸಂಕಷ್ಟದಲ್ಲಿಯೂ ಕೂಡ ಧಾರ್ತರಾಷ್ಟ್ರಾನ್ – ದುರ್ಯೋಧನಾದಿಗಳನ್ನು ನಾಶಪತ್ – ಶಪಿಸಲಿಲ್ಲ. ವಾಚಾ – ಮಾತಿನಿಂದಲೂ ಮನಸಾವಾಪಿ - ಮನಸ್ಸಿನಿಂದಾಗಲೀ ಕೇಶವೇ – ಶ್ರೀಕೃಷ್ಣನಲ್ಲಿ ಪ್ರತೀಪಂ – ವಿರೋಧವನ್ನು ನಾಚರತ್ – ಮಾಡಲಿಲ್ಲ. ಅನ್ಯೇ – ಬಲರಾಮಾದಿಗಳು ಭಾಗವತತ್ವೇಪಿ – ಭಗವದ್ಭಕ್ತರಾದರೂ ಕೂಡ ಕ್ವಚಿತ್ಕ್ವಚಿತ್ – ಕೆಲವು ಕಡೆ ಭಿನ್ನಧರ್ಮಾಃ – ಸಣ್ಣವಾದ ಭಾಗವತ ಧರ್ಮವುಳ್ಳವರು. ॥ ೧೮–೧೯ ॥

ಭಾ.ಅ. ೧೭–೧೯ ಶ್ರೀ ಭೀಮಸೇನ ದೇವರನಂತರ ಭಾಗವತ ಧರ್ಮದಲ್ಲಿ ಇರುವವರು ಶ್ರೀ ದ್ರೌಪದೀದೇವಿಯೂ ರೊಬ್ಬರು ಮಾವ ಧೃತರಾಷ್ಟ್ರನಿಂದ ಕೂಡ ತನ್ನ ಸ್ವಾರ್ಥಕ್ಕಾಗಿ ವರವನ್ನು ಸ್ವೀಕರಿಸಲಿಲ್ಲ. ಎಂಥ ದೊಡ್ಡ ಆಪತ್ತಿನಲ್ಲಿಯೂ ಕೂಡ ಧಾರ್ತರಾಷ್ಟ್ರರನ್ನ (ದುರ್ಯೋಧನಾದಿಗಳನ್ನು) ಶಪಿಸಲಿಲ್ಲ. ಮಾತಿನಿಂದಾಗಲಿ, ಮನಸ್ಸಿನಿಂದಾಗಲೀ ಶ್ರೀ ಹರಿ ವಿರೋಧವನ್ನು ಆಚರಿಸಿಲ್ಲ. ಇನ್ನುಳಿದ ದೇವತೆಗಳೂ ಭಾಗವತಧರ್ಮದಲ್ಲಿರುವವರಾದರೂ ಕೂಡ ಒಮ್ಮೊಮ್ಮೆಯಾದರೂ ಭಾಗವತ ಧರ್ಮವನ್ನು ಬಿಡುವವರಾಗುತ್ತಾರೆ.

ಇದರ ಬಗ್ಗೆ ಕೆಲವು ಉದಾಹರಣೆಗಳನ್ನು ತೋರಿಸಿದ್ದಾರೆ.

ಸ್ಯಮಂತಕಾರ್ಥೇ ರಾಮೋಽಪಿಕೃಷ್ಣಸ್ಯ ವಿಮನಾಭವತ್ ॥
ಅವಮೇನೇಽರ್ಜುನಃ ಕೃಷ್ಣಂ ವಿಪ್ರಸ್ಯ ಶಿಶುರಕ್ಷಣೇ ॥ ೨೦ ॥

ರಾಮೋಽಪಿ – ಬಲರಾಮನಾದರೂ, ಸ್ಯಮಂತಕಾರ್ಥೇ – ಸ್ಯಮಂತಕಮಣಿಗೋಸ್ಕರ, ಕೃಷ್ಣಸ್ಯ – ಕೃಷ್ಣನ ವಿಷಯದಲ್ಲಿ ವಿಮನಾಃ – ವಿರುದ್ಧವಾದ ಮನಸ್ಸುಳ್ಳವನು ಅಭವತ್ – ಆದನು ಅರ್ಜುನಃ – ಅರ್ಜುನನು ವಿಪ್ರಸ್ಯ – ಬ್ರಾಹ್ಮಣನ ಶಿಶುರಕ್ಷಣೇ – ಮಗುವನ್ನು ರಕ್ಷಿಸುವ ವಿಷಯದಲ್ಲಿ ಕೃಷ್ಣಂ ಶ್ರೀಕೃಷ್ಣನನ್ನು ಅವಮೇನೇ – ತಿರಸ್ಕರಿಸಿದನು. ॥ ೨೦ ॥

ಪ್ರದ್ಯುಮ್ನ ಉದ್ಧವಃ ಸಾಂಬೋಽನಿರುದ್ಧಾದ್ಯಾಶ್ಚ ಸರ್ವಶಃ ॥
ಹರೇರಿಷ್ಟಂ ಸುಭದ್ರಾಯಾಃ ಫಲ್ಗುನೇದಾನಮುಂಜಸಾ ॥
ಜ್ಞಾತ್ವಾಪಿರುರುಧುಃ ಸಮ್ಯಕ್ಸಾತ್ಯಕಿಃ ಕೃಷ್ಣಸಮ್ಮಿತಂ ॥ ೨೧ ॥
ಕದಾಚಿನ್ಮನ್ಯತೇ ಪಾರ್ಥಂ ಧರ್ಮಜೋಽಪಿನರಂಹರಿಂ ॥
ಮತ್ವಾಬಿಭೇಜ್ಜರಾಸಂಧವಧೇ ಕೃಷ್ಣಮುದೀರಿತುಂ ॥ ೨೨ ॥

ಪ್ರದ್ಯುಮ್ನಃ – ಪ್ರದ್ಯುಮ್ನನು, ಉದ್ಧವಃ – ಉದ್ಧವನು, ಸಾಂಬಃ – ಸಾಂಬನು ಅನಿರುದ್ಧಾದ್ಯಾಶ್ಚ ಸರ್ವಶಃ – ~~ಅನಿರುದ್ಧನೇ ಮೊದಲಾಗಿರುಳ್ಳವರೆಲ್ಲರೂ~~ ಕೂಡ ಸುಭದ್ರಾಯಾಃ – ಸುಭದ್ರೆಯು ಫಲ್ಗುನೇ – ಅರ್ಜುನನಲ್ಲಿ ದಾನಂ – ಕೊಡುವಿಕೆಯನ್ನು ಹರೇಃ – ಶ್ರೀಕೃಷ್ಣನಿಗೆ ಅಜಸಾ – ಚೆನ್ನಾಗಿ, ಇಷ್ಟಂ – ಇಷ್ಟವನ್ನಾಗಿ ಜ್ಞಾತ್ವಾಪಿ – ತಿಳಿದರೂ ಕೂಡ ಸಮ್ಯಕ್ – ಚೆನ್ನಾಗಿ ರುರುಧುಃ – ತಡೆದರು, ಸಾತ್ಯಕಿಃ – ಸಾತ್ಯಕಿಯು ಪಾರ್ಥಂ – ಅರ್ಜುನನನ್ನು ಕದಾಚಿತ್ ಕೆಲವು ಸಮಯದಲ್ಲಿ ಕೃಷ್ಣಸಮ್ಮಿತಂ – ಕೃಷ್ಣನಿಗೆ ಸದೃಶನನ್ನಾಗಿ ಮನ್ಯತೇ – ತಿಳಿಯುತ್ತಾನೆ. ಧರ್ಮಜೋಽಪಿ – ಧರ್ಮರಾಜನೂ ಕೂಡ ಹರಿಂ ಶ್ರೀಕೃಷ್ಣನನ್ನು ನರಂ – ಮನುಷ್ಯನನ್ನಾಗಿ ಮತ್ವಾ – ತಿಳಿದು ಜರಾಸಂಧವಧೇ – ಜರಾಸಂಧನನ್ನು ಕೊಲ್ಲುವದರಲ್ಲಿ ಕೃಷ್ಣಂ – ಕೃಷ್ಣನನ್ನು ಕುರಿತು ಉದೀರಿತುಂ – ಹೇಳಲು ಅಬಿಭೇತ್ – ಹೆದರಿದನು. ॥ ೨೧–೨೨ ॥

ಬಂಧನಂ ಶಂಕಮಾನೋಹಿ ಕೃಷ್ಣಸ್ಯವಿದುರೋಽಪಿತು ॥
ಕೌರವೇಯ ಸಭಾಮಧ್ಯೇ ನಾವತಾರ ಮರೋಚಯತ್ ॥ ೨೩ ॥

ವಿದುರೋಽಪಿ ವಿದುರನಾದರೂ ಕೃಷ್ಣಸ್ಯ – ಶ್ರೀಕೃಷ್ಣನ ಬಂಧನಂ – ಕಟ್ಟುವಿಕೆಯನ್ನು ಶಂಕಮಾನಃಸನ್ – ಶಂಕಿಸುವವನಾಗಿ ಕೌರವೇಯಸಭಾಮಧ್ಯೇ – ಕೌರವರ ಸಂಬಂಧಿಯಾದ ಸಭೆಯ ಮಧ್ಯದಲ್ಲಿ ಅವತಾರಂ – ಆಗಮನವನ್ನು ನಾರೋಚಯತ್ – ಸಂತೋಷಪಡಲಿಲ್ಲ. ॥ ೨೩ ॥

ನಕುಲಃ ಕರದಾನಾಯ ಪ್ರೇಷಯಾಮಾಸಕೇಶವೇ ॥
ಅವಮೇನೇ ಹರೇರ್ಬುದ್ಧಿಂ ಸಹದೇವಃ ಕುಲಕ್ಷಯಾತ್ ॥ ೨೪ ॥

ನಕುಲಃ – ನಕುಲನು ಕರದಾನಾಯ – ರಾಜಸೂಯಕ್ಕೆ ಕಪ್ಪವನ್ನು ಕೊಡುವುದಕ್ಕಾಗಿ ಕೇಶವೇ – ಶ್ರೀಕೃಷ್ಣನಲ್ಲಿ ಪ್ರೇಷಯಾಮಾಸ – ದೂತನನ್ನು ಕಳುಹಿಸಿದನು. ಸಹದೇವಃ – ಸಹದೇವನು ಕುಲಕ್ಷಯಾತ್ – ಕೌರವರ ಕುಲನಾಶ ನಿಮಿತದಿಂದ ಹರೇಃ – ಶ್ರೀಕೃಷ್ಣನ ಬುದ್ಧಿಂ – ಬುದ್ಧಿಯನ್ನು ಅವಮೇನೇ – ಹೀನವಾದದ್ದನ್ನಾಗಿ ತಿಳಿದನು. ॥ ೨೪ ॥

ಭಾ ಅ ೨೦-೨೪ ಬಲರಾಮದೇವರೂ ಕೂಡ ಸ್ಯಮಂತಕ ರತ್ನದ ಸಲುವಾಗಿ ಶ್ರೀಕೃಷ್ಣನ ವಿರೋಧ ಮಾಡಿದರು, ಅರ್ಜುನನು **ಬ್ರಾಹ್ಮಣಶಿಶುರಕ್ಷಣ** ವಿಷಯದಲ್ಲಿ ಶ್ರೀಕೃಷ್ಣನನ್ನು ತೆಗಳಿದನು. ಪ್ರದ್ಯುಮ್ನ, ಉದ್ಧವ, ಸಾಂಬ, ಅನಿರುದ್ಧ ಮೊದಲಾದವರು ಶ್ರೀಕೃಷ್ಣನಿಗೆ ಸಮ್ಮತವಾದ ಅರ್ಜುನನಿಗೆ ಸುಭದ್ರಾದಾನವನ್ನು ವಿರೋಧಿಸಿದರು. **ಸಾತ್ಯಕಿಯು ಒಮ್ಮೊಮ್ಮೆ** ಅರ್ಜುನನನ್ನು ಶ್ರೀಕೃಷ್ಣ ಸಮಾನನಾಗಿ ತಿಳಿಯುತ್ತಿದ್ದನು. ಯುಧಿಷ್ಠಿರನು ಶ್ರೀಕೃಷ್ಣನನ್ನು **ಮನುಷ್ಯ ಎಂದು ತಿಳಿದು**, ಜರಾಸಂಧನ ವಧೆ ಮಾಡುವದಕ್ಕಾಗಿ ಶ್ರೀಕೃಷ್ಣನಿಗೆ ಹೇಳಲು ಹೆದರುತ್ತಿದ್ದನು. ವಿದುರ **ಮಹಾರಾಜರೂ ಕೂಡ** ದುರ್ಯೋಧನಾದಿಗಳು ಶ್ರೀಕೃಷ್ಣನನ್ನು ಕಟ್ಟಿಯಾರು ಎಂಬ ಶಂಕೆಯಿಂದ ಕೌರವರ ಸಭೆಗೆ ಶ್ರೀಕೃಷ್ಣನ ಗಮನವನ್ನು ಸಮ್ಮತಿಸಲಿಲ್ಲ. ನಕುಲನು ಶ್ರೀಕೃಷ್ಣನಿಂದ ಕಪ್ಪ ಕಾಣಿಕೆಯನ್ನು ತೆಗೆದುಕೊಳ್ಳಲು ಇಚ್ಛಿಸಿದನು. ಸಹದೇವನು ತಮ ಕೌರವ ಕುಲಕ್ಷಯದ ಆರೋಪವನ್ನು ಶ್ರೀಕೃಷ್ಣನ ಮೇಲೆ ಮಾಡಿದನು.

ದೇವಕೀವಸುದೇವಾದ್ಯಾಃ ಮೇನಿರೇ ಮಾನುಷಂ ಹರಿಂ ॥
ಭೀಷ್ಮಸ್ತು ಭಾರ್ಗವಂರಾಮಮವಮೇನೇ ಯುಯೋಧಚ ॥ ೨೫ ॥

ದೇವಕೀ ವಸುದೇವಾದ್ಯಾಃ – ದೇವಕೀವಸುದೇವರೇ ಮೊದಲಾಗಿ ಉಳ್ಳವರು ಹರಿಂ – ಶ್ರೀಕೃಷ್ಣನನ್ನು ಮಾನುಷಂ – ಮನುಷ್ಯನನ್ನಾಗಿ ಮೇನಿರೇ – ತಿಳಿದರು ಭೀಷ್ಮಸ್ತು – ಭೀಷ್ಮರಾದರೂ ಭಾರ್ಗವಂರಾಮಂ – ಭೃಗುಕುಲದಲ್ಲಿ ಅವತರಿಸಿದ ಪರಶುರಾಮನನ್ನು ಅವಮೇನೇ – ನಿಂದಿಸಿದರು ಯುಯೋಧಚ – ಯುದ್ಧವನ್ನು ಮಾಡಿದರು. ॥ ೨೫ ॥

ದ್ರೋಣಕರ್ಣದ್ರೌಣಿಕೃಪಾಃ ಕೃಷ್ಣಾಭಾವೇಮನೋದಧುಃ ॥
ದೇವಾಃ ಶಿವಾದ್ಯಾ ಅಪಿತು ವಿರೋಧಂಚಕ್ರೇ ಕ್ವಚಿತ್ ॥ ೨೬ ॥

ದ್ರೋಣಕರ್ಣದ್ರೌಣಿಕೃಪಾಃ ದ್ರೋಣರು, ಕರ್ಣ, ಅಶ್ವತ್ಥಾಮ, ಕೃಪ ಇವರು ಕೃಷ್ಣಾಭಾವೇ – ಯುದ್ಧದಲ್ಲಿ ಶರತಾಡನಾದಿಗಳಿಂದ ಕೃಷ್ಣನ ನಾಶದಲ್ಲಿ ಮನಃ - ಮನಸ್ಸನ್ನು ದಧುಃ – ಧರಿಸಿದರು. (ಮಾಡಿದರು) ಶಿವಾದ್ಯಾಃ – ರುದ್ರನೇ ಮೊದಲಾಗಿ ಉಳ್ಳ ದೇವಾಅಪಿ - ದೇವತೆಗಳೂಕೂಡ ಕ್ವಚಿತ್ ಕೆಲವು ಸಲ ವಿರೋಧಂ – ಕೃಷ್ಣನ ವಿರೋಧವನ್ನು ಚಕ್ರೇ - ಮಾಡಿದರು. ॥ ೨೬ ॥

ಋಷಿಮಾನುಷಗಂಧರ್ವಾ ವಕ್ತವ್ಯಾಃಕಿಮತಃ ಪರಂ ॥
ಜನ್ಮಜನ್ಮಾಂತರೇಜ್ಞಾನಾದವಜಾನಂತಿಯತ್ಸದಾ ॥೨೭ ॥

ಋಷಿ ಮಾನುಷಗಂಧರ್ವಾಃ – ಋಷಿಗಳು ಮನುಷ್ಯರು, ಗಂಧರ್ವರು ಯತ್ – ಯಾವ ಕಾರಣವದಿಂದ ಜನ್ಮ ಜನ್ಮಾಂತರೇ – ಜನ್ಮ ಜನಾಂತರದಲ್ಲಿ ಸದಾ – ಯಾವಾಗಲೂ ಅಜ್ಞಾನಾತ್ - ಇರತಕ್ಕ ಅಜ್ಞಾನದಿಂದ ಕದಾಚಿತ್ ಕದಾಚಿತ್ – ಒಮ್ಮೊಮ್ಮೆ ಪರಂ – ಪರಮಾತ್ಮನನ್ನು ಅವಜಾನಂತಿ – ತಿರಸ್ಕರಿಸುತ್ತಾರೋ ಆದ್ದರಿಂದ ಋಷ್ಯಾದಿಗಳು ಕಿಂವಕ್ತವ್ಯಾಃ – ಭಿನ್ನಧರ್ಮರೆಂದು ಏನು ಹೇಳಲ್ಪಡಬೇಕು. ॥ ೨೭ ॥

ತಸ್ಮಾದೇಕೋವಾಯುರೇವ ಧರ್ಮೇಭಾಗವತೇ ಸ್ಥಿತಃ ।।
ಲಕ್ಷ್ಮೀಃ ಸರಸ್ವತೀ ಚೇತಿ ಪರಶುಕ್ಲತ್ರಯಂ ಶ್ರುತಂ ॥ ೨೮ ॥

ತಸ್ಮಾತ್ – ಆದ್ದರಿಂದ ವಾಯುಃ ಏಕಏವ – ವಾಯುದೇವರೊಬ್ಬರೇ ಭಾಗವತೇ – ಭಗವತ್ಸಂಬಂಧಿಯಾದ ಧರ್ಮೇ – ಧರ್ಮದಲ್ಲಿ ಸ್ಥಿತಃ – ಇರತಕ್ಕವರು ಸರಸ್ವತೀ – ಸರಸ್ವತಿಯು ವಾಯುಃ – ವಾಯುದೇವರು ಲಕ್ಷ್ಮೀಶ್ಚ – ಲಕ್ಷ್ಮೀ ದೇವಿಯೂ ಎಂಬ ಪರಶುಕ್ಲತ್ರಯಂ ಪರ – ಪರಮಾತ್ಮನ ಬಗ್ಗೆ ಶುಕ್ಲ – ಶುದ್ಧರಾದವರ ತ್ರಯಂ – ಮೂರರ ಗುಂಪು ಶ್ರುತಂ – ಶ್ರುತಿ ಪ್ರಸಿದ್ಧವು ವಿಶೇಷವಾಗಿ ಇಲ್ಲಿ ವಾಯು, ಭಾರತೀ ಎಂದು ಹೇಳದೇ ಸರಸ್ವತಿಯನ್ನು ಹೇಳಿದ್ದರಿಂದ ವಾಯು ಪದದಿಂದ ಬ್ರಹ್ಮನನ್ನು ಸರಸ್ವತೀ ಶಬ್ದದಿಂದ ಭಾರತಿಯನ್ನೂ ಇಟ್ಟುಕೊಳ್ಳಬೇಕೆಂದು ಸೂಚಿತವಾಯಿತು. ॥ ೨೮ ॥

ಸರ್ವಮೇತಚ್ಚ ಕಥಿತಂ ತತ್ರತತ್ರಾಮಿತಾತ್ಮನಾ ॥
ವ್ಯಾಸೇನೈವ ಪುರಾಣೇಷು ಭಾರತೇಚ ಸ್ವಸಂವಿದಾ ॥ ೨೯ ॥

ಅಮಿತಾತ್ಮನಾ – ಅಪರಿಮಿತ ವ್ಯಾಪ್ತಿಉಳ್ಳ, ಸ್ವಸಂವಿದಾ–ಜ್ಞಾನಸ್ವರೂಪರಾದ ವ್ಯಾಸೇನೈವ–ವೇದವ್ಯಾಸದೇವರಿಂದಲೇ ಪುರಾಣೇಷು – ಪುರಾಣಗಳಲ್ಲಿಯೂ ಭಾರತೇಚ ಭಾರತದಲ್ಲಿಯೂ ಕೂಡ ತತ್ರತತ್ರ – ಬಲರಾಮ ಅರ್ಜುನಾದಿಗಳ ಆವಾವ ಸಂದರ್ಭದಲ್ಲಿ ಏತತ್ ಸರ್ವಂ – ಈ ಬಲರಾಮಾದಿಗಳಿಗೆ ಭಿನ್ನಧರ್ಮತ್ವವು ಕಥಿತಂ – ಹೇಳಲ್ಪಟ್ಟಿದೆ. ॥ ೨೯ ॥

ಭಾ.ಅ. ೨೫–೨೯ ವಸುದೇವ ದೇವಕೀಯರು ಶ್ರೀಕೃಷ್ಣನನ್ನು ಮನುಷ್ಯನೆಂದು ತಿಳಿದರು. ಭೀಷ್ಮಾಚಾರ್ಯರು ಶ್ರೀ ಪರಶುರಾಮದೇವರ ವಿರುದ್ಧ ಯುದ್ಧಮಾಡಿದರು. ದ್ರೋಣಾಚಾರ್ಯರು, ಕರ್ಣ, ಅಶ್ವತ್ಥಾಮಾಚಾರ್ಯರು, ಕೃಪಾಚಾರ್ಯರು ಯುದ್ಧದಲ್ಲಿ ಶ್ರೀಕೃಷ್ಣನನ್ನು ಕೊಲ್ಲುವ ಮನಸ್ಸು ಮಾಡಿದರು. ಮೂಲರೂಪದಲ್ಲಿರುವ ಶಿವಾದಿ ದೇವತೆಗಳೂ ಕೂಡ ಒಮ್ಮೊಮ್ಮೆ ಶ್ರೀಹರಿಯ ವಿರೋಧವನ್ನು ಮಾಡಿದ್ದಾರೆ. ಅಂದಮೇಲೆ ಋಷಿ–ಮನುಷ್ಯ–ಗಂಧರ್ವರು ವಿರೋಧ ಮಾಡುತ್ತಾರೆ ಎಂಬುದನ್ನು ಹೇಳುವದೇನು ? ಆಗಾಗ ಅಜ್ಞಾನದಿಂದ ವಿರೋಧ ಮಾಡುತ್ತಲೇ ಇರುತ್ತಾರೆ. ಆದ್ದರಿಂದ ಪುರುಷರಲ್ಲಿ ವಾಯುದೇವರೊಬ್ಬರು (ಬ್ರಹ್ಮ ದೇವರು) ಶುದ್ಧ ಭಾಗವತ ಧರ್ಮವಲ್ಲಿ ಸರಿಯಾಗಿದ್ದವರು. ಶ್ರೀ ಸರಸ್ವತೀ (ಭಾರತೀ ಕೂಡ) ಹಾಗೂ ಶ್ರೀ ಲಕ್ಷ್ಮೀದೇವಿಯರು ಶುದ್ಧಧರ್ಮದಲ್ಲಿದ್ದವರು. ಈ ಮೂವರು 'ಪರಶುಕ್ಲತ್ರಯ' ಎಂಬ ಹೆಸರಿನಿಂದ ಪ್ರಸಿದ್ಧರು. ಈ ವಿಷಯವೆಲ್ಲವೂ ಶ್ರೀ ವೇದವ್ಯಾಸ ದೇವರಿಂದ ಶ್ರೀ ಮಹಾಭಾರತ, ಪುರಾಣಗಳಲ್ಲಿ ಹೇಳಲ್ಪಟ್ಟಿದೆ.

ಅವ :– ಎಲ್ಲರಿಂದಲೂ ಅರ್ಜುನನು ಶ್ರೇಷ್ಠನು ಎಂದು ಹೇಳಿದಾಗ ಭೀಮನಿಂದಲೂ ಅಧಿಕನೋ ಎಂಬುದಾಗಿ ಪಾಪ್ತವಾದ ಶಂಕೆಯನ್ನು ಪರಿಹರಿಸುವದಕ್ಕಾಗಿ ಭೀಮನಿಗೆ ಆಧಿಕ್ಯವನ್ನು ಹೇಳಿ ಉಪಸಂಹಾರ ಮಾಡಿ ಪ್ರಕೃತ ವಿಷಯವನ್ನು ಅನುಸರಿಸುತ್ತಾರೆ.

ಯದಾತೇ ಸರ್ವಶಸ್ತ್ರಾಸ್ತ್ರವೇದಿನೋರಾಜಪುತ್ರಕಾಃ ॥
ಬಭೂವೂರಂಗಮಧ್ಯೇತಾನ್ ಭಾರದ್ವಾಜೋ ವ್ಯದರ್ಶಯತ್ ॥ ೩೦ ॥

ಯದಾ - ಯಾವಾಗ ತೇ – ಆ ರಾಜಪುತ್ರಕಾಃ – ರಾಜಕುಮಾರರು ಸರ್ವಶಸ್ತ್ರಾಸ್ತ್ರವೇದಿನಃ – ಎಲ್ಲಾಶಸ್ತ್ರಾಸ್ತ್ರಗಳನ್ನು ತಿಳಿದವರು ಬಭೂವುಃ – ಆದರೋ ತದಾ ಆಗ ಭಾರದ್ವಾಜಃ – ಭರದ್ವಾಜರ ಮಗನಾದ ದ್ರೋಣರು ತಾನ್ – ಆ ರಾಜಪುತ್ರರನ್ನು ರಂಗಮಧ್ಯೇ - ರಂಗಸ್ಥಳದ ಮಧ್ಯದಲ್ಲಿ ವ್ಯದರ್ಶಯತ್ – ತೋರಿಸಿದರು. ॥ ೩೦ ॥

ರಕ್ತಚಂದನ ಸತ್ಪುಷ್ಪವಸ್ತ್ರಶಸ್ತ್ರಗುಡೋದನೈಃ ॥
ಸಂಪೂಜ್ಯ ಭಾರ್ಗವಂ ರಾಮಮನುಜಜ್ಞೆ ಕುಮಾರಕಾನ್ ॥ ೩೧ ॥

ದ್ರೋಣರು ರಕ್ತ ಚಂದನ ಸತ್ಪುಷ್ಪವಸ್ತ್ರಶಸ್ತ್ರಗುಡೋದನೈಃ – ಕೆಂಪು ಚಂದನ, ನಿರ್ದುಷ್ಟ ಪುಷ್ಪಗಳು, ಶಸ್ತ್ರಗಳು, ಪರಮಾನ್ನವೂ ಇವುಗಳಿಂದ ಭಾರ್ಗವಂ – ಭೃಗುಕುಲದಲ್ಲಿ ಅವತರಿಸಿದ, ರಾಮಂ – ಪರಶುರಾಮನನ್ನು ಸಂಪೂಜ್ಯ – ಭಕ್ತಿಯಿಂದ ಪೂಜಿಸಿ ಕುಮಾರಕಾನ್ – ರಾಜಪುತ್ರರನ್ನು ಅನುಜಜ್ಞೇ – ಆಜ್ಞಾಪಿಸಿದರು. ॥ ೩೧ ॥

ತೇಭೀಷ್ಮದ್ರೋಣ ವಿದುರ ಗಾಂಧಾರೀ ಧೃತರಾಷ್ಟ್ರಕಾನ್ ॥
ಸರಾಜಮಂಡಲಾನ್ನತ್ವಾ ಕುಂತೀಂಚಾದರ್ಶಯಂಚ್ಛ್ರಮಂ ॥ ೩೨ ॥

ತೇ—ಆರಾಜಕುಮಾರರು ಸರಾಜಮಂಡಲಾನ್–ರಾಜರಸಮೂಹದಿಂದ ಕೂಡಿದ ಭೀಷ್ಮ ದ್ರೋಣ ವಿದುರ ಗಾಂಧಾರೀ ಧೃತರಾಷ್ಟ್ರಕಾನ್—ಭೀಷ್ಮರು, ದ್ರೋಣರು, ವಿದುರನು, ಗಾಂಧಾರಿಯು ಧೃತರಾಷ್ಟ್ರ ಇವರನ್ನು ಕುಂತೀಂಚ ಕುಂತಿಯನ್ನೂ ಕೂಡ ನತ್ವಾ – ನಮಸ್ಕರಿಸಿ ಶ್ರಮಂ – ವಿದ್ಯೆಯ ಪರಿಶ್ರಮವನ್ನು ಅದರ್ಶಯನ್ – ತೋರಿಸಿದರು. ॥ ೩೨ ॥

ಸರ್ವೈಃ ಪ್ರದರ್ಶಿತೇಽಸ್ತ್ರೇತು ದ್ರೋಣಾದಾತ್ತಮಹಾಸ್ತ್ರವಿತ್ ॥
ದ್ರೌಣಿರಸ್ತ್ರಾಣ್ಯಮೇಯಾನಿ ದರ್ಶಯಾಮಾಸ ಚಾಧಿಕಂ ॥ ೩೩ ॥

ಸರ್ವೈಃ – ಎಲ್ಲರಿಂದ ಅಸ್ತ್ರೇ – ಅಸ್ತ್ರವಿದ್ಯೆಯು ಪ್ರದರ್ಶಿತೇಸತಿ – ತೋರಿಸಲ್ಪಡುತ್ತಿರಲು ದ್ರೋಣಾತ್ – ದ್ರೋಣಾಚಾರ್ಯರಿಂದ ಆತ್ತಮಹಾಸ್ತ್ರವಿತ್ – ಹೊಂದಲ್ಪಟ್ಟ ಶ್ರೇಷ್ಠಾಸ್ತ್ರಗಳನ್ನು ತಿಳಿದಿರುವ ದ್ರೌಣಿಃ–ಅಶ್ವತ್ಥಾಮನು ಅಮೇಯಾನಿ–ಇನ್ನೊಬ್ಬರಿಂದ ತಿಳಿಯಲಶಕ್ಯಗಳಾದ ಅಸ್ತ್ರಾಣಿ – ಅಸ್ತ್ರಗಳನ್ನು ಅಧಿಕಂ – ಹೆಚ್ಚಾಗಿ ದರ್ಶಯಾಮಾಸ – ತೋರಿಸಿದನು. ॥ ೩೩ ॥

ತತೋಽಪ್ಯತಿತರಾಂ ಪಾರ್ಥೋ ದಿವ್ಯಾಸ್ತ್ರಾಣಿ ವ್ಯದರ್ಶಯತ್ ॥
ಅವಿಧ್ಯನ್ನಾಶಕೇಪಾದೇ ಪಕ್ಷಿಣಃ ಪಕ್ಷ್ಮಣ್ಯವಚ ॥ ೩೪ ॥

ತತಃ – ಆ ಅಶ್ವತ್ಥಾಮನಿಗಿಂತಲೂ ಅತಿತರಾಂ ಅಧಿಕವಾಗಿ ಪಾರ್ಥಃ - ಅರ್ಜುನನು ದಿವ್ಯಾಸ್ತ್ರಾಣಿ – ದಿವ್ಯಗಳಾದ ಅಸ್ತ್ರಗಳನ್ನು ವ್ಯದರ್ಶಯತ್ – ತೋರಿಸಿದನು. ನಾಶಕೇ – ನೊಣದ ಸಂಬಂಧಿಯಾದ ಪಾದೇ – ಕಾಲಿನಲ್ಲಿ ಪಕ್ಷಿಣಃ – ಹಕ್ಕಿಯ ಪಕ್ಷ್ಮಣ್ಯವಚ ಕಣ್ಣಿನ ರಕ್ಷಣೆಯಲ್ಲಿ ಸಮರ್ಥವಾದ ಕಣ್ಣಿನ ರೆಪ್ಪೆಯಲ್ಲಿಯೂ ಕೂಡ ಅವಿಧ್ಯತ್ – ಹೊಡೆದನು. ॥ ೩೪ ॥

ಏವಮಾದೀನಿ ಚಿತ್ರಾಣಿ ಬಹೂನ್ಯೇಷ ವ್ಯದರ್ಶಯತ್ ॥
ತದೈವ ಕರ್ಣ ಆಗತ್ಯ ರಾಮೋಪಾತ್ತಾಸ್ತ್ರಸಂಪದಂ ॥
ದರ್ಶಯನ್ನಧಿಕಃ ಪಾರ್ಥಾದಭೂದ್ರಾಜನ್ಯಸಂಸದಿ ॥ ೩೫ ॥

ಏಷಃ – ಈ ಅರ್ಜುನನು ಏವಮಾದೀನಿ – ಇವೇ ಮೊದಲಾಗಿ ಉಳ್ಳ ಬಹೂನಿ – ಬಹಳಗಳಾದ ಚಿತ್ರಾಣಿ – ಆಶ್ಚರ್ಯಕರಗಳಾದ ಕರ್ಮಗಳನ್ನು ವ್ಯದರ್ಶಯತ್ – ತೋರಿಸಿದನು. ತದೈವ – ಆಗಲೇ ಕರ್ಣಃ – ಕರ್ಣನು ಆಗತ್ಯ – ಬಂದು ರಾಮೋಪಾತ್ತಾಸ್ತ್ರ ಸಂಪದಂ – ಪರಶುರಾಮನಿಂದ ಹೊಂದಲ್ಪಟ್ಟ ಅಸ್ತ್ರಗಳ ಸಂಪತ್ತನ್ನು ದರ್ಶಯನ್ ಸನ್ ತೋರಿಸತಕ್ಕವನಾಗಿ ರಾಜನ್ಯಸಂಸದಿ – ಕ್ಷತ್ರಿಯರ ಸಭೆಯಲ್ಲಿ ಪಾರ್ಥಾತ್ – ಅರ್ಜುನನಿಗಿಂತ ಅಧಿಕಃ – ಉತ್ತಮನು ಅಭೂತ್ – ಆದನು. ॥ ೩೫ ॥

ಕುಂತೀ ನಿಜಸುತಂ ಜ್ಞಾತ್ವಾ ಲಜ್ಜಯಾ ನಾವದಚ್ಚ ತಂ ॥
ಪಾರ್ಥೋಽಸಹಂಸ್ತಂ ಯುದ್ಧಾಯೈವಾಹ್ವಯಾಮಾಸ ಸಂಸದಿ ॥ ೩೬ ॥

ಕುಂತೀ – ಕುಂತಿಯು ತಂ – ಆಕರ್ಣನನ್ನು ನಿಜಸುತಂ ತನ್ನ ಮಗನನ್ನಾಗಿ ಜ್ಞಾತ್ವಾ – ತಿಳಿದು ಲಜ್ಜಯಾ – ನಾಚಿಕೆಯಿಂದ ನಾವದತ್ – ಹೇಳಲಿಲ್ಲ. ಪಾರ್ಥಃ – ಅರ್ಜುನನು ತಂ ಆಕರ್ಣನನ್ನು ಅಸಹನ್ ಸನ್ ಸಹಿಸದವನಾಗಿ ಸಂಸದಿ ಸಭೆಯಲ್ಲಿ ಯುದ್ಧಾಯೈವ ಯುದ್ಧಕ್ಕೋಸ್ಕರವೇ ಆಹ್ವಯಾಮಾಸ – ಕರೆದನು. ॥ ೩೬ ॥

ಥಾ.ಅ.೩೦–೩೬ ರಾಜಕುಮಾರರು ದ್ರೋಣಾಚಾರ್ಯರಲ್ಲಿ ಅಭ್ಯಾಸಮಾಡಿ ಶಸ್ತ್ರಾಸ್ತ್ರಜ್ಞಾನಿಗಳಾದಾಗ, ಅವರೆಲ್ಲರ ಅಭ್ಯಾಸ ಪ್ರದರ್ಶನಕ್ಕಾಗಿ ಒಂದು ಸಭೆಯನ್ನು ಏರ್ಪಡಿಸಲ್ಪಟ್ಟಿತು. ದ್ರೋಣಾಚಾರ್ಯರು ತಮ್ಮ ಗುರುಗಳಾದ ಶ್ರೀ ಪರಶುರಾಮ ದೇವರನ್ನು ಪೂಜಿಸಿ ತಮ್ಮ-ತಮ್ಮ ವಿದ್ಯಾ ನೈಪುಣ್ಯ ಪ್ರದರ್ಶನಕ್ಕಾಗಿ ಆಜ್ಞೆ ಮಾಡಿದರು. ಆ ಕುಮಾರರು ಭೀಷ್ಮ, ದ್ರೋಣ ವಿದುರ, ಗಾಂಧಾರಿ, ಧೃತರಾಷ್ಟ್ರ, ಕುಂತಿ ಇವರೆಲ್ಲರಿಗೆ ನಮಸ್ಕರಿಸಿದರು. ತಮ್ಮ-ತಮ್ಮ ಅಸ್ತ್ರಜ್ಞಾನವನ್ನು ತೋರಿಸಲು ಪ್ರಾರಂಭಿಸಿದರು. ಎಲ್ಲರೂ ತೋರಿಸಿದ ಗ, ಅ ಶ್ವತ್ಥಾಮರು ತಾವು ತುದೆ ದ್ರೋಣರಿಂದ ಹೊಂದಿದ ದಿವ್ಯಅಸ್ತ್ರಜ್ಞಾನವನ್ನು ಎಲ್ಲರಿಗಿಂತ ಹೆಚ್ಚು ತೋರಿಸಿದರು. ಅವರಿಗಿಂತ ಹೆಚ್ಚಿನ ನಿಪುಣತೆಯನ್ನು ಅರ್ಜುನನು ತೋರಿಸಿದನು. ನೊಣದ ಕಾಲಿಗೆ ಹೊಡೆಯುವ, ಪಕ್ಷಿಯ ಕಣ್ಣಿನ ರೆಪ್ಪೆಯ ಕೂದಲಿಗೆ ಹೊಡೆಯುವ ಸೂಕ್ಷ್ಮತೆಯನ್ನು ತೋರಿಸಿದನು. ಆಗ ಕರ್ಣನು ಬಂದು ತಾನು ಶ್ರೀ ಪರಶುರಾಮದೇವರಿಂದ ಕಲಿತ ಅಸ್ತ್ರಜ್ಞಾನವನ್ನು ತೋರಿಸಿ ಅರ್ಜುನನಿಗಿಂತ ಮಿಗಿಲಾದನು. ಕುಂತಿಯು ಅವನನ್ನು ನೋಡಿ ತನ್ನ ಮಗನೆಂದು ತಿಳಿದ ಕೂಡ ಲಜ್ಜೆಯಿಂದ ಯಾರ ಹತ್ತಿರವೂ ಹೇಳಲಿಲ್ಲ.

ರಣಾಯಾಕ್ಷತ್ರಿಯಾಹ್ವಾನಂ ಜಾನನ್ ಧರ್ಮಪ್ರತೀಪಕಂ ॥
ಭೀಮೋನಿವಾರ್ಯ ಬೀಭತ್ಸುಂ ಕರ್ಣಾಯಾದಾತ್ಪ್ರತೋದಕಂ ॥ ೩೭ ॥

ರಣಾಯ – ಯುದ್ಧಕ್ಕೋಸ್ಕರ ಅಕ್ಷತ್ರಿಯಾಹ್ವಾನಂ – ಕ್ಷತ್ರಿಯನಲ್ಲದವನನ್ನು ಕರೆಯುವುದನ್ನು ಧರ್ಮಪ್ರತೀಪಕಂ – ಧರ್ಮಕ್ಕೆ ವಿರೋಧಿಯನ್ನಾಗಿ ಜಾನನ್ – ತಿಳಿದಿರುವ ಭೀಮಃ—ಭೀಮಸೇನನು ಬೀಭತ್ಸುಂ – ಅರ್ಜುನನನ್ನು ನಿವಾರ್ಯ – ತಡೆದು ಕರ್ಣಾಯ – ಕರ್ಣನಿಗೋಸ್ಕರ ಪ್ರತೋದಕಂ – ಕುದುರೆಗಳನ್ನು ಹೊಡಿಯುವ ಬಾರುಕೋಲನ್ನು ಅದಾತ್ – ಕೊಟ್ಟನು. ॥ ೩೭ ॥

ಅಕ್ಷತ್ರ ಸಂಸ್ಕಾರಯುತೋ ಜಾತೋಽಪಿ ಕ್ಷತ್ರಿಯೇ ಕುಲೇ ॥
ನಕ್ಷತ್ರಿಯೋಹಿ ಭವತಿ ಯಥಾ ವ್ರಾತ್ಯೋ ದ್ವಿಜೋತ್ತಮಃ ॥ ೩೮ ॥

ವ್ರಾತ್ಯೋದ್ವಿಜೋತ್ತಮಃ ಯಥಾ – ಉಪನಯನಾದಿ ಸಂಸ್ಕಾರವಿಲ್ಲದ ಬ್ರಾಹ್ಮಣನು ಬ್ರಾಹ್ಮಣಕುಲದಲ್ಲಿ ಹುಟ್ಟಿದರೂ ಹೇಗೆ ಬ್ರಾಹ್ಮಣೋತ್ತಮನಾಗುವುದಿಲ್ಲವೋ ತಥಾ – ಹಾಗೆಯೇ ಅಕ್ಷತ್ರಸಂಸ್ಕಾರಯುತಃ – ಕ್ಷತ್ರಿಯರ ಸಂಸ್ಕಾರವಿಲ್ಲದವನು ಕ್ಷತ್ರಿಯೇಕುಲೇ – ಕ್ಷತ್ರಿಯ ವಂಶದಲ್ಲಿ ಜಾತೋಽಪಿ – ಹುಟ್ಟಿದರೂ ಕೂಡ ಕ್ಷತ್ರಿಯಃ – ಕ್ಷತ್ರಿಯನು ನಭವತಿ – ಆಗುವದಿಲ್ಲ ಹಿ – ಪ್ರಸಿದ್ಧ. ॥ ೩೮ ॥

ನಿರುತ್ತರೇಕೃತೇ ಕರ್ಣೇ ಭೀಮೇನೈವ ಸುಯೋಧನಃ ॥
ಅಭ್ಯಷೇಚಯದಂಗೇಷು ರಾಜಾನಂ ಪಿತ್ರನುಜ್ಞಯಾ ॥ ೩೯ ॥
ಧೃತರಾಷ್ಟ್ರಃ ಪಕ್ಷಪಾತಾತ್ಪುತ್ರಸ್ಯಾನು ವಶೋಭವತ್ ॥ ೪೦ ॥

ಭೀಮೇನ – ಭೀಮನಿಂದ ಕರ್ಣೇ – ಕರ್ಣನು ನಿರುತ್ತರೇಕೃತೇಸತಿ – ಉತ್ತರರಹಿತನಾಗಿ ಮಾಡಲ್ಪಡುತ್ತಿರಲು ಸುಯೋಧನಃ – ದುರ್ಯೋಧನನು ಪಿತ್ರನುಜ್ಞಯಾ – ತಂದೆಯ ಅಪ್ಪಣೆಯಿಂದ ಅಂಗೇಷು – ಅಂಗದೇಶಗಳಲ್ಲಿ ಕರ್ಣಂ – ಕರ್ಣನನ್ನು ರಾಜಾನಂ – ರಾಜನನ್ನಾಗಿ ಕೃತ್ವಾ – ಮಾಡಿ ಅಭ್ಯಷೇಚಯತ್ – ಅಭಿಷೇಕ ಮಾಡಿದನು. ಧೃತರಾಷ್ಟ್ರಃ – ಧೃತರಾಷ್ಟ್ರನು ಪಕ್ಷಪಾತಾತ್ – ಮಕ್ಕಳ ಮೇಲಿನಸ್ನೇಹದಿಂದವಪುತ್ರಸ್ಯ – ದುರ್ಯೋಧನನ ವಶಃ – ಅಧೀನನು ಅನ್ವಭವತ್ – ಆದನು. ॥ ೩೯–೪೦ ॥

ಭಾ.ಅ. ೩೭–೪೦ ಕರ್ಣನ ಮೇಲ್ಕಳೆಯನ್ನು ಸಹಿಸಲಾರದ **ಅರ್ಜುನನು** ಅವನನ್ನು ಯುದ್ಧಕ್ಕೆ ಕರೆದನು. ಅಕ್ಷತ್ರಿಯರನ್ನು (ಕ್ಷತ್ರಿಯನಲ್ಲದವನನ್ನು) ಆಹ್ವಾನಿಸುವದು ಅಧರ್ಮವೆಂದು ತಿಳಿದ ಶ್ರೀ ಭೀಮಸೇನರು ಅರ್ಜುನನನ್ನು ತಡೆದು ಕರ್ಣನಿಗೆ ಚಬಕಾವನ್ನು ಕೊಟ್ಟು ನೀನು ರಥಹೊಡೆಯಲು ಯೋಗ್ಯನು ಹೊರತು ಕ್ಷತ್ರಿಯರ ಜೊತೆಗೆ ಯುದ್ಧಕ್ಕಾಗಿ ಅಲ್ಲ ಎಂದು ತಿಳಿಸಿದರು. ಬ್ರಾಹ್ಮಣನಾಗಿ ಹುಟ್ಟಿದರೂ ಉಪನಯನಾದಿ ಸಂಸ್ಕಾರಗಳಾಗದಿದ್ದಲ್ಲಿ ಅವನು ಹೇಗೆ ಬ್ರಾಹ್ಮಣನೆನಿಸುವದಿಲ್ಲವೋ ಹಾಗೆ ಕ್ಷತ್ರಜಾತಿಯಲ್ಲಿ ಹುಟ್ಟಿದರೂ ಕೂಡ ಕ್ಷತ್ರಿಯ ಸಂಸ್ಕಾರಗಳಾಗದಿದ್ದರೆ, ಅವನು ಕ್ಷತ್ರಿಯನೆನಿಸುವದಿಲ್ಲ. ಆದ್ದರಿಂದ ಕುಂತೀದೇವಿ (ಕ್ಷತ್ರಿಯಳಾದ) ಯಲ್ಲಿ ಹುಟ್ಟಿದರೂ ಕರ್ಣನು ಕ್ಷತ್ರಿಯನಾಗಲಾರ ಎಂಬ ಅಭಿಪ್ರಾಯದಿಂದ ಶ್ರೀಭಿಮಸೇನರು ಹಾಗೆ ಮಾಡಿದಾಗ ಕರ್ಣನು ನಿರುತ್ತರನಾದನು. ಆಗ ದುರ್ಯೋಧನನು ತಂದೆಯಾದ ಧೃತರಾಷ್ಟ್ರನ ಅನುಜ್ಞಾದಂತೆ ಕರ್ಣನನ್ನು ಅಂಗದೇಶದ ರಾಜನನ್ನಾಗಿ ಮಾಡಿದನು. ಧೃತರಾಷ್ಟ್ರನು ಪುತ್ರಮೋಹಕ್ಕೊಳಗಾಗಿ ಇಂಥ ಅಯೋಗ್ಯ ಕಾರ್ಯಕ್ಕೆ ಅನುಮತಿಯನ್ನಿತ್ತನು,

ಅಭಿಷಿಕ್ತೇ ತದಾಕರ್ಣೇ ಸ್ಯಾಯಾದಧಿರಥಃ ಪಿತಾ ॥
ಸರ್ವರಾಜಸದೋ ಮಧ್ಯೇ ವವಂದೇತಂ ವೃಷಾ ತದಾ ॥
ತುತುಷುಃ ಕರ್ಮಣಾತಸ್ಯ ಸಂತಃ ಸರ್ವೇ ಸಮಾಗತಾಃ ॥ ೪೧ ॥

ಕರ್ಣೇ - ಕರ್ಣನು ಅಭಿಷಿಕ್ತೇಸತಿ – ಪಟ್ಟಾಭಿಷಿಕ್ತನಾಗುತ್ತಿರಲು ತದಾ – ಆಗ ಪಿತಾ – ತಂದೆಯಾದ ಅಧಿರಥಃ – ಅಧಿರಥನು ಪ್ರಾಯಾತ್ - ಬಂದನು ವೃಷಾ – ಬ್ರಾಹ್ಮಣರಿಗೆ ಸುವರ್ಣವರ್ಷಣದಿಂದ ವೃಷಾ ಎಂದೆನಿಸಿಕೊಳ್ಳುವ ಕರ್ಣನು ತದಾ - ತಂದೆಯು ಬಂದಾಗ ಸರ್ವರಾಜಸದೋಮಧ್ಯೇ – ಎಲ್ಲಾ ರಾಜರ ಸಭೆಯ ಮಧ್ಯದಲ್ಲಿ ತಂ—ಆ ತಂದೆಯನ್ನು ವವಂದೇ ನಮಸ್ಕರಿಸಿದನು. ತಸ್ಯ - ಆಕರ್ಣನ ಕರ್ಮಣಾ - ನಮಸ್ಕಾರ ರೂಪವಾದ ಕರ್ಮದಿಂದ ಸಮಾಗತಾಃ – ಬಂದಿರುವ ಸರ್ವೇ – ಎಲ್ಲಾ ಸಂತಃ – ಸಜ್ಜನರು ತುತುಷುಃ ಸಂತೋಷಪಟ್ಟರು. ॥ ೪೧ ॥

ಭೀಮ ದುರ್ಯೋಧನೌ ತತ್ರ ಶಿಕ್ಷಾಸಂದರ್ಶನಚ್ಛಲಾತ್ ॥
ಸಮಾದಾಯ ಗದೇಗುರ್ವೀ ಸಂರಂಭಾದಭ್ಯುದೀಯತುಃ ॥ ೪೨ ॥

ತತ್ರ - ಆ ರಂಗಸ್ಥಳದಲ್ಲಿ ಭೀಮದುರ್ಯೋಧನೌ – ಭೀಮ ಮತ್ತು ದುರ್ಯೋಧನರು ಶಿಕ್ಷಾಸಂದರ್ಶನಚ್ಛಲಾತ್ – ವಿದ್ಯಾವನ್ನು ತೋರಿಸುವ ನೆಪದಿಂದ ಗುರ್ವೀ – ದೊಡ್ಡದಾದ ಗದೇ—ಗದೆಗಳನ್ನು ಸಮಾದಾಯ – ಹಿಡಿದುಕೊಂಡು ಸಂರಭಾತ್ – ಕೋಪದಿಂದ ಅಭ್ಯುದೀಯತುಃ – ಅಭಿಮುಖವಾಗಿ ಬಂದರು ॥ ೪೨ ॥

ದೇವಾಸುರಮನುಷ್ಯಾದಿ ಜಗದೇತಚ್ಚರಾಚರಂ ॥
ಸರ್ವಂತದಾ ದ್ವಿಧಾಭೂತಂ ಭೀಮದುರ್ಯೋಧನಾಶ್ರಯಾತ್ ॥ ೪೩ ॥

ದೇವಾಸುರ ಮನುಷ್ಯಾದಿ ದೇವತೆಗಳು, ಅಸುರರು, ಮನುಷ್ಯರೇ ಮೊದಲಾಗಿ ಉಳ್ಳ ಚರಾಚರಂ ಚೇತನಾ ಚೇತನಾತ್ಮಕವಾದ ಏತತ್ – ಈದಾವ ಸರ್ವಂ – ಎಲ್ಲಾ ಜಗತ್ – ಲೋಕವು ತದಾ – ಆಗ ಭೀಮದುರ್ಯೋಧನಾಶ್ರಯಾತ್– ಭೀಮ ದುರ್ಯೋಧನರ ಆಶ್ರಯ ನಿಮಿತ್ತದಿಂದ ದ್ವಿಧಾಭೂತಂ – ಎರಡು ವಿಭಾಗವಾಯಿತು. ॥ ೪೩ ॥

ದೇವಾ ದೇವಾನುಕೂಲಾಶ್ಚ ಭೀಮಮೇವ ಸಮಾಶ್ರಿತಾಃ ॥
ಅಸುರಾ ಆಸುರಾಶ್ಚೈವ ದುರ್ಯೋಧನಸಮಾಶ್ರಯಾಃ ॥ ೪೪ ॥

ದೇವಾಃ – ದೇವತೆಗಳು ದೇವಾನುಕುಲಾಶ್ಚ – ದೇವತೆಗಳಿಗೆ ಅನುಕೂಲರಾದವರೂ ಕೂಡ ಭೀಮಮೇವ – ಭೀಮನನ್ನೇ ಸಮಾಶ್ರಿತಾಃ – ಆಶ್ರಯಿಸಿದರು. ಅಸುರಾ ಅಸುರರು ಆಸುರಾಶ್ಚೈವ - ಅಸುರರಿಗೆ ಅನುಕೂಲರಾದವರೂ ಕೂಡ ದುರ್ಯೋಧನಸಮಾಶ್ರಯಾಃ – ದುರ್ಯೋಧನನೇ ಆಶ್ರಯನಾಗಿ ಉಳ್ಳವರಾದರು. ॥ ೪೪ ॥

ದ್ವಿಧಾಭೂತಾ ಮಾನುಷಾಶ್ಚ ದೇವಾಸುರವಿಭೇದತಃ ॥
ಜಯಭೀಮ ಮಹಾಬಾಹೋ ಜಯದುರ್ಯೋಧನೇತಿಚ ॥ ೪೫ ॥

ದೇವಾಸುರವಿಭೇದತಃ – ದೇವತೆಗಳು ಮತ್ತು ಅಸುರರು ಇವರ ಪ್ರಭೇದದಿಂದ ದ್ವಿಧಾಭೂತಾಃ – ಎರಡು ಪ್ರಕಾರರಾದ ಮಾನುಷಾಶ್ಚ ಮನುಷ್ಯರೂ ಕೂಡ ಮಹಾಬಾಹೋ – ಶ್ರೇಷ್ಠ ಭುಜಗಳುಳ್ಳ ಭೀಮ – ಭೀಮನೇ ಜಯ – ಉತ್ಕೃಷ್ಟನಾಗಿರು ದುರ್ಯೋಧನ—ದುರ್ಯೋಧನನೇ, ಜಯ ಉತ್ಕೃಷ್ಟನ ಗಿರು ಇತಿ – ಎಂದು ಹೇಳಿದರು. ॥ ೪೫ ॥

ಹುಂಕಾರಾಂಶ್ಚೈವ ಫಟ್ಕಾರಾಂಶ್ಚಕ್ರುರ್ದೇವಾಸುರಾ ಅಪಿ ॥
ದೃಷ್ಟ್ವಾ ಜಗತ್ಸುಸಂರಬ್ಧಂ ದ್ರೋಣೋಽಥದ್ವಿಜಸತ್ತಮಃ ॥ ೪೬ ॥

ನೇದಂ ಜಗದ್ವಿನಶ್ಯೇತ ಭೀಮ ದುರ್ಯೋಧನಾಶ್ರಯಾತ್ ॥
ಇತಿಪುತ್ರೇಣ ತೌ ವೀರೌ ನ್ಯವಾರಯದರಿಂದಮೌ ॥ ೪೭ ॥

ಸ್ವಕೀಯಾಯಾಂ ಸ್ವಕೀಯಾಯಾಂ ಯೋಗ್ಯತಾಯಾಂ ನತು ಕ್ವಚಿತ್ ॥
ಯುವಯೋಃ ಸಮಇತ್ಯುಕ್ತ್ವಾ ದ್ರೌಣಿರೇತೌ ನ್ಯವಾರಯತ್ ॥ ೪೮ ॥

ದೇವಾಸುರಾ ಅಪಿ – ದೇವತೆಗಳೂ, ಆಸುರರೂ ಕೂಡ ಹುಂಕಾರಾನ್ – ಹುಂಕಾರಗಳನ್ನೂ ಘಟ್ ಕಾರಾನ್ – ಕರತಾಡನ (ಘಟಕಾಳಿ) ಗಳನ್ನೂ ಚಕ್ರುಃ – ಮಾಡಿದರು. ಅಥ - ಅನಂತರ ದ್ವಿಜಸತ್ತಮಃ – ಬ್ರಾಹ್ಮಣ ಶ್ರೇಷ್ಠರಾದ ದ್ರೋಣಃ – ದ್ರೋಣರು ಸುಸಂರಬ್ಧಂ – ಅತ್ಯಂತ ಕೋಪಯುಕ್ತವಾದ ಜಗತ್ – ಲೋಕವನ್ನು ದೃಷ್ಟ್ವಾ – ನೋಡಿ ಭೀಮ ದುರ್ಯೋಧನಾಶ್ರಯಾತ್ – ಭೀಮದುರ್ಯೋಧನರ ನಿಮಿತ್ತದಿಂದ ಇದಂಜಗತ್ – ಈ ಲೋಕವು ನವಿನಶ್ಯೇತ – ನಾಶವಾಗ ಬಾರದು. ಇತಿ – ಈ ಉದ್ದೇಶದಿಂದ ಪುತ್ರೇಣ – ಅಶ್ವತ್ಥಾಮನಿಂದ ಅರಿಂದಮೌ – ಶತ್ರುನಾಶಕರಾದ ವೀರೌ – ಪರಾಕ್ರಮಿಗಳಾದ ತೌ – ಆ ಭೀಮದುರ್ಯೋಧನರನ್ನು ನ್ಯವಾರಯತ್ – ತಡೆದರು. ಸ್ವಕೀಯಾಯಾಂ – ತಮ್ಮ ತಮ್ಮ ಯೋಗ್ಯತಾಯಾಂ – ಯೋಗ್ಯತೆಯಲ್ಲಿ ಯುವಯೋಃ – ನಿಮ್ಮಿಬ್ಬರಿಗೆ ಸಮಃ – ಸದೃಶನು ಕ್ವಚಿತ್ – ಯಾವ ಕಾಲದಲ್ಲಿಯೂ ಯಾವ ದೇಶದಲ್ಲಿಯೂ ಕೂಡ ನತು – ಇಲ್ಲವೇ ಇಲ್ಲ. ಆದ್ದರಿಂದ ನಿಮಗೆ ಯುದ್ಧದಲ್ಲಿ ಜಯಪರಾಜಯರೂಪ ಫಲವಿಲ್ಲದಿರುವದರಿಂದ ಯುದ್ಧವನ್ನು ಮಾಡಬಾರದು ಎಂಬುದಾಗಿ ತಡೆದರು. ॥ ೪೬–೪೭–೫೮ ॥

ದ್ರೋಣಾಜ್ಞಯಾ ವಾರಿತೌತೌ ಯಯತುಃ ಸ್ವಂಸ್ವಮಾಲಯಂ ॥ ೪೯ ॥
ಸುರಾಸುರಾನ್ಸುಸಂರಬ್ಧಾನ್ ಕಾಲೇನ ದ್ರಕ್ಷ್ಯಥೇತಿಚ ॥
ಬ್ರಹ್ಮಾ ನಿವಾರ್ಯ ಸಸುರೋ ಯಯೌ ಸೇಶಃ ಸ್ವಮಾಲಯಂ ॥ ೫೦ ॥

ದ್ರೋಣಾಜ್ಞಯಾ – ದ್ರೋಣಾಚಾರ್ಯರ ಅಪ್ಪಣೆಯಿಂದ ವಾರಿತೌ – ತಡೆಯಲ್ಪಟ್ಟ ತೌ – ಆ ಭೀಮದುರ್ಯೋಧನರು ಸ್ವಂಸ್ವಂ – ತಮ್ಮ ತಮ್ಮ ಆಲಯಂ – ಮನೆಯನ್ನು ಕುರಿತು ಯಯತುಃ – ಹೋದರು ಸುಸಂರಬ್ಧಾನ್ – ಅತಿಕೋಪವುಳ್ಳ ಸುರಾಸುರಾನ್ – ದೇವಾಸುರರನ್ನು ಕುರಿತು ಕಾಲೇನ ಕಾಲಾಂತರದಲ್ಲಿ ದ್ರಕ್ಷ್ಯಥ – ಜಯಪರಾಜಯಗಳನ್ನು ನೋಡುವಿರಿ. ಇತಿ – ಎಂಬುದಾಗಿ ಬ್ರಹ್ಮಾ – ಬ್ರಹ್ಮನು ನಿವಾರ್ಯ – ದೇವಾಸುರರನ್ನು ತಡೆದು ಸಸುರಃಸನ್ – ದೇವತೆಗಳಿಂದ ಕೂಡಿದವನಾಗಿ ಸೇಶಸ್ಸನ್ – ರುದ್ರನಿಂದ ಕೂಡಿದವನಾಗಿ ಸ್ವಂ – ತನ್ನದಾದ ಆಲಯಂ – ಸತ್ಯಲೋಕವನ್ನು ಕುರಿತು ಯಯೌ – ಹೋದನು. ॥ ೪೯–೫೦ ॥

ಭಾ.ಅ. ೪೧–೫೦ ಕರ್ಣನು ರಾಜನಾದ ಮೇಲೆ ಅವನ ಸಾಕು ತಂದೆಯಾದ, ಸೂತನಾದ ಅಧಿರಥನು ಆ ರಾಜ ಸಭೆಗೆ ಬಂದಾಗ, ಸಿಂಹಾಸನದಿಂದ ಎದ್ದು ಬಂದು ನಮಸ್ಕರಿಸಿದನು. ಅವನ ಈ ಪಿತೃಭಕ್ತಿಯನ್ನು ಕಂಡ, ಅಲ್ಲಿದ್ದ ಎಲ್ಲ ಸಜ್ಜನರು ಸಂತೋಷದಿಂದ ಪ್ರಶಂಸಿಸಿದರು. ಇದರ ನಂತರ ಭೀಮ ದುರ್ಯೋಧನರು ತಮ್ಮ ಪ್ರಾವೀಣ್ಯವನ್ನು ತೋರಿಸುವದಕ್ಕಾಗಿ ಗದಾಗಳನ್ನು ತೆಗೆದುಕೊಂಡು ಸಿಟ್ಟಿನಿಂದ ಒಬ್ಬರ ಮೇಲೊಬ್ಬರು ಏರಿ ಯುದ್ಧಕ್ಕೆ ಹೋದರು. ಆಗ ಸಮಸ್ತರೂ ಅವರಿಬ್ಬರ ಆಶ್ರಯದಲ್ಲಿ ಇಬ್ಭಾಗವಾಗಿ ನಿಂತು ಯುದ್ಧಕ್ಕಾಗಿ ಸಿದ್ಧರಾದರು, ದೇವತೆಗಳು, ಸತ್ವಭಾವದ ಮನುಷ್ಯರು ಶ್ರೀ ಭೀಮಸೇನರನ್ನು, ಅಸುರರು, ಅಸುರ ಸ್ವಭಾವದ ಮನುಷ್ಯರು ದುರ್ಯೋಧನನನ್ನು ಬೆನ್ನುಹತ್ತಿ ಜಯಜಯಕಾರವನ್ನು ತಮ್ಮ ತಮ್ಮ ನಾಯಕರ ಹೆಸರಿನಲ್ಲಿ ಕೂಗುತ್ತಿದ್ದರು. ಈ ರೀತಿ ಇಡೀ ಜಗತ್ತೇ ಇಬ್ಭಾಗವಾಗಿ ಕೋಪದಿಂದ ಯುದ್ಧ ಸಿದ್ಧಪಾದದ್ದನ್ನು ನೋಡಿದ ದ್ರೋಣಾಚಾರ್ಯರು ಜಗತ್ತಿನ ನಾಶವಾಗದಿರಲಿ ಎಂಬ ಭಾವನೆಯಿಂದ ಅಶ್ವತ್ಥಾಮಾಚಾರ್ಯರಿಂದ ತಡೆದರು, ನಿಲ್ಲಿಸಿದರು. ನಿಮ್ಮ ನಿಮ್ಮ ಯೋಗ್ಯತೆಯಲ್ಲಿ ನಿಮಗೆ ಸಮರಿಲ್ಲ ಎಂದು ಹೇಳಿ ಅಶ್ವತ್ಥಾಮರು ಅವರನ್ನು ಯುದ್ಧದಿಂದ ಬಿಡಿಸಿದರು. ಅವರು ತಮ್ಮ ತಮ್ಮ ಮನೆಗಳಿಗೆ ಹೋದರು. ಅಂತರಿಕ್ಷದಲ್ಲಿ ಇದನ್ನೆಲ್ಲ ನೋಡುತ್ತ ನಿಂತಿದ್ದ ದೇವತೆಗಳಿಗೆ ಇಂಥ ಯುದ್ಧವನ್ನು ಅದರಲ್ಲಿಯ ಜಯಾಪಜಯಗಳನ್ನು ಕಾಲಕ್ರಮೇಣ ಮುಂದೆ ನೋಡುವಿರಂತೆ ಈಗ ಬೇಡ ಎಂದು ನಿಷೇಧಿಸಿ ಬ್ರಹ್ಮದೇವರು ತಮ್ಮ ಲೋಕಕ್ಕೆ ಹೋದರು.

ಕರ್ಣಂ ಹಸ್ತೇಪ್ರ ಗೃಹ್ಯೈವ ಧಾರ್ತರಾಷ್ಟ್ರೋ ಗೃಹಂಯಯೌ ॥
ಪಾರ್ಥಂ ಹಸ್ತೇಪ್ರಗೃಹ್ಯೈವ ಭೀಮಃಸ್ವಾಯಾತ್ಸ್ವಮಾಲಯಂ ॥ ೫೧ ॥

ಧಾರ್ತರಾಷ್ಟ್ರಃ – ದುರ್ಯೋಧನನು ಕರ್ಣಂ – ಕರ್ಣನನ್ನು ಹಸ್ತೇ – ಕೈಯಲ್ಲಿ ಪ್ರಗೃಹ್ಯೈವ – ಹಿಡಿದುಕೊಂಡೇ ಗೃಹಂ – ಮನೆಯನ್ನು ಕುರಿತು ಯಯೌ - ಹೋದನು. ಭೀಮಃ – ಭೀಮನು ಪಾರ್ಥಂ – ಅರ್ಜುನನನ್ನು ಹಸ್ತೇ ಕೈಯಲ್ಲಿ ಪ್ರಗೃಹ್ಯೈವ – ಹಿಡಿದುಕೊಂಡೇ ಸ್ವಂ – ತನ್ನ ಆಲಯಂ ಮನೆಯನ್ನು ಕುರಿತು ಪ್ರಾಯಾತ್ – ಹೋದನು. ॥ ೫೧ ॥

ಪಾರ್ಥೇನ ಕರ್ಣೋ ಹಂತವ್ಯ ಇತ್ಯಾಸೀದ್ಭೀಮನಿಶ್ಚಯಃ ॥
ವೈಪರೀತ್ಯೇನ ತಸ್ಯಾಸೀದ್ದುರ್ಯೋಧನ ವಿನಿಶ್ಚಯಃ ॥ ೫೨ ॥
ತದರ್ಥಂ ನೀತಿಮತುಲಾಂ ಚಕ್ರತುಸ್ತಾವುಭಾವಪಿ ॥ ೫೩ ॥

ಪಾರ್ಥೇನ -- ಅರ್ಜುನನಿಂದ ಕರ್ಣಃ – ಕರ್ಣನು ಹಂತವ್ಯಃ – ಕೊಲ್ಲಲುಯೋಗ್ಯನು ಇತಿ – ಎಂದು ಭೀಮ ನಿಶ್ಚಯಃ – ಭೀಮನಿಗೆ ನಿಶ್ಚಯವು ಆಸೀತ್ – ಇತ್ತು ತಸ್ಯ – ಆ ಭೀಮನ ನಿಶ್ಚಯಕ್ಕೆ ವೈಪರೀತ್ಯೇನ- – ವಿಪರೀತವಾಗಿ ಅಂದರೆ ಕರ್ಣನು ಅರ್ಜುನನನ್ನು ಕೊಲ್ಲಬೇಕು ಎಂಬುದಾಗಿ ದುರ್ಯೋಧನವಿನಿಶ್ಚಯಃ ದುರ್ಯೋಧನನನಿಶ್ಚಯವು ಆಸೀತ್ – ಆಗಿತ್ತು. ತದರ್ಥಂ – ಕರ್ಣಾರ್ಜುನರ ನಾಶಕ್ಕೋಸ್ಕರ ತೌ ಉಭಾವಪಿ – ಅವರಿಬ್ಬರೂ ಕೂಡ ಅತುಲಾಂ – ಅಸದೃಶವಾದ ನೀತಿಂ – ನೀತಿಯನ್ನು ಚಕ್ರತುಃ – ಮಾಡಿದರು. ॥ ೫೨-೫೩ ॥

ತಥೋತ್ಕರ್ಷೇ ಫಲ್ಗುನಸ್ಯ ಯಶಸೋ ವಿಜಯಸ್ಯ ಚ ॥
ಉದ್ಯೋಗ ಆಸೀದ್ಭೀಮಸ್ಯ ಧಾರ್ತರಾಷ್ಟ್ರಸ್ಯ ಚಾನ್ಯಥಾ ॥ ೫೪ ॥

ತಥಾ – ಹಾಗೆಯೇ ಫಲ್ಗುನಸ್ಯ—ಅರ್ಜುನನ ಯಶಸಃ – ಕೀರ್ತಿಯ ವಿಜಯಸ್ಯಚ –ಜಯದ ಉತ್ಕರ್ಷೇ – ಆಧಿಕ್ಯ ದಲ್ಲಿ ಭೀಮಸ್ಯ – ಭೀಮನ ಉದ್ಯೋಗಃ – ಪ್ರಯತ್ನವು ಆಸೀತ್ – ಆಗಿತ್ತು ಧಾರ್ತರಾಷ್ಟ್ರಸ್ಯ – ದುರ್ಯೋಧನನಿಗೆ ಅನ್ಯಥಾ – ವಿಪರೀತವಾಗಿ ಅಂದರೆ ಕರ್ಣನ ಯಶಸ್ಸು ಜಯದ ಉತ್ಕರ್ಷದಲ್ಲಿ ಪ್ರಯತ್ನವು ಇತ್ತು.

ಭೀಮಾರ್ಥಂ ಕೇಶವೋಽನ್ಯೇಚ ದೇವಾಃ ಫಲ್ಗುನಪಕ್ಷಿಣಃ ॥
ಆಸನ್ಯಥೈವ ರಾಮಾದ್ಯಾಃ ಸಂಗ್ರಹೇಣ ಹನೂಮತಃ ॥ ೫೫ ॥
ಸುರಾಃ ಸುಗ್ರೀವಪಕ್ಷಸ್ಥಾಃ ಪೂರ್ವಮಾಸಂಸ್ತಥೈವಹಿ ॥
ತದರ್ಥಮೇವ ಭೀಮಸ್ಯ ಹ್ಯನುಜತ್ವಂ ಸುರೇಶ್ವರಃ ॥ ೫೬ ॥

ಆಪ ಪೂರ್ವಾನುತಾಪೇನ ತೇನ ಭೀಮಸ್ತಥಾಕರೋತ್ ॥
ದುರ್ಯೋಧನಾರ್ಥಂ ಕರ್ಣಸ್ಯ ಪಕ್ಷಿಣೋ ದೈತ್ಯದಾನವಾಃ ॥
ಆಸುಃಸರ್ವೇ ಗ್ಲಹಾವೇತಾವಾಸತುಃ ಕರ್ಣಫಲ್ಗುನೌ ॥ ೫೭ ॥

ಭೀಮಾರ್ಥಂ – ಭೀಮನ ಸ್ನೇಹಕ್ಕಾಗಿ ಕೇಶವಃ – ಶ್ರೀಕೃಷ್ಣನು ಅನ್ಯೇಚದೇವಾಃ – ಇತರ ದೇವತೆಗಳೂಕೂಡ ಫಲ್ಗುನ ಪಕ್ಷಿಣಃ – ಅರ್ಜುನನ ಪಕ್ಷದಲ್ಲಿರುವವರು ಆಸನ್ – ಆದರು. ಯಥಾ – ಹೇಗೆ ರಾಮಾದ್ಯಾಃ—ರಾಮನೇ ಮೊದಲಾದ ದೇವತೆಗಳು ಹನೂಮತಃ – ಹನುಮಂತನನ್ನು ಸಂಗ್ರಹೇಣ – ಸುಗ್ರೀವನು ಸ್ವೀಕಾರ ಮಾಡಿದ್ದರಿಂದ ಸುಗ್ರೀವ ಪಕ್ಷಸ್ಥಾಃ – ಸುಗ್ರೀವನಪಕ್ಷದಲ್ಲಿರತಕ್ಕವರು ಪೂರ್ವಂ – ಹಿಂದೆರಾಮಾವತಾರದಲ್ಲಿ ಆಸನ್ – ಆಗಿದ್ದರೋ ತಥೈವ – ಹಾಗೆಯೇ ಸುರೇಶ್ವರಃ – ದೇವೇಂದ್ರನು ಪೂರ್ವಾನುತಾಪೇನ – ಹಿಂದೆ ವಾಲಿಯಾಗಿರುವಾಗ ತನ್ನ ನಾಶದಿಂದುಂಟಾದ ಸಂತಾಪದಿಂದ ತದರ್ಥಮೇವ – ತನ್ನನ್ನು ಸ್ವೀಕರಿಸುವದಕ್ಕೋಸ್ಕರವೇ ಭೀಮಸ್ಯ – ಭೀಮನ ಅನುಜತ್ವಂ – ಭ್ರಾತೃತ್ವವನ್ನು ಆಪ – ಹೊಂದಿದನು. ತೇನ – ಆ ಕಾರಣದಿಂದ ಭೀಮಃ – ಭೀಮನು ತಥಾ – ಸುಗ್ರೀವನಂತೆ ಅರ್ಜುನನ ರಕ್ಷಣೆಯನ್ನು ಅಕರೋತ್ – ಮಾಡಿದನು. ದುರ್ಯೋಧನಾರ್ಥಂ ದುರ್ಯೋಧನನ ಪ್ರೀತಿಗಾಗಿ ಸರ್ವೇ – ಎಲ್ಲಾ ದೈತ್ಯದಾನವಾಃ – ದೈತ್ಯರೂ ದಾನವರೂ ಕರ್ಣಸ್ಯ ಪಕ್ಷಿಣಃ ಕರ್ಣನ ಪಕ್ಷದಲ್ಲಿರುವವರು ಆಸುಃ – ಆದರು ಏತೌ ಕರ್ಣಫಲ್ಗುನೌ – ಈ ಕರ್ಣಾರ್ಜುನರು ಗ್ಲಹೌ – ದ್ಯೂತದಲ್ಲಿ ಪಣಕ್ಕೆ ವಸ್ತುವಿನಂತಿರುವವರು ಆಸತುಃ ಆದರು. ॥ ೫೬-೫೭-೫೮ ॥

ಧಾ.ಅ. ೫೭ ರಲ್ಲಿ ಕರ್ಣನನ್ನು ಅರ್ಜುನನು ಸಂಹರಿಸಬೇಕು ಎಂದು ಶ್ರೀ ಭೀಮಸೇನದೇವರ ಮನದಲ್ಲಿದ್ದರೆ ಇತ್ತ ಕಡೆ ಎರುದ್ರವಾಗಿ ದುರ್ಯೋಧನನ ಮನದಲ್ಲಿತ್ತು. ತಮ್ಮ ಅಭಿಪ್ರಾಯಗಳನ್ನು ತೋರಿಸುವದಕ್ಕಾಗಿ ಶ್ರೀ ಭೀಮಸೇನ ದೇವರು ಅರ್ಜುನನ ಕೈ ಒಡಿದುಕೊಂಡು ಹೋದರೆ. ದುರ್ಯೋಧನನು ಕರ್ಣನ ಕೈ ಒಡಿದುಕೊಂಡು ಹೋದನು.

ಅರ್ಜುನನ ಸರ್ವ ರೀತಿಯ ಅಭ್ಯುದಯಕ್ಕಾಗಿ ಶ್ರೀ ಭೀಮಸೇನದೇವರ ಪ್ರಯತ್ನವಿದ್ದರೆ ಕರ್ಣನಿಗಾಗಿ ದುರ್ಯೋಧನನ ಪ್ರಯತ್ನವಿತ್ತು. ಅರ್ಜುನನು ಭೀಮಕೃಪಾಪಾತ್ರನಾಗಿದ್ದರಿಂದ ಶ್ರೀಕೃಷ್ಣನು, ದೇವಾವತಾರಿಗಳು ಅರ್ಜುನನ ಪಕ್ಷಕ್ಕೆ ಇದ್ದರು. ರಾಮಾವತಾರದಲ್ಲಿಯೂ ಕೂಡ ಸುಗ್ರೀವನು ಹನುಮಂತನ ಕೃಪಾಪಾತ್ರನಾದ್ದರಿಂದ ದೇವಾವತಾರಿಗಳು, ಶ್ರೀ ರಾಮನು ಸುಗ್ರೀವನ ಪಕ್ಷವನ್ನು ಹಿಡಿದಿದ್ದರು. ಆಗ ವಾಲಿಯಾಗಿ ಹನುಮತ್ಕೃಪಾಕಟಾಕ್ಷವನ್ನು ಪಡೆಯದ ಇಂದ್ರನು, ಅದರ ಬಗ್ಗೆ ತಾಪವನ್ನು ಹೊಂದಿ ಈಗ ಹನುಮಂತನಂತೆ ವಾಯುದೇವರ ಇನ್ನೊಂದು ರೂಪವಾದ ಶ್ರೀ ಭೀಮಸೇನದೇವರ ತಮ್ಮನಾಗಿ ಅವತರಿಸಿದನು. ಕರ್ಣನು ದುರ್ಯೋಧನನನ್ನು ಅನುಸರಿಸಿದ್ದರಿಂದ ದೈತ್ಯದಾನವರು ಕರ್ಣ ಪಕ್ಷಕ್ಕೆ ನಿಂತರು.

ಅಥಪೃಷ್ಟೋದಕ್ಷಿಣಾರ್ಥಂ ದ್ರೋಣ ಆಹಕುಮಾರಕಾನ್ ॥
ಬಧ್ವಾಪಾಂಚಾಲ ರಾಜಾನಂ ದತ್ತೇತ್ಯೂಚುಸ್ತಥೇತಿ ತೇ ॥ ೫೮ ॥

ಅಥ – ಅನಂತರ ದಕ್ಷಿಣಾರ್ಥಂ – ಗುರುದಕ್ಷಿಣೆಗೋಸ್ಕರ ಪೃಷ್ಟಃ – ಕೇಳಿಸಿಕೊಳ್ಳಲ್ಪಟ್ಟ ದ್ರೋಣಃ – ದ್ರೋಣನು ಪಾಂಚಾಲರಾಜಾನಂ – ಪಾಂಚಾಲದೇಶದಅಧಿಪತಿಯಾದ ದ್ರುಪದನನ್ನು ಬಧ್ವಾ – ಕಟ್ಟಿ ದತ್ತ – ಕೊಡಿರಿ ಇತಿ – ಎಂಬುದಾಗಿ ಕುಮಾರಕಾನ್ – ರಾಜಪುತ್ರರನ್ನು ಕುರಿತು ಆಹ – ಹೇಳಿದನು. ತೇ – ಆ ಕುಮಾರರು ತಥಾ – ಹಾಗೇಯೇ ಆಗಲಿ ಇತಿ – ಎಂದು ಊಚುಃ – ಹೇಳಿದರು.

ತೇ ಧಾರ್ತರಾಷ್ಟ್ರಾಃ ಕರ್ಣೇನ ಸಹಿತಾಃ ಪಾಂಡವಾ ಅಪಿ ॥
ಯಯುರ್ದ್ರೋಣೇನ ಸಹಿತಾಃ ಪಾಂಚಾಲನಗರಂ ಪ್ರತಿ ॥ ೫೯ ॥

ಕರ್ಣೇನ – ಕರ್ಣನಿಂದ ಸಹಿತಾಃ – ಕೂಡಿದ ತೇ – ಆ ಧಾರ್ತರಾಷ್ಟ್ರಾಃ – ಧೃತರಾಷ್ಟ್ರನ ಪುತ್ರರು ಪಾಂಡವಾ ಅಪಿ – ಪಾಂಡವರೂ ಕೂಡ ದ್ರೋಣೇನ – ದ್ರೋಣಾಚಾರ್ಯರಿಂದ ಸಹಿತಾಃಸಂತಃ – ಕೂಡಿದವರಾಗಿ ಪಾಂಚಾಲನಗರಂಪ್ರತಿ – ದ್ರುಪದನ ಪಟ್ಟಣವನ್ನು ಕುರಿತು ಯಯುಃ – ಹೋದರು. ॥ ೫೯ ॥

ಅಥಾಹಭೀಮಃ ಸಾಮರ್ಥ್ಯವಿವೇಕಾಭೀಪ್ಸಯಾ ಗುರುಂ ॥
ಗರ್ವಏಷ ಕುಮಾರಾಣಾಮನಿವಾರ್ಯೋ ದ್ವಿಜೋತ್ತಮ ॥ ೬೦ ॥

ಗಚ್ಛಂತ್ವೇತೇಽಗ್ರತೋನ್ಯೇಷಾಂವಶಗೋ ದ್ರುಪದೋ ಭವೇತ್ ॥
ನಿವೃತ್ತೇಷ್ವಕೃತಾರ್ಥೇಷು ವಯಂಬಧ್ವಾರಿಪುಂ ತವ ॥ ೬೧ ॥

ಅನಯಾಮೋನಸಂದೇಹ ಇತಿತಸ್ಥೌ ಸಸೋದರಃ ॥ ೬೨ ॥

ಅಥ – ಅನಂತರ ಭೀಮಃ – ಭೀಮನು ಸಾಮರ್ಥ್ಯವಿವೇಕಾಭೀಪ್ಸಯಾ – ಯಾರಲ್ಲಿ ಸಾಮರ್ಥ್ಯವಿದೆ ಯಾರಲ್ಲಿ ಇಲ್ಲ ಎಂಬುದರ ವಿವೇಕತಿಳಿಯುವ ಇಚ್ಛೆಯಿಂದ ಗುರುಂ – ದ್ರೋಣಾಚಾರ್ಯರನ್ನು ಕುರಿತು ಆಹ – ಹೇಳಿದನು. ಹೇ ದ್ವಿಜೋತ್ತಮ – ಬ್ರಾಹ್ಮಣಶ್ರೇಷ್ಠರೇ ಕುಮಾರಾಣಾಂ – ಮಕ್ಕಳ ಏಷಃ ಗರ್ವಃ – ಈ ಅಹಂಕಾರವು ಅನಿವಾರ್ಯಃ – ನಿವಾರಿಸಲು ಅಶಕ್ಯವಾದದ್ದು ಏತೇ – ಈ ಕುಮಾರರು ಅಗ್ರತಃ – ಮುಂಭಾಗದಲ್ಲಿ ಗಚ್ಛಂತು – ಹೋಗಲಿ ದ್ರುಪದಃ – ದ್ರುಪದನು ಏಷಾಂ – ಈ ಕುಮಾರರಿಗೆ ವಶಗಃ – ಅಧೀನನು ನಭವೇತ್ – ಆಗಲಾರನು ಅಕೃತಾರ್ಥೇಷು – ಮಾಡಲ್ಪಡದ ಕಾರ್ಯವುಳ್ಳ ತೇಷು – ಅವರು ನಿವೃತ್ತೇಷುಸತ್ಸು – ಹಿಂತಿರುಗುತ್ತಿರಲು ತವ – ನಿಮಗೆ ರಿಪುಂ – ಶತ್ರುವಾದ ದ್ರುಪದನನ್ನು ವಯಂ – ನಾವು ಬಧ್ವಾ – ಕಟ್ಟಿ ಅನಯಾಮಃ – ತರುವೆವು ನಸಂದೇಹಃ – ಈ ವಿಷಯದಲ್ಲಿ ಸಂಶಯವಿಲ್ಲ. ಇತಿ – ಈ ರೀತಿಯಾಗಿ ಉಕ್ತ್ವಾ – ಹೇಳಿ ಸಸೋದರಃಸನ್ – ಸಹೋದರರಿಂದ ಕೂಡಿದವನಾಗಿ ತಸ್ಥೌ – ನಿಂತನು. ॥೬೦-೬೧-೬೨॥

ಭಾ.ಅ. ೫೮-೬೨ ವಿದ್ಯಾಭ್ಯಾಸವನ್ನು ಮುಗಿಸಿದ ಕೌರವ ಪಾಂಡವರು ಗುರುದಕ್ಷಿಣೆಯನ್ನು ಕೊಡುವದಕ್ಕಾಗಿ ಗುರುಗಳ ಅಪೇಕ್ಷೆಯನ್ನು ವಿಚಾರಿಸಿದಾಗ ದ್ರುಪದ ರಾಜನನ್ನು ಬಂಧಿಸಿ ತರಲು ಗುರುಗಳು ಹೇಳಿದರು. ಕರ್ಣ ಸಹಿತರಾದ

ಕೌರವರು ಹೋದರು. ಪಾಂಡವರು ಗುರುಗಳಾದ ದ್ರೋಣಾಚಾರ್ಯರಿಂದ ಕೂಡಿ ಪಾಂಚಾಲ ನಗರಕ್ಕೆ ಹೊರಟರು. ಭೀಮಸೇನದೇವರು ಕೌರವರ ಸಾಮರ್ಥ್ಯ ಎಷ್ಟು, ತಮ್ಮ ಸಾಮರ್ಥ್ಯ ಎಷ್ಟು ಎಂಬುದನ್ನು ಸ್ಪಷ್ಟವಾಗಿ ಜನಕ್ಕೆ ತಿಳಿಸುವ ಉದ್ದೇಶದಿಂದ ಗುರುಗಳನ್ನು ಕುರಿತು ಆಚಾರ್ಯರೇ, ಈ ದುರ್ಯೋಧನಾದಿಗಳಿಗೆ ಮಹಾ ಅಹಂಕಾರವಿದೆ. ಅವರು ಮುಂದೆ ಹೋಗಲಿ; ಅವರಿಗೆ ದ್ರುಪದನು ವಶನಾಗುವದಿಲ್ಲ; ನಿಮ್ಮ ಕಾರ್ಯ ಮಾಡಲಾಗದೆ ಹಿಂದಿರುಗಿದಾಗ ನಾವು ನಿಮ್ಮ ವೈರಿ ಆ ದ್ರುಪದನನ್ನು ನಿಶ್ಚಿತವಾಗಿ ಬಂಧಿಸಿ ತರುತ್ತೇವೆ" ಎಂದು ಹೇಳಿ ಸೋದರರಿಂದ, ದ್ರೋಣರಿಂದ ಸಹಿತರಾಗಿ ನಿಂತರು.

ಸದ್ರೋಣಕೇಷು ಪಾರ್ಥೇಷು ಸ್ಥಿತೇಷ್ವನ್ಯೇ ಸಸೂತಜಾಃ ॥
ಯಯುರಾತ್ತ ಪ್ರಹರಣಾಃ ಪಾಂಚಾಲಾಂತಃಪುರಂದ್ರುತಂ ॥ ೬೩ ॥

ಸದ್ರೋಣಕೇಷು – ದ್ರೋಣರಿಂದಸಹಿತರಾದ **ಪಾರ್ಥೇಷು** – ಪಾಂಡವರು **ಸ್ಥಿತೇಷುಸತ್ಸು** – ಇರುತ್ತಿರಲು **ಸಸೂತಜಾಃ** – ಕರ್ಣನಿಂದ ಕೂಡಿದ **ಅನ್ಯೇ** – ಇತರರಾದ ದುರ್ಯೋಧನಾದಿಗಳು **ಆತ್ತಪ್ರಹರಣಾಸ್ಸಂತಃ** – ಸ್ವೀಕರಿಸಲ್ಪಟ್ಟ ಆಯುಧವುಳ್ಳವರಾಗಿ **ಪಾಂಚಾಲಾಂತಃಪುರಂ** – ದ್ರುಪದನ ಅಂತಃಪುರವನ್ನು **ದ್ರುತಂ** – ಬೇಗನೇ **ಯಯುಃ** – ಹೋದರು. ॥ ೬೩ ॥

ಕುಮಾರಾನ್ ಗೃಹಣೇಪ್ಸುಂಸ್ತಾನುಪಯಾತಾನುದೀಕ್ಷ್ಯ ಸಃ ॥
ಅಕ್ಷೌಹಿಣೀ ತ್ರಿತಯಯುಕ್ ನಿಃಸೃತೋದ್ರುಪದೋ ಗೃಹಾತ್ ॥ ೬೪ ॥

ಸಃದ್ರುಪದಃ – ಆ ದ್ರುಪದನು **ಗೃಹಣೇಪ್ಸುನ್** – ತನ್ನನ್ನು ಹಿಡಿಯಲು ಇಚ್ಛೆಯುಳ್ಳ **ಉಪಯಾತಾನ್** – ಬಂದಿರುವ **ತಾನ್ಕುಮಾರಾನ್** – ಆ ರಾಜಕುಮಾರರನ್ನು **ಉದೀಕ್ಷ್ಯ**—ನೋಡಿ **ಅಕ್ಷೌಹಿಣೀತ್ರಿತಯಯುಕ್ಸನ್** – ಅಕ್ಷೌಹಿಣಿಗಳ ಮೂರರಿಂದ ಕೂಡಿದವನಾಗಿ **ಗೃಹಾತ್** – ಮನೆಯಿಂದ **ನಿಃಸೃತಃ** – ಹೊರಟನು. ॥ ೬೪ ॥

ತೇ ಶರೈರಭಿವರ್ಷಂತಃ ಪರಿವಾರ್ಯ ಕುಮಾರಕಾನ್ ॥
ಅರ್ದಯಾಮಾಸುರುದ್ವೃತ್ತಾಂಸ್ತ್ರಿಯೋ ಬಾಲಾಶ್ಚ ಸರ್ವಶಃ ॥ ೬೫ ॥

ಸರ್ವಶಃ – ಎಲ್ಲಾ **ತೇ** – ಆ ಪಾಂಚಾಲರು **ಸ್ತ್ರಿಯಃ** – ಸ್ತ್ರೀಯರೂ **ಬಾಲಾಶ್ಚ** – ಬಾಲಕರೂಕೂಡ **ಉದ್ವೃತ್ತಾನ್** – ಉದ್ಧತರಾದ **ಕುಮಾರಕಾನ್** – ಕುಮಾರರನ್ನು **ಪರಿವಾರ್ಯ** ಸುತ್ತಲೂ ಆವರಿಸಿ **ಶರೈಃ** – ಬಾಣಗಳಿಂದ **ಅಭಿವರ್ಷಂತಃ ಸಂತಃ** – ಮಳೆಗರಿಸುವವರಾಗಿ **ಅರ್ದಯಾಮಾಸುಃ** – ಪೀಡಿಸಿದರು. ॥ ೬೫ ॥

ಹರ್ಮ್ಯಸಂಸ್ಥಾಃಸ್ತ್ರೀಯೋಬಾಲಾಗ್ಲಾವಭಿರ್ಮುಸಲೈರಪಿ ॥
ಅತ್ಯರ್ಥಮರ್ದಯಾಮಾಸುಃ ಕುಮಾರಾನ್ಸುಖೈಧಿತಾನ್ ॥ ೬೬ ॥

ಹರ್ಮ್ಯಸಂಸ್ಥಾಃ – ಉಪ್ಪರಿಗೆಯಲ್ಲಿರುವ **ಸ್ತ್ರಿಯಃ** – ಹೆಂಗಸರು **ಬಾಲಾಃ** – ಮಕ್ಕಳು **ಗ್ಲಾವಭಿಃ** – ಕಲ್ಲುಗಳಿಂದ **ಮುಸಲೈರಪಿ** – ಒನಕೆಗಳಿಂದಲೂ ಕೂಡ **ಸುಸುಖೈಧಿತಾನ್** – ಅತಿ ಸುಖದಿಂದಬೆಳೆದಿರುವ **ಕುಮಾರಾನ್** - ಮಕ್ಕಳನ್ನು **ಅತ್ಯರ್ಥಂ** - ಅತಿಶಯವಾಗಿ **ಅರ್ದಯಾಮಾಸುಃ** – ಪೀಡಿಸಿದರು.

ದ್ರುಪದಸ್ಯವರೋಹ್ಯಸ್ತಿ ಸೂರ್ಯದತ್ತಸ್ತಪೋಬಲಾತ್ ॥
ಆಯೋಜನಾತ್ಪುರಮುಪ ನತ್ವಾಂ ಜೇಷ್ಯತಿಕಶ್ಚನ ॥ ೬೭ ॥
ಇತಿತೇನವರೇಣೈವ ಸುಖಸಂವರ್ಧಿತಾಶ್ಚ ತೇ ॥
ಭಗ್ನಾಃ ಕುಮಾರಾ ಆವೃತ್ಯದುದ್ರುವುರ್ಯತ್ರಪಾಂಡವಾಃ ॥ ೬೮ ॥

ಪುರಮುಪ – **ಪಟ್ಟಣದಸವಿಾಪದಲ್ಲಿ** **ಆಯೋಜನಾತ್** – ಒಂದುಯೋಜನಪರ್ಯಂತರವಾಗಿ **ತ್ವಾಂ** – ನಿನ್ನನ್ನು **ಕಶ್ಚನ** ಯಾವೊಬ್ಬನೂ **ನಜೇಷ್ಯತಿ** ಗೆಲ್ಲುವದಿಲ್ಲ **ಇತಿ** – ಎಂಬುದಾಗಿ **ದ್ರುಪದಸ್ಯ** – ದ್ರುಪದನಿಗೆ **ತಪೋಬಲಾತ್** –

ತಪಸ್ಸಿನ ಸಾಮರ್ಥ್ಯದಿಂದ ಸೂರ್ಯದತ್ತಃ – ಸೂರ್ಯನಿಂದಕೊಡಲ್ಪಟ್ಟ ವರಃ – ವರವು ಹಿ – ಯಾವಕಾರಣದಿಂದ ಅಸ್ತಿ – ಇದೆಯೋ ತೇನವರೇಣೈವ – ಆ ವರದಿಂದಲೇ ಸುಖಸಂವರ್ಧಿತಾಃ–ಸುಖದಿಂದ ಚೆನ್ನಾಗಿ ಬೆಳೆದಿರುವ ತೇಕುಮಾರಾಃ– ಆ ಮಕ್ಕಳು ಭಗ್ನಾಃಸಂತಃ – ಪರಾಜಿತರಾಗಿ ಆವೃತ್ಯ – ಹಿಂತಿರುಗಿ ಯತ್ರ – ಎಲ್ಲಿ ಪಾಂಡವಾಃ – ಪಾಂಡವರೋ ತತ್ರ – ಅಲ್ಲಿಗೆ ದುದ್ರುವುಃ – ಓಡಿದರು. ॥ ೬೭–೬೮ ॥

ಸ್ತ್ರೀ ಬಾಲವೃದ್ಧ ಸಹಿತೈಃ ಪಾಂಚಾಲೈರಪ್ಯನುದ್ರುತಾಃ ॥
ಭೀಮಾರ್ಜುನೇತಿ ವಾಶಂತೋ ಯಯುರ್ಯತ್ರಸ್ಮ ಪಾಂಡವಾಃ ॥ ೬೯ ॥

ಸ್ತ್ರೀಬಾಲವೃದ್ಧಸಹಿತೈಃ – ಸ್ತ್ರೀಯರೂ, ಬಾಲಕರು, ಮುದುಕರೂ ಇವರಿಂದ ಕೂಡಿದ ಪಾಂಚಾಲೈರಪಿ – ಪಾಂಚಾಲರಿಂದಲೂ ಕೂಡ ಅನುದ್ರುತಾಃ – ಹಿಂಬಾಲಿಸಲ್ಪಟ್ಟ ದುರ್ಯೋಧನಾದಿಗಳು ಭೀಮಾರ್ಜುನೇತಿ – ಭೀಮನೇ ಅರ್ಜುನನೇ ಎಂಬುದಾಗಿ ವಾಶಂತಸ್ಸಂತಃ – ಕೂಗತಕ್ಕವರಾಗಿ ಯತ್ರ – ಎಲ್ಲಿ ಪಾಂಡವಾಃ – ಪಾಂಡವರಿದ್ದರೋ ತತ್ರ – ಅಲ್ಲಿಗೆ ಯಯುಃಸ್ಮ – ಹೋದರು. ॥ ೬೯ ॥

ಭಾ.ಅ. ೬೩–೬೯ ಕರ್ಣಸಹಿತರಾದ, ಆಯುಧಧಾರಿಗಳಾದ ದುರ್ಯೋಧನ ಮೊದಲಾದ ಕುಮಾರರು ಪಾಂಚಾಲ ನಗರಕ್ಕೆ ತನ್ನ ಬಂಧನಕ್ಕಾಗಿ ಬಂದಿರುವದನ್ನು ತಿಳಿದ ದ್ರುಪದನು ತನ್ನ ಮೂರು ಅಕ್ಷೌಹಿಣಿ ಸೈನ್ಯವನ್ನು ತೆಗೆದುಕೊಂಡು ಯುದ್ಧಕ್ಕೆ ಬಂದಿದ್ದಾನೆ. ಸುಖವಾಗಿ ಬೆಳೆದ, ಯುದ್ಧದ ಪರಿಚಯವಿಲ್ಲದ ಈ ಕುಮಾರರನ್ನು ಸೇನೆಯು ಮರ್ದನ ಮಾಡಿದ್ದಲ್ಲದೇ ಪಾಂಚಾಲದ ಪ್ರಜೆಗಳು, ಸ್ತ್ರೀಯರು, ಮಕ್ಕಳೂ ಕೂಡ ಒನಕೆ ಕಲ್ಲುಗಳಿಂದ ಮರ್ದಿಸಿದ್ದಾರೆ. ಸುಖವಾಗಿ ಬೆಳೆದಿರುವ ಕಾರಣದಿಂದ ಮತ್ತು ಪಟ್ಟಣದಿಂದ ಒಂದು ಯೋಜನ (ಸಾಧಾರಣ ೯ ಮೈಲು) ದೂರದವರೆಗಿನ ಪ್ರದೇಶದಲ್ಲಿ ನಿನ್ನನ್ನು ಯಾರೂ ಗೆಲ್ಲಲಾರರು ಎಂಬ ಸೂರ್ಯನ ವರ ದ್ರುಪದನಿಗಿದ್ದದ್ದರಿಂದಲೂ ಪರಾಜಿತರಾಗಿ, ಭೀಮ !, ಅರ್ಜುನ !, ರಕ್ಷಿಸಿರಿ ಎಂದು ಕೂಗುತ್ತಾ ಪಾಂಡವರು ನಿಂತಲ್ಲಿಗೆ ಓಡಿ ಬಂದು ನಿಂತರು. ಓಡಿದ ಮಕ್ಕಳನ್ನು ಸ್ತ್ರೀಬಾಲವೃದ್ಧರು ಬೆನ್ನು ಹತ್ತಿ ಬಂದಿದ್ದಾರೆ.

ತಾನ್ಪ್ರಭಗ್ನಾನ್ಸಮಾಲೋಕ್ಯ ಭೀಮಃ ಪ್ರಹರತಾಂವರಃ ॥
ಆರುರೋಹರಥಂವೀರಃ ಪುರ ಆತ್ತಶರಾಸನಃ ॥ ೭೦ ॥

ವೀರಃ – (ಆರಬ್ಧಾಂತಗಾಮಿಯಾದ) ಆರಂಭಮಾಡಿದಕೆಲಸವನ್ನುಕೊನೆಗಾಣಿಸುವ ಪ್ರಹರತಾಂ – ಯುದ್ಧ ಮಾಡುವವರ ಮಧ್ಯದಲ್ಲಿ ವರಃ – ಉತ್ತಮನಾದ ಭೀಮಃ – ಭೀಮನು ಪ್ರಭಗ್ನಾನ್ – ಪರಾಜಯ ಹೊಂದಿದ ತಾನ್ – ಆ ದುರ್ಯೋಧನಾದಿಗಳನ್ನು ಸಮಾಲೋಕ್ಯ – ನೋಡಿ ಆತ್ತಶರಾಸನಸ್ಸನ್ – ಸ್ವೀಕರಿಸಲ್ಪಟ್ಟ ಧನುಸ್ಸುಳ್ಳವನಾಗಿ ಪುರಃ – ಮುಂಭಾಗದಲ್ಲಿ ರಥಂ—ಸ್ಯಂದನವನ್ನು ಆರುರೋಹ – ಏರಿದನು. ॥ ೭೦ ॥

ತಮನ್ವಯಾದಿಂದ್ರಸೂನುರ್ಯಮೌ ತಸ್ಯೈವ ಚಕ್ರಯೋಃ ॥
ಯುಧಿಷ್ಠಿರಸ್ತು ದ್ರೋಣೇನ ಸಹತಸ್ಥೌ ನಿರೀಕ್ಷಕಃ ॥ ೭೧ ॥

ಇಂದ್ರಸೂನುಃ – ಅರ್ಜುನನು ತಂ – ಆ ಭೀಮನನ್ನು ಅನ್ವಯಾತ್ – ಅನುಸರಿಸಿಹೋದನು ಯಮೌ – ಯಮಳರಾದ ನಕುಲಸಹದೇವರು ತಸ್ಯೈವ – ಆ ಅರ್ಜುನನ ಚಕ್ರಯೋಃ – ರಥಚಕ್ರಗಳ ಸಮೀಪೇ – ಸಮೀಪದಲ್ಲಿ ಅನ್ವಗಾತಾಂ – ಅನುಸರಿಸಿಹೋದರು. ಯುಧಿಷ್ಠಿರಸ್ತು - ಧರ್ಮರಾಜನಾದರೂ ದ್ರೋಣೇನ – ದ್ರೋಣರಿಂದ ಸಹ – ಕೂಡಿಕೊಂಡು ನಿರೀಕ್ಷಕಃಸನ್ – ನೋಡತಕ್ಕವನಾಗಿ ತಸ್ಥೌ – ನಿಂತನು. ॥ ೭೧ ॥

ಆಯಾಂತಮುಗ್ರತೋ ದೃಷ್ಟ್ವಾ ಭೀಮಮಾತ್ತಶರಾಸನಂ ॥
ದುದ್ರುವುಃ ಸರ್ವಪಾಂಚಾಲಾ ವಿವಿಶುಃ ಪುರಮೇವಚ ॥ ೭೨ ॥

ಅಗ್ರತಃ – ಮುಂಭಾಗದಲ್ಲಿ ಆಯಾಂತಂ – ಬರತಕ್ಕ ಆತ್ತಶರಾಸನಂ – ಸ್ವೀಕರಿಸಲ್ಪಟ್ಟ ಧನುಸ್ಸುಳ್ಳ ಭೀಮಂ— ಭೀಮನನ್ನು ದೃಷ್ಟ್ವಾ ನೋಡಿ ಸರ್ವಪಾಂಚಾಲಾಃ - ಎಲ್ಲಾ ಪಾಂಚಾಲರೂ ದುದ್ರುವುಃ - ಓಡಿದರು. ಪುರಮೇವ – ಪಟ್ಟಣವನ್ನೆ: ವಿವಿಶುಃ ಪ್ರವೇಶಿಸಿದರು. ॥ ೭೨ ॥

ದ್ರುಪದಸ್ತ್ವಭ್ಯಯಾದ್ಭೀಮಂ ಸಪುತ್ರಃಸಹಸೇನಯಾ ॥
ಚಕ್ರರಕ್ಷೌ ಚ ತಸ್ಯಾಸ್ತಾಂ ಯುಧಾಮನ್ಯೂತ್ತಮೌಜಸೌ ॥ ೭೩ ॥

ಸಪುತ್ರಃ – ಮಕ್ಕಳಿಂದ ಕೂಡಿದ ದ್ರುಪದಸ್ತು – ದ್ರುಪದನಾದರೂ ಸೇನಯಾ – ಸೈನ್ಯದಿಂದ ಸಹ – ಕೂಡಿಕೊಂಡು ಭೀಮಂ—ಭೀಮನನ್ನು ಅಭ್ಯಯಾತ್ – ಹೊಂದಿದನು. ತಸ್ಯ ಆ ದ್ರುಪದನಿಗೆ ಯುಧಾಮನ್ಯೂತ್ತಮೌಜಸೌ – ಯುಧಾಮನ್ಯು, ಉತ್ತಮೌಜರೆಂಬ ಇಬ್ಬರು ಮಕ್ಕಳು ಚಕ್ರರಕ್ಷೌ —ರಥಚಕ್ರವನ್ನು ರಕ್ಷಿಸತಕ್ಕವರು ಆಸ್ತಾಂ – ಆಗಿದ್ದರು. ॥ ೭೩ ॥

ಧಾತ್ರರ್ಯಮಾವೇಶಯುತೌ ವಿಶ್ವಾವಸುಪರಾವಸೂ ॥
ಸುತೌ ತಸ್ಯಮಹಾವೀರ್ಯೌ ಸತ್ಯಜಿತ್ಪೃಷ್ಠತೋಽಭವತ್ ॥ ೭೪ ॥

ಅವ - ಯುಧಾಮನ್ಯು, ಉತ್ತಮೌಜರು ಹಿಂದೆ ಯಾರು ಎಂಬುದನ್ನು ಹೇಳುತ್ತಾರೆ.

ವಿಶ್ವಾವಸುಪರಾವಸೂ – ವಿಶ್ವಾವಸು, ಪರಾವಸು ಎಂಬ ಗಂಧರ್ವರು ಧಾತ್ರರ್ಯಮಾವೇಶಯುತೌ – ದ್ವಾದಶ ಆದಿತ್ಯರ ಮಧ್ಯದಲ್ಲಿ ಧಾತಾ, ಅರ್ಯಮಾ ಎಂಬ ಆದಿತ್ಯರ ಸನ್ನಿಧಾನದಿಂದ ಕೂಡಿದವರು. ಮಹಾವೀರ್ಯೌ - ಮಹಾ ಪರಾಕ್ರಮಿಗಳು ತಸ್ಯ – ಆ ದ್ರುಪದನ ಸುತೌ – ಯುಧಾಮನ್ಯೂತ್ತಮೌಜರೆಂಬ ಮಕ್ಕಳು. ಸತ್ಯಜಿತ್ – ಸತ್ಯಜಿತ್ ಎಂಬ ಮಗನು ಪೃಷ್ಠತಃ – ಹಿಂಭಾಗದಲ್ಲಿ ಅಭವತ್ – ಇದ್ದನು. ॥ ೭೪ ॥

ಸವಿತ್ರಾಂಶಯುತೋ ವೀರಶ್ಚಿತ್ರಸೇನೋ ಮಹಾರಥಃ ॥
ಆಗ್ರತಸ್ತು ಶಿಖಂಡ್ಯಾಗಾದ್ರಥೋದಾರಃ ಶರಾನ್ಕ್ಷಿಪನ್ ॥ ೭೫ ॥

ಸಃ – ಆ ಸತ್ಯಜಿತ್ ಎಂಬವನು ವಿತ್ರಾಂಶಯುತಃ – ಆದಿತ್ಯರಲ್ಲಿ ವಿತ್ರನೆಂಬ ಆದಿತ್ಯನ ಅಂಶದಿಂದ ಕೂಡಿದವನು ವೀರಃ—ವರಬ್ಧಾಂತಗಾಮಿಯು ಚಿತ್ರಸೇನಃ – ಪೂರ್ವದಲ್ಲಿ ಚಿತ್ರಸೇನನೆಂಬ ಗಂಧರ್ವನು. ಮಹಾರಥಃ – ಶ್ರೇಷ್ಠರಥಿಕನು. ರಥೋದಾರಃ -- ರಥದಿಂದ ಉತ್ಕೃಷ್ಟನಾದ ಶಿಖಂಡೀ – ಶಿಖಂಡಿಯು ಅಗ್ರತಃ – ಮುಂಭಾಗದಲ್ಲಿ ಶರಾನ್ – ಬಾಣಗಳನ್ನು ಕ್ಷಿಪನ್‌ಸನ್ -- ಬಿಡತಕ್ಕವನಾಗಿ ಆಗಾತ್ – ಹೋದನು, ॥ ೭೫ ॥

ಜನಮೇಜಯಸ್ತಮನ್ವೇವ ಪೂರ್ವಂ ಚಿತ್ರರಥೋಹಿಯಃ ॥
ತ್ವಷ್ಟುರಾವೇಶಸಂಯುಕ್ತಃ ಸಶರಾನಭ್ಯವರ್ಷತ ॥ ೭೬ ॥

ತ್ವಷ್ಟುಃ - ಆದಿತ್ಯರಲ್ಲಿ ತ್ವಷ್ಟಾ ಎಂಬ ಆದಿತ್ಯನ ಆವೇಶಸಂಯುಕ್ತಃ – ಆವೇಶದಿಂದ ಕೂಡಿದ ಯಃ – ಯಾವನು ಪೂರ್ವಂ – ಹಿಂದೆ ಚಿತ್ರರಥಃ ಚಿತ್ರರಥನೆಂಬ ಗಂಧರ್ವನೋ ಸಃ – ಅವನು ಜನಮೇಜಯಃಸನ್ – ಜನಮೇಜಯನೆಂಬ ದ್ರುಪದನ ಮಗನಾಗಿ ತಂ – ಆ ಶಿಖಂಡಿಯನ್ನು ಅನ್ವೇವ – ಅನುಸರಿಸಿಯೇ ಶರಾನ್ – ಬಾಣಗಳನ್ನು ಅಭ್ಯವರ್ಷತ – ಮಳೆಗರಿಸಿದನು. ॥ ೭೬ ॥

ತಾವುಭೌ ವಿರಥೌ ಕೃತ್ವಾ ವಿಚಾಪೌ ಚ ವಿವರ್ಮಕೌ ॥
ಭೀಮೋ ಜಘಾನ ತಾಂ ಸೇನಾಂ ಸವಾಜಿರಥಕುಂಜರಾಂ ॥ ೭೭ ॥

ಭೀಮಃ — ಭೀಮನು ತಾವುಭೌ – ಇಬ್ಬರಾದ ಶಿಖಂಡಿ ಜನಮೇಜಯರನ್ನು ವಿರಥೌ – ರಥರಹಿತರನ್ನಾಗಿ ವಿಚಾಪೌ – ಧನುಸ್ಸು ಇಲ್ಲದವರನ್ನಾಗಿ ವಿವರ್ಮಕೌ ಚ – ಕವಚವಿಲ್ಲದವರನ್ನಾಗಿಯೂ ಕೃತ್ವಾ – ಮಾಡಿ ಸವಾಜಿರಥ

ಕುಂಜರಾಂ – ಕುದುರೆಗಳು, ರಥಗಳು, ಆನೆಗಳೂ ಇವುಗಳಿಂದ ಕೂಡಿದ ತಾಂಸೇನಾಂ ಆ ದ್ರುಪದನ ಸೈನ್ಯವನ್ನು ಜಘಾನ – ಕೊಂದನು. ॥ ೭೭ ॥

ಅಥೈನಂ ಶರವರ್ಷೇಣ ಯುಧಾಮನ್ಯೂತ್ತಮೌಜಸೌ ॥
ಅಭೀಯತುಸ್ತೌ ವಿರಥೌ ಚಕ್ರೇ ಭೀಮೋನಿರಾಯುಧೌ ॥ ೭೮ ॥

ಅಥ ಅನಂತರ ಯುಧಾಮನ್ಯೂತ್ತಮೌಜಸೌ – ಯುಧಾಮನ್ಯೂತ್ತಮೌಜರೆಂಬಬ್ಬರು ಶರವರ್ಷೇಣ – ಬಾಣಗಳ ಸುರಿಸುವಿಕೆಯಿಂದ ಏನಂ – ಈ ಭೀಮನನ್ನು ಅಭೀಯತುಃ – ಎದುರಾಗಿ ಬಂದರು. ಭೀಮಃ – ಭೀಮನು ತೌ – ಅವರಿಬ್ಬರನ್ನು ವಿರಥೌ – ರಥರಹಿತರನ್ನಾಗಿಯೂ ನಿರಾಯುಧೌ – ಆಯುಧವಿಲ್ಲದವರನ್ನಾಗಿಯೂ ಚಕ್ರೇ – ಮಾಡಿದನು. ॥೭೮॥

ಹಸ್ತಪ್ರಾಪ್ತಂಚಪಾಂಚಾಲಂ ನಾಗ್ರಹೀತ್ಸವ್ಯಕೋದರಃ ॥
ಗುರ್ವರ್ಥಮರ್ಜುನಸ್ಯೋರ್ವೀಂ ಪ್ರತಿಜ್ಞಾಂಕರ್ತುಮಪ್ಯೃತಾಂ ॥ ೭೯ ॥
ಮಾನಭಂಗಾಯ ಕರ್ಣಸ್ಯ ಪಾರ್ಥಮೇವನ್ವಯೋಜಯತ್ ॥
ಸಶರಾನ್ ಕ್ಷಿಪತಸ್ತಸ್ಯ ಪಾಂಚಾಲಸ್ಯಾರ್ಜುನೋದ್ಯತಂ ॥
ಪುಪ್ಲುವೇ ಸ್ಯಂದನೇಚಾಪಂಛಿತ್ವಾತಂ ತಾಗ್ರಹೀತ್ಕ್ಷಣಾತ್ ॥ ೮೦ ॥

ಸ ವ್ಯಕೋದರಃ - ಆಭೀಮಸೇನನು ಹಸ್ತಪ್ರಾಪ್ತಂ – ಕೈಗೆ ಸಿಕ್ಕಿರುವ ಪಾಂಚಾಲಂ – ದ್ರುಪದನನ್ನು ನಾಗ್ರಹೀತ್ – ಹಿಡಿಯಲಿಲ್ಲ ಗುರ್ವರ್ಥಂ–ಗುರುಗಳ ಪ್ರಯೋಜನವನ್ನುದ್ದೇಶಿಸಿ ಕೃತಾಂ–ಮಾಡಲ್ಪಟ್ಟ ಉರ್ವೀಂ–ಶ್ರೇಷ್ಠವಾದ ಅರ್ಜುನಸ್ಯ–ಅರ್ಜುನನ ಪ್ರತಿಜ್ಞಾಂ – ಪ್ರತಿಜ್ಞೆಯನ್ನು ಋತಾಂ – ಸತ್ಯವನ್ನಾಗಿ ಕರ್ತುಮಪಿ – ಮಾಡುವದಕ್ಕೋಸ್ಕರವೂ ಕರ್ಣಸ್ಯ – ಕರ್ಣನ ಮಾನಭಂಗಾಯ – ಅಹಂಕಾರನಾಶಕ್ಕಾಗಿಯೂ ಪಾರ್ಥಮೇವ – ಅರ್ಜುನನನ್ನೇ ನ್ಯಯೋಜಯತ್ – ಪ್ರೇರಿಸಿದನು. ಸಅರ್ಜುನಃ – ಆ ಅರ್ಜುನನು ಶರಾನ್ – ಬಾಣಗಳನ್ನು ಕ್ಷಿಪತಃ – ಬಿಡತಕ್ಕ ತಸ್ಯಪಾಂಚಾಲಸ್ಯ – ಆ ದ್ರುಪದನ ಸ್ಯಂದನೇ – ರಥದಲ್ಲಿ ದ್ರುತಂ – ಬೇಗನೆ ಪುಪ್ಲುವೇ – ಹಾರಿದನು. ಚಾಪಂ – ಧನುಸ್ಸನ್ನು ಛಿತ್ವಾ – ತುಂಡರಿಸಿ ತಂ – ಆ ದ್ರುಪದನನ್ನು ಕ್ಷಣಾತ್ ಕೂಡಲೇ ಅಗ್ರಹೀತ್ ಹಿಡಿದನು. ॥ ೭೯–೮೦ ॥

ಭಾ.ಅ. ೭೦–೮೦ ಇವರು ಪರಾಜಿತರಾಗಿ ಬಂದದ್ದನ್ನು ನೋಡಿ ವೀರಶ್ರೇಷ್ಠರಾದ ಶ್ರೀ ಭೀಮಸೇನದೇವರು ಧನುರ್ಧಾರಿಗಳಾಗಿ, ರಥವನ್ನೇರಿ ಮುಂದೆ ಹೊರಟಾಗ ಅರ್ಜುನನು ಅವರನ್ನು ಅನುಸರಿಸಿದ್ದಾನೆ. ನಕುಲ–ಸಹದೇವರು ಅರ್ಜುನನ ರಥದ ಚಕ್ರಗಳ ಸಮೀಪದಲ್ಲಿ ಹೊರಟಿದ್ದಾರೆ. ಧರ್ಮರಾಜನು ಮಾತ್ರ ದ್ರೋಣಾಚಾರ್ಯರಿಂದ ಕೂಡಿಕೊಂಡು ಪ್ರೇಕ್ಷಕನಾಗಿ ನಿಂತಿದ್ದಾನೆ. ಭೀಮಸೇನರು ಬಂದದ್ದನ್ನು ನೋಡಿಯೇ ಪಾಂಚಾಲ ಪ್ರಜೆಗಳೂ ಓಡಿ ಹೋಗಿದ್ದಾರೆ. ದ್ರುಪದನು ತನ್ನ ಮಕ್ಕಳು, ಸೇನೆಗಳಿಂದ ಸಹಿತನಾಗಿ ಯುದ್ಧಕ್ಕೆ ಬಂದನು. ಧಾತೃ, ಅರ್ಯಮಾ, ಎಂಬ ಸೂರ್ಯರ ಆವೇಶವುಳ್ಳ ವಿಶ್ವಾವಸು, ಪರಾವಸು ಗಂಧರ್ವರ ಅವತಾರರಾದ ಯುಧಾಮನ್ಯು ಮತ್ತು ಉತ್ತಮೌಜಸ್ ಎಂಬ ಇಬ್ಬರು ಮಕ್ಕಳು ದ್ರುಪದನ ರಥಚಕ್ರಗಳ ರಕ್ಷಣೆ ಮಾಡುತ್ತಿದ್ದರೆ. ಮಿತ್ರ ಎಂಬ ಸೂರ್ಯನ ಆವೇಶಉಳ್ಳ ಚಿತ್ರಸೇನ ಎಂಬ ಗಂಧರ್ವನ ಅವತಾರನಾದ ಸತ್ಯಜಿತ್ ಎಂಬ ಮಗನು ದ್ರುಪದನ ಹಿಂದೆ ಅನುಸರಿಸಿದ್ದಾನೆ. ಮುಂಭಾಗದಲ್ಲಿ ಶಿಖಂಡಿಯು ಹಾಗೂ ಅವನನ್ನು ಅನುಸರಿಸಿ, ಚಿತ್ರರಥ ಎಂಬ ಗಂಧರ್ವನ ಅವತಾರನಾದ ಜನಮೇಜಯ ಎಂಬ ಮಗನೂ ಇದ್ದಾರೆ. ಈ ಜನಮೇಜಯನು ತ್ವಷ್ಟ ಎಂಬ ಸೂರ್ಯನ ಆವೇಶಉಳ್ಳವನು ಆಗಿದ್ದಾನೆ. ಶ್ರೀ ಭೀಮಸೇನದೇವರು ಮುಂಭಾಗದಲ್ಲಿದ್ದ ಇಬ್ಬರನ್ನೂ ರಥ, ಬಿಲ್ಲು, ಕವಚಗಳಿಂದ ಹೀನರನ್ನಾಗಿಸಿ ಆ ದೊಡ್ಡ ಚತುರಂಗ ಸೈನ್ಯವನ್ನು ನಾಶ ಮಾಡಿದ್ದಾರೆ. ಆಗ ಅವರನ್ನು ಎದುರಿಸಿದ ಯುಧಾಮನ್ಯು, ಉತ್ತಮೌಜಸರನ್ನೂ ಕೂಡ ರಥ, ಆಯುಧ ಹೀನರನ್ನಾಗಿ ಮಾಡಿ, ತಮ್ಮ ಕೈಗೇ ದ್ರುಪದನು ಸಿಕ್ಕಿದ್ದರೂ ಕೂಡ ಗುರುಗಳಿಗಾಗಿ ತನ್ನ ತಮ್ಮ ಅರ್ಜುನ ಮಾಡಿದ ಪ್ರತಿಜ್ಞೆಯನ್ನು ಸತ್ಯ ಮಾಡುವದಕ್ಕಾಗಿ ಮತ್ತು ಕರ್ಣನಿಗಾಗದ ಕಾರ್ಯವನ್ನು ಅರ್ಜುನ ಮಾಡಿ ಕರ್ಣನ ಮಾನಭಂಗಕ್ಕಾಗಿ, ತಾವು ಬಂಧನ ಮಾಡದೇ ಅರ್ಜುನನನ್ನು ತೊಡಗಿಸಿದರು. ಅರ್ಜುನನು ಬಾಣಗಳನ್ನು ಬಿಡತಕ್ಕ ದ್ರುಪದನ ರಥಕ್ಕೆ ಜಿಗಿದು ಅವನ ಧನುಸ್ಸನ್ನು ಕತ್ತರಿಸಿ ಒಂದು ಕ್ಷಣದಲ್ಲಿ ಅವನನ್ನು ಬಂಧಿಸಿ, ಸಿಂಹವು ಪ್ರಾಣಿಯನ್ನು ತರುವಂತೆ ತೆಗೆದುಕೊಂಡು ತನ್ನ ರಥಕ್ಕೆ ಬಂದನು.

ಸಿಂಹೋಮೃಗಮಿವಾದಾಯ ಸ್ವರಥಂ ಚಾಭಿಪೇದಿವಾನ್ ॥
ಅಥ ಪ್ರಕುಪಿತಂ ಸೈನ್ಯಂ ಫಲ್ಗುನಂ ಪರ್ಯವಾರಯತ್ ॥ ೮೧ ॥

ಸಿಂಹಃ ಸಿಂಹವು ಮೃಗಮಿವ ಮೃಗವನ್ನೆಂಬಂತೆ ಆದಾಯ — (ಅರ್ಜುನನು) ದ್ರುಪದನನ್ನು ಹಿಡಿದುಕೊಂಡು ಸ್ವರಥಂ - ತನ್ನ ರಥವನ್ನು ಅಭಿಪೇದಿವಾನ್ – ಹೊಂದಿದನು ಅಥ – ಅನಂತರ ಪ್ರಕುಪಿತಂ – ಚೆನ್ನಾಗಿ ಕೋಪಗೊಂಡ ಸೈನ್ಯಂ – ಸೈನ್ಯವು ಫಲ್ಗುನಂ – ಅರ್ಜುನನನ್ನು ಪರ್ಯವಾರಯತ್ – ಸುತ್ತಹಾಕಿ ತಡೆಯಿತು. ॥ ೮೧ ॥

ಜಘಾನಭೀಮಸ್ತರಸಾ ತತ್ಸೈನ್ಯಂ ಶರವೃಷ್ಟಿಭಿಃ ॥
ಅಥಸತ್ಯಜಿದಭ್ಯಾಗಾತ್ಪಾರ್ಥಂ ಮುಂಚನ್ ಶರಾನ್ಬಹೂನ್ ॥ ೮೨ ॥

ಭೀಮಃ – ಭೀಮನು ತರಸಾ – ವೇಗದಿಂದ ಶರವೃಷ್ಟಿಭಿಃ ಬಾಣಗಳ ಮಳೆಗಳಿಂದ ತತ್ಸೈನ್ಯಂ – ಆ ದ್ರುಪದನ ಸೈನ್ಯವನ್ನು ಜಘಾನ ಕೊಂದನು. ಅಥ – ಅನಂತರ ಸತ್ಯಜಿತ್ – ಸತ್ಯಜಿತ್ ಎಂಬವನು ಬಹೂನ್ – ಬಹಳ ಶರಾನ್ – ಬಾಣಗಳನ್ನು ಮುಂಚನ್ ಸನ್ – ಬಿಡತಕ್ಕವನಾಗಿ ಪಾರ್ಥಂ - ಅರ್ಜುನನನ್ನು ಅಭ್ಯಾಗಾತ್ – ಎದುರಾಗಿ ಹೋದನು, ॥ ೮೨ ॥

ತಮರ್ಜುನಃ ಕ್ಷಣೇನೈವ ಚಕ್ರೇವಿರಥಕಾರ್ಮುಕಂ ॥
ಘ್ನಂತಂಭೀಮಂ ಪುನಃ ಸೈನ್ಯಮರ್ಜುನಃ ಪ್ರಾಹವೀರವಾನ್ ॥ ೮೩ ॥
ಸೇನಾಮರ್ಹತಿರಾಜೋ್ಯಸ್ಯ ವೀರಹಂತುಮಶೇಷತಃ ॥
ಸಂಬಂಧಯೋಗ್ಯಸ್ತಾತಸ್ಯ ಸಖಾಽಯಂನಃ ಸುಧಾರ್ಮಿಕಃ ॥ ೮೪ ॥
ನೇಷ್ಯಾಮ ಏನಮೇವಾತೋ ಗುರೋರ್ವಚನಗೌರವಾತ್ ॥
ಸ್ನೇಹಪಾಶಂ ತತಶ್ಚಕ್ರೇ ಬೀಭತ್ಸೌ ದ್ರುಪದೋಽಧಿಕಂ ॥ ೮೫ ॥

ಅರ್ಜುನಃ ಅರ್ಜುನನು ತಂ – ಆ ಸತ್ಯಜಿತ್ ಎಂಬವನನ್ನು ಕ್ಷಣೇನೈವ – ಕೂಡಲೇ ವಿರಥಕಾರ್ಮುಕಂ - ಹೋಗಲ್ಪಟ್ಟ ರಥ ಮತ್ತು ಧನುಸ್ಸುಳ್ಳವನನ್ನಾಗಿ ಚಕ್ರೇ ಮಾಡಿದನು ಅರ್ಜುನಃ - ಅರ್ಜುನನು ಪುನಃ – ಮತ್ತೂ ಸೈನ್ಯಂ – ಸೈನ್ಯವನ್ನು ಘ್ನಂತಂ – ಕೊಲ್ಲುತಕ್ಕ ಭೀಮಂ – ಭೀಮನನ್ನುಕುರಿತು ಪ್ರಾಹ – ಹೇಳಿದನು. ಹೇವೀರ – ಎಲೋ, ಪರಾಕ್ರಮಿಯೇ ಯತ್ ಯಾವ ಕಾರಣದಿಂದ ಅಯಂ ಈ ದ್ರುಪದನು ಸುಧಾರ್ಮಿಕಃ – ಅತಿಧರ್ಮಿಷ್ಠನೋ ನಃ – ನಮಗೆ ಸಂಬಂಧಯೋಗ್ಯಃ ಮುಂದೆ ಸಂಬಂಧ ಮಾಡಲು ಯೋಗ್ಯನೋ ತಾತಸ್ಯ – ತಂದೆಯಾದ ಪಾಂಡುವಿಗೆ ಸಖಾ – ಮಿತ್ರನೋ ಅತಃ – ಆದ್ದರಿಂದ ಭವಾನ್ – ನೀನು ಅಸ್ಯರಾಜ್ಞಃ ಈ ದ್ರುಪದರಾಜನ ಅಶೇಷತಃ – ಎಲ್ಲಾ ಸೇನಾಂ – ಸೈನ್ಯವನ್ನು ಹಂತುಂ - ಕೊಲ್ಲಲು ನಾಽರ್ಹತಿ -- ಯೋಗ್ಯನಾಗುವದಿಲ್ಲ. ಗುರೋಃ – ಗುರುಗಳ ವಚನಗೌರವಾತ್ – ಮಾತಿನಲ್ಲಿ ಪೂಜ್ಯತಾಬುದ್ಧಿಯಿಂದ ಅಂದರೆ ಅವರ ಮಾತು ದಾಟಲಶಕ್ಯವಾದ್ದರಿಂದ ಏನಮೇವ—ಈ ದ್ರುಪದನನ್ನೇ ನೇಷ್ಯಾಮಃ—ಕರೆದುಕೊಂಡು ಹೋಗುವೆವು ತತಃ—ಅನಂತರ ದ್ರುಪದಃ—ದ್ರುಪದನು ಬೀಭತ್ಸೌ—ಅರ್ಜುನನಲ್ಲಿ ಅಧಿಕಂ—ಹೆಚ್ಚಿ ಸ್ನೇಹಪಾಶಂ—ಪ್ರೀತಿಪಾಶವನ್ನು ಚಕ್ರೇ—ಮಾಡಿದನು. ॥ ೮೩–೮೫–೮೪ ॥

ತತಃ ಸೇನಾಂವಿಹಾಯೈವ ಭೀಮೋಬೀಭತ್ಸುಮನ್ವಗಾತ್ ॥
ಮುಕ್ತ್ವಾ ಕಥಂಚಿತ್ ಭೀಮಾಸ್ಯಾತ್ತಾಸೇನಾ ದುದ್ರುವೇ ಭಯಾತ್ ॥ ೮೬ ॥

ತತಃ—ಅನಂತರ ಭೀಮಃ—ಭೀಮನು ಸೇನಾಂ—ಸೈನ್ಯವನ್ನು ವಿಹಾಯೈವ—ಬಿಟ್ಟೇ ಬೀಭತ್ಸುಂ—ಅರ್ಜುನನನ್ನು ಅನ್ವಗಾತ್—ಅನುಸರಿಸಿ ಹೋದನು. ಕಥಂಚಿತ್—ಕಷ್ಟದಿಂದ ಭೀಮಾಸ್ಯಾತ್—ಭೀಮನ ಮುಖದಿಂದ ಮುಕ್ತಾ—ಬಿಡಲ್ಪಟ್ಟ ಸಾಸೇನಾ—ಆ ಸೈನ್ಯವು ಭಯಾತ್—ಹೆದರಿಕೆಯಿಂದ ದುದ್ರುವೇ– ಓಡಿಹೋಯಿತು. ॥ ೮೬ ॥

ದ್ರುಪದಂಸ್ಥಾಪಯಾಮ್ಮಾಸಾಥಾರ್ಜುನೋ ದ್ರೋಣಸನ್ನಿಧೌ ॥
ಪಪ್ರಚ್ಛೈನಂ ತದಾದ್ರೋಣಃ ಸಖ್ಯಮಸ್ತ್ಯುತ ನೇತಿವಾ ॥ ೮೭ ॥

ಅಥ – ಆನಂತರ ಅರ್ಜುನಃ – ಅರ್ಜುನನು ದ್ರುಪದಂ – ದ್ರುಪದನನ್ನು ದ್ರೋಣಸನ್ನಿಧೌ – ದ್ರೋಣಾಚಾರ್ಯರ ಸಮೀಪದಲ್ಲಿ ಸ್ಥಾಪಯಾಮಾಸ – ಕುಳ್ಳಿರಿಸಿದನು ದ್ರೋಣಃ – ದ್ರೋಣರು ತದಾ – ಆಗ ಸಖ್ಯಂ – ಗೆಳೆತನವು ಅಸ್ತಿ – ಇದೆಯೋ ಉತ – ಅಥವಾ ನವಾ – ಇಲ್ಲವೋ ಇತಿ ಎಂದು ಏನಂ – ಈ ದ್ರುಪದನನ್ನು ಪಪ್ರಚ್ಛ – ಕೇಳಿದರು. ॥ ೮೭ ॥

ಅಸ್ತೀದಾನೀಮಿತಿಪ್ರಾಹ ದ್ರುಪದೋಽಂಗಿರಸಾಂವರಂ ॥
ಅಥಾಹ ದ್ರುಪದಂ ದ್ರೋಣಃ ಸಖ್ಯಮಿಚ್ಛೇಽಕ್ಷಯಂತವ ॥ ೮೮ ॥

ದ್ರುಪದಃ – ದ್ರುಪದನು ಇದಾನೀಂ – ಈಗ ಅಸ್ತಿ – ಸಖ್ಯವು ಇದೆ. ಇತಿ - ಎಂದು ಅಂಗಿರಸಾಂ ವರಂ ದ್ರೋಣ ದನ್ನು ಪ್ರಾಹ – ಹೇಳಿದನು ಅಥ ಅನಂತರ ದ್ರೋಣಃ–ದ್ರೋಣರು ತವ - ನಿನ್ನ ಅಕ್ಷಯಂ – ನಾಶರಹಿತವಾದ ಸಖ್ಯಂ – ಮೈತ್ರ್ಯವನ್ನು ಇಚ್ಛೇ – ಅಪೆ ಕ್ಷಿಸುತ್ತೇನೆ ಇತಿ ಎಂದು ದ್ರುಪದಂ – ದ್ರುಪದನನ್ನು ಉಕ್ತವತು ಆಹ – ಹೇಳಿದರು. ॥ ೮೮ ॥

ನಹ್ಯರಾಜ್ಞೋ ಭವೇತ್ಸಖ್ಯಂ ತವೇತೀದಂ ಕೃತಂಮಯಾ ॥
ನವಿಪ್ರಧರ್ಮೋ ಯದ್ಯುದ್ಧಮತಸ್ತ್ವಂ ನಮಯಾಧೃತಃ ॥ ೮೯ ॥

ಹಿ – ಯಾವಕಾರಣದಿಂದ ಅರಾಜ್ಞಃ – ರಾಜನಲ್ಲದವನಿಗೆ ತವ – ನಿನ್ನ ಸಖ್ಯಂ – ಮೈತ್ರ್ಯವು ಅಭವೇತ್ – ಆಗ ಲಾರದೋ ತತಃ – ಆ ಕಾರಣದಿಂದ ಇದಂ – ನಿನ್ನ ಆನಯನವು ಮಯಾ – ನನ್ನಿಂದ ಕೃತಂ – ಮಾಡಲ್ಪಟ್ಟಿತು. ಯತ್ – ಯಾವ ಕಾರಣದಿಂದ ಯುದ್ಧಂ ಸಂಗರವು ವಿಪ್ರಧರ್ಮಃ – ಬ್ರಾಹ್ಮಣರಿಗೆ ಧರ್ಮ್ಯವು ನ – ಅಲ್ಲವೋ ಅತಃ – ಆ ಕಾರಣ ದಿಂದ ಮಯಾ—ನನ್ನಿಂದ ನಧೃತಃ – ಹಿಡಿಯಲ್ಪಡಲಿಲ್ಲ. ॥ ೮೯ ॥

ಶಿಷ್ಯೈರೇತತ್ಕಾರಿತಂವೋ ತವಸಖ್ಯಮಭೀಪ್ಸತಾ ॥
ಅತಃ ಸಖ್ಯಾರ್ಧಮೇವಾದ್ಯ ತ್ವದ್ರಾಜ್ಯಾರ್ಧೋ ಹೃತೋಮಯಾ ॥ ೯೦ ॥

ತವ – ನಿನ್ನ ಸಖ್ಯಂ – ಮೈತ್ರ್ಯವನ್ನು ಅಭೀಪ್ಸತಾ – ಇಚ್ಛಿಸತಕ್ಕ ನನ್ನಿಂದ ಮೇ–ನನ್ನ ಶಿಷ್ಯೈಃ – ಶಿಷ್ಯರಿಂದ ಏತತ್– ಈ ನಿನ್ನ ಆನಯನವು ಕಾರಿತಂ – ಮಾಡಿಸಲ್ಪಟ್ಟಿತು. ಅತಃ – ಆದ್ದರಿಂದ ಸಖ್ಯಾರ್ಧಮೇವ ಮೈತ್ರ್ಯಕ್ಕಾಗಿಯೇ ಅದ್ಯ– ಈಗ ಮಯಾ – ನನ್ನಿಂದ ತ್ವದ್ರಾಜ್ಯಾರ್ಧಃ – ನಿನ್ನ ರಾಜ್ಯದ ಅರ್ಧ ಭಾಗವು ಹೃತಃ – ಅಪಹರಿಸಲ್ಪಟ್ಟಿತು. ॥ ೯೦ ॥

ಗಂಗಾಯಾದಕ್ಷಿಣೇ ಕೂಲೇ ತ್ವಂ ರಾಜೈವೋತ್ತರೇ ತ್ವಹಂ ॥
ನಹ್ಯರಾಜತ್ವ ಏಕಸ್ಯ ಸಖ್ಯಂ ಸ್ಯಾದಾವಯೋಃ ಸಖೇ ॥ ೯೧ ॥

ಹೇಸಖೇ – ಎಲೋಮಿತ್ರನೇ ಗಂಗಾಯಾಃ – ಭಾಗೀರಥಿನದಿಯ ದಕ್ಷಿಣೇಕೂಲೇ – ದಕ್ಷಿಣ ದಡದಲ್ಲಿ ತ್ವಮೇವ – ನೀನೇ ರಾಜಾ – ರಾಜನು ಉತ್ತರೇತು – ಗಂಗೆಯ ಉತ್ತರತೀರದಲ್ಲಾದರೂ ಅಹಂ – ನಾನು ರಾಜಾ – ರಾಜನು, ಆವಯೋಃ – ನಮ್ಮಿಬ್ಬರಲ್ಲಿ ಏಕಸ್ಯ – ಒಬ್ಬನಿಗೆ ಅರಾಜತ್ವೇ – ರಾಜತ್ವವಿಲ್ಲದಿದ್ದಲ್ಲಿ ಸಖ್ಯಂ – ಮೈತ್ರ್ಯವು ನಸ್ಯಾತ್ – ಆಗ ಲಾರದು. ॥ ೯೧ ॥

ಇತ್ಯುಕ್ತ್ವೋತ್ಸೃಜ್ಯತಂ ದ್ರೋಣೋ ರಾಜ್ಯಾರ್ಧಂ ಗೃಹ್ಯ ಚಾಮುತಃ ॥
ಯಯೌ ಶಿಷ್ಯೈರ್ನಾಗಪುರಂನ್ಯವಸತ್ಸಖ ಮತ್ರಚ ॥ ೯೨ ॥

ದ್ರೋಣಃ – ದ್ರೋಣರು ಇತಿ – ಈ ರೀತಿಯಾಗಿ ಉಕ್ತ್ವಾ – ಹೇಳಿ ತಂ–ಆ ದ್ರುಪದನನ್ನು ಉನ್ಮುಚ್ಯ – ಬಿಡಿಸಿ ಅಮುತಃ – ಈ ದ್ರುಪದನಿಂದ ರಾಜ್ಯಾರ್ಧಂ – ರಾಜ್ಯದಅರ್ಧಭಾಗವನು ಗೃಹ್ಯ – ಸ್ವೀಕರಿಸಿ ಶಿಷ್ಯೈಃ—ಶಿಷ್ಯರಿಂದ

ಕೂಡಿ ನಾಗಪುರಂ – ಹಸ್ತಿನಾವತಿಯನ್ನು ಕುರಿತು ಯಯೌ – ಹೋದರು ಅತ್ರ – ಈ ನಾಗಪುರದಲ್ಲಿ ಸುಖಂ – ಸುಖವಾಗಿ ನ್ಯವಸತ್ – ವಾಸ ಮಾಡಿದರು.

ಭಾ.ಅ. ೮೧–೯೨ ಆಗ ಸಿಟ್ಟಿಗೆದ್ದ ಸೈನ್ಯವು ಅರ್ಜುನನನ್ನು ಮುತ್ತಿತು. ಶ್ರೀ ಭೀಮಸೇನರು ವೇಗದಿಂದ ಬಾಣಗಳನ್ನು ಸುರಿಸಿ ಸಂಹರಿಸಿದರು. ಆಗ ಸತ್ಯಜಿತ್‌ನು ಬಹುಬಾಣಗಳನ್ನು ಬಿಡುತ್ತಾ ಅರ್ಜುನನ ಮೇಲೆ ಏರಿ ಬಂದಾಗ ಅವನನ್ನು ಅರ್ಜುನನು ಧನೂರಥ ರಹಿತನನ್ನಾಗಿ ಮಾಡಿದನು. ಶ್ರೀ ಭೀಮಸೇನರು ಮತ್ತೆ ಆ ಸೈನ್ಯವನ್ನು ಸಂಹರಿಸುತ್ತಿರುವಾಗ ಅರ್ಜುನನು "ಅಣ್ಣ, ಈ ದ್ರುಪದನು ನಮ್ಮ ತಂದೆಯ ಗೆಳೆಯನು, ಧಾರ್ಮಿಕನು, ನಮ್ಮ ಸಂಬಂಧವಾಗಲು ಯೋಗ್ಯನು ಆಗಿದ್ದರಿಂದ ಅವನ ಪೂರ್ಣ ಸೈನ್ಯ ನಾಶವಾಗುವದು ಬೇಡ; ಗುರುಗಳ ವಾಕ್ಯಕ್ಕನುಸಾರವಾಗಿ ಇವನನ್ನು ಮಾತ್ರ ಕರೆದುಕೊಂಡು ಹೋಗೋಣ" ಎಂದು ಹೇಳಿದನು. ಆಗ ಶ್ರೀ ಭೀಮಸೇನರು ಸಂಹರಿಸುವದನ್ನು ಬಿಟ್ಟು ಅರ್ಜುನನ ನ್ನು ಅನುಸರಿಸಿದರು. ಅರ್ಜುನನ ಆ ಮಾತನ್ನು ಕೇಳಿದಾಗಿನಿಂದ ದ್ರುಪದನು ಅರ್ಜುನನಲ್ಲಿ ವಿಶೇಷ ಪ್ರೀತಿಯನ್ನು ಮಾಡುತ್ತಿದ್ದನು. ಅರ್ಜುನನು ದ್ರೋಣರ ಸಮೀಪಕ್ಕೆ ದ್ರುಪದನನ್ನು ತಂದಾಗ, 'ಈಗ ಸಖ್ಯವು ಉಂಟೋ ? ಇಲ್ಲವೋ ?' ಎಂದು ದ್ರುಪದನನ್ನು ದ್ರೋಣರು ಕೇಳಿದರು. ದ್ರುಪದನು ಈಗ ಉಂಟೆಂದು ಉತ್ತರಿಸಿದಾಗ ದ್ರೋಣರು "ನಿನ್ನ ಸಖ್ಯ ನನಗೆ ಯಾವಾಗಲೂ ಬೇಕು; ನೀನೇ ಹಿಂದೆ ಹೇಳಿದಂತೆ ರಾಜನಾಗದವನ ಜೋತೆಗೆ ನಿನ್ನ ಸಖ್ಯವಿಲ್ಲವಾದ್ದರಿಂದ ಈ ಬಂಧನ ಕಾರ್ಯವನ್ನು ನಿನ್ನ ಸಖ್ಯಕ್ಕಾಗಿ ಮಾಡಿಸಿದ್ದು ಅಲ್ಲದೆ ಅದಕ್ಕಾಗಿ ಯಾರೊಬ್ಬರು ರಾಜರಲ್ಲದಿದ್ದರೂ ಸಖ್ಯವಾಗಲಾರದ್ದರಿಂದ ನಿನ್ನ ಅರ್ಧರಾಜ್ಯ ನನಗಿರಲಿ, ಅರ್ಧರಾಜ್ಯ ನಿನಗಿರಲಿ. ಗಂಗೆಯ ದಕ್ಷಿಣ ತೀರದಲ್ಲಿ ನೀನು ರಾಜನಾಗು, ಉತ್ತರ ತೀರದಲ್ಲಿ ನಾನು ಆಗುವೆನು, ನಮಗೆ ಯಾವಾಗಲೂ ಸಖ್ಯವಿರಲಿ" ಎಂದು ಹೇಳಿ ಅವನನ್ನು ಬಂಧನದಿಂದ ಬಿಡಿಸಿ ಅರ್ಧರಾಜ್ಯವನ್ನು ತೆಗೆದುಕೊಂಡು ಹಸ್ತಿನಾವತಿಗೆ ತೆರಳಿ ಅಲ್ಲಿ ಸುಖವಾಗಿ ವಾಸಿಸಿದರು.

ಬಾಹ್ಮಣ್ಯತ್ಯಾಗ ಭೀರುಸ್ಸನ್ನಾಗೃಹ್ಣಾದ್ಧನುರಪ್ಯಸೌ ॥
ಧಾರ್ತರಾಷ್ಟ್ರೈಸ್ತು ಭೀಮಸ್ಯ ಭಯಾತ್ಪಾದೌ ಪ್ರಣಮ್ಯ ಚ ॥ ೮೩ ॥
ಶರಣಾರ್ಥಂಯಾಚಿತಶ್ಚಾತ್ಸಪುತ್ರೋ ಯುಯುಧೇಹರ್ಯೈಃ ॥
ಏವಂ ಹರೀಚ್ಛಯೈವಾಸೌ ಕ್ಷಾತ್ರಂ ಧರ್ಮಮುಪೇಯಿವಾನ್ ॥ ೮೪ ॥

ಬಾಹ್ಮಣ್ಯ ತ್ಯಾಗಭೀರುಃಸನ್ – ಬ್ರಾಹ್ಮಣ ಧರ್ಮವನ್ನು ಬಿಡುವುದರಲ್ಲಿ ಭಯಶೀಲರಾಗಿ ಅಸೌ – ಈ ದ್ರೋಣರು ಧನುರಪಿ ಧನುಸ್ಸನ್ನೂ ಕೂಡ ನಾಗೃಹ್ಣಾತ್ – ಹಿಡಿಯಲಿಲ್ಲ ಧಾರ್ತರಾಷ್ಟ್ರೈಸ್ತು – ಕೌರವರಿಂದಲಾದರೂ ಭೀಮಸ್ಯ – ಭೀಮನ ಭಯಾತ್ – ಹೆದರಿಕೆಯಿಂದ ಪಾದೌ – ಕಾಲುಗಳನ್ನು ಪ್ರಣಮ್ಯ – ನಮಸ್ಕರಿಸಿ ಶರಣಾರ್ಥಂ – ರಕ್ಷಣೆಗಾಗಿ ಯಾಚಿತತ್ವಾತ್ – ಬೇಡಲ್ಪಟ್ಟದ್ದರಿಂದ ಸಪುತ್ರಃ – ಮಗನಾದ ಅಶ್ವತ್ಥಾಮನಿಂದ ಕೂಡಿದ ದ್ರೋಣಾಚಾರ್ಯರು ಪರ್ಯೈಃ – ಪಾಂಡವರಿಂದ ಯುಯುಧೇ – ಯುದ್ಧ ಮಾಡಿದರು. ಏವಂ – ಈ ರೀತಿಯಾಗಿ ಅಸೌ – ಈ ದ್ರೋಣರು ಹರೀಚ್ಛಯೈವ – ಪರಮಾತ್ಮನ ಇಚ್ಛೆಯಿಂದಲೇ ಕ್ಷಾತ್ರಂ – ಕ್ಷತ್ರಿಯಸಂಬಧಿಯಾದ ಧರ್ಮಂ – ಯುದ್ಧಾದಿಗಳನ್ನು ಉಪೇಯಿವಾನ್ – ಹೊಂದಿದರು. ॥ ೮೩–೮೪ ॥

ಭಾ.ಅ. ೮೩–೮೪ ಧನುಸ್ಸು, ಬಾಣ ಮೊದಲಾದ ಆಯುಧಗಳನ್ನು ಹಿಡಿದು ತಾವು ಸ್ವತಃ ಯುದ್ಧ ಮಾಡಿದರೆ ತಮ್ಮ ಬ್ರಾಹ್ಮಣ್ಯ ಹೋಗುವದೆಂಬ ಹೆದರಿಕೆಯಿಂದ ತಾವು ಆಯುಧಗಳನ್ನು ಹಿಡಿಯಲಿಲ್ಲ. ಶಿಷ್ಯರಿಂದಲೇ ಮಾಡಿಸಿದರು. ಮಹಾಭಾರತ ಯುದ್ಧದಲ್ಲಿ ಮಾತ್ರ ಶ್ರೀ ಭೀಮಸೇನರ ಭಯದಿಂದ ದುರ್ಯೋಧನಾದಿಗಳು ಕಾಲು ಹಿಡಿದು ಬೇಡಿದ್ದರಿಂದ ಪಾಂಡವರಿಂದ ಯುದ್ಧ ಮಾಡಿದರು. ಶ್ರೀಪರಶುರಾಮದೇವರ ಶಿಷ್ಯರಾದ ಶ್ರೀದ್ರೋಣಾಚಾರ್ಯರು ದುಷ್ಟರಾದ ದುರ್ಯೋಧನ ದಿಗಳ ರಕ್ಷಣೆಗಾಗಿ ಹೇಗೆ ಪರಧರ್ಮವನ್ನು ಸ್ವೀಕರಿಸಿದರು ಎಂಬ ಸಂಶಯ ಬಂದರೆ ಆಚಾರ್ಯರು ಭಗವದಿಚ್ಛೆಯಿಂದಲೆ: ಹಿಡಿದರು ಎಂಬುದನ್ನು **'ಹರೀಚ್ಛಯಾ'** ಎಂಬ ಪದದಿಂದ ತಿಳಿಸಿದ್ದಾರೆ.

ದ್ರುಪದಸ್ತು ದಿವಾರಾತ್ರಂ ತಪ್ಯಮಾನಃ ಪರಾಭವಾತ್ ॥
ಭೀಮಾರ್ಜುನಬಲಂ ದೃಷ್ಟ್ವಾಚ್ಛೈಚ್ಛತ್ಪಾಂಡವ ಸಂಕ್ಷಯಂ ॥ ೮೫ ॥

ಸಂಬಂಧೀತ್ಯರ್ಜುನ ವಚಶ್ಚಿಕೀರ್ಷುಃ ಸತ್ಯಮೇವಚ ॥
ಮಾರ್ದವಂ ಚಾರ್ಜುನೇದೃಷ್ಟ್ವಾ ಸುತಾಮೈಚ್ಛತ್ತದರ್ಥತಃ ॥ ೯೬ ॥

ದ್ರುಪದಸ್ತು – ದ್ರುಪದನಾದರೂ ಪರಾಭವಾತ್ – ಪರಾಜಯನಿಮಿತ್ತದಿಂದ ದಿವಾರಾತ್ರಂ – ಹಗಲುರಾತ್ರಿಯಲ್ಲಿ ತಪ್ಯಮಾನಸ್ಸನ್ – ಸಂತಾಪಗೊಂಡವನಾಗಿ ಭೀಮಾರ್ಜುನಬಲಂ—ಭೀಮಾರ್ಜುನರ ಸಾಮರ್ಥ್ಯವನ್ನು ದೃಷ್ಟ್ವಾ – ನೋಡಿ ಪಾಂಡವಸಂಶ್ರಯಂ – ಪಾಂಡವರ ಆಶ್ರಯವನ್ನು ಐಚ್ಛತ್ – ಇಚ್ಛಿಸಿದನು ಸಂಬಂಧೀತಿ—ಸಂಬಂಧಕ್ಕೆಯೋಗ್ಯನು ಎಂಬ ಅರ್ಜುನವ್ಚಚಃ – ಅರ್ಜುನನಮಾತನ್ನು ಸತ್ಯಮೇವ – ಯಥಾರ್ಥವನ್ನಾಗಿಯೇ ಚಿಕೀರ್ಷುಃ – ಮಾಡಲು ಇಚ್ಛೆವುಳ್ಳ ದ್ರುಪದನು ಅರ್ಜುನೇ – ಅರ್ಜುನನಲ್ಲಿ ಮಾರ್ದವಂಚ – ಮೃದುತ್ವವನ್ನೂ ಕೂಡ ದೃಷ್ಟ್ವಾ – ನೋಡಿ ತದರ್ಥತಃ ಅರ್ಜುನನಿ ಗೋಸ್ಕರ ಸುತಾಂ – ಮಗಳನ್ನು ಐಚ್ಛತ್ – ಇಚ್ಛಿಸಿದನು. ॥ ೯೫–೯೬ ॥

ಪುತ್ರಂಚ ದ್ರೋಣಹಂತಾರಮಿಚ್ಛನ್ವಿಪ್ರವರೌ ಯಯೌ ॥
ಯಾಜೋಪಯಾಜಾವಾನೀಯಾಥಾರ್ಬುದೇನ ಗವಾಂ ನೃಪಃ ॥ ೯೭ ॥

ಚಕಾರೇಷ್ಟಿಂಚ ತದ್ಭಾರ್ಯಾ ದ್ವಿಜಾಭ್ಯಾಮುತ್ರಚಾಹುತಾ ॥
ದ್ರುಪದಾತ್ಸುತಲಬ್ಧ್ಯರ್ಥಂ ಸಾಹಂಕಾರಾದ್ವ್ಯಲಂಬಯತ್ ॥ ೯೮ ॥

ನೃಪಃ – ದ್ರುಪದನು ದ್ರೋಣಹಂತಾರಂ – ದ್ರೋಣರನ್ನು ಕೊಲ್ಲುತಕ್ಕ ಪುತ್ರಂ—ಮಗನನ್ನು ಇಚ್ಛನ್ಸನ್ – ಇಚ್ಛಿಸ ತಕ್ಕವನಾಗಿ ವಿಪ್ರವರೌ – ಬ್ರಾಹ್ಮಣಶ್ರೇಷ್ಠರಾದ ಯಾಜೋಪಯಾಜೌ – ಯಾಜೋಪಯಾಜರನ್ನು ಕುರಿತು ಯಯೌ – ಹೋದನು ಅಥ – ಅನಂತರ ಗವಾಮರ್ಬುದೇನ – ಅರ್ಬುದ ಸಂಖ್ಯಾಕ ಗೋವುಗಳಿಂದ ತೌ + ಆ ಯಾಜೋಪಯಾಜರನ್ನು ಆನೀಯ – ತನ್ನ ಮನೆಗೆ ಕರೆಸಿ ಇಷ್ಟಿಂ – ಯಾಗವನ್ನು ಚಕಾರ – ಮಾಡಿದನು. ದ್ರುಪದಾತ್ – ದ್ರುಪದರಾಜನಿಂದ ಸುತ ಲಬ್ಧ್ಯರ್ಥಂ – ಗಂಡು ಮತ್ತು ಹೆಣ್ಣು ಇಬ್ಬರು ಮಕ್ಕಳು ಹುಟ್ಟುವದಕ್ಕಾಗಿ ದ್ವಿಜಾಭ್ಯಾಂ – ಯಾಜೋಪಯಾಜರಿಂದ ತದ್ಭಾರ್ಯಾ – ಆ ದ್ರುಪದನ ಹೆಂಡತಿಯು ಅತ್ರ – ಯಜ್ಞಸ್ಥಳಕ್ಕೆ ಆಹುತಾ ಆಹ್ವಾನಿಸಲ್ಪಟ್ಟಳು. ಸಾ ಅವಳು ಆಹಂಕಾರಾತ್ – ಮಕ್ಕಳು ಹುಟ್ಟಲಿಕ್ಕೆ ತನ್ನ ಅಪೇಕ್ಷೆಯಿದೆ ಎಂಬ ಅಹಂಕಾರದಿಂದ ವ್ಯಲಂಬಯತ್ – ವಿಳಂಬ ಮಾಡಿದಳು. ॥ ೯೭–೯೮ ॥

ಕಿಮೇತಯೇತ್ಯವಜ್ಞಾಯ ತಾವುಭೌ ವಿಪ್ರಸತ್ತಮೌ ॥
ಅಜುಹ್ವತಾಂ ತತ್ಪುತ್ರಾರ್ಥಂ ಪತ್ನ್ಯಾ ಪ್ರಾಶ್ಯಂ ಹವಿಸ್ತದಾ ॥ ೯೯ ॥

ಹುತೇಹವಿಷಿ ಮಂತ್ರಾಭ್ಯಾಂ ವೈಷ್ಣವಾಭ್ಯಾಂತದೈವಹಿ ॥
ದೀಪ್ತಾಂಗಾನಿರಭೋ ವಹ್ನಿಃ ಕುಂಡಮಧ್ಯಾತ್ಸಮುತ್ಥಿತಃ ॥ ೧೦೦ ॥

ವಿಪ್ರಸತ್ತಮೌ – ಬ್ರಾಹ್ಮಣ ಶ್ರೇಷ್ಠರಾದ ಉಭೌ ತೌ – ಇಬ್ಬರಾದ ಯಾಜೋಪಯಾಜರು ಏತಯಾ – ಈ ದ್ರುಪದನ ಹೆಂಡತಿಯಿಂದ ಕಿಂ – ಏನಾಗಬೇಕು ಇತಿ – ಎಂದು ಅವಜ್ಞಾಯ – ತಿರಸ್ಕರಿಸಿ ತತ್ಪುತ್ರಾರ್ಥಂ – ದ್ರುಪದನಿಗೆ ಮಕ್ಕಳು ಹುಟ್ಟುವದಕ್ಕಾಗಿ ತದಾ – ಆಗ ಪತ್ನ್ಯಾ – ಹೆಂಡತಿಯಿಂದ ಪ್ರಾಶ್ಯಂ – ತಿನ್ನಲುಯೋಗ್ಯವಾದ ಹವಿಃ – ಹವಿಸ್ಸನ್ನು ಅಜುಹ್ವತಾಂ – ಹೋಮಿಸಿದರು ವೈಷ್ಣವಾಭ್ಯಾಂ – ವಿಷ್ಣುದೇವತಾಕಗಳಾದ ಮಂತ್ರಾಭ್ಯಾಂ ಮಂತ್ರಗಳಿಂದ ಹವಿಷಿ – ಹವಿಸ್ಸು ಹುತೇಸತಿ – ಹೋಮಿಸಲ್ಪಡುತ್ತಿರಲು ತದೈವ – ಆಗಲೇ ವಹ್ನಿಃ – ಅಗ್ನಿಯು ಕುಂಡ ಮಧ್ಯಾತ್ – ಅಗ್ನಿಕುಂಡದ ಮಧ್ಯದಿಂದ ದೀಪ್ತಾಂಗಾರನಿಭಃಸನ್ – ಪ್ರಕಾಶಮಾನವಾದ ಅಂಗಾರಕ್ಕೆಸದೃಶನಾದವನಾಗಿ ಸಮುತ್ಥಿತಃ – ಮೇಲಕ್ಕೆ ಬಂದನು. ॥ ೯೯–೧೦೦ ॥

ಕೀರಿಟೀ ಕುಂಡಲೀ ದೀಪ್ತೀ ಹೇಮಮಾಲೀ ವರಾಸಿಮಾನ್ ॥
ರಥೇನಾದಿತ್ಯವರ್ಣೇನ ನದನ್ ದ್ರುಪದಮಾದ್ರವತ್ ॥ ೧೦೧ ॥

ಕೀರಿಟೀ – ಕಿರೀಟವುಳ್ಳ ಕುಂಡಲೀ – ಕರ್ಣಾಭರಣವುಳ್ಳ ದೀಪ್ತಃ – ಪ್ರಕಾಶಮಾನನಾದ ಹೇಮಮಾಲೀ—ಭಂಗಾರದ ಮಾಲೆಯುಳ್ಳ ವರಾಸಿಮಾನ್ – ಉತ್ತಮ ಖಡ್ಗವುಳ್ಳ ಪುರುಷನು ಆದಿತ್ಯವರ್ಣೀನ — ಸೂರ್ಯನಂತೆ ಥಳಥಳಿಸುವ ರಥೇನ – ಸ್ಯಂದನದಿಂದ ನದನ್ ಸನ್ – ಸಿಂಹನಾದವನ್ನು ಮಾಡುತ್ತಾ ದ್ರುಪದಂ – ದ್ರುಪದನನ್ನು ಕುರಿತು ಆದ್ರವತ್ – ಓಡಿಬಂದನು. ॥ ೧೦೧ ॥

ಧೃಷ್ಟತ್ವಾದ್ದ್ಯೋತನತ್ವಾಚ್ಚ ಧೃಷ್ಟದ್ಯುಮ್ನ ಇತೀರಿತಃ ॥
ಮುನಿಭಿರ್ದ್ರುಪದೇನಾಪಿ ಸರ್ವವೇದಾರ್ಥತತ್ತ್ವವಿತ್ ॥ ೧೦೨ ॥

ಧೃಷ್ಟತ್ವಾತ್ – ಧೈರ್ಯವಿದ್ದುದರಿಂದಲೂ ದ್ಯೋತನತ್ವಾಚ್ಚ ಪ್ರಕಾಶಮಾನನಾದ್ದರಿಂದಲೂ ಧೃಷ್ಟದ್ಯುಮ್ನ ಇತಿ – ಧೃಷ್ಟದ್ಯುಮ್ನನೆಂದು ಮುನಿಭಿಃ – ಋಷಿಗಳಿಂದಲೂ ದ್ರುಪದೇನಾಪಿ – ದ್ರುಪದನಿಂದಲೂ ಈರಿತಃ – ಹೇಳಿಸಿಕೊಳ್ಳಲ್ಪಟ್ಟನು ಸರ್ವವೇದಾರ್ಥತತ್ತ್ವವಿತ್ – ಎಲ್ಲಾ ವೇದಾರ್ಥಗಳ ತತ್ತ್ವವನ್ನು ತಿಳಿದವನು ಆಗಿದ್ದನು. ॥ ೧೦೨ ॥

ಭಾ.ಅ. ೯೫–೧೦೨ ದ್ರುಪದನು ಈ ಸೋಲಿನಿಂದ ತಾಪಗೊಂಡು, ಭೀಮಾರ್ಜುನರ ಬಲವನ್ನು ಕಂಡು ಅವರನ್ನು ಆಶ್ರಯಿಸಬೇಕೆಂದು ಇಚ್ಛಿಸಿ, ಅರ್ಜುನನಾಡಿದ ಇವನು ಸಂಬಂಧಯೋಗ್ಯನು ಎಂಬ ಮಾತನ್ನು ಸತ್ಯ ಮಾಡುವದಕ್ಕಾಗಿ ಮೃದು ಸ್ವಭಾವದ ಅರ್ಜುನನಿಗೆ ಕೊಡಲು ಒಬ್ಬ ಮಗಳನ್ನು ಪಡೆಯಬೇಕೆಂದು ಮತ್ತು ದ್ರೋಣ ಸಂಹಾರ ಮಾಡುವ ಮಗನನ್ನು ಪಡೆಯಲು ಇಚ್ಛಿಸಿದನು. ಅದಕ್ಕಾಗಿ, ಯಾಜ, ಉಪಯಾಜರೆಂಬ ಬ್ರಾಹ್ಮಣ ಸಹೋದರರ ಸಮೀಪಕ್ಕೆ ಹೋಗಿ ಪ್ರಾರ್ಥಿಸಿ ಒಂದು ಅರ್ಬುದ (ಹತ್ತುಕೋಟಿ) ಗೋವುಗಳನ್ನು ಕೊಡುವದಾಗಿ ಹೇಳಿ ಕರೆದುಕೊಂಡು ಬಂದನು. ಅವರು ದ್ರುಪದನ ಅಭೀಷ್ಟಪೂರ್ಣವಾಗಲು ಇಷ್ಟಿಯನ್ನು ಮಾಡುತ್ತಾ ಅದರಲ್ಲಿ ದ್ರುಪದನ ಪತ್ನಿಯು ಅಲ್ಲಿಯ ಹವಿಸ್ಸನ್ನು ಪ್ರಾಶನ ಮಾಡುವ, ಸಮಯ ಬಂದಾಗ ಅವಳನ್ನು ಕರಿಸಿದರೆ 'ಅವಳು ನನ್ನನ್ನು ಬಿಟ್ಟರೆ ಶಕ್ಯವಿಲ್ಲ' ಎಂಬ ಭಾವದಿಂದ ಕೂಡಿಕೊಂಡು ಅಹಂಕಾರ ಪಡುತ್ತಾ ವಿಲಂಬ ಮಾಡಿದಳು. ಆಗ ಆ ಬ್ರಾಹ್ಮಣರು ಈ ಅಹಂಕಾರದ ರಾಣಿಯಿಂದೇ ನಾಗಬೇಕು ಎಂದುಕೊಂಡು ಆ ಹವಿಸ್ಸನ್ನು ವೈಷ್ಣವ ಮಂತ್ರೋಚ್ಚಾರಣ ಪೂರ್ವಕ ಅಗ್ನಿಯಲ್ಲಿ ಹಾಕಿದರು. ಆಗ ತತ್‌ಕ್ಷಣದಲ್ಲಿ ಆ ಯಜ್ಞಕುಂಡದ ಮಧ್ಯದಿಂದ ಪ್ರಜ್ವಲಿಸುವ ಅಗ್ನಿಯೇ ಅವತರಿಸಿ ಕಿರೀಟ, ಕುಂಡಲ, ಹೇಮಮಾಲಾ, ಖಡ್ಗ, ರಥಗಳಿಂದ ಸಹಿತನಾಗಿಯೇ ಬಂದನು. ಗರ್ಜಿಸುತ್ತ ತಂದೆಯ ಸಮೀಪಕ್ಕೆ ಹೋದನು. ಅವತರಿಸುವಾಗಲೇ ಧೃಷ್ಟ (ಧೈರ್ಯಯುಕ್ತ) ನಾಗಿ, ದ್ಯುಮ್ನ (ಪ್ರಕಾಶಮಯ) ನಾಗಿ ಬಂದದ್ದರಿಂದ ಎಲ್ಲರೂ ಧೃಷ್ಟದ್ಯುಮ್ನ ಎಂದು ಅವನನ್ನು ಕರೆದರು.

ಅನ್ವೇನಂ ಭಾರತೀ ಸಾಕ್ಷಾದ್ವೇದಿಮಧ್ಯಾತ್ಸಮುತ್ಥಿತಾ ॥
ಪ್ರಾಣೋಹಿ ಭರತೋನಾಮ ಸರ್ವಸ್ಯ ಭರಣಾತ್ ಶ್ರುತಃ ॥ ೧೦೩ ॥
ತದ್ಭಾರ್ಯಾ ಭಾರತೀನಾಮ ವೇದರೂಪಾ ಸರಸ್ವತೀ ॥
ಶಂರೂಪಮಾಶ್ರಿತಾ ವಾಯುಂ ಶ್ರೀರಿತ್ಯೇವಚ ಕೀರ್ತಿತಾ ॥ ೧೦೪ ॥

ಏನಂ – ಈ ಧೃಷ್ಟದ್ಯುಮ್ನನನ್ನು ಅನು – ಅನುಸರಿಸಿ ಭಾರತೀ – ಭಾರತಿಯು ಸಾಕ್ಷಾತ್ – ಪ್ರತ್ಯಕ್ಷವಾಗಿಯೇ ವೇದಿಮಧ್ಯಾತ್ – ಯಜ್ಞಕುಂಡದ ಮಧ್ಯದಿಂದ ಸಮುತ್ಥಿತಾ – ಮೇಲಕ್ಕೆ ಬಂದಳು. ಪ್ರಾಣಃ – ವಾಯುದೇವರು ಸರ್ವಸ್ಯ ಭರಣಾತ್ – ಎಲ್ಲವನ್ನು ರಕ್ಷಿಸುವ ಪ್ರಯುಕ್ತ ಭರತಃನಾಮ – ಭರತನೆಂದು ಶ್ರುತಃ – ಶ್ರುತಿವೇದ್ಯರು ತದ್ಭಾರ್ಯಾ – ಭರತನಾಮವುಳ್ಳ ಆ ವಾಯುದೇವರ ಹೆಂಡತಿಯು ಭಾರತೀ – ಭಾರತೀ ಎಂದು ನಾಮ – ಪ್ರಸಿದ್ಧಳು ಯತಃ – ಯಾವ ಕಾರಣದಿಂದ ವೇದರೂಪಾ – ವೇದವಚನಗಳಿಗೆ ಅಭಿಮಾನಿನಿಯೋ ಅತಃ – ಆದ್ದರಿಂದ ಸರಸ್ವತೀ – ಸರಸ್ವತೀ ಎಂಬ ನಾಮವು. ಈಗ ಪಂಚದ್ರೌಪದೀ ಸ್ವರೂಪವನ್ನು ಹೇಳಲು ಆರಂಭಿಸುತ್ತಾರೆ. ಶಂರೂಪಂ ಯಾವಾಗಲೂ ಸುಖಿ ಸ್ವರೂಪರಾದ ವಾಯುಂ – ವಾಯುದೇವರನ್ನು ಆಶ್ರಿತಾ ಆಶ್ರಯಿಸಿದವಳಾಗಿ ಶ್ರೀರಿತಿ – ಶ್ರೀಃ ಎಂದು ಕೀರ್ತಿತಾ – ಹೇಳಿಸಿಕೊಳ್ಳಲ್ಪಡುತ್ತಾಳೆ ಅಥವಾ ಸುಖಿಸ್ವರೂಪರಾದ ವಾಯುದೇವರಿಂದ ಕ್ರೀಡಿಸುವ ಪ್ರಯುಕ್ತ ಶ್ರೀಃ ಎಂಬ ನಾಮವು. ॥ ೧೦೩–೧೦೪ ॥

ಆವೇಶಯುಕ್ತಾ ಶಚ್ಯಾಶ್ಚ ಶ್ಯಾಮಲಾಯಾಸ್ತಥೋಷಸಃ ॥
ತಾಶ್ಚೇಂದ್ರಧರ್ಮನಾಸತ್ಯ ಸಂಶ್ರಯಾತ್ಶ್ರಿಯ ಈರಿತಾಃ ॥ ೧೦೫ ॥

ಶಚ್ಯಾಃ — ಇಂದ್ರನ ಪತ್ನಿ ಶಚೀದೇವಿಯ, ಶ್ಯಾಮಲಾಯಾಃ – ಯಮನಪತ್ನಿ ಶ್ಯಾಮಲೆಯ ತಥಾ — ಹಾಗೆಯೇ ಉಷಸಃ – ಅಶ್ವಿನೀ ದೇವತೆಗಳ ಹೆಂಡತಿಯಾದ ಉಷಾದೇವಿಯ ಆವೇಶಯುಕ್ತಾ–ಆವೇಶದಿಂದ ಕೂಡಿದವಳು ದ್ರೌಪದಿಯು. ತಾಶ್ಚ – ಆ ಶಚೀ, ಶಾಮಲಾ, ಉಷಾದೇವಿಯರು ಇಂದ್ರಧರ್ಮ ನಾಸತ್ಯಸಂಶ್ರಯಾತ್ – ಇಂದ್ರ, ಯಮ, ಅಶ್ವಿನೀ ದೇವತೆಗಳನ್ನು ಆಶ್ರಯಿಸಿರುವದರಿಂದ ಶ್ರಿಯಈರಿತಾಃ – ಶ್ರೀ ಶಬ್ದದಿಂದ ಹೇಳಿಸಿಕೊಳ್ಳಲ್ಪಡುತ್ತಾರೆ. ॥ ೧೦೫ ॥

ಭಾ.ಅ. ೧೦೩–೧೦೫ ನಂತರ ಅದೇ ಕುಂಡ ಮಧ್ಯದಿಂದ ಶ್ರೀ ಭಾರತೀದೇವಿಯರು ಅವತರಿಸಿ ಬಂದರು ಎಲ್ಲರನ್ನು ಭರಿಸುವ (ರಕ್ಷಿಸುವ) ದ ರಿಂದ 'ಭರತ' ಎಂಬ ಹೆಸರು ಶ್ರೀ ಪ್ರಾಣದೇವರಿಗೆ. ಆದ್ದರಿಂದ ಅವರ ಪತ್ನಿಯರಿಗೆ 'ಭಾರತೀ' ಎಂಬ ಹೆಸರು. ಇವರು ವೇದಾಭಿಮಾನಿಗಳು, ಮುಂದೆ ಸರಸ್ವತೀ ಪದವಿಗೆ ಬರುವವರು. ಶಂ (ಸುಖ) ರೂಪರಾದವರು ಪ್ರಾಣದೇವರು. ಅವರನ್ನು ಆಶ್ರಯಿಸಿದ್ದರಿಂದ. ಅವರಿಂದ ರತಿ (ಸುಖ, ಆಸಕ್ತಿ, ಪ್ರೀತಿ) ಇರುವದರಿಂದ ಇವರಿಗೆ 'ಶ್ರೀ' ಎಂಬ ಹೆಸರೂ ಇದೆ. ಇಲ್ಲಿ ಅವತರಿಸುವಾಗ ಅವರು ಶಚೀ (ಇಂದ್ರಪತ್ನೀ), ಶ್ಯಾಮಲಾ (ಯಮಪತ್ನೀ) ಉಷಸ್ (ಅಶ್ವಿನೀ ದೇವತೆಗಳ ಪತ್ನೀ) ಇವರ ಆವೇಶದಿಂದ ಕೂಡಿಕೊಂಡು ಅವತರಿಸಿದ್ದಾಳೆ. ಇವರು ಕೂಡ (ಶ್ರಿತಾಃ) ಆಶ್ರಯಿಸಿದವರು (ತಮ್ಮ ಪತಿಗಳನ್ನು) ಎಂಬ ಅರ್ಥದಲ್ಲಿ ಶ್ರೀ ಎಂಬ ಹೆಸರು ಉಳ್ಳವರು.

ಸಾ ಕೃಷ್ಣಾನಾಮತಶ್ಚಾಸೀದುತ್ಕೃಷ್ಟತ್ವಾದ್ಧಿ ಯೋಷಿತಾಂ ॥
ಕೃಷ್ಣಾಸಾ ವರ್ಣತಶ್ಚಾಸೀದುತ್ಕೃಷ್ಟಾ ನಂದಿನೀಚಸಾ ॥ ೧೦೬ ॥

ಸಾ – ಆ ದ್ರೌಪದಿಯು ಯೋಷಿತಾಂ – ಸ್ತ್ರೀಯರ ಮಧ್ಯದಲ್ಲಿ ಉತ್ಕೃಷ್ಟತ್ವಾತ್ – ಶ್ರೇಷ್ಠಳಾದ್ದರಿಂದ ನಾಮತಃ – ಹೆಸರಿನಿಂದ ಕೃಷ್ಣಾ ಆಸೀತ್ – ಕೃಷ್ಣಾ ಎಂಬುದಾಗಿ ಆದಳು. ಸಾ – ಅವಳು ವರ್ಣತಶ್ಚ – ಕೃಷ್ಣವರ್ಣವಿರುವುದರಿಂದಲೂ ಕೂಡ ಕೃಷ್ಣಾ ಆಸೀತ್ – ಕೃಷ್ಣಾ ಎಂಬ ಹೆಸರುಳ್ಳವಳಾದಳು. ಸಾ – ಆ ದ್ರೌಪದಿಯು ಉತ್ಕೃಷ್ಟಾ ನಂದಿನೀಚ – ಕೃಷ ಶಬ್ದವು ಉತ್ಕೃಷ್ಟ ಎಂಬ ಅರ್ಥವನ್ನು ಹೇಳುತ್ತದೆ ಣಕಾರವು ಆನಂದ ಎಂಬ ಅರ್ಥವನ್ನು ಹೇಳುತ್ತದೆ. ಆದ್ದರಿಂದ ಉತ್ಕೃಷ್ಟ ಆನಂದವುಳ್ಳವರಾದ್ದರಿಂದಲೂ ಕೃಷ್ಣಾಪದ ವಾಚ್ಯಳು ಈ ರೀತಿಯಾಗಿ ಮೂರು ರೀತಿಯಿಂದಲೂ ಭಾರತಿಯು ಕೃಷ್ಣಾಪದ ವಾಚ್ಯಳು – ಇತರ ಸ್ತ್ರೀಯರು ವರ್ಣದಿಂದ ಮಾತ್ರ ಕೃಷ್ಣಾಪದ ವಾಚ್ಯರು. ॥ ೧೦೬ ॥

ಉತ್ಪತ್ತಿತಶ್ಚ ಸರ್ವಜ್ಞಾ ಸರ್ವಾಭರಣ ಭೂಷಿತಾ ॥
ಸಂಪ್ರಾಪ್ತಯೌವನೈವಾಸೀದಜರಾಲೋಕ ಸುಂದರೀ ॥ ೧೦೭ ॥

(ದ್ರೌಪದಿಯು) ಉತ್ಪತ್ತಿತಶ್ಚ – ಕುಂಡಮಧ್ಯದಿಂದ ಬಂದ ಸಮಯದಿಂದಲೇ ಸರ್ವಜ್ಞಾ – ಎಲ್ಲವನ್ನು ತಿಳಿದವಳು ಸರ್ವಾಭರಣ ಭೂಷಿತಾ – ಎಲ್ಲಾ ಆಭರಣಗಳಿಂದ ಅಲಂಕೃತಳು ಸಂಪ್ರಾಪ್ತಯೌವನೈವ – ಪ್ರಾಪ್ತವಾದ ತಾರುಣ್ಯಉಳ್ಳವಳೇ ಅಜರಾ – ಮುದಿತನವಿಲ್ಲದವಳು, ಲೋಕಸುಂದರೀ – ಮೂರು ಲೋಕದ ಸ್ತ್ರೀಯರಲ್ಲಿ ಅತ್ಯಂತ ಸೌಂದರ್ಯವುಳ್ಳವಳು. ॥ ೧೦೭ ॥

ಉಮಾಂಶಯುಕ್ತಾ ನಿತರಾಂ ಸರ್ವಲಕ್ಷಣ ಸಂಯುತಾ ॥೧೦೮ ॥

ನಿತರಾಂ – ಚೆನ್ನಾಗಿ, ಉಮಾಂಶಯುಕ್ತಾ–ದ್ರೌಪದಿಯು ಪಾರ್ವತಿಯ ಅಂಶದಿಂದ ಕೂಡಿದವಳು, ನಿತರಾಂ ಚೆನ್ನಾಗಿ ಸರ್ವಲಕ್ಷಣ ಸಂಯುತಾ – ಎಲ್ಲಾ ಲಕ್ಷಣಗಳಿಂದ ಕೂಡಿದವಳು ಆಗಿದ್ದಳು. ॥ ೧೦೮॥

ಭಾ.ಅ. ೧೦೬–೧೦೮ ಈ ಅವತಾರವು ಸ್ತ್ರೀಯರಲ್ಲಿ (ಕೃಷ–ಉತ್ಕೃಷ್ಟ) ಶ್ರೇಷ್ಠವಾದದ್ದರಿಂದ, ಕೃಷ್ಣ ವರ್ಣವುಳ್ಳದ್ದರಿಂದಲೂ, (ಕೃಷ್) ಉತ್ಕೃಷ್ಟವಾದ (ಣ) ಸುಖ ವುಳ್ಳದ್ದರಿಂದಲೂ, ಕೃಷ್ಣಾ ಎಂಬ ಹೆಸರು ಇದಕ್ಕೆ ಬಂದಿದೆ.

ಅವತರಿಸಿದಾಗಲೇ ಸರ್ವಜ್ಞಳು, ಎಲ್ಲ ಆಭರಣಯುಕ್ತಳೂ, ತಾರುಣ್ಯವುಳ್ಳವಳೂ ಅತ್ಯಂತ ಸುಂದರಿಯೂ, ಸರ್ವಲಕ್ಷಣಗಳಿಂದ ಕೂಡಿದವಳೂ, ಉಮಾದೇವಿಯ ಆವೇಶವುಳ್ಳವಳೂ ಕೂಡ ಆಗಿದ್ದಳು.

ಪೂರ್ವಂ ಹ್ಯುಮಾಚ ದೇವ್ಯಸ್ತಾಃ ಕದಾಚಿದ್ಭರ್ತೃಭಿರ್ಯುತಾಃ ॥
ವಿಲಾಸಂ ದರ್ಶಯಾಮಾಸುರ್ಬ್ರಹ್ಮಣಃ ಪಶ್ಯತೋಽಧಿಕಂ ॥
ಶಶಾಪತಾಸ್ತದಾ ಬ್ರಹ್ಮಾ ಮಾನುಷೀಂ ಯೋನಿಮಾಪ್ನುಥ ॥ ೧೦೯ ॥

ಪೂರ್ವಂ - ಹಿಂದೆ ಉಮಾ – ಪಾರ್ವತಿಯು ತಾದೇವ್ಯಶ್ಚ – ಶಚೀ, ಶ್ಯಾಮಲಾ, ಉಷಾ, ರೂಪರಾದ ದೇವಿಯರೂ ಕೂಡ ಕದಾಚಿತ್ – ಒಂದಾನೊಂದು ದಿನ ಭರ್ತೃಭಿಃ ತಮ್ಮ ತಮ್ಮ ಗಂಡಂದಿರಿಂದ ಯುತಾಸ್ಸತ್ಯಃ–ಕೂಡಿದವರಾಗಿ ಬ್ರಹ್ಮಣಃ ಪಶ್ಯತಃಸತಃ – ಬ್ರಹ್ಮನು ನೋಡುತ್ತಿರುವಾಗಲೇ ಅಧಿಕಂ – ಹೆಚ್ಚಾಗಿ ವಿಲಾಸಂ – ಹಾವಭಾವಗಳನ್ನು ಯದಾ–ಯಾವಾಗ ದರ್ಶಯಾಮಾಸುಃ – ತೋರಿಸಿದರೋ ತದಾ – ಆವಾಗ ಬ್ರಹ್ಮಾ ಬ್ರಹ್ಮನು ಮಾನುಷೀಂಯೋನಿಂ – ಮನುಷ್ಯ ಸಂಬಂಧಿ ಯೋನಿಯನ್ನು ಆಪ್ನುಥ – ಹೊಂದಿರಿ ಇತಿ – ಎಂದು ತಾಃ – ಆ ಸ್ತ್ರೀಯರನ್ನು ಶಶಾಪ - ಶಪಿಸಿದನು. ॥ ೧೦೯ ॥

ತತ್ರಾನ್ಯಗಾಶ್ಚ ಭವತೇತ್ಯೇವಂ ಶಪ್ತಾಃ ಸುರಾಂಗನಾಃ ॥
ವಿಚಾರ್ಯ ಭಾರತೀಮೇತ್ಯ ಸರ್ವಮಸ್ಯೈ ನಿವೇದ್ಯಚ ॥ ೧೧೦ ॥
ಸಹಸ್ರವತ್ಸರಂ ಚೈನಾಂ ಶುಶ್ರೂಷಿತ್ವಾ ಬಭಾಷಿರೇ ॥ ೧೧೧ ॥

ತತ್ರ—ಆ ಮನುಷ್ಯ ಜನ್ಮದಲ್ಲಿಯೂ ಕೂಡ ಅನ್ಯಗಾಶ್ಚ – ಪರಪುರುಷ ಸ್ಪರ್ಶಉಳ್ಳವರು ಭವತ—ಆಗಿರಿ ಇತ್ಯೇವಂ–ಈ ರೀತಿಯಾಗಿ ಶಪ್ತಾಃ – ಶಾಪವನ್ನು ಹೊಂದಿದ ಸುರಾಂಗನಾಃ —ದೇವಸ್ತ್ರೀಯರು ವಿಚಾರ್ಯ – ವಾಯುದೇವರ ಸ್ಪರ್ಶವು ದೋಷವಲ್ಲವೆಂದು ವಿಚಾರಮಾಡಿ ಭಾರತೀಂ – ಭಾರತಿಯನ್ನು ಏತ್ಯ – ಹೊಂದಿ ಅಸ್ಯೈ—ಈ ಭಾರತಿಗೋಸ್ಕರ ಸರ್ವಂ–ತಮ್ಮ ಎಲ್ಲಾ ಅಪರಾಧವನ್ನೂ, ಶಾಪ ಪ್ರಕಾರವನ್ನೂ ನಿವೇದ್ಯಚ – ವಿಜ್ಞಾಪಿಸಿ ಸಹಸ್ರವತ್ಸರಂ – ಸಾವಿರ ವರ್ಷಪರ್ಯಂತರ ಏನಾಂ – ಈ ಭಾರತಿಯನ್ನು ಶುಶ್ರೂಷಿತ್ವಾ—ಸೇವಿಸಿ ಬಭಾಷಿರೇ - ಹೇಳಿದರು. ॥ ೧೧೧ ॥

ದೇವಿ ನೋಮಾನುಷಂ ಪ್ರಾಪ್ಯಮನ್ಯಗಾತ್ವಂಚ ಸರ್ವಥಾ ॥
ತತ್ರಾಪಿ ಮಾರುತಾದನ್ಯಂ ನಸ್ಪೃಶೇಮ ಕಥಂಚನ ॥ ೧೧೨ ॥

ಹೇದೇವಿ – ಎಲೋದೇವಿಯೇ ನಃ — ನಮ್ಮಿಂದ ಮಾನುಷಂ – ಮನುಷ್ಯ ಜನ್ಮವು ಪ್ರಾಪ್ಯಂ — ಹೊಂದಲ್ಪಡಬೇಕಾಗಿದೆ. ಅನ್ಯಗಾತ್ವಂಚ – ಪರಪುರುಷಸ್ಪರ್ಶವೂಕೂಡ ಸರ್ವಥಾ —ಅನಿವಾರ್ಯವಾಗಿ ಪ್ರಾಪ್ಯಂ – ಹೊಂದಲ್ಪಡಬೇಕಾಗಿದೆ. ತತ್ರಾಪಿ ಆ ಮನುಷ್ಯ ಜನ್ಮದಲ್ಲಿಯೂ ಕೂಡ ಮಾರುತಾತ್ – ವಾಯುದೇವರಿಂದ ಅನ್ಯಂ – ಬೇರೆಯವರನ್ನು ಕಥಂಚನ - ಯಾವ ರೀತಿಯಿಂದಲೂ ನಸ್ಪೃಶೇಮ – ಮುಟ್ಟಲಾರೆವು. ॥ ೧೧೨ ॥

ಬ್ರಹ್ಮಣ್ಯೈವಚ ಶಪ್ತಾಃಸ್ಮಃ ಪೂರ್ವಂಚಾನ್ಯತ್ರ ಲೀಲಯಾ ॥
ಏಕದೇಹತ್ವಮಾಪ್ಯೈನಂ ಯದಾವಂಚಯಿತುಂಗತಾಃ ॥ ೧೧೩ ॥

ಅನ್ಯತ್ರ ಸ್ಥಳಾಂತರದಲ್ಲಿ ಏಕದೇಹತ್ವಂ – ಒಂದೇ ಶರೀರದಲ್ಲಿರುವಿಕೆಯನ್ನು ಆಪ್ಯ—ಹೊಂದಿ ಏನಂ–ಈ ಬ್ರಹ್ಮನನ್ನು ಯದಾ – ಯಾವಾಗ ವಂಚಯಿತುಂ – ಮೋಸಮಾಡುವದಕ್ಕಾಗಿ ಲೀಲಯಾ—ಕ್ರೀಡೆಯಿಂದ ಗತಾಃ—ಹೋದೆವೋ ತದಾ – ಆಗ ಬ್ರಹ್ಮಣ್ಯೈವ – ಬ್ರಹ್ಮನಿಂದಲೇ ಪೂರ್ವಂ – ಅನ್ಯಗಾಮಿತ್ಯ ಶಾಪಕ್ಕಿಂತ ಮೊದಲೇ ಶಪ್ತಾಃಸ್ಮಃ – ಶಾಪಗ್ರಸ್ತರಾಗಿರುವೆವು. ಶಾಪ ಪ್ರಕಾರವನ್ನು ಮುಂದೆ ವಿವರಿಸುವರು. ॥ ೧೧೩ ॥

ಏಕದೇಹಾಮಾನುಷತ್ವಮಾಪ್ಯತ್ರಿಂಶ ಉದ್ಧತಾಃ ॥
ತ್ರಿಶೋಮುದ್ವಂಚನಾಯೇತಾ ಇತಿ ತೇನೋದಿತಾವಯಂ ॥ ೧೧೪ ॥

ಅತಸ್ತ್ವಯೈಕದೇಹತ್ವಮಿಚ್ಛಾಮೋದೇವಿಜನ್ಮಸು ॥
ಚತುರ್ಷ್ವಪಿ ಯತೋಽಸ್ಮಾಕಂ ಶಾಪದ್ವಯ ನಿಮಿತ್ತತಃ ॥ ೧೧೫ ॥

ಉದ್ಧತಾಃ - ಎಲೋ ದೃಪ್ತರಾದ ಸ್ತ್ರೀಯರೇ ತ್ರಿಶಃ – ಮೂರುಸಲ ಮದ್ವಂಚನಾಯ—ನನ್ನನ್ನು ವಂಚಿಸುವುದ ಕ್ಕೋಸ್ಕರ ಇತಾಃ – ಪ್ರಾಪ್ತರಾದ ನೀವು ಏಕದೇಹಾಃ – ಒಂದೇ ಶರೀರವುಳ್ಳವರಾಗಿ ತ್ರಿಶಃ – ಮೂರು ಸಲ ಮಾನುಷತ್ವಂ – ಮನುಷ್ಯತ್ವವನ್ನು ಆಪ್ನ್ಯಥ – ಹೊಂದುವಿರಿ ಇತಿ—ಈ ರೀತಿಯಾಗಿ ವಯಂ – ನಾವು ತೇನ – ಆ ಬ್ರಹ್ಮನಿಂದ ಉದಿತಾಃ – ಹೇಳಿಸಿಕೊಳ್ಳಲ್ಪಟ್ಟೆವು. ಅತಃ – ಆದ್ದರಿಂದ ದೇವಿ – ಎಲೋ ಭಾರತಿದೇವಿಯೇ ಯತಃ – ಯಾವ ಕಾರಣದಿಂದ ಅಸ್ಮಾಕಂ– ನಮಗೆ ಶಾಪದ್ವಯನಿಮಿತ್ತತಃ – ಮೂರು ಸಲ ಮಾನುಷತ್ವವನ್ನು ಹೊಂದಿರಿ ಎಂದು ಒಂದು ಶಾಪ, ಇತರ ಪುರುಷ ಸ್ಪರ್ಶವುಳ್ಳವರಾಗಿರಿ ಎಂತ ಎರಡನೇ ಶಾಪ ಈ ರೀತಿಯಾಗಿ ಎರಡು ಶಾಪಗಳ ನಿಮಿತ್ತದಿಂದ ಚತುರ್ಷ್ವಪಿಜನ್ಮಸು— ನಾಲ್ಕು ಜನ್ಮಗಳಲ್ಲಿಯೂ ಕೂಡ ತ್ವಯಾ – ನಿನ್ನಿಂದ ಕೂಡಿಕೊಂಡು ಏಕದೇಹತ್ವಂ – ಒಂದೇ ದೇಹದಲ್ಲಿರುವಿಕೆಯನ್ನು ಇಚ್ಛಾಮಃ – ಇಚ್ಛಿಸುತ್ತೇವೆ. ॥ ೧೧೪–೧೧೫ ॥

ವಿಶ್ಲೇಷಾಂಶ — ಒಂದೇ ಶರೀರದಿಂದ ಮೂರು ಸಲ ನನ್ನನ್ನು ವಂಚಿಸುವುದಕ್ಕಾಗಿ ಬಂದ ಕಾರಣ ಮೂರು ಸಲ ಒಂದೇ ಶರೀರದಿಂದ ಮನುಷ್ಯರಾಗಿ ಹುಟ್ಟಿರಿ ಎಂದೇ ಬ್ರಹ್ಮನ ಶಾಪವು. ಈ ಮೂರು ಜನ್ಮಗಳಲ್ಲಿಯೂ ಅನ್ಯಗಾಮಿತ್ವ ಶಾಪವಿಲ್ಲ. ಹಾಗಾದರೆ ಏಕದೇಹದಲ್ಲಿರುವಾಗ ಭಾರತೀಯನ್ನು ಏಕೆ ಪ್ರಾರ್ಥಿಸಿದರು ? ನಾಲ್ಕನೇ ಜನ್ಮದಲ್ಲಿ ಅನ್ಯಗಾಮಿತ್ವ ಶಾಪವಿದ್ದರೂ ಏಕದೇಹತ್ವವು ಮೂರೇ ಜನ್ಮಗಳಲ್ಲಿಂದು ನಿರ್ಣಯಿಸಿದ್ದರಿಂದ ದೇಹೈಕ್ಯವು ಏತಕ್ಕೆ ಎಂಬ ಶಂಕೆಗೆ ಸಮಾಧಾನವು—ಮೂರು ಜನ್ಮಗಳಲ್ಲಿ ಅನ್ಯಗಾಮಿತ್ವಶಾಪವಿಲ್ಲದಿದ್ದರೂ ದೇವತಾ ಸ್ತ್ರೀಯರಿಗೆ ಅತಿ ಮನೋಹರ ರೂಪ ವಿರುವುದರಿಂದ ರಾವಣಾದಿಗಳಂತೆ ಕಾಮುಕನಾದ ಯಾರಾದರೂ ಒಬ್ಬ ಪುರುಷನು ತಮ್ಮನ್ನು ಬಲಾತ್ಕಾರದಿಂದ ಮುಟ್ಟುವನು ಎಂಬ ಭಯದಿಂದ ಭಾರತಿಯನ್ನು ಪ್ರಾರ್ಥಿಸಿದ್ದು. ಆ ಸ್ತ್ರೀಯರು ಒಂದು ದೇಹದಲ್ಲಿ ಇದ್ದುಕೊಂಡು ಪತಿಯನ್ನು ಪ್ರಾರ್ಥಿಸಿದ್ದರಿಂದ ರುದ್ರನೂ ಕೂಡ ಒಂದು ಶರೀರದಲ್ಲಿಯೇ ತಮ್ಮ ತಮ್ಮ ಪತಿಪ್ರಾಪ್ತಿರೂಪವಾದ ವರವನ್ನು ಕೊಟ್ಟನು. ಆದ್ದರಿಂದ ದ್ರೌಪದೀ ಜನ ದಲ್ಲಿ ಇವರಿಗೂ ಒಂದೇ ದೇಹವೆಂದು ತಿಳಿಯತಕ್ಕದ್ದು. ರುದ್ರನು ಬ್ರಹ್ಮನ ಶಾಪವನ್ನು ಕಳೆದು ತಮ್ಮ ತಮ್ಮ ಪತಿಪ್ರಾಪ್ತಿ ರೂಪವಾದ ವರವನ್ನು ಕೊಟ್ಟದ್ದರಿಂದ ಅನ್ಯಗಾಮಿತ್ವ ಸಂಶಯವಿಲ್ಲದಿದ್ದರೂ ಎಲೋ ಭಾರತಿಯೇ ನಿನ್ನಿಂದ ಕೂಡಿಕೊಂಡು ಒಂದೇ ಶರೀರದಲ್ಲಿರುವಿಕೆಯನ್ನು ನಾಲ್ಕು ಜನ್ಮಗಳಲ್ಲಿ ಇಚ್ಛಿಸುತ್ತೇವೆ ಎಂಬುದಾಗಿ ಹಿಂದೆ ಹೇಳಿದ ಮಾತನ್ನು 'ಸತ್ಯ ಮಾಡುವುದಕ್ಕಾಗಿಯೂ ಸುಂದರರೂಪವಿರುವದರಿಂದ ಯಾರಾದರೂ ಕಾಮಿಯು ತಮ್ಮನ್ನು ಮಟ್ಟಿಯಾನು ಎಂಬ ಸಂಶಯ ನಿವಾರಣೆಗ್ಕಾಗಿಯೂ ಒಂದೇ ದೇಹದಿಂದಲೇ ಭಾರತೀಯಿಂದ ಕೂಡಿಕೊಂಡು ನಾಲ್ಕು ಜನ್ಮಗಳೆಂದು ಸಮಾಧಾನವು. ॥ ೧೧೫ ॥

ಚತುರ್ಜನ್ಮ ಭವೇದ್ಭೂಮೌ ತ್ವಾಂನಾನ್ಯೋ ಮಾರುತಾದ್ಋತೇ ॥
ನಿಯಮೋಯಂ ಹರೇರ್ಯಸ್ಮಾದನಾದಿ ರ್ನಿತ್ಯವಚ ॥ ೧೧೬ ॥

ಭೂಮೌ –ಭೂಮಿಯಲ್ಲಿ ಚತುರ್ಜನ್ಮ – ನಾಲ್ಕು ಸಲ ಉತ್ಪತ್ತಿಯು ಭವೇತ್ – ಆಗುವುದು. ತ್ವಾಂ–ನಿನ್ನನ್ನು ಮಾರು ತಾತ್ – ವಾಯುದೇವರ ದೆಸೆಯಿಂದ ಅನ್ಯಃ - ಬೇರೊಬ್ಬನು ನವೃಜೇತ್—ಹೊಂದಲಾರನು ಇತಿ – ಎಂದು ಯಸ್ಮಾತ್ – ಯಾವಕಾರಣದಿಂದ ಹರೇಃ—ಪರಮಾತ್ಮನ ಅನಾದಿಃ – ನಿತ್ಯವಾದ ನಿಯಮವಿವ – ನಿಯಮವೋ ಆದ್ದರಿಂದ ನಪುಗೆ ಅನ್ಯಗಾಮಿತ್ವವಿದ್ದರೂ ವಾಯುದೇವರ ಸ್ಪರ್ಶಮಾತ್ರವಾಗುವುದರಿಂದ ನಿನ್ನಿಂದ ಕೂಡಿಕೊಂಡು ಒಂದೇ ದೇಹದಲ್ಲಿರುವ ಪ್ರಯೋಜನವು. ॥ ೧೧೬ ॥

ಭಾ.ಅ. ೧೦೯–೧೧೬ [ಇನ್ನು ಮೇಲೆ ದ್ರೌಪದೀದೇವಿ (ದ್ರುಪದನ ಮಗಳಾದ್ದರಿಂದ ಹಾಗೆ ಹೆಸರು) ಯಲ್ಲಿ ಆ ನಾಲ್ಕು ದೇವಸ್ತ್ರೀ (ಶಚಿ, ಶಾಮಲಾ, ಉಷಸ್ ಮತ್ತು ಉಮಾ) ಯರ ಆವೇಶ ಬರಲು ಕಾರಣವನ್ನು ಹೇಳುತ್ತಾರೆ.] ಒಂದು ಸಮಯದ ಈ ನಾಲ್ಕು ಜನ ದೇವಿಯರು ತಮ್ಮ ತಮ್ಮ ಪತಿಗಳಿಂದ ಕೂಡಿಕೊಂಡು ಬ್ರಹ್ಮ

ಸಭೆಯಲ್ಲಿ ಬ್ರಹ್ಮದೇವರ ಎದುರಿಗೆ ಸ್ವೈರಸ್ತ್ರೀಯರಂತೆ ಆಚರಿಸುತ್ತಿದ್ದರು. ಆಗ ಬ್ರಹ್ಮದೇವರು ಸಭಾ ಮರ್ಯಾದಾ ಉಲ್ಲಂಘನೆ ಮಾಡಿದ ಸ್ತ್ರೀಯರನ್ನು ಕುರಿತು "ನೀವು ಮನುಷ್ಯ ಜನ್ಮವನ್ನು ಹೊಂದಿರಿ. ಆಗ ಪರಪುರುಷ ಸ್ಪರ್ಶವನ್ನು ಹೊಂದಿರಿ" ಎಂದು ಶಾಪ ಕೊಟ್ಟರು. ಶಪ್ತರಾದ ಆ ದೇವಸ್ತ್ರೀಯರು "ಭಾರತೀದೇವಿಯರನ್ನು ಪ್ರಾಣದೇವರ ಹೊರತಾಗಿ ಬೇರೆ ಯಾರೂ ಸ್ಪರ್ಶಿಸಲಾರರು, ನಾವು ಅವಳ ಒಳಗೆ ಸೇರಿಕೊಂಡು ಜನ್ಮ ಹೊಂದಿದರೆ, ಪ್ರಾಣದೇವರ ಸ್ಪರ್ಶವಾದರೂ, ಪ್ರಾಣದೇವರು ನಮ್ಮ್ಯ ಮಾವನಿದ್ದಂತೆಯಾದ್ದರಿಂದ ಅವರ ಸ್ಪರ್ಶವು ದೋಷಕರವಾಗಲಾರದು (ಮಗಳಿಗೆ ತಂದೆಯ ಸ್ಪರ್ಶವಾದರೆ ಹೇಗೆ ದೋಷಕರವಾಗುವದಿಲ್ಲವೋ ಹಾಗೆ," ಎಂದು ವಿಚಾರಿಸಿ, ಭಾರತೀದೇವಿಯ ಸೇವೆಯನ್ನು ಒಂದು ಸಾವಿರ ವರ್ಷ ಮಾಡಿದನಂತರ ತಾವು ವಿಚಾರಿಸಿದ ವಿಷಯವನ್ನು ನಿರೂಪಿಸಿ "ನಾವು ಮೊದಲು ಒಂದು ದೇಹದಲ್ಲಿ ಸೇರಿಕೊಂಡು ವಂಚಿಸಲು ಬ್ರಹ್ಮದೇವರ ಸಮೀಪಕ್ಕೆ ಮೂರು ಸಲ ಹೋಗಿದ್ದೆವು. ಅದಕ್ಕಾಗಿ ಮೂರು ಸಲ ಒಂದೇ ದೇಹದಲ್ಲಿ ಸೇರಿಕೊಂಡು ಮನುಷ್ಯರಾಗಿ ಹುಟ್ಟಿರಿ ಎಂದು ಬ್ರಹ್ಮದೇವರ ಶಾಪ ಬಂದಿದೆ. ಆನಂತರ ವಿಲಾಸ ತೋರಿಸಿದ್ದರಿಂದ ಮಾನುಷ ಜನ್ಮವನ್ನು ಹೊಂದಲು ಹಾಗು ಅಲ್ಲಿ ಅನ್ಯಸ್ಪರ್ಶವಾಗುವಂತೆ ಶಾಪಕೊಟ್ಟಿದ್ದಾರೆ. ಆದ್ದರಿಂದ ನಮಗೆ ಬರಬೇಕಾದ ನಾಲ್ಕು ಜನ್ಮಗಳಲ್ಲಿಯೂ ನಿನ್ನ ದೇಹದಲ್ಲಿ ಪ್ರವೇಶ ಕೊಡಬೇಕು. ನಿನ್ನನ್ನು ವಾಯುದೇವರನ್ನು ಬಿಟ್ಟು ಬೇರೆ ಯಾರೂ ಸ್ಪರ್ಶಿಸಲಾರರು ಇದು ಭಗವಂತನ ನಿಯಮವೇ ಆಗಿದೆ. ಆದ್ದರಿಂದ ನಿನ್ನಿಂದ ಕೂಡಿಕೊಂಡು (ಒಂದೇ ದೇಹದಲ್ಲಿ) ಹುಟ್ಟಿದಾಗ ನಮಗೆ ವಾಯುದೇವರನ್ನು ಬಿಟ್ಟು ಬೇರೆಯವರ ಸ್ಪರ್ಶವಾಗುವದಿಲ್ಲ" ಎಂದು ಪ್ರಾರ್ಥಿಸಿದರು. (ಮೂರು ಜನ್ಮಗಳಲ್ಲಿ ಏಕದೇಹತ್ವಶಾಪವಿದೆ. ಅನ್ಯಸ್ಪರ್ಶಶಾಪವಿರದಿದ್ದರೂ ಕೂಡ ಸುಂದರಿಯರಾದ ತಮ್ಮನ್ನು ದುಷ್ಟ ಪುರುಷರು ಸ್ಪರ್ಶಿಸುವ ಸಂಭವವಿರುವದರಿಂದ ಭಾರತೀದೇವಿಯರನ್ನು ಕೂಡಿಕೊಂಡು ಅವತರಿಸಲು ಕೇಳಿದರು. ಎರಡನೆಯ ಶಾಪದಪ್ರಕಾರ ಅನ್ಯಸ್ಪರ್ಶ ಶಾಪವಿದೆ. ಆದರೆ ಏಕದೇಹತ್ವದ್ದು ಇಲ್ಲ. ಅನ್ಯಸ್ಪರ್ಶ ದೋಷ ತಪ್ಪಿಸಿಕೊಳ್ಳಲು ಭಾರತೀದೇವಿಯರ ಸಹವಾಸ ಬೇಕೇಬೇಕು. ತಾವು ಎಲ್ಲರೂ ಬೇರೆ ಬೇರೆ ದೇಹಗಳಲ್ಲಿ ಅವತರಿಸಿದರೆ ಆ ಎಲ್ಲ ದೇಹಗಳಲ್ಲಿ ಭಾರತೀದೇವಿಯನ್ನು ಬರಲು ಪ್ರಾರ್ಥಿಸಬೇಕಾಗುತ್ತದೆ. ನಮ್ಮ ಸಲುವಾಗಿ ಬಹು ಮನುಷ್ಯ ಜನ್ಮವನ್ನು ಅವಳಿಗೆ ತರಿಸುವದು ಯೋಗ್ಯವಲ್ಲ. ಆದ್ದರಿಂದ ನಾವೇ ಒಂದು ದೇಹದಲ್ಲಿ ಸೇರಿಕೊಂಡೇ ಹುಟ್ಟಿಬಿಡೋಣ, ಹೇಗೊ ಮೊದಲಿನ ಮೂರು ಜನ್ಮಗಳಲ್ಲಿ ಹಾಗೆ ಹುಟ್ಟಿ ಅಭ್ಯಾಸವಾಗಿರುತ್ತದೆ ಎಂದು ವಿಚಾರಿಸಿ, ಆ ಜನ್ಮದಲ್ಲಿಯೂ ಏಕದೇಹತ್ವವನ್ನು ಪ್ರಾರ್ಥಿಸಿದರು.)

ಅತಸ್ತ್ವಯೈಕದೇಹಾನ್ನೋ ನಾನ್ಯ ಆಪ್ನೋತಿ ಮಾರುತಾತ್ ॥
ಇತೀರಿತೇತಥೇತ್ಯುಕ್ತ್ವಾ ಪಾರ್ವತ್ಯಾದಿ ಯುತೈವ ಸಾ ॥ ೧೧೭ ॥

ವಿಪ್ರಕನ್ಯಾsಭವತ್ತತ್ರ ಚತಸ್ರಃಪಾರ್ವತೀಯುತಾಃ ॥
ಏಕದೇಹಸ್ಥಿತಾಶ್ಚಕ್ರುರ್ಗಿರೀಶಾಯ ತಪೋಮಹತ್ ॥

ತದ್ದೇಹಸ್ಥಾ ಭಾರತೀತು ರುದ್ರದೇಹಸ್ಥಿತಂ ಹರಿಂ ॥
ತೋಷಯಾಮಾಸ ತಪಸಾ ಕರ್ಮೈಕಾರ್ಥಂ ಧೃತವ್ರತಾ ॥ ೧೧೯ ॥

ಅತಃ – ಆದ್ದರಿಂದ ತ್ವಯಾ – ನಿನ್ನಿಂದ ಕೂಡಿಕೊಂಡು ಏಕದೇಹಾನ್ – ಒಂದೇಶರೀರವುಳ್ಳ ನಃ – ನಮ್ಮನ್ನು ಮಾರುತಾತ್ – ವಾಯುದೇವರದೆಸೆಯಿಂದ ಅನ್ಯಃ – ಬೇರೊಬ್ಬನು ನ ಆಪ್ನೋತಿ – ಸ್ಪರ್ಶಿಸುವದಿಲ್ಲ ಇತಿ – ಈ ರೀತಿಯಾಗಿ ಈರಿತೇಸತಿ – ಹೇಳುತ್ತಿರಲು ಸಾ – ಆ ಭಾರತಿಯು ತಥಾ ಹಾಗೆಯೇ ಆಗಲಿ ಇತಿ – ಎಂದು ಉಕ್ತ್ವಾ – ಹೇಳಿ ಪಾರ್ವತ್ಯಾದಿಯುತೈವ – ಪಾರ್ವತ್ಯಾದಿಗಳಿಂದ ಕೂಡಿಕೊಂಡೇ ವಿಪ್ರಕನ್ಯಾ – ವಿಪ್ರಕನ್ಯೆಯು ಅಭವತ್ – ಆದಳು ತತ್ರ – ಆ ವಿಪ್ರಕನ್ಯಾ ಜನ್ಮದಲ್ಲಿ ಪಾರ್ವತೀಯುತಾಃ – ಪಾರ್ವತಿಯಿಂದಕೂಡಿದ ಚತಸ್ರಃ – ಶಚೀ, ಶ್ಯಾಮಲಾ ಮೊದಲಾದ ನಾಲ್ವರು ಏಕದೇಹ ಸ್ಥಿತಾಸ್ತತ್ಯಃ – ಒಂದೇ ಶರೀರದಲ್ಲಿದ್ದವರಾಗಿ ಗಿರೀಶಾಯ—ರುದ್ರನಿಗೋಸ್ಕರ ಮಹತ್ತಪಃ – ಶ್ರೇಷ್ಠವಾದ ತಪಸ್ಸನ್ನು ಚಕ್ರುಃ – ಮಾಡಿದರು ತದ್ದೇಹಸ್ಥಾ – ವಿಪ್ರಕನ್ಯೆಯ ದೇಹದಲ್ಲಿರುವ ಧೃತವ್ರತಾ – ಧರಿಸಲ್ಪಟ್ಟವ್ರತವುಳ್ಳ ಭಾರತೀತು – ಭಾರತಿಯಾದರೂ ಕರ್ಮೈಕಾರ್ಥಂ ಒಂದೇ ಶರೀರದಲ್ಲಿ ಮಾಡಿದ ನಮಸ್ಕಾರ, ಸಕೃದ್ಭೋಜನ ಮೊದಲಾದ

ಕರ್ಮಗಳಿಗೆ ಫಲೈಕ್ಯದಿಂದ ಐಕ್ಯವು ಬರುವುದಕ್ಕಾಗಿ, ತಪಸಾ – ತಪಸ್ಸಿನಿಂದ ರುದ್ರದೇಹಸ್ಥಿತಂ - ರುದ್ರದೇಹದಲ್ಲಿರುವ ಹರಿಂ – ರುದ್ರನಾಮಕನಾದ ಪರಮಾತ್ಮನನ್ನು ತೋಷಯಾಮಾಸ – ಸಂತೋಷ ಪಡಿಸಿದಳು. ॥ ೧೧೭–೧೧೯ ॥

ತಸ್ಯೈ ಸರುದ್ರದೇಹಸ್ಥೋ ಹರಿಃ ಸ್ಯಾದಾದ್ವರಂ ಪ್ರಭುಃ ॥
ಅನಂತತೋಷಣಂ ವಿಷ್ಣೋಃ ಸ್ವಭರ್ತ್ರಾಸಹಜನ್ಮಸು ॥ ೧೧೯ ॥
ಸರ್ವೇಷ್ವಪೀತಿ ಚಾನ್ಯಾಸಾಂ ದದೌ ಶಂಕರ ಏವಚ ॥
ವರಂ ಸ್ವಭರ್ತೃಸಂಯೋಗಂ ಮಾನುಷೇಷ್ವಪಿ ಜನ್ಮಸು ॥ ೧೨೦ ॥

ರುದ್ರದೇಹಸ್ಥಃ – ರುದ್ರದೇಹದಲ್ಲಿರತಕ್ಕ ಪ್ರಭುಃ ಸಮರ್ಥನಾದ ಸಹರಿಃ ಆ ಶ್ರೀಹರಿಯು ತಸ್ಯೈ – ಆ ಭಾರತೀ ಗೋಸ್ಕರ ಸರ್ವೇಷ್ವಪಿ ಜನ್ಮಸು—ಎಲ್ಲಾ ಜನ್ಮಗಳಲ್ಲಿ ಸ್ವಭರ್ತ್ರಾಸಹ—ತನ್ನ ಪತಿಯಿಂದ ಕೂಡಿಕೊಂಡು ವಿಷ್ಣೋಃ – ಪರಮಾತ್ಮನ ಅನಂತತೋಷಣಂ ಅಪರಿಮಿತ ಸಂತೋಷಪಡಿಸುವಿಕೆಯನ್ನು ಕರಿಷ್ಯಸಿ – ಮಾಡುವಿ ಇತಿ - ಎಂದು ವರಂ – ವರವನ್ನು ಪ್ರಾದಾತ್ – ಕೊಟ್ಟನು ಅನ್ಯಾಸಾಂ – ಇತರ ಸ್ತ್ರೀಯರಿಗೆ ಶಂಕರ ಏವ ರುದ್ರನೇ ಮಾನುಷೇಷ್ವಪಿ ಜನ್ಮಸು – ಮನುಷ್ಯಜನ್ಮಗಳ ಮಧ್ಯದಲ್ಲಿ ಯಾವುದಾದರೊಂದು ಜನ್ಮದಲ್ಲಿ ಸ್ವಭರ್ತೃಸಂಯೋಗಂ – ತಮ ಪತಿಸಂಯೋಗ ರೂಪವಾದ ವರಂ – ವರವನ್ನು ದದೌ – ಕೊಟ್ಟನು. ॥ ೧೧೯–೧೨೦ ॥

ತತಸ್ತದೈವ ದೇಹಂ ತಾ ವಿಸೃಜ್ಯ ನಳನಂದಿನೀ ॥
ಬಭೂವುರಿಂದ್ರಸೇನೇತಿ ದೇಹೈಕ್ಯೇನ ಸುಸಂಗತಾಃ ॥ ೧೨೧ ॥

ತತಃ—ವರಪ್ರಾಪ್ತ್ಯನಂತರ ತಾಃ – ಆ ದೇವಿಯರು ತದೈವ – ಕೂಡಲೇ ದೇಹಂ — ವಿಪ್ರಕನ್ಯಾಶರೀರವನ್ನು ವಿಸೃಜ್ಯ – ಬಿಟ್ಟು ದೇಹೈಕ್ಯೇನ – ಶರೀರೈಕ್ಯದಿಂದ ಸುಸಂಗತಾಃ – ಏಕಕಾರ್ಯ ಬುದ್ಧಿಉಳ್ಳವರಾಗಿ ನಳನಂದಿನೀ – ಎರಡನೇ ಜನ್ಮದಲ್ಲಿ ನಳನಂದಿನೀ ನಾಮದಿಂದ ಬಭೂವುಃ – ಹುಟ್ಟಿದರು. ತಂದೇಹಂ – ಆ ನಳನಂದಿನೀಶರೀರವನ್ನು ತಮ್ಮೀಚ್ಛೆಯಿಂದಲೇ ವಿಸೃಜ್ಯ – ಬಿಟ್ಟು ಇಂದ್ರಸೇನೇತಿ – ಇಂದ್ರಸೇನಾ ಎಂಬುದಾಗಿ ಬಭೂವುಃ – ಮೂರನೇ ಜನ್ಮದಲ್ಲಿ ಹುಟ್ಟಿದರು. ॥ ೧೨೧ ॥

ಭಾ.ಅ. ೧೧೭–೧೨೧ ಆ ನಾಲ್ಕೂ ದೇವತಾ ಸ್ತ್ರೀಯರು ಹಾಗೆ ಪ್ರಾರ್ಥಿಸಿದಾಗ ಶ್ರೀ ಭಾರತೀದೇವಿಯು ಒಪ್ಪಿಗೆ ಕೊಟ್ಟು ಆ ಪ್ರಕಾರ ನಾಲ್ವರಿಂದ ಕೂಡಿಕೊಂಡು ಒಬ್ಬ ವಿಪ್ರಕನ್ಯಾ ಆಗಿ ಅವತರಿಸಿದಳು. ಇದು ಮೊದಲನೆಯ ಜನ್ಮವು. ಇದರಲ್ಲಿರುವಾಗ ತಪಸ್ಸನ್ನು ಮಾಡಿದರು. ಶ್ರೀ ಭಾರತೀದೇವಿಯು ಶ್ರೀ ರುದ್ರಾಂರ್ಗತ ಶ್ರೀ ಹರಿಯ ತಪಸ್ಸನ್ನು ಮಾಡಿದರೆ ಉಳಿದವರು ಮಾತ್ರ ಶ್ರೀ ರುದ್ರದೇವರ ತಪಸ್ಸನ್ನೇ ಮಾಡಿದರು. ಶ್ರೀ ಭಾರತೀದೇವಿಯು ತಪಸ್ಸನ್ನು ಮಾಡಿದ್ದು ಕರ್ಮೈಕ್ಯಕ್ಕಾಗಿ (ಅಂದರೆ ತನ್ನೊಳಗಿದ್ದ ಸ್ತ್ರೀಯರಿಗೆ ಕರ್ಮ ಫಲ ಒಂದೇ ರೀತಿ ಬರುವದಕ್ಕಾಗಿ, ಕರ್ಮಗಳನ್ನು ಮಾಡುವಾಗ ಒಂದೇ ಉದ್ದೇಶವಿರುವದಕ್ಕಾಗಿ) ಮಾಡಿದ್ದು. ತಪಸ್ಸಿನಿಂದ ತುಷ್ಟನಾದ ಶ್ರೀ ರುದ್ರಾಂತರ್ಗತನಾದ ಶ್ರೀ ಹರಿಯು ಆ ವರವನ್ನು ಕೊಟ್ಟನು ಮತ್ತು ಎಲ್ಲ ಜನ್ಮಗಳಲ್ಲಿ ತನ್ನ ಗಂಡನಿಂದ ಸಹಿತವಾಗಿ ಭಗವದಾರಾಧನೆ ಮಾಡುವ ವರವನ್ನು ಕೊಟ್ಟನು. ರುದ್ರದೇವರು ಉಳಿದ ದೇವಸ್ತ್ರೀಯರಿಗೆ ಅವರವರ ಗಂಡಂದಿರ ಸಂಬಂಧವು ಮನುಷ್ಯ ಜನ್ಮಗಳಲ್ಲಿ ಆಗುವಂತೆ (ಬ್ರಹ್ಮ ಶಾಪಕ್ಕೆ ವಿರುದ್ಧವಾಗಿ) ವರವನ್ನು ಕೊಟ್ಟರು. ಆಗ ಆ ಸ್ತ್ರೀಯರು ಆ ದೇಹವನ್ನು ತ್ಯಾಗಮಾಡಿ ದ್ವಿತೀಯ ಜನ್ಮವಾಗಿ, ನಳನಂದಿನಿಯಾಗಿ ಅವತರಿಸಿದರು, ಮೂರನೇ ಜನ್ಮವೇ 'ಇಂದ್ರಸೇನಾ' ಎಂಬುದು.

ತದಾಸೀನ್ಮುದ್ಗಲೋ ನಾಮಮುನಿಸ್ತಪಸಿ ಸಂಸ್ಥಿತಃ ॥
ಚಕಮೇ ಪುತ್ರಿಕಾಂ ಬ್ರಹ್ಮೇತ್ಯಶೃಣೋತ್ಸ ಕಥಾಂತರೇ ॥ ೧೨೨ ॥

ತದಾ – ಆಗ ಮುದ್ಗಲೋನಾಮ – ಮುದ್ಗಲನೆಂದು ಪ್ರಸಿದ್ಧನಾದ ಮುನಿಃ – ಮುನಿಯು ತಪಸಿ ತಪಸ್ಸಿನಲ್ಲಿ ಸಂಸ್ಥಿತಃ – ನಿರತಕ್ಕವನು ಆಸೀತ್ – ಆಗಿದ್ದನು ಸಃ – ಅವನು ಕಥಾಂತರೇ – ಯಾವುದೋ ಒಂದು ಕಥೆಯಲ್ಲಿ ಬ್ರಹ್ಮಾ – ಚತುರ್ಮುಖನು ಪುತ್ರಿಕಾಂ - ಮಗಳನ್ನು ಚಕಮೇ – ಕಾಮಿಸಿದನು ಇತಿ – ಎಂದು ಅಶೃಣೋತ್ – ಕೇಳಿದನು. ॥ ೧೨೨ ॥

ಅಸಾಹಸತ್ತ್ವಽಬ್ಜಯೋನಿಂ ಶಶಾಪೈನಂ ಚತುರ್ಮುಖಃ ॥
ಭಾರತ್ಯಾದ್ಯಾಃ ಪಂಚದೇವೀರ್ಗಚ್ಛ ಮಾನಿನ್ನಭೂತಯೇ ॥ ೧೨೩ ॥

ಸಃ—ಆ ಮುದ್ಗಲರು ಅಬ್ಜಯೋನಿಂ—ಬ್ರಹ್ಮನನ್ನು ಅಪಾಹಸತ್ – ಅಪಹಾಸ ಮಾಡಿದರು ಹೇಮಾನಿನ್ – ನಾನು ಕಾಮವಿಲ್ಲದವನೆಂಬ ಅಭಿಮಾನವುಳ್ಳವನೇ ತ್ವಂ—ನೀನು ಅಭೂತಯೇ – ನರಕಾದ್ಯನರ್ಥ ಪ್ರಾಪ್ತಿಗೋಸ್ಕರ ಭಾರತ್ಯಾದ್ಯಾಃ—ಭಾರತಿಯೇ ಮೊದಲಾಗಿ ಉಳ್ಳ ಪಂಚದೇವೀಃ – ಐದು ಸ್ತ್ರೀಯರನ್ನು ಗಚ್ಛ – ಹೊಂದು ಇತಿ – ಎಂದು ಚತುರ್ಮುಖಃ – ಬ್ರಹ್ಮನು ಏನಂ – ಈ ಮುದ್ಗಲನನ್ನು ಶಶಾಪ – ಶಪಿಸಿದನು. ॥ ೧೨೩ ॥

ಇತೀರಿತಸ್ತಂ ತಪಸಾ ತೋಷಯಾಮಾಸ ಮುದ್ಗಲಃ ॥
ಶಾಪಾನುಗ್ರಹ ಮುಸ್ಯಾಥ ಚಕ್ರೇಕಂಜಸಮುದ್ಭವಃ ॥ ೧೨೪ ॥

ಇತಿ – ಈ ರೀತಿಯಾಗಿ ಈರಿತಃ – ಹೇಳಿಸಿಕೊಳ್ಳಲ್ಪಟ್ಟ ಮುದ್ಗಲಃ – ಮುದ್ಗಲನು ತಂ – ಆ ಬ್ರಹ್ಮನನ್ನು ತಪಸಾ – ತಪಸ್ಸಿನಿಂದ ತೋಷಯಾಮಾಸ – ಸಂತೋಷಪಡಿಸಿದನು ಕಂಜಸಮುದ್ಭವಃ – ಬ್ರಹ್ಮನು ಅಥ – ಅನಂತರ ಅಸ್ಯ – ಈ ಮುದ್ಗಲನಿಗೆ ಶಾಪಾನುಗ್ರಹಂ – ಶಾಪಕ್ಕೆ ಅನುಗ್ರಹವನ್ನು ಚಕ್ರೇ – ಮಾಡಿದನು. ॥ ೧೨೪ ॥

ನತ್ವಂಯಾಸ್ಯಸಿ ತಾದೇವೀರ್ಮಾರುತಸ್ತ್ವಚ್ಛರೀರಗಃ ॥
ಯಾಸ್ಯತಿ ತ್ವಂ ತದಾ ಮೂರ್ಖಾಂಗತೋ ನೈವವಿಬುಧ್ಯಸೇ ॥ ೧೨೫ ॥

ಹೇ ಮುದ್ಗಲ – ಎಲೋ ಮುದ್ಗಲನೇ ತ್ವಂ – ನೀನು ತಾದೇವೀಃ – ಆ ದೇವಿಯರನ್ನು ನಯಾಸ್ಯಸಿ – ಹೊಂದುವದಿಲ್ಲ ತ್ವಚ್ಛರೀರಗಃ – ನಿನ್ನ ಶರೀರದಲ್ಲಿರುವ ಮಾರುತಃ – ವಾಯುದೇವರು (ಇಂದ್ರಸೇನಾಂ – ಭಾರತೀರೂಪಳಾದ ಇಂದ್ರಸೇನೆಯನ್ನು) ಯಾಸ್ಯತಿ - ಹೊಂದುತ್ತಾರೆ ತದಾ – ಆಗ ತ್ವಂ – ನೀನು ಮೂರ್ಖಾಂ – ಮೂರ್ಛೆಯನ್ನು ಗತಃಸನ್ – ಹೊಂದಿದವನಾಗಿ ನೈವವಿಬುಧ್ಯಸೇ – ಎಚ್ಚರ ಉಳ್ಳವನಾಗುವುದಿಲ್ಲ. ॥ ೧೨೫ ॥

ನಚ ಪಾಪಂ (ಶಾಪಂ) ತತಸ್ತೇ ಸ್ಯಾದಿತ್ಯುಕ್ತೇಚೈನಮಾವಿಶತ್ ॥
ಮಾರುತೋಽಥೇಂದ್ರಸೇನಾಂಚ ಗೃಹೀತ್ವಾಭವದ್ಗೃಹೀ ॥ ೧೨೬ ॥

ತತಃ – ಆ ಕಾರಣದಿಂದ ತೇ – ನಿನಗೆ ಪಾಪಂ – ಪಾಪವು (ಶಪ್ಯತೇ ಅನೇನೇತಿ ಶಾಪಂ – ಶಾಪವಚನವೂ) ನಸ್ಯಾತ್—ಆಗಲಾರದು ಇತ್ಯುಕ್ತೇಸತಿ – ಹೀಗೆ ಹೇಳುತ್ತಿರಲು ಮಾರುತಃ – ವಾಯುದೇವರು ಏನಂ – ಈ ಮುದ್ಗಲನನ್ನು ಆವಿಶತ್ – ಪ್ರವೇಶಿಸಿದರು. ಅಥ – ಪ್ರವೇಶಮಾಡಿದನಂತರ ಇಂದ್ರಸೇನಾಂ – ಇಂದ್ರಸೇನೆಯನ್ನು ಗೃಹೀತ್ವಾ – ಪ್ರಾಣಿಗ್ರಹಣ ಮಾಡಿಕೊಂಡು ಅಥ—ಅನಂತರ ಗೃಹೀ – ಗೃಹಸ್ಥಾಶ್ರಮಿಯು ಅಭವತ್ - ಆದರು. ॥ ೧೨೬ ॥

ರೇಮೇಚಸ ತಯಾಸಾರ್ಧಂ ದೀರ್ಘಕಾಲಂಜಗತ್ಪ್ರಭುಃ ॥
ತತೋಮುದ್ಗಲ ಮುದ್ಬೋಧ್ಯ ಯಯೌ ಚಸ್ವಂ ನಿಕೇತನಂ ॥ ೧೨೭ ॥

ಜಗತ್ಪ್ರಭುಃ - ಜಗತ್ತಿಗೆ ಒಡೆಯರಾದ ಸಃ – ಆ ವಾಯುದೇವರು ತಯಾ – ಆ ಇಂದ್ರಸೇನೆಯಿಂದ ಸಾರ್ಧಂ – ಕೂಡಿಕೊಂಡು ದೀರ್ಘಕಾಲಂ – ಬಹುಕಾಲ ರೇಮೇ – ಕ್ರೀಡಿಸಿದರು. ತತಃ – ಆನಂತರ ಮುದ್ಗಲಂ–ಮುದ್ಗಲನನ್ನು ಉದ್ಬೋಧ್ಯ–ಎಬ್ಬಿಸಿ ಸ್ವಂ ನಿಕೇತನಂ - ತನ್ನ ಮಂದಿರವನ್ನು ಕುರಿತು ಯಯೌ – ಹೋದರು. ॥ ೧೨೭ ॥

ಭಾ.ಅ. ೧೨೨–೧೨೭ ಆಗ ಮುದ್ಗಲ ಎಂಬ ಮುನಿಗಳು ತಪಸ್ಸನ್ನಾಚರಿಸುತ್ತಿದ್ದವರು ಒಮ್ಮೆ ಕಥಾವನ್ನು ಕೇಳುತ್ತಿದ್ದಾಗ 'ಬ್ರಹ್ಮದೇವರು ತಮ್ಮ ಮಗಳನ್ನು ಇಚ್ಛಿಸಿದರು' ಎಂಬ ವಿಷಯ ಕೇಳಿ ಅವರ ಬಗ್ಗೆ ಅಪಹಾಸ ಮಾಡಿದರು. ಆಗ ಬ್ರಹ್ಮದೇವರು ಆ ಋಷಿಗಳಿಗೆ 'ನೀನು ಭಾರತೀ ಮೊದಲಾದ ಐದು ಸ್ತ್ರೀಯರನ್ನು ಭೋಗಿಸು, ಅದರಿಂದ

ನಿನಗೆ ಅಶುಭ ಆಗಲಿ' ಎಂದು ಶಪಿಸಿದರು. ಶಪ್ತರಾದ ಮುದ್ಗಲರು ತಪ್ತರಾಗಿ ತಪಸ್ಸನ್ನು ಮಾಡಿ ಬ್ರಹ್ಮದೇವರನ್ನು ಸಂತೋಷಪಡಿಸಿದರು. ಬ್ರಹ್ಮದೇವರು 'ನೀನು ಆ ದೇವಸ್ತ್ರೀಯರನ್ನು ಹೊಂದುವದಿಲ್ಲ; ನಿನ್ನ ಶರೀರದಲ್ಲಿರುವ ವಾಯು ದೇವರು ಹೊಂದುತ್ತಾರೆ. ಆಗ ನಿನಗೆ ಎಚ್ಚರವಿರುವದಿಲ್ಲ. ನಿನಗೆ ಯಾವ ಪಾಪವೂ ಬರುವದಿಲ್ಲ ಎಂದು ಪರಿಹಾರ ವಚನವನ್ನು ಹೇಳಿದರು. ಇದರ ನಂತರ ವಾಯುದೇವರು ಮುದ್ಗಲರನ್ನು ಪ್ರವೇಶಿಸಿದರು. ಅವರು ಆ ಇಂದ್ರಸೇನೆಯನ್ನು ವಿವಾಹವಾಗಿ ಆ ಶರೀರದಲ್ಲಿ (ಮುದ್ಗಲರ) ವಿಹರಿಸುತ್ತಾ ಬಹಳ ದಿನವಿದ್ದರು.

ತತೋದೇಶಾಂತರಂಗತ್ವಾ ತಪಶ್ಚಕ್ರೇಸ ಮುದ್ಗಲಃ ॥
ಸೇಂದ್ರಸೇನಾ ವಿಯುಕ್ತಾಥ ಭರ್ತ್ರಾಚಕ್ರೇ ಮಹತ್ತಪಃ ॥ ೧೨೮ ॥

ತತಃ – ಅನಂತರ ಸಃ ಮುದ್ಗಲಃ - ಆ ಮುದ್ಗಲನು ದೇಶಾಂತರಂ – ಅನ್ಯದೇಶವನ್ನು ಗತ್ವಾ – ಹೋಗಿ ತಪಃ – ತಪಸ್ಸನ್ನು ಚಕ್ರೇ – ಮಾಡಿದನು ಅಥ – ಅನಂತರ ಭರ್ತ್ರಾ – ಗಂಡನಿಂದ ವಿಯುಕ್ತಾ – ವಿಯೋಗವನ್ನು ಹೊಂದಿದ ಸಾ ಇಂದ್ರಸೇನಾ ಆ ಇಂದ್ರಸೇನೆಯು ಮಹತ್ತಪಃ – ಮಹತ್ತಾದ ತಪಸ್ಸನ್ನು ಚಕ್ರೇ – ಮಾಡಿದಳು. ॥ ೧೨೮ ॥

ತದ್ದೇಹಗಾಭಾರತೀತು ಕೇಶವಂ ಶಂಕರೇ ಸ್ಥಿತಂ ॥
ತೋಷಯಾಮಾಸ ತಪಸಾ ಕರ್ಮ್ಯೈಕ್ಯಾರ್ಥಂಹಿ ಪೂರ್ವವತ್ ॥ ೧೨೯ ॥

ತದ್ದೇಹಗಾ - ಆ ಇಂದ್ರಸೇನೆಯ ಶರೀರದಲ್ಲಿರತಕ್ಕ ಭಾರತೀತು – ಭಾರತಿಯಾದರೂ ಶಂಕರೇ – ರುದ್ರನಲ್ಲಿ ಸ್ಥಿತಂ – ಇರತಕ್ಕ ಕೇಶವಂ – ಶ್ರೀಹರಿಯನ್ನು ಪೂರ್ವವತ್ – ಹಿಂದಿನಂತೆಯೇ ಕರ್ಮ್ಯೈಕ್ಯಾರ್ಥಂ – ಕರ್ಮಗಳಿಗೆ ಏಕತ್ವವು ಬರುವುದಕ್ಕಾಗಿ ತಪಸಾ – ತಪಸ್ಸಿನಿಂದ ತೋಷಯಾಮಾಸ – ಸಂತೋಷಪಡಿಸಿದಳು. ॥ ೧೨೯ ॥

ಉಮಾದ್ಯಾ ರೌದ್ರಮೇವಾತ್ರ ತಪಶ್ಚಕ್ರುರ್ಯಥಾಪುರಾ ॥
ಪ್ರತ್ಯಕ್ಷೇಚ ಶಿವೇಜಾತೇ ತದ್ದೇಹಸ್ಥೇಚ ಕೇಶವೇ ॥ ೧೩೦ ॥

ಪೃಥಕ್ಪೃಥಕ್ಸ್ವಭರ್ತ್ರಾಪ್ತೈ ತಾಃ ಪಂಚಾಪ್ಯೇಕ ದೇಹಗಾಃ ॥
ಪ್ರಾರ್ಥಯಾಮಾಸುರಭವತ್ಪಂಚಕೃತ್ವೋ ವಚೋಹಿತತ್ ॥ ೧೩೧ ॥

ಉಮಾದ್ಯಾಃ – ಪಾರ್ವತಿಯೇ ಮೊದಲಾದ ಸ್ತ್ರೀಯರು ಅತ್ರ – ಇಲ್ಲಿ ಪುರಾಯಥಾ – ಮೊದಲಿನಂತೆಯೇ ರೌದ್ರಮೇವ – ರುದ್ರಸಂಬಂಧಿಯೇ ಆದ ತಪಃ – ತಪಸ್ಸನ್ನು ಚಕ್ರುಃ – ಮಾಡಿದರು ಶಿವೇ – ರುದ್ರನು, ತದ್ದೇಹಸ್ಥೇ – ರುದ್ರನ ಶರೀರದಲ್ಲಿರುವ ಕೇಶವೇಚ – ಶ್ರೀಹರಿಯೂ ಕೂಡ ಪ್ರತ್ಯಕ್ಷೇಜಾತೇಸತಿ – ಪ್ರತ್ಯಕ್ಷರಾಗುತ್ತಿರಲು ಏಕದೇಹಗಾಃ – ಒಂದೇ ದೇಹದಲ್ಲಿರತಕ್ಕ ತಾಃಪಂಚಾಪಿ - ಆ ಐದು ಸ್ತ್ರೀಯರೂ ಕೂಡ ಪೃಥಕ್ ಪೃಥಕ್ – ಪ್ರತ್ಯೇಕ ಪ್ರತ್ಯೇಕವಾಗಿ ಸ್ವಭರ್ತ್ರಾಪ್ತೈ – ತಮ್ಮ ತಮ್ಮ ಗಂಡಂದಿರ ಪ್ರಾಪ್ತಿಗಾಗಿ ಪ್ರಾರ್ಥಯಾಮಾಸುಃ - ಪ್ರಾರ್ಥಿಸಿದರು ಹಿ - ಯಾವ ಕಾರಣದಿಂದ ತದ್ವಚಃ – ಆ ಐದು ಸ್ತ್ರೀಯರ ಪತಿಸಂಯೋಗಪ್ರಾರ್ಥನಾರೂಪವಾದ ಮಾತು ಪಂಚಕೃತ್ವಃ – ಐದುಸಲ ಅಭವತ್ – ಆಯಿತೋ ತಸ್ಮಾತ್ - ಆ ಕಾರಣದಿಂದ ಗಂಡನಸಂಬಂಧವಾಗಲಿ ಎಂಬ ಹರಿಹರರ ಮಾತೂಕೂಡ ಐದಾವರ್ತಿ ಆಯಿತು. ॥೧೩೦–೧೩೧॥

ಶಿವದೇಹಸ್ಥಿತೋ ವಿಷ್ಣುಃಭಾರತ್ಯೈತುದದೌ ಪತಿಂ ॥
ಅನ್ಯಾಸಾಂ ಶಿವವಿವಾಥ ಪ್ರದದೌ ಚತುರಃ ಪತೀನ್ ॥ ೧೩೨ ॥

ಶಿವದೇಹಸ್ಥಿತಃ – ರುದ್ರನ ಶರೀರದಲ್ಲಿರುವ ವಿಷ್ಣುಃ – ಶ್ರೀಹರಿಯು ಭಾರತ್ಯೈ – ಭಾರತಿಗೋಸ್ಕರ ಪತಿಂ – ಗಂಡನಿಂದ ಕೂಡಿಕೊಂಡು ವಿಷ್ಣುವಿನ ಅನಂತತೋಷಣ ರೂಪವಾದ ವರವನ್ನು ಹಿಂದಿನಂತೆಯೇ ದದೌ – ಕೊಟ್ಟನು. ಅಥ – ಅನಂತರ ಅನ್ಯಾಸಾಂ – ಪಾರ್ವತ್ಯಾದಿ ಇತರ ಸ್ತ್ರೀಯರಿಗೆ ಶಿವವಿವ – ರುದ್ರನೇ ಚತುರಃ – ನಾಲ್ಕು ಸಂಖ್ಯಾಕರಾದ ಪತೀನ್ – ಗಂಡಂದಿರನ್ನು ಪ್ರದದೌ – ಕೊಟ್ಟನು. ॥ ೧೩೨ ॥

ದೇವ್ಯಶ್ಚತಸ್ರಸ್ತುತದಾ ದತ್ತಮಾತ್ರೇವರೇಽಮುನಾ ॥
ದೇವಾನಾಮವತಾರಾರ್ಥಂ ಪಂಚದೇವ್ಯಃ ಸ್ಮ ಇತ್ಯಥ ॥ ೧೩೩ ॥

ನಾಜಾನನ್ನೇಕ ದೇಹತ್ವಾಚ್ಚಿದ್ಯೋಗಾತ್ಕ್ಷೀರನೀರವತ್ ॥
ತಾಃ ಶ್ರುತ್ವಾಸ್ವಪತಿಂ ದೇವಿನಚಿರಾತ್ಪ್ರಾಪ್ಸ್ಯಸೀತಿ ಚ ॥ ೧೩೪ ॥

ವಿಷ್ಣೂಕ್ತಂ ಶಂಕರೋಕ್ತಂಚ ಚತ್ವಾರಃ ಪತಯಃ ಪೃಥಕ್ ॥
ಭವಿಷ್ಯಂತೀತ್ಯಥೈಕಸ್ಯಾ ಮೇನಿರೇ ಪಂಚಭರ್ತೃತಾಂ ॥ ೧೩೫ ॥

ಅಮುನಾ – ರುದ್ರನಿಂದ ವರೇ – ವರವು ದತ್ತಮಾತ್ರೇಸತಿ ಕೊಡಲ್ಪಡುತ್ತಿರಲು ತದಾ – ಆಗ ದೇವ್ಯಶ್ಚತಸ್ರಃ – ಪಾರ್ವತ್ಯಾದಿ ನಾಲ್ವರು ದೇವಾನಾಂ – ಧರ್ಮ, ವಾಯು, ನಾಸತ್ಯರೆಂಬ ದೇವತೆಗಳ, ಹಾಗೂ ಹೆಂಡತಿಯ ಸಂಯೋಗಕ್ಕೆ ಅರ್ಹನಲ್ಲದ ರುದ್ರನ ಅವತಾರಾರ್ಥಂ – ಅವತಾರಕ್ಕೋಸ್ಕರ ಏಕದೇಹತ್ವಾತ್ – ಒಂದೇ ಶರೀರದಲ್ಲಿರುವುದರಿಂದಲೂ ಕ್ಷೀರನೀರವತ್ – ಹಾಲು ನೀರುಗಳಂತೆ ಚಿದ್ಯೋಗಾತ್ – ಜೀವ ಚೈತನ್ಯಗಳಿಗೆ ಪರಸ್ಪರ ಸಂಶ್ಲೇಷವಿರುವುದರಿಂದ ವಯಂ – ನಾವು ಪಂಚದೇವ್ಯಃ – ಐದುದೇವಿಯರು ಸ್ಮಃ ಆಗಿದ್ದೇವೆ ಇತಿ – ಎಂಬುದಾಗಿ ನಾಜಾನನ್ – ತಿಳಿಯಲಿಲ್ಲ ಅಥ – ಅನಂತರ ತಾಃ – ಆ ದೇವಿಯರು ಹೇದೇವಿ – ಎಲೋ ದೇವಿಯೇ ಸ್ವಪತಿಂ – ತಮ್ಮ ಗಂಡನನ್ನು ನಚಿರಾತ್—ಬೇಗನೇ ಪ್ರಾಪ್ಸ್ಯಸಿ – ಹೊಂದುವಿ ಇತಿ – ಎಂಬುದಾಗಿ ಸಕೃತ್ – ಒಂದು ಸಲ ವಿಷ್ಣೂಕ್ತಂ – ವಿಷ್ಣುವಿನಿಂದ ಹೇಳಲ್ಪಟ್ಟದ್ದನ್ನೂ ಶಂಕರೋಕ್ತಂಚ– ನಾಲ್ಕಾವರ್ತಿ ಶಂಕರನಿಂದ ಹೇಳಲ್ಪಟ್ಟದ್ದನ್ನೂ ಒಟ್ಟಿಗೆ ಐದಾವರ್ತಿ ಹೇಳಲ್ಪಟ್ಟ ಮಾತನ್ನು ಶ್ರುತ್ವಾ – ಕೇಳಿ ಅಥ – ಅನಂತರ ಪೃಥಕ್ – ತಮ್ಮ ತಮ್ಮ ಪತಿಗಳನ್ನು ಬಿಟ್ಟು ಬೇರೆ ಚತ್ವಾರಃ – ನಾಲ್ಕು ನಾಲ್ಕು ಪತಯಃ – ಗಂಡಂದಿರು ಭವಿಷ್ಯಂತಿ – ಆಗುವರು ಇತಿ – ಎಂದು ಏಕಸ್ಯಾಃ – ಒಬ್ಬಳಿಗೇನೇ ಪಂಚಭರ್ತೃತಾಂ – ಐದು ಗಂಡಂದಿರಾಗಿರುವಿಕೆಯನ್ನು ಮೇನಿರೇ – ತಿಳಿದರು. ॥ ೧೩೩–೧೩೪–೧೩೫ ॥

ರುರುದುಶ್ಚೈಕದೇಹಸ್ಥಾ ಏಕೈವಾಹಮಿತಿಸ್ಥಿತಾಃ ॥
ಅಥಾಭ್ಯಾಗಾನ್ಮಹೇಂದ್ರೋಽತ್ರ ಸೋಽಬ್ರವೀತ್ತಾಂ ವರಸ್ತ್ರಿಯಂ ॥ ೧೩೬ ॥

ಕಿಮರ್ಥಂ ರೋದಿಷೀತ್ಯೇವ ಸಾಬ್ರವೀದ್ವಟುರೂಪಿಣಂ ॥
ಶಂಕರಂ ದರ್ಶಯಿತ್ವೈವ ಪಂಚಭರ್ತೃತ್ವಮೇಷಮೇ ॥ ೧೩೭ ॥

ವರಾರ್ಥಮರ್ಥಿತಃ ಸ್ಮಾದಾದಿತಿತಂಶಿವ ಇತ್ಯಥ ॥
ಅಜಾನನ್ ಶಕ್ರಆಹೋಚ್ಚೈಃ ಕಿಮೇತದ್ಭುವನತ್ರಯೇ ॥ ೧೩೮ ॥

ಮತ್ಪಾಲಿತೇ ಯೋಷಿತಂ ತ್ವಂ ವೃಥಾಶಪಸಿ ದುರ್ಮತೇ ॥
ಇತೀರಿತೇ ಶಿವಃಪ್ರಾಹ ಪತನ್ಯಾನುಷ್ಮಮಾಪ್ನುಹಿ ॥ ೧೩೯ ॥

ಅಸ್ಮಾಶ್ಚ ಭರ್ತಾ ಭವಸಿ ತ್ವಾಮೇವೈಷಾ ವರಿಷ್ಯತಿ ॥ ೧೪೦ ॥

ಅಸ್ಮಿನ್ದೇಹೇ ಅಹಂ ಏಕವೈವ – ಈ ಶರೀರದಲ್ಲಿ ನಾನು ಒಬ್ಬಳೇ ಇರತಕ್ಕವಳು ಇತಿ – ಎಂದು ಸ್ಥಿತಾಃ—ಪ್ರತ್ಯೇಕ ಪ್ರತ್ಯೇಕವಾಗಿ ತಿಳಿದುಕೊಂಡಿರುವ ಏಕದೇಹಸ್ಥಾಃ – ಒಂದೇ ಶರೀರದಲ್ಲಿರುವ (ಸರ್ವಜ್ಞಳಾದ ಭಾರತಿಯನ್ನು ಬಿಟ್ಟು) ಪಾರ್ವತ್ಯಾದಿ ಸ್ತ್ರೀಯರು ರುರುದುಃ – ರೋದನವನ್ನು ಮಾಡಿದರು. ಅಥ – ಅನಂತರ ಅತ್ರ – ಇಲ್ಲಿಗೆ ಮಹೇಂದ್ರಃ – ದೇವೇಂದ್ರನು ಅಭ್ಯಾಗಾತ್ – ಬಂದನು ಸಃ – ದೇವೇಂದ್ರನು ವರಸ್ತ್ರಿಯಂ ತಾಂ - ಉತ್ಕೃಷ್ಟಳಾದ ಸ್ತ್ರೀಯಾದ ಅವಳನ್ನು ಕಿಮರ್ಥಂ ಏತಕ್ಕಾಗಿ ರೋದಿಷಿ – ಅಳುತ್ತಿ ಇತಿ – ಎಂದು ಅಬ್ರವೀತ್ – ಹೇಳಿದನು. ॥ ೧೩೬ ॥

ಸಾ – ಅವಳು ವಟುರೂಪಿಣಂ – ಬ್ರಹ್ಮಚಾರಿ ರೂಪವುಳ್ಳ ಶಂಕರಂ - ರುದ್ರನನ್ನು ದರ್ಶಯಿತ್ವೈವ – ತೋರಿಸಿಯೇ ವರಾರ್ಥಂ ಗಂಡನ ಪ್ರಾಪ್ತಿರೂಪವಾದ ವರಕ್ಕೋಸ್ಕರ ಅರ್ಥಿತಃ – ಪ್ರಾರ್ಥಿಸಿಕೊಳ್ಳಲ್ಪಟ್ಟ ಏಷಃ – ಈ ಶಂಕರನು ಮೇ –

ನನಗೆ ಪಂಚಭರ್ತೃತ್ವಂ – ಐದು ಗಂಡಂದಿರ ಪ್ರಾಪ್ತಿರೂಪವಾದ ವರವನ್ನು ಪ್ರಾದಾತ್—ಕೊಟ್ಟನು ಇತಿ – ಎಂದು ಅಬ್ರವೀತ್ – ಹೇಳಿದಳು ಅಥ – ಅನಂತರ ಶಕ್ರಃ – ಇಂದ್ರನು ತಂ – ಆ ಬ್ರಹ್ಮಚಾರಿಯನ್ನು ಶಿವಂ – ರುದ್ರನೆಂದು ಅಜಾನನ್ ಸನ್ – ತಿಳಿಯದವನಾಗಿ ಹೇದುರ್ಮತೇ – ಎಲೋ ದುಷ್ಟಬುದ್ಧಿ ಉಳ್ಳವನೇ ಮತ್ಪ್ರಲಿತೇ – ನನ್ನಿಂದ ರಕ್ಷಿಸ ಲ್ಪಡತಕ್ಕ ಏತತ್ ಭುವನತ್ರಯೇ – ಈ ಮೂರು ಲೋಕಗಳಲ್ಲಿ ತ್ವಂ—ನೀನು ವೃಥಾ – ವ್ಯರ್ಥವಾಗಿ ಅಂದರೆ ಅಪರಾಧ ವಿಲ್ಲದೇ ಯೋಷಿತಂ – ಸ್ತ್ರೀಯನ್ನು ಕಿಂ ಏಕೆ ಶಪಸಿ – ಶಪಿಸುವಿ ಇತಿ – ಎಂದು ಉಚ್ಚೈಃ – ಘಟ್ಟಿಯಾಗಿ ಆಹ – ಹೇಳಿದನು ಇತಿ – ಈ ರೀತಿಯಾಗಿ ಈರೀತೇಸತಿ – ದೇವೇಂದ್ರನು ಹೇಳುತ್ತಿರಲು ಶಿವಃ – ರುದ್ರನು ಪತ – ಸ್ವರ್ಗದಿಂದ ಕೆಳಗೆ ಬೀಳು ಮಾನುಷ್ಯಂ – ಮನುಜತ್ವವನ್ನು ಆಪ್ನುಹಿ – ಹೊಂದು ಅಸ್ಯಾಃ—ಇವಳಿಗೆ ಭರ್ತಾ – ಗಂಡನು ತ್ವಂ—ನೀನು ಭವಸಿ—ಆಗುವಿ ಏಷಾ – ಈ ದ್ರೌಪದೀ ದೇಹದಲ್ಲಿರುವ ಶಚಿಯು ತ್ವಾಮೇವ—ನಿನ್ನನ್ನೇ ವರಿಷ್ಯತಿ—ಪರಿಗ್ರಹಣ ಮಾಡುವಳು. ॥ ೧೩೭–೧೩೮–೧೩೯–೧೪೦ ॥

ಪಶ್ಯೈತ್ರ ಮದವಜ್ಞಾನಾತ್ಪತಿತಾಂಸ್ತ್ವಾದೃಶಾನ್ ಸುರಾನ್ ॥
ಗಿರೇರಧಸ್ತಾದಸ್ಯೈವೇತ್ಯುಕ್ತೋಽಸೌ ಪಾಕಶಾಸನಃ ॥
ಉದ್ಬಬರ್ಹ ಗಿರಿಂತಂತು ದದರ್ಶಾತ್ರಚತಾನ್ಸುರಾನ್ ॥ ೧೪೧ ॥

ಮದವಜ್ಞಾನಾತ್—ನನ್ನನ್ನುತಿರಸ್ಕರಿಸಿದ್ದರಿಂದ ಅತ್ರ—ಇಲ್ಲಿ ಪತಿತಾನ್—ಬಿದ್ದಿರುವ ತ್ವಾದೃಶಾನ್—ನಿನ್ನಂತಹ ಸುರಾನ್ – ದೇವತೆಗಳನ್ನು ಅಸ್ಯೈವ – ಇದೇ ಗಿರೇಃ – ಪರ್ವತದ ಅಧಸ್ತಾತ್ – ಕೆಳಗೆ ಪಶ್ಯ – ನೋಡು ಇತಿ – ಈ ರೀತಿಯಾಗಿ ಉಕ್ತಃ – ಹೇಳಿಸಿಕೊಳ್ಳಲ್ಪಟ್ಟ ಅಸೌ ಪಾಕಶಾಸನಃ – ಈ ದೇವೆಂದ್ರನು ತಂ ಗಿರಿಂತು – ಆ ಪರ್ವತವನ್ನಾದರೂ ಉದ್ಬಬರ್ಹ – ಕಿತ್ತನು ಅತ್ರ – ಈ ಪರ್ವತದ ಕೆಳಗೆ ತಾನ್ಸುರಾನ್ – ರುದ್ರನು ಹೇಳಿದ ದೇವತೆಗಳನ್ನು ದದರ್ಶ – ನೋಡಿದನು. ॥ ೧೪೧ ॥

ಪೂರ್ವೇಂದ್ರಾನ್ಮರುತವೃಷನಾಸತ್ಯಾಂಶ್ಚತುರಃ ಸ್ಥಿತಾನ್ ॥
ಮಾನುಷೇಷ್ವವತಾರಾಯ ಮಂತ್ರಂರಹಸಿ ಕುರ್ವತಃ ॥ ೧೪೨ ॥

ಪೂರ್ವೇಂದ್ರಾನ್ – ಪೂರ್ವಮನ್ವಂತರಗಳಲ್ಲಿ ಇಂದ್ರರಾದ ಮಾರುತ ವೃಷನಾಸತ್ಯಾನ್ – ವಾಯುದೇವರು, ಯಮ, ಅಶ್ವಿನಿ ದೇವತೆಗಳಿಬ್ಬರು ಹೀಗೆ ಚತುರಃ – ನಾಲ್ಕು ಸಂಖ್ಯಾಕರಾದ, ಮಾನುಷೇಷು – ಮನುಷ್ಯರಲ್ಲಿ ಅವತಾರಾಯ – ಅವತಾರಕ್ಕೋಸ್ಕರ ರಹಸಿ – ಏಕಾಂತದಲ್ಲಿ ಮಂತ್ರಂ—ವಿಚಾರವನ್ನು ಕುರ್ವತಃ ಸ್ಥಿತಾನ್—ಮಾಡಿಕೊಂಡಿರುವ ದೇವತೆಗಳನ್ನು ದದರ್ಶ—ದೇವೇಂದ್ರನು ನೋಡಿದನು. ॥ ೧೪೨ ॥

ತತೋವರೇಣ್ಯಂ ವರದಂ ವಿಷ್ಣುಂಪ್ರಾಪ್ಯ ಸ ವಾಸವಃ ॥
ತತ್ಪ್ರಸಾದಾನ್ನರಾಂಶೇನಯುಕ್ತೋಭೂಮಾವಜಾಯತ ॥ ೧೪೩ ॥

ತತಃ—ಅನಂತರ ಸವಾಸವಃ—ಆ ದೇವೇಂದ್ರನು ವರೇಣ್ಯಂ—ಉತ್ತಮರಿಂದಸೇವ್ಯನಾದ ವರದಂ—ವರವನ್ನು ಕೊಡತಕ್ಕ ವಿಷ್ಣುಂ—ಶ್ರೀ ಹರಿಯನ್ನು ಪ್ರಾಪ್ಯ – ಹೊಂದಿ (ತಪಸ್ಸಿನಿಂದ ಸಂತೋಷಪಡಿಸಿ) ತತ್ಪ್ರಸಾದಾತ್—ಆ ವಿಷ್ಣುವಿನ ಅನುಗ್ರಹದಿಂದ ನರಾಂಶೇನ – ಶೇಷನ ಅಂಶದಿಂದ ಯುಕ್ತಸ್ಸನ್ — ಕೂಡಿದವನಾಗಿ ಭೂಮೌ — ಭೂಮಿಯಲ್ಲಿ ಅಜಾಯತ— ಹುಟ್ಟಿದನು. ॥ ೧೪೩ ॥

ಭಾ.ಅ. ೧೨೮–೧೪೩ ನಂತರ ಮುದ್ಗಲಋಷಿಚೇತನಕ್ಕೆ ಎಚ್ಚರವನ್ನು ತಂದುಕೊಟ್ಟು ತಮ್ಮ ಲೋಕಕ್ಕೆ ಹೋದರು. ಎಚ್ಚತ್ತ ಮುದ್ಗಲರು ದೇಶಾಂತರಕ್ಕೆ ಹೋಗಿ ತಪಸ್ಸನ್ನು ಮಾಡಿದರು. ಆ ಇಂದ್ರಸೇನೆಯು ಹೀಗೆ ಗಂಡನಿಂದ ದೂರಳಾದಾಗ ತಪಸ್ಸನ್ನು ಆಚರಿಸಿದಳು. ಆ ದೇಹದಲ್ಲಿರುವ ಭಾರತೀದೇವಿಯು ಶ್ರೀ ರುದ್ರಸ್ಥಿತ ಶ್ರೀ ಹರಿಯನ್ನು ಕವೈರ್ಯಕ್ಯಕ್ಕಾಗಿ ತಪಸ್ಸಿನಿಂದ ಆರಾಧಿಸಿದರೆ, ಉಮಾದಿಗಳು ಮಾತ್ರ ರುದ್ರದೇವರನ್ನೇ ತಮ್ಮ ತಮ್ಮ ಗಂಡಂದಿರ ಪ್ರಾಪ್ತಿ

ಗಾಗಿ ಪ್ರಾರ್ಥಿಸಿದರು. ಶ್ರೀ ಹರಿಯು ಭಾರತೀದೇವಿಗೆ ಕೊಟ್ಟನು. ಶ್ರೀ ರುದ್ರದೇವರು ಉಳಿದವರಿಗೆ ಕೊಟ್ಟರು. ಪ್ರಾರ್ಥನೆಯ ಶಬ್ದವು ಐದು ಸಲ ಆಗಿತ್ತು, ವರದ ಶಬ್ದವೂ ಐದು ಸಲ ಆಗಿತ್ತು. ಆಗ ಭಾರತಿಯನ್ನು ಬಿಟ್ಟು ಉಮಾದಿ ನಾಲ್ಕು ಸ್ತ್ರೀಯರು ಒಂದೇ ದೇಹದಲ್ಲಿದ್ದದ್ದರಿಂದ, ಆ ಚೇತನರು ಹಾಲು ನೀರುಗಳ ಬೆರಕೆಯಂತೆ ಬೆರಕೆಯಾದ್ದರಿಂದ, ಯಮ, ವಾಯು, ಅಶ್ವಿನೀ ದೇವತೆಗಳ ಹಾಗು ರುದ್ರದೇವರ ಅವತಾರವಾಗಬೇಕಾಗಿದ್ದರಿಂದಲೂ 'ತಾವು ಐದು ಜನರಿದ್ದೇವೆ ಈ ದೇಹದಲ್ಲಿ' ಎಂಬುದನ್ನು ತಿಳಿಯದೇ ಪ್ರತಿಯೊಬ್ಬರು ತಮಗೆ ಐದು ಐದು ಗಂಡಂದಿರ ಪ್ರಾಪ್ತಿಯಾಗುವದು ಎಂಬುದನ್ನು ಐದು ಸಲ ಆವ ಶಬ್ದದಿಂದ ಭ್ರಮಿಸಿಕೊಂಡು ರೋದಿಸಲು ಪ್ರಾರಂಭಿಸಿದರು. ಆ ಸಮಯಕ್ಕೆ ದೇವೇಂದ್ರನು ಬಂದು ಅಳುವ ಆ ಇಂದ್ರಸೇನೆಯನ್ನು ನೋಡಿ ರೋದನ ಕಾರಣವನ್ನು ಕೇಳಿದಾಗ ವಟುರೂಪದಲ್ಲಿರುವ ಶ್ರೀ ರುದ್ರದೇವರನ್ನು ಅವಳು ತೋರಿಸಿ 'ಇವನು ನಾನು ವರ ಕೇಳಿದರೆ ನನಗೆ ಐದು ಗಂಡಂದಿರಾಗುವಂತೆ ವರ ಕೊಟ್ಟಿದ್ದಾನೆ.' ಎಂದು ಹೇಳಿದಳು. ಆಗ ಇಂದ್ರದೇವರು ಆ ವಟುವು ರುದ್ರದೇವರೇ ಎಂದು ತಿಳಿಯದೇ 'ನಾನು ರಕ್ಷಿಸುತ್ತಿರುವ ಈ ಭುವನತ್ರಯದಲ್ಲಿ ನಿರಪರಾಧಿಯಾದ ಸ್ತ್ರೀಯನ್ನು ಏಕೆ ಶಪಿಸುತ್ತೀದಿ ಇಂಥ ದುಷ್ಟಬುದ್ಧಿ ಏಕೆ ನಿನಗೆ' ಎಂದು ಆಕ್ಷೇಪಿಸಿದರು. ಆಗ ರುದ್ರದೇವರು ಇಂದ್ರನನ್ನು ಕುರಿತು ನೀನು ಭೂಮಿಗೆ ಬೀಳು ಮನುಷ್ಯ ಜನ್ಮವನ್ನು ಹೊಂದು, ಆಗ ಇವಳು (ಇವಳ ದೇಹದಲ್ಲಿರುವ ಶಚಿಯು) ನಿನ್ನನ್ನೇ ವರಿಸುತ್ತಾಳೆ. (ಆದ್ದರಿಂದ ಮುಂದೇ ದ್ರೌಪದಿಯು ಅರ್ಜುನನ ಕಂಠದಲ್ಲಿ ಮಾಲೆಯನ್ನು ಹಾಕುವಳು) ನನ್ನ ತಿರಸ್ಕಾರ, ನಿಂದೆ ಮಾಡಿದ ನಿನ್ನಂಥ ಈ ದೇವತೆಗಳನ್ನು ನೋಡು, ಈ ಪರ್ವತದ ಬುಡದಲ್ಲಿದ್ದಾರೆ ನೋಡು' ಎಂದು ಹೇಳಿದರು. ಇಂದ್ರನು ಪರ್ವತವನ್ನು ಕೆತ್ತಿ ನೋಡುತ್ತಾನೆ, ಅಲ್ಲಿ ವಾಯುದೇವರು, ಯಮ, ಅಶ್ವಿನೀ ದೇವತೆಗಳು (ಇಬ್ಬರು) ಹೀಗೆ ನಾಲ್ಕು ದೇವತೆಗಳನ್ನು (ಮನುಷ್ಯರಾಗಿ ಅವತರಿಸಲು ರಹಸ್ಯದಲ್ಲಿ ವಿಚಾರ ಮಾಡುತ್ತಿರುವವರನ್ನು) ನೋಡಿದನು. ಅನಂತರ ಶ್ರೀ ಹರಿಯನ್ನು ಹೊಂದಿ ಪ್ರಾರ್ಥಿಸಿ ಅವನ ಅನುಗ್ರಹದಿಂದ 'ನರ' ನ ಆವೇಶದಿಂದ ಕೂಡಿ ಭೂಮಿಯಲ್ಲಿ ಅವತರಿಸಿದನು.

ಮದವಜ್ಞಾನಿಮಿತ್ತೇನ ಪತಿತಾ ಇತಿ ತಾನ್ಸುರಾನ್ ॥
ಮಾರುತಾದೀನ್ಮೃಷಾವಾದೀರಿತಿ ಬ್ರಹ್ಮಾ ಶಿವಂ ತದಾ ॥ ೧೪೪ ॥

ಶಶಾಪ ಮಾನುಷೇಷು ತ್ವಂ ಕ್ಷಿಪ್ರಂ ಜಾತಃ ಪರಾಭವಂ ॥
ಶಕ್ರಾನ್ನರತನೋರ್ಯಾಸಿ ಯಸ್ಮೈತತ್ವಂತು ಮೃಷಾವದಃ ॥ ೧೪೫ ॥

ಮದವಜ್ಞಾನಿಮಿತ್ತೇನ – ನನಗೆ ದ್ರೋಹಮಾಡಿದಕಾರಣದಿಂದ (ಏತೇ – ಈ ದೇವತೆಗಳು) ಪತಿತಾಃ – ಕೆಳಗೆ ಬಿದ್ದಿರುವರು ಇತಿ – ಈ ರೀತಿಯಾಗಿ ಮಾರುತಾದೀನ್ – ವಾಯು ಮೊದಲಾದ ತಾನ್ಸುರಾನ್—ಆ ದೇವತೆಗಳ ಬಗ್ಗೆ ಮೃಷಾ–ಸುಳ್ಳನ್ನು ಅವಾದೀಃ - ಹೇಳಿರುವಿ ಇತಿ – ಈ ಕಾರಣದಿಂದ ಬ್ರಹ್ಮಾ—ಚತುರ್ಮುಖನು ಶಿವಂ – ರುದ್ರನನ್ನು ತ್ವಂ–ನೀನು ಮಾನುಷೇಷು – ಮನುಷ್ಯರಲ್ಲಿ ಕ್ಷಿಪ್ರಂ – ಕೂಡಲೇ ಜಾತಸ್ಸನ್ – ಹುಟ್ಟಿದವನಾಗಿ ಯಸ್ಮೈ – ಯಾವ ದೇವೇಂದ್ರನಿಗೋಸ್ಕರ ತ್ವಂ – ನೀನು ಮೃಷಾ – ಸುಳ್ಳನ್ನು ಅವದಃ – ಹೇಳಿದಿಯೋ ತಸ್ಮಾತ್ – ಅಂತಹ ನರತನೋಃ – ಮನುಷ್ಯ ಶರೀರವುಳ್ಳ ಅರ್ಜುನ ಸ್ವರೂಪನಾದ ಶಕ್ರಾತ್—ದೇವೇಂದ್ರನ ದೆಸೆಯಿಂದ ಪರಾಭವಂ – ಪರಾಜಯವನ್ನು ಯಾಸಿ – ಹೊಂದುವಿ ಎಂದು ಶಶಾಪ ಶಪಿಸಿದನು. ॥ ೧೪೪–೧೪೫ ॥

ಮಚ್ಛಪ್ತಾನಾಂಚ ದೇವೀನಾಮವಿಚಾರ್ಯಮಯಾಯತಃ ॥
ಪತಿಯೋಗವರಂ ಪ್ರಾದಾಃನಾವಾಪ್ಸ್ಯಸಿ ತತಃಪ್ರಿಯಾಂ ॥ ೧೪೬ ॥

ಮಾನುಷೇಷು ತತಃಪಶ್ಚಾದ್ಭಾರತೀದೇಹ ನಿರ್ಗತಾಂ ॥
ಸ್ವಲೋಕೇ ಪ್ರಾಪ್ಸ್ಯಸಿ ಸ್ವಾರ್ಥೇ ವರೋಽಯಂತೇ ಮೃಷಾಭವೇತ್ ॥ ೧೪೭ ॥

ಯತಃ – ಯಾವಕಾರಣದಿಂದ ಮಯಾ – ನನ್ನಿಂದ ಸಹ – ಕೂಡಿಕೊಂಡು ಅವಿಚಾರ್ಯ – ವಿಚಾರಮಾಡದೆ, ಮಚ್ಛಪ್ತಾನಾಂ – ನನ್ನಿಂದ ಶಾಪಹೊಂದಿದ ದೇವೀನಾಂ—ಸ್ತ್ರೀಯರಿಗೆ, ಪತಿಯೋಗವರಂ – ಪತಿಸಂಬಂಧ ರೂಪವಾದ

ವರವನ್ನು ಪ್ರಾದಾಃ – ಕೊಟ್ಟೆಯೋ ತತಃ – ಆ ಕಾರಣದಿಂದ ಮಾನುಷೇಷು ಸ್ಥಿತಃ – ಮನುಷ್ಯ ದೇಹದಲ್ಲಿರತಕ್ಕ ತ್ವಂ– ನೀನು ಪ್ರಿಯಾಂ – ಹೆಂಡತಿಯನ್ನು ನಾವಾಪ್ಸ್ಯಸಿ – ಹೊಂದುವುದಿಲ್ಲ ತತಃಪಶ್ಚಾತ್ – ಪಾರ್ವತಿಗೆ ಮನುಷ್ಯತ್ವನಿವೃತ್ಯ ನಂತರ ಭಾರತೀದೇಹನಿರ್ಗತಾಂ – ಭಾರತೀದೇಹದಿಂದ ಹೊರಗೆ ಬಂದಿರುವ ಪಾರ್ವತಿಯನ್ನು ಸ್ವಲೋಕೇ–ನಿನ್ನ ಕೈಲಾಸದಲ್ಲಿ ಪ್ರಾಪ್ಸ್ಯಸಿ – ರುದ್ರಸ್ವರೂಪನಾದ ನೀನು ಹೊಂದುವಿ ತೇ—ನಿನ್ನ ಅಯಂ ವರಃ – ಬೇಗನೇ ನಿನ್ನ ಗಂಡನನ್ನು ಹೊಂದುವಿ ಎಂಬ ದೇವಿಯರಿಗೆ ಕೊಟ್ಟ ಈ ವರವು ಸ್ವಾರ್ಥೇ – ನಿನ್ನ ವಿಷಯದಲ್ಲಿ ಮೃಷಾಭವೇತ್ – ಸುಳ್ಳಾಗುವುದು ದ್ರೌಪದೀ ದೇಹದಲ್ಲಿರುವ ಪಾರ್ವತಿಯನ್ನು ನೀನು ಹೊಂದುವುದಿಲ್ಲ ಎಂದು ಬ್ರಹ್ಮನು ಶಾಪ ಕೊಟ್ಟನು. ॥ ೧೪೬-೧೪೭ ॥

ವಿಷಾಸಾದ್ರೌಪದೀನಾಮ ಪಂಚದೇವೀತನುರ್ಭವೇತ್ ॥
ಮೃಷಾವಾಗ್ಯೇಷುತೇಪ್ರೋಕ್ತಾ ಮಾರುತಾದ್ಯಾಸ್ತುತೇಽಖಿಲಾಃ ॥ ೧೪೮ ॥

ತಾಸಾಂಪತಿತ್ವಮಾಪ್ಸ್ಯಂತಿ ಭಾರತ್ಯೈವತುಪಾರ್ವತೀ ॥
ಸಂಯುಕ್ತಾವ್ಯವಹಾರೇಷುಪ್ರವರ್ತೇತ ನಚಾನ್ಯಥಾ ॥ ೧೪೯ ॥

ಪಂಚದೇವೀತನುಃ ಐದು ದೇವಿಯರ ಸ್ವರೂಪ ಭೂತಳಾದ ಸಾವಿಷಾ – ಆ ಈದಾವ ಇಂದ್ರಸೇನೆಯು ದ್ರೌಪದೀ – ದ್ರೌಪದಿಯೆಂದು ನಾಮ–ಪ್ರಸಿದ್ಧಳು ಭವೇತ್—ಆಗುವಳು ಯೇಷು – ಯಾರ ವಿಷಯದಲ್ಲಿ ತೇ – ನಿನ್ನಿಂದ ಮೃಷಾವಾಕ್– ಸುಳ್ಳಾದ ಮಾತು ಪ್ರೋಕ್ತಾ – ಹೇಳಲ್ಪಟ್ಟಿದೆಯೋ ತೇಅಖಿಲಾಃ -- ಆ ಎಲ್ಲಾ ಮಾರುತಾದ್ಯಾಃ – ವಾಯುದೇವರೇ ಮೊದಲಾಗಿ ಉಳ್ಳವರು ತಾಸಾಂ ಆ ಭಾರತ್ಯಾದಿಗಳ ಪತಿತ್ವಂ—ಭರ್ತೃತ್ವವನ್ನು ಆಪ್ಸ್ಯಂತಿ – ಹೊಂದುವರು ಪಾರ್ವತೀ– ಉಮೆಯು ಭಾರತ್ಯಾ – ಭಾರತಿಯಿಂದ ಸಂಯುಕ್ತಾಸತೀ – ಕೂಡಿದವಳಾಗಿ ವ್ಯವಹಾರೇಷು – ಭೋಜನಾಭ್ಯಂಜನಾದಿ ವ್ಯವಹಾರಗಳಲ್ಲಿ ಪ್ರವರ್ತೇತ—ಪ್ರವರ್ತಿಸುವಳು ಅನ್ಯಥಾ—ರೇಮಣಾದಿರೂಪ ಪ್ರಕಾರಾಂತರದಿಂದ ನಚ - ಪ್ರವರ್ತಿಸ ಲಾರಳು. ॥ ೧೪೮-೧೪೯ ॥

ಏತೇಹಿ ಮಾರುತಾದ್ಯಾಸ್ತೇ ದೇವಕಾರ್ಯಾರ್ಥಗೌರವಾತ್ ॥
ಜಾತಾ ಇತಿ ಶ್ರುತಿಸ್ತತ್ರ ನಾವಜ್ಞಾತೇಽತ್ರಕಾರಣಂ ॥ ೧೫೦ ॥

ಯತಃ—ಯಾವ ಕಾರಣದಿಂದ ಏತೇ ಮಾರುತಾದ್ಯಾಃ – ಈ ವಾಯುದೇವರೇ ಮೊದಲಾದ ತೇ—ಪ್ರಸಿದ್ಧರಾದ ಆ ಆ ದೇವತೆಗಳು ದೇವಕಾರ್ಯಾರ್ಥಗೌರವಾತ್—ದೇವತೆಗಳ ಕಾರ್ಯಕ್ಕೂ, ಕಾರ್ಯಸಾಧ್ಯವಾದ ಪ್ರಯೋಜನಕ್ಕೂ ಮಹತ್ವ ವಿರುವುದರಿಂದ ಜಾತಾಃ—ಹುಟ್ಟಿರುತ್ತಾರೆ ತತ್ರ—ಆ ಭೂಮಿಯಲ್ಲಿ ಹುಟ್ಟುವ ವಿಷಯದಲ್ಲಿ ತೇ—ನಿನ್ನ ಅವಜ್ಞಾ ತಿರಸ್ಕಾರವು ಕಾರಣಂ ನ—ಕಾರಣವಲ್ಲ ಇತಿ — ಎಂಬುದಾಗಿ ಶ್ರುತಿಃ—ವೇದವು ಅಸ್ತಿ—ಇದೆಯೋ ಅತಃ—ಆದ್ದರಿಂದ ಅತ್ರ—ಈ ಮನುಷ್ಯ ಜನ್ಮದಲ್ಲಿ ತೇ ಅವಜ್ಞಾ ಕಾರಣಂ ನ—ನಿನ್ನ ತಿರಸ್ಕಾರವು ಕಾರಣವಲ್ಲ. ॥ ೧೫೦ ॥

ದೀರ್ಘಕಾಲಂ ಮನುಷ್ಯೇಷು ತತಸ್ತ್ವಂ ಸ್ಥಿತಿಮಾಪ್ಸ್ಯಸಿ ॥ ೧೫೧ ॥
ಇತ್ಯುಕ್ತ್ವಾ ಪ್ರಯಯೌ ಬ್ರಹ್ಮಾ ಸೋಽಶ್ವತ್ಥಾಮಾಶಿವೋಽಭವತ್ ॥
ಪಂಚದೇವೀ ತನುಸ್ತ್ವೇಷಾ ದ್ರೌಪದೀನಾನುಚಾಭವತ್ ॥ ೧೫೨ ॥

ತತಃ—ಆದ್ದರಿಂದ ತ್ವಂ—ನೀನು ಮನುಷ್ಯೇಷು—ಮನುಷ್ಯರಲ್ಲಿ ದೀರ್ಘಕಾಲಂ—ಬಹುಕಾಲದಲ್ಲಿ ಸ್ಥಿತಿಂ—ಇರುವಿಕೆಯನ್ನು ಆಪ್ಸ್ಯಸಿ—ಹೊಂದುವಿ ಇತಿ – ಈ ರೀತಿಯಾಗಿ ಉಕ್ತ್ವಾ—ಹೇಳಿ, ಬ್ರಹ್ಮಾ—ಚತುರ್ಮುಖನು ಪ್ರಯಯೌ—ಹೋದನು ಸಃಶಿವಃ—ಆ ರುದ್ರನು ಅಶ್ವತ್ಥಾಮಾ—ಅಶ್ವತ್ಥಾಮನು ಅಭವತ್—ಆದನು ಪಂಚದೇವೀತನುಃ—ಐದು ದೇವಿಯರ ಸ್ವರೂಪವುಳ್ಳ ಏಷಾತು—ಈ ಇಂದ್ರಸೇನೆಯಾದರೂ ದ್ರೌಪದೀ—ದ್ರೌಪದೀ ಎಂದು ನಾಮ—ಪ್ರಸಿದ್ಧಳು ಅಭವತ್—ಆದಳು. ॥ ೧೫೧-೧೫೨ ॥

ವೇದೇಷು ಸಪುರಾಣೇಷು ಭಾರತೇಚಾವಗಮ್ಯತೇ ॥
ಉಕ್ತೋರ್ಥಃ ಸರ್ವಪಿವಾಯುಂ ತಥಾಪೂರ್ವೋದಿತಾಶ್ಚಯೇ ॥ ೧೫೩ ॥

ಸಪುರಾಣೇಷು ಪುರಾಣಗಳಿಂದ ಕೂಡಿದ ವೇದೇಷು—ಶ್ರುತಿಗಳಲ್ಲಿ ಭಾರತೇಚ — ಇತಿಹಾಸದಲ್ಲಿಯೂ ಕೂಡ ಉಕ್ತಃ – ಹೇಳಲ್ಪಟ್ಟ ಸರ್ವಪಿವಾಯುಮರ್ಥಃ – ಈ ದೇವಿಯರಿಗೆ ಶಾಪವಿದ್ದುದರಿಂದ ಒಂದೇ ಶರೀರದಲ್ಲಿದ್ದುಕೊಂಡು ಜನ್ಮವೇ ಮೊದಲಾದ ಎಲ್ಲಾ ಅರ್ಥವೂ ಅವಗಮ್ಯತೇ – ತಿಳಿಯಲ್ಪಡುತ್ತದೆ. ತಥಾ – ಹಾಗೆಯೇ ಯೇ – ಯಾವ ಪೂರ್ವೋದಿತಾಶ್ಚ ಹಿಂದೇ ಹೇಳಲ್ಪಟ್ಟ ಸೃಷ್ಟ್ಯಾದಿಗಳೋ ತೇ ಅವುಗಳೂ ಕೂಡ ವೇದಾದಿಗಳಲ್ಲಿ ಹೇಳಲ್ಪಟ್ಟಿವೆ. ॥೧೫೩॥

ಭಾ.ಅ. ೧೪೪–೧೫೩ ಬ್ರಹ್ಮದೇವರು ಶ್ರೀ ರುದ್ರದೇವರ ಹತ್ತಿರ – 'ನೀನು ನಿನ್ನ ಅವಜ್ಞಾ ಮಾಡಿದ್ದರಿಂದ ವಾಯುದೇವರೇ ಮೊದಲಾದ ನಾಲ್ಕು ದೇವತೆಗಳು ಬಿದ್ದಿದ್ದಾರೆ ಎಂದು ಸುಳ್ಳು ಮಾತನ್ನು ಇಂದ್ರನ ಹತ್ತಿರ ಹೇಳಿದ್ದರಿಂದ ನೀನು ಭೂಮಿಯಲ್ಲಿ ಹುಟ್ಟಿ ಆ ಇಂದ್ರಾವತಾರಿ ಅರ್ಜುನನಿಂದ ಪರಾಜಯವನ್ನು ಹೊಂದುತ್ತಿ. ನನ್ನಿಂದ ಶಪ್ತರಾದ ಉಮಾದಿ ದೇವಸ್ತ್ರೀಯರಿಗೆ ನನ್ನ ಹತ್ತಿರ ವಿಚಾರಿಸದೆ ಅವರವರ ಪತಿಯೋಗ ವರವನ್ನು ಕೊಟ್ಟಿದ್ದಿ; ಆದ್ದರಿಂದ ನೀನು ಆ ಮನುಷ್ಯ ಜನ್ಮದಲ್ಲಿ ನಿನ್ನ ಪತ್ನಿಯನ್ನು ಹೊಂದುವದಿಲ್ಲ. ಭಾರತೀ ಅವತಾರಿ ಸ್ತ್ರೀದೇಹದಿಂದ ಹೊರ ಬಂದ ನಂತರ ನಿನ್ನ ಕೈಲಾಸ ಲೋಕದಲ್ಲಿ ಅವಳನ್ನು ಹೊಂದುತ್ತಿ. ಹೀಗೆ ಸ್ವಸ್ವ ಪತಿಯೋಗ ವರವು ನಿನ್ನ ಮಟ್ಟಿಗೆ (ನಿನ್ನ ಪತ್ನಿಯಾದ, ದ್ರೌಪದೀ ದೇಹದಲ್ಲಿರುವ ಪಾರ್ವತೀ ಮಟ್ಟಿಗೆ) ಸುಳ್ಳಾಗುವದು. ಅಂಥ ಭಾರತೀ ಸಹಿತವಾಗಿ ಪಂಚದೇವಸ್ತ್ರೀಯುಳ್ಳ ಇವಳು ದ್ರೌಪದಿಯಾಗಿ ಅವತರಿಸುತ್ತಾಳೆ. ಯಾವ ವಾಯ್ವಾದಿ ದೇವತೆಗಳ ಬಗ್ಗೆ ನೀನು ಸುಳ್ಳು ಹೇಳಿರುವಿ ಅವರು ಅವಳ ಗಂಡಂದಿರಾಗಿ ತಮ್ಮ ತಮ್ಮ ಸ್ತ್ರೀಯರನ್ನು ಹೊಂದುತ್ತಾರೆ. ಪಾರ್ವತಿಯು ಮಾತ್ರ ಅವಳ ದೇಹದಲ್ಲಿದ್ದುಕೊಂಡು ಸ್ನಾನ, ಭೋಜನ ಮೊದಲಾದ ವ್ಯವಹಾರಗಳಲ್ಲಿ ಪಾಲುಗೊಂಡರೂ ರಮಣ, ವಿಹಾರ ಕಾರ್ಯಗಳಲ್ಲಿ ಪಾಲುಗೊಳ್ಳುವದಿಲ್ಲ. ವಾಯ್ವಾದಿ ದೇವತೆಗಳು ದೇವಕಾರ್ಯಕ್ಕಾಗಿ ಅವತರಿಸುತ್ತಾರೆ ಹೊರತು ನಿನ್ನ ಅವಜ್ಞೆಯಿಂದಲ್ಲ. ಈ ವಿಷಯದಲ್ಲಿ ವೇದವೇ ಪ್ರಮಾಣವಾಗಿದೆ. ನೀನು ಮನುಷ್ಯಯೋನಿಯಲ್ಲಿ ಬಹುಕಾಲವಿರುತ್ತಿ" ಎಂದು (ಶಪಿಸಿ) ಹೇಳಿ ಹೋದರು. ಆ ರುದ್ರ ದೇವರೇ ಅಶ್ವತ್ಥಾಮಾಚಾರ್ಯರಾಗಿ ಅವತರಿಸಿದರು. ಪಂಚ ದೇವಸ್ತ್ರೀಯುಕ್ತಳಾದ ಅವಳು ಇಂದ್ರಸೇನೆಯು ದ್ರೌಪದಿಯಾದಳು. ಇಲ್ಲಿಯವರೆಗೆ ಹೇಳಿದ ದ್ರೌಪದೀ ಜನ್ಮದ ವಿಷಯವು, ಬೇರೆ ಸೃಷ್ಟ್ಯಾದಿ ಎಲ್ಲ ವಿಷಯಗಳು ವೇದ, ಭಾರತ, ಪುರಾಣಗಳಲ್ಲಿ ಕಥಿತವಾಗಿವೆ.

ಮುಮುದುಃ ಸರ್ವಪಾಂಚಾಲಾ ಜಾತಯೋಸ್ತುತಯೋಸ್ತಯೋಃ ॥
ಮಾನುಷಾನ್ನೋಪಭೋಗೇನ ಸಂಸರ್ಗಾನ್ಮಾನುಷೇಷುಚ ॥ ೧೫೪ ॥
ಮನುಷ್ಯಪುತ್ರತಾಯಾಶ್ಚ ಭಾವೋ ಮಾನುಷ ಏತಯೋಃ ॥
ಅಭೂನ್ನಾತಿತರಾಮಾಸೀತ್ತದಯೋನಿತ್ವ ಹೇತುತಃ ॥ ೧೫೫ ॥

ತಯೋಃಸುತಯೋಃ – ಆ ದ್ರೌಪದೀ, ಧೃಷ್ಟದ್ಯುಮ್ನರೆಂಬ ಇಬ್ಬರು ಮಕ್ಕಳು ಜಾತಯೋಃಸತೋಃ—ಹುಟ್ಟುತ್ತಿರಲು ಸರ್ವಪಾಂಚಾಲಾಃ – ಎಲ್ಲಾ ಪಾಂಚಾಲದೇಶದವರು ಮುಮುದುಃ – ಸಂತೋಷಪಟ್ಟರು ಮಾನುಷಾನ್ನೋಪಭೋಗೇನ – ಮನುಷ್ಯರ ಅನ್ನದ ಸೇವನೆಯಿಂದಲೂ ಮಾನುಷೇಷು ಸಂಸರ್ಗಾತ್ – ಮನುಷ್ಯರಲ್ಲಿ ಸಹವಾಸದಿಂದಲೂ ಮನುಷ್ಯಪುತ್ರತಾಯಾಶ್ಚ – ಯಾಗ ಮಾಡಿ ಮನುಷ್ಯನು ಹೊಂದಿದ್ದರಿಂದ ಮನುಷ್ಯಪುತ್ರತ್ವವಿರುವುದರಿಂದಲೂ ಏತಯೋಃ–ಈ ದ್ರೌಪದೀ ಧೃಷ್ಟದ್ಯುಮ್ನರಿಗೆ ಮಾನುಷೋಭಾವಃ – ಮನುಷ್ಯ ಸಂಬಂಧಿಯಾದ ಸ್ವಭಾವವು ಅಭೂತ್ – ಸ್ವಲ್ಪವೇ ಉಂಟಾಯಿತು. ತದಯೋನಿತ್ವಹೇತುತಃ ಅವರಿಗೆ ಮನುಷ್ಯಯೋನ್ಯಭಾವವು ಇರುವ ನಿಮಿತ್ತದಿಂದ ಅತಿತರಾಂ – ಅಧಿಕವಾಗಿ ನಾಸೀತ್ – ಮನುಷ್ಯಸ್ವಭಾವವಿರಲಿಲ್ಲ. ॥ ೧೫೪–೧೫೫ ॥

ಯಾಜೋಪಯಾಜೌ ತಾವೇವ ದಯಿತಾ ದ್ರುಪದಸ್ಯಚ ॥
ಮಾತೃಸ್ನೇಹಾರ್ಥನುನಯೋರ್ಯಯಾಚೇ ದದತುಶ್ಚತೌ ॥ ೧೫೬ ॥

ದ್ರುಪದಸ್ಯ ದ್ರುಪದನ ದಯಿತಾ ಹೆಂಡತಿಯು ಅನಯೋಃ – ಈ ದ್ರೌಪದೀ, ಧೃಷ್ಟದ್ಯುಮ್ನರಿಗೆ ಮಾತೃ ಸ್ನೇಹಾರ್ಥಂ - ತಾಯಿಯಲ್ಲಿ ಪ್ರೀತಿ ಉಂಟಾಗುವದಕ್ಕಾಗಿ ತೌ ಯಾಜೋಪಯಾಜಾವೇವ – ಆ ಯಾಜೋಪಯಾಜರನ್ನೇ ಯಯಾಚೇ – ಬೇಡಿದಳು ತೌ – ಆ ಯಾಜೋಪಯಾಜರು ದದತುಃ – ಪ್ರೀತಿಯಿರುವಿಕೆಯನ್ನು ಕೊಟ್ಟರು. ॥ ೧೫೭ ॥

ಜಾತಮಾತ್ಮನಿಹಂತಾರಂ ಭಾರದ್ವಾಜೋನಿಶಮ್ಯತಂ ॥
ಯಶೋರ್ಥಮಸ್ತ್ರಾಣಿ ದದಾವಗ್ರಹೀತ್ಸೋಽಪಿಲೋಭತಃ ॥ ೧೫೮ ॥
ರಾಮಾಸ್ತ್ರಾಣಾಂ ದುರ್ಲಭತ್ವಾತ್ತ್ರಿದಶೇಷ್ವಪಿ ವೀರ್ಯವಾನ್ ॥

ಭಾರದ್ವಾಜಃ – ದ್ರೋಣಾಚಾರ್ಯರು ಆತ್ಮನಿಹಂತಾರಂ – ತನ್ನನ್ನು ಕೊಲ್ಲುತಕ್ಕ ತಂ – ಧೃಷ್ಟದ್ಯುಮ್ನನನ್ನು ಜಾತಂ – ಹುಟ್ಟಿದವನನ್ನಾಗಿ ನಿಶಮ್ಯ ಕೇಳಿ ಯಶೋರ್ಥಂ – ಕೀರ್ತಿಗೋಸ್ಕರ ಅಸ್ತ್ರಾಣಿ – ಅಸ್ತ್ರಗಳನ್ನು ದದೌ – ಕೊಟ್ಟರು. ವೀರ್ಯವಾನ್ – ಪರಾಕ್ರಮ ಉಳ್ಳ ಸೋಪಿ – ಆ ಧೃಷ್ಟದ್ಯುಮ್ನನಾದರೂ ರಾಮಾಸ್ತ್ರಾಣಾಂ – ಪರಶುರಾಮ ದೇವರಿಂದ ಪ್ರಾಪ್ತವಾದ ಅಸ್ತ್ರಗಳಿಗೆ ತ್ರಿದಶೇಷ್ವಪಿ – ದೇವತೆಗಳಲ್ಲಿಯೂ ಕೂಡ ದುರ್ಲಭತ್ವಾತ್—ದೌರ್ಲಭ್ಯವಿದ್ದುದರಿಂದ ಲೋಭತಃ - ಲೋಭದಿಂದ ಅಗ್ರಹೀತ್ – ಸ್ವೀಕರಿಸಿದನು. ॥ ೧೫೮ ॥

ಭೀಮಾರ್ಜುನಾಭ್ಯಾಂ ಬದ್ಧಂತಂ ಶ್ರುತ್ವಾ ಪಾಂಚಾಲ ಭೂಪತಿಂ ॥
ಪ್ರಾಹಿಣೋತ್ಕೃತವರ್ಮಾಣಂ ಪಾಂಡವಾನಾಂ ಜನಾರ್ದನಃ ॥ ೧೫೯ ॥
ಪಾಂಡವೇಷ್ವತುಲಾಂ ಪ್ರೀತಿಂ ಲೋಕೇ ಖ್ಯಾಪಯಿತುಂ ಪ್ರಭುಃ ॥ ೧೬೯ ॥

ಪ್ರಭುಃ - ಸಮರ್ಥನಾದ ಜನಾರ್ದನಃ – ಶ್ರೀಕೃಷ್ಣನು ಭೀಮಾರ್ಜುನಾಭ್ಯಾಂ ಭೀಮಾರ್ಜುನರಿಂದ ಪಾಂಚಾಲ ಭೂಪತಿಂ – ಪಾಂಚಾಲ ದೇಶಕ್ಕೆ ರಾಜನಾದ ತಂ – ಆ ದ್ರುಪದನನ್ನು ಬದ್ಧಂ – ಕಟ್ಟಲ್ಪಟ್ಟವನನ್ನಾಗಿ ಶ್ರುತ್ವಾ – ಕೇಳಿ ಪಾಂಡವೇಷು ಪಾಂಡವರಲ್ಲಿ ಅತುಲಾಂ—ಅಸದೃಶವಾದ ಪ್ರೀತಿಂ--ಸ್ನೇಹವನ್ನು ಲೋಕೇ—ಜನರಲ್ಲಿ ಖ್ಯಾಪಯಿತುಂ—ಪ್ರಕಟಪಡಿಸುವುದಕ್ಕಾಗಿ ಪಾಂಡವಾನ್—ಪಾಂಡವರ ಸಮೀಪಕ್ಕೆ ಕೃತವರ್ಮಾಣಂ – ಕೃತವರ್ಮನನ್ನು ಪ್ರಾಹಿಣೋತ್—ಕಳುಹಿಸಿದನು. ॥ ೧೫೯–೧೬೯ ॥

ಭಾ.ಅ. ೧೫೯–೧೬೯ ಅಂಥ ಈ ದ್ರೌಪದೀದೇವಿ ಮತ್ತು ಅವರ ಅಣ್ಣ ಧೃಷ್ಟದ್ಯುಮ್ನ ಎಂಬ ಇಬ್ಬರು ಮಕ್ಕಳು ದ್ರುಪದರಾಜನಿಗಾಗುತ್ತಿರಲು ಎಲ್ಲ ಪಾಂಚಾಲ ಪ್ರಜೆಗಳೂ ತುಂಬಾ ಸಂತೋಷಪಟ್ಟರು. ಇವರಿಬ್ಬರಿಗೆ ಮಾನುಷ ಸ್ವಭಾವವು ಸ್ವಲ್ಪ ಮಟ್ಟಿಗೆ ಬಂದಿತು. ಅದಕ್ಕೆ ಕಾರಣ–ಮನುಷ್ಯನಾದವನಿಂದ ಯಜ್ಞ ಮಾಡಲ್ಪಟ್ಟು ಮನುಷ್ಯನಿಗೆ ಲಬ್ಧವಾದದ್ದು, ಮಾನುಷಾನ್ನಭೋಗ, ಮಾನುಷ ಸಹವಾಸಗಳು. ಆದರೂ ಮನುಷ್ಯ ಯೋನಿಯಲ್ಲಿ ಹುಟ್ಟಿಲ್ಲವಾದ್ದರಿಂದ ಬಹಳಷ್ಟು ಮಾನುಷ ಸ್ವಭಾವವು ಬರಲಿಲ್ಲ. ದ್ರುಪದನ ಪತ್ನಿಗೆ ತಾನು ಇವರ ತಾಯಿ ಎಂದು ಎನಿಸಬೇಕು, ತಾಯಿಯಂತೆ ಪ್ರೀತಿಯನ್ನು ಅವರಿಬ್ಬರು ತನ್ನಲ್ಲಿ ಮಾಡಬೇಕು ಎಂದು ಅಪೇಕ್ಷಿಸಿ ಯಾಜೋಪಯಾಜರನ್ನು ಪ್ರಾರ್ಥಿಸಿದಾಗ, ಅವರು ಅದನ್ನು ಪೂರ್ಣಮಾಡಿಕೊಟ್ಟರು. ದ್ರೋಣಾಚಾರ್ಯರ ಹತ್ತಿರವೇ ಆ ಧೃಷ್ಟದ್ಯುಮ್ನನು ವಿದ್ಯಾಭ್ಯಾಸಕ್ಕೆ ಬಂದಿದ್ದಾನೆ. ಶ್ರೀಪರಶುರಾಮದೇವರಿಂದ ಪ್ರಾಪ್ತವಾದ ಈ ಅಸ್ತ್ರವಿದ್ಯೆಯು ದೇವತೆಗಳಲ್ಲಿಯೂ ದುರ್ಲಭ ಎಂದು ತಿಳಿದು, ಬಂದು ಅವರಲ್ಲಿ ಅಸ್ತ್ರಗಳನ್ನು ಆಭ್ಯಸಿಸಿದನು. ದ್ರೋಣರಾದರೂ ಇವನು ತನ್ನ ಸಂಹಾರಕನಾಗಿ ಹುಟ್ಟಿದ್ದಾನೆ ಎಂಬುದನ್ನು ಕೇಳಿ ತಿಳಿದಿದ್ದರೂ ಕೂಡ ಅಂಥವನಿಗೂ ಅಸ್ತ್ರಗಳನ್ನು ಕಲಿಸಿದ್ದಾರೆ ಎಂಬ ಕೀರ್ತಿ ಬರುವದಕ್ಕಾಗಿ ಕಲಿಸಿದರು.

ಸನ್ಮಾನ್ಯ ಪಾಂಡವಾನ್ಸೋಽಪಿ ಶೂರಾನುಜಸುತಾಸುತಃ ॥
ತೈರ್ಮಾನಿತಃ ಕೃಷ್ಣಭಕ್ತ್ಯಾ ಭ್ರಾತೃತ್ವಾಚ್ಚ ಹರಿಂ ಯಯೌ ॥ ೧೬೦ ॥

ಶೂರಾನುಜಸುತಾಸುತಃ – ಶೂರರಾಜನ ತಮ್ಮನ ಮಗಳ ಮಗನಾದ ಸೋಪಿ – ಆ ಕೃತವರ್ಮನಾದರೂ ಪಾಂಡವಾನ್ – ಪಾಂಡವರನ್ನು ಸನ್ಮಾನ್ಯ – ಗೌರವಿಸಿ ಕೃಷ್ಣಭಕ್ತ್ಯಾ—ಕೃಷ್ಣನಲ್ಲಿ ಭಕ್ತಿ ಉಳ್ಳ ಪಾಂಡವರು ಕೃತವರ್ಮನು ಕೃಷ್ಣ

ನಿಂದ ಕಳುಹಿಸಲ್ಪಟ್ಟವನೆಂದೂ ಭ್ರಾತೃತ್ವಾಚ್ಚ – ಕೃತವರ್ಮನಲ್ಲಿ ಭ್ರಾತೃತ್ವವಿರುವುದರಿಂದಲೂ ತೈಃ – ಆ ಪಾಂಡವರಿಂದ ಮಾನಿತಃಸನ್ – ಸತ್ಕರಿಸಿಕೊಳ್ಳಲ್ಪಟ್ಟವನಾಗಿ ಹರಿಂ – ಶ್ರೀಕೃಷ್ಣನನ್ನು ಯಯೌ – ಹೋದನು ಶೂರರಾಜನ ಮಗಳಾದ ಕುಂತಿಯು ಪಾಂಡವರ ತಾಯಿಯು, ಶೂರನ ತಮ್ಮನ ಮಗಳು ಕೃತವರ್ಮನ ತಾಯಿಯು, ಹೀಗೆ ಅಕ್ಕತಂಗಿಯರ ಮಕ್ಕಳಾದ್ದರಿಂದ ಭ್ರಾತೃತ್ವವು. ॥ ೧೬೦ ॥

ತತಃಪ್ರಭೃತಿ ಸಂತ್ಯಜ್ಯ ದೇವಪಕ್ಷಾಜರಾಸುತಂ ॥
ಪಾಂಡವಾನಾಶ್ರಿತಾ ಭೂಪಾಜ್ಞಾತ್ವಾಭೈಮಾರ್ಜುನಂ ಬಲಂ ॥ ೧೬೧ ॥

ತತಃಪ್ರಭೃತಿ—ಆ ದಿನ ಮೊದಲ್ಗೊಂಡು, ದೇವಪಕ್ಷಾಃ—ದೇವತೆಗಳ ಪಕ್ಷದಲ್ಲಿರುವ ಭೂಪಾಃ – ರಾಜರು ಭೈಮಾರ್ಜುನಂ – ಭೀಮಾರ್ಜುನರಲ್ಲಿರತಕ್ಕ ಬಲಂ ಸಾಮರ್ಥ್ಯವನ್ನು ಜ್ಞಾತ್ವಾ–ತಿಳಿದು ಜರಾಸುತಂ – ಜರಾಸಂಧನನ್ನು ಸಂತ್ಯಜ್ಯ–ಬಿಟ್ಟು ಪಾಂಡವಾನ್ – ಪಾಂಡವರನ್ನು ಆಶ್ರಿತಾಃ – ಆಶ್ರಯಿಸಿದರು. ॥ ೧೬೧ ॥

ವಿಶೇಷತಶ್ಚ ಕೃಷ್ಣಸ್ಯ ವಿಜ್ಞಾಯ ಸ್ನೇಹಮೇಷುಹಿ ॥
ಪರಾಜಿತಾಶ್ಚ ಬಹುಶೋಕೃಷ್ಣೇನಾಚಿಂತ್ಯ ಕರ್ಮಣಾ ॥ ೧೬೨ ॥

ಪ್ರತಾಪಾದೇವತೇ ಪೂರ್ವಂಜರಾಸಂಧವಶಂಗತಾಃ ॥
ನಸ್ನೇಹಾತ್ತದ್ಬಲಂಜ್ಞಾತ್ವಾಪಾರ್ಥಾನಾಂ ಕೇಶವಸ್ಯಚ ॥ ೧೬೩ ॥

ಜನ್ಮಾಂತರಾಭ್ಯಾಸವಶಾತ್ ಸ್ನಿಗ್ಧಾಃ ಕೃಷ್ಣೇಚ ಪಾಂಡುಷು ॥
ಜರಾಸಂಧಭಯಾಂತ್ಯಕ್ತ್ವಾ ತಾನೇವಚ ಸಮಾಶ್ರಿತಾಃ ॥ ೧೬೪ ॥

ಅಪಿ ತಂ ಬಹುಶಃ ಕೃಷ್ಣವಿಜಿತಂ ನೈವತತ್ಯಜುಃ ॥
ಆಸುರಾಃ ಪೂರ್ವಸಂಸ್ಕಾರಾತ್ಸಂಸ್ಕಾರೋ ಬಲವಾನ್ಯತಃ ॥ ೧೬೫ ॥

ಏಷು – ಈ ಪಾಂಡವರಲ್ಲಿ ವಿಶೇಷತಃ – ವಿಶೇಷಾಕಾರವಾದ ಕೃಷ್ಣಸ್ಯ – ಶ್ರೀಕೃಷ್ಣನ ಸ್ನೇಹಂ – ಪ್ರೀತಿಯನ್ನು ವಿಜ್ಞಾಯ – ತಿಳಿದು ರಾಜರು ಪಾಂಡವರನ್ನು ಆಶ್ರಯಿಸಿದರು ಅಚಿಂತ್ಯಕರ್ಮಣಾ – ತಿಳಿಯಲು ಅಶಕ್ಯವಾದ ಕೆಲಸವುಳ್ಳ ಕೃಷ್ಣೇನ – ಶ್ರೀಕೃಷ್ಣನಿಂದ ಬಹುಶಃ ಬಹಳಸಲ ಪರಾಜಿತಾಶ್ಚ – ಪರಾಜಿತರಾದ ತೇ – ಆ ರಾಜರು ಪೂರ್ವಂ – ಮೊದಲು ಪ್ರತಾಪಾದೇವ – ಜರಾಸಂಧನ ಸಾಮರ್ಥ್ಯದಿಂದಲೇ ಜರಾಸಂಧವಶಂಗತಾಃ – ಜರಾಸಂಧನ ಅಧೀನರಾದರು ನಸ್ನೇಹಾತ್ – ಪ್ರೀತಿಯಿಂದಲ್ಲ ಕೇಶವಸ್ಯ – ಶ್ರೀಕೃಷ್ಣನ ಪಾರ್ಥಾನಾಂ – ಪಾಂಡವರ ತದ್ಬಲಂ – ಹಿಂದೆ ಹೇಳಿದ ಸಾಮರ್ಥ್ಯವನ್ನು ಜ್ಞಾತ್ವಾ–ತಿಳಿದು ಜನ್ಮಾಂತರಾಭ್ಯಾಸವಶಾಚ್ಚ – ಜನ್ಮಾಂತರದ ಅಭ್ಯಾಸ ವಶದಿಂದಲೂ ಕೂಡ ಕೃಷ್ಣೇ – ಶ್ರೀಕೃಷ್ಣನಲ್ಲಿ ಪಾಂಡುಷುಚ–ಪಾಂಡವರಲ್ಲಿಯೂ ಕೂಡ ಸ್ನಿಗ್ಧಾಃ – ಭಕ್ತಿಉಳ್ಳವರಾದರು. ಜರಾಸಂಧಭಯಂ – ಜರಾಸಂಧನ ದೆಸೆಯಿಂದ ಹೆದರಿಕೆಯನ್ನು ತ್ಯಕ್ತ್ವಾ – ಬಿಟ್ಟು ತಾನೇವಚ – ಪಾಂಡವರನ್ನೇ ಸಮಾಶ್ರಿತಾಃ – ಆಶ್ರಯಿಸಿದರು ಯತಃ – ಯಾವಕ ರಣದಿಂದ ಸಂಸ್ಕಾರಃ – ಪೂರ್ವ ಜನ್ಮದ ವಾಸನೆಯು ಬಲವಾನ್ – ಬಲಿಷ್ಠವಾದದ್ದೋ ತತಃ – ಆ ಕಾರಣದಿಂದ ಆಸುರಾಃ – ಆಸುರರು ಪೂರ್ವಸಂಸ್ಕಾರಾತ್ – ಹಿಂದಿನ ವಾಸನೆಯಿಂದ ಬಹುಶಃ – ಅನೇಕ ಸಲ ಕೃಷ್ಣವಿಜಿತಂ – ಕೃಷ್ಣನಿಂದ ಪರಾಜಿತನಾದ ತಂ – ಆ ಜರಾಸಂಧನನ್ನು ನೈವ ತತ್ಯಜುಃ – ಬಿಡಲೇ ಇಲ್ಲ. ॥ ೧೬೨–೧೬೩–೧೬೪–೧೬೫ ॥

ದೇವಾಹಿಕಾರಣಾದನ್ಯಾನಾಶ್ರಯಂತೋಽಪಿ ನಾಂತರಂ ॥
ಸ್ನೇಹಂ ತ್ಯಜಂತಿ ದೇವೇಷು ತಥಾನ್ಯೇಽನ್ಯೇಷ್ವಪಿಸ್ಫುಟಂ ॥ ೧೬೬ ॥

ದೇವಾಃ – ದೇವತೆಗಳು ಕಾರಣಾತ್–ಯಾವುದಾದರೊಂದು ನಿಮಿತ್ತದಿಂದ ಅನ್ಯಾನ್–ಅಸುರರನ್ನು ಆಶ್ರಯಂತೋಪಿ–ಆಶ್ರಯಿಸುವವರಾದರೂ ಕೂಡ ಅಂತರಂ – ಮಾನಸಿಕವಾದ ಸ್ನೇಹಂ – ಪ್ರೀತಿಯನ್ನು ದೇವೇಷು – ದೇವತೆಗಳಲ್ಲಿ

ನತ್ಯಜಂತಿ – ಬಿಡುವುದಿಲ್ಲ. ತಥಾ – ಹಾಗೆಯೇ ಅನ್ಯೇ – ಇತರರಾದ ಅಸುರರು ಅನ್ಯೇಷು – ಅಸುರರಲ್ಲಿ ಸ್ಫುಟಂ – ಸ್ಪಷ್ಟವಾಗಿಯೂ ಸ್ನೇಹಂ – ನತ್ಯಜಂತಿ - ಬಿಡುವುದಿಲ್ಲ. ॥ ೧೬೬ ॥

ಭಾ.ಅ. ೧೬೦–೧೬೬ ಭೀಮಾರ್ಜುನರು ದ್ರುಪದನ ಮೇಲೆ ಜಯಗಳಿಸಿ ಅವನನ್ನು ಬಂಧಿಸಿ ತಂದ ವಾರ್ತೆಯನ್ನು ತಿಳಿದ ಶ್ರೀಕೃಷ್ಣನು ತನಗೆ ಪಾಂಡವರಲ್ಲಿ ಇದ್ದ ವಿಶೇಷ ಪ್ರೀತಿಯನ್ನು ಜನರಿಗೆ ತಿಳಿಸುವದಕ್ಕಾಗಿ, ಅವರನ್ನು ಅಭಿನಂದಿಸಲು ಕೃತವರ್ಮನನ್ನು ಹಸ್ತಿನಾವತಿಗೆ ಕಳಿಸಿದನು, ಆ ಕೃತವರ್ಮನಾದರೂ ಬಂದು ಪಾಂಡವರನ್ನು ಅಭಿನಂದಿಸಿ, ಸನ್ಮಾನಿಸಿದನು. ಕೃತವರ್ಮನು ಶೂರಸೇನ ರಾಜನ ತಮ್ಮನ ಮಗಳ ಮಗನು. ಪಾಂಡವರು ಶೂರಸೇನ ರಾಜನ ಮಗಳಾದ ಕುಂತೀದೇವಿಯ ಮಕ್ಕಳು. ಹೀಗಾಗಿ ಕೃತವರ್ಮನು ಅವರಿಗೆ ಸೋದರನಾದ್ದರಿಂದ, ಕೃಷ್ಣ ಭಕ್ತನಾದ್ದರಿಂದಲೂ ಅವರಿಂದ ಸನ್ಮಾನಿತನಾದನು. ಅಲ್ಲಿಂದ ಪುನಃ ಶ್ರೀಕೃಷ್ಣನ ಸನ್ನಿಧಿಗೆ ಹೋದನು. ಭೀಮಾರ್ಜುನರ ಬಲವನ್ನು, ಪಾಂಡವರಲ್ಲಿದ್ದ ಶ್ರೀಕೃಷ್ಣನ ಪ್ರೀತಿಯನ್ನು ತಿಳಿದಂಥ ಎಷ್ಟೋ ಸತ್ಸ್ವಭಾವದ ರಾಜರು ಈಗ ಜರಾಸಂಧ ಭಯವನ್ನು ಬಿಟ್ಟು ಪಾಂಡವರ ಪಕ್ಷವನ್ನು ಆಶ್ರಯಿಸಿದರು. ಅವರೆಲ್ಲ ಶ್ರೀ ಕೃಷ್ಣನಿಂದ ಎಷ್ಟೋ ಸಲ ಪರಾಜಿತರಾಗಿದ್ದರು. ಆದರೆ ಜರಾಸಂಧನ ಪರಾಕ್ರಮವನ್ನು ತಿಳಿದ ಅವರಿಗೆ. ಅವನ ಭಯದಿಂದ ಶ್ರೀಕೃಷ್ಣನ ಪಕ್ಷಕ್ಕೆ ಸೇರುವ ಸದ್ಬುದ್ಧಿಯು ಬಂದಿರಲಿಲ್ಲ. ಪೂರ್ವ ಜನ್ಮ ಸಂಸ್ಕಾರ, ಸ್ವಭಾವಗಳಿಂದ ಶ್ರೀಹರಿವಾಯುಗಳಲ್ಲಿ ಭಕ್ತಿಉಳ್ಳ ಅವರಿಗೆ ಈಗ ಆ ಬುದ್ಧಿಯುಂಟಾಯಿತು. ಇದಕ್ಕೆ ವಿರುದ್ಧವಾಗಿ, ಅಸುರ ಸ್ವಭಾವದ ಜನರು ಜರಾಸಂಧನು ಶ್ರೀಕೃಷ್ಣನಿಂದ ಎಷ್ಟೋ ಸಲ ಪರಾಜಿತನಾಗಿದ್ದನ್ನು ತಿಳಿದೂಕೂಡ ಜರಾಸಂಧನನ್ನು ಬಿಡಲಿಲ್ಲ. ಪೂರ್ವಸಂಸ್ಕಾರ, ಸ್ವಭಾವಗಳೇ ಹಾಗಿದ್ದದ್ದರಿಂದ ಬಿಡುವ ಬುದ್ಧಿಯೂ ಬಂದಿಲ್ಲ. ಆದ್ದರಿಂದ ಸಂಸ್ಕಾರವು ಪ್ರಬಲವಾದದ್ದು. (ಆದ್ದರಿಂದ ಸತ್ಸಂಸ್ಕಾರಗಳನ್ನು ಮನಸ್ಸಿಗೆ ಕೊಡಲು ಪ್ರಯತ್ನ ಮಾಡುತ್ತಾ ಇರಬೇಕು. ಅದು ಮುಂದೆಯಾದರೂ ಉಪಯೋಗಕ್ಕೆ ಬರುವದು ಎಂದು ತಿಳಿಯಬೇಕು.) ಆದ್ದರಿಂದ ದೇವತೆಗಳು ವಿಶೇಷ ಕಾರಣಗಳಿಂದ ಬಹಿರಂಗದಲ್ಲಿ ಅಸುರರನ್ನು ಆಶ್ರಯಿಸಿದ್ದರೂ ಕೂಡ ಅವರು ಆಂತರಂಗಿಕ ಸ್ನೇಹವನ್ನು ದೇವರ ವ ಅವನ ಭಕ್ತರ ಬಗ್ಗೆ ಬಿಡುವದಿಲ್ಲ. ಹಾಗೆಯೇ ಅಸುರರು ಯಾವದೋ ಕಾರಣಗಳಿಂದ ಸತ್ಸಹವಾಸದಲ್ಲಿರುವಂತೆ ಬಹಿರಂಗದಲ್ಲಿ ತೋರುತ್ತಿದ್ದರೂ ಕೂಡ ದುಷ್ಟ ಪಕ್ಷದಲ್ಲಿ ತಮ್ಮ ಆಂತರಂಗಿಕ ಪ್ರೀತಿಯನ್ನು ಬಿಡುವದಿಲ್ಲ.

ಧೃತರಾಷ್ಟ್ರೋ ಬಲಂಜ್ಞಾತ್ವಾಬಹುಶೋಭೀಮಪಾರ್ಥಯೋಃ ॥
ದೇವತ್ವಾಚ್ಚ ಸ್ವಭಾವೇನ ಜ್ಯೇಷ್ಠತ್ವಾದ್ಧರ್ಮಜಸ್ಯಚ ॥
ಸುಪ್ರೀತ ಏವತಂಚಕ್ರೇ ಯುವೌವರಾಜ್ಯಾಭಿಷೇಕಿಣಂ ॥ ೧೬೭ ॥

ಧೃತರಾಷ್ಟ್ರಃ–ಧೃತರಾಷ್ಟ್ರನು ಬಹುಶಃ–ಅನೇಕಾವರ್ತಿ ಭೀಮಪಾರ್ಥಯೋಃ–ಭೀಮಾರ್ಜುನರ ಬಲಂ–ಸಾಮರ್ಥ್ಯವನ್ನು ಜ್ಞಾತ್ವಾ—ತಿಳಿದು ಸ್ವಭಾವೇನ - ಸ್ವಭಾವದಿಂದ ದೇವತ್ವಾಚ್ಚ ದೇವತ್ವವಿದ್ದದ್ದರಿಂದಲೂ ಧರ್ಮಜಸ್ಯ—ಧರ್ಮರಾಜನಿಗೆ ಜ್ಯೇಷ್ಠತ್ವಾತ್—ಜ್ಯೇಷ್ಠತ್ವವಿರುವದರಿಂದಲೂ ಸುಪ್ರೀತಏವ—ಚೆನ್ನಾಗಿ ಸಂತುಷ್ಟನಾಗಿಯೇ ತಂ—ಆ ಧರ್ಮರಾಜನನ್ನು ಯೌವರಾಜ್ಯಾಭಿಷೇಕಿಣಂ ಯುವರಾಜ ಪಟ್ಟದಲ್ಲಿ ಅಭಿಷೇಕವುಳ್ಳವನನ್ನಾಗಿ ಚಕ್ರೇ—ಮಾಡಿದನು. ॥ ೧೬೭ ॥

ಭೀಮಾರ್ಜುನಾವಥೋಜಿತ್ವಾಸರ್ವದಿಕ್ಷುಚಭೂಪತೀನ್ ॥
ಚಕ್ರತುಃ ಕರದಾನ್ಸರ್ವಾನ್ ಧೃತರಾಷ್ಟ್ರಸ್ಯ ದುರ್ಜಯೌ ॥ ೧೬೮ ॥

ಅಥೋ – ಪಟ್ಟಾಭಿಷೇಕಾನಂತರ ದುರ್ಜಯೌ – ಜಯಿಸಲು ಅಶಕ್ಯರಾದ ಭೀಮಾರ್ಜುನೌ — ಭೀಮಾರ್ಜುನರು ಸರ್ವದಿಕ್ಷು – ಎಲ್ಲಾ ದಿಕ್ಕುಗಳಲ್ಲಿಯೂ ಸರ್ವಾನ್ ಎಲ್ಲಾ ಭೂಪತೀನ್ – ರಾಜರನ್ನು ಜಿತ್ವಾ - ಗೆದ್ದು ಧೃತರಾಷ್ಟ್ರಸ್ಯ – ಧೃತರಾಷ್ಟ್ರನಿಗೆ ಕರದಾನ್—ಕಪ್ಪಕೊಡುವವರನ್ನಾಗಿ ಚಕ್ರತುಃ – ಮಾಡಿದರು. ॥ ೧೬೮ ॥

ತಯೋಃ ಪ್ರೀತೋಽಭವತ್ಸೋಽಪಿ ಪೌರಜಾನಪದಾಸ್ತಥಾ ॥
ಭೀಷ್ಮದ್ರೋಣ ಮುಖಾಃ ಸರ್ವೇಽಪ್ಯತಿಮಾನುಷಕರ್ಮಣಾ ॥ ೧೬೯ ॥

ಸೋಽಪಿ – ಆ ಧೃತರಾಷ್ಟ್ರನೂ ತಯೋಃ – ಆ ಭೀಮಾರ್ಜುನರ ಅತಿಮಾನುಷಕರ್ಮಣಾ – ಮನುಷ್ಯರಿಂದ ಮಾಡಲು ಅಶಕ್ಯವಾದ ಕರ್ಮದಿಂದ ಪ್ರೀತಃ – ಸಂತುಷ್ಟನು ಅಭವತ್ ಆದನು ತಥಾ – ಹಾಗೆಯೇ ಪೌರಜಾನಪದಾಃ – ಪಟ್ಟಣ ಮತ್ತು ಹಳ್ಳಿಯಲ್ಲಿರತಕ್ಕವರು, ಭೀಷ್ಮದ್ರೋಣ ಮುಖಾಃ – ಭೀಷ್ಮ, ದ್ರೋಣರೇ ಪ್ರಧಾನರಾಗಿ ಉಳ್ಳ ಸರ್ವೇಪಿ – ಎಲ್ಲರೂ ಕೂಡ ತಯೋಃ – ಆ ಭೀಮಾರ್ಜುನರ ಅತಿಮಾನುಷಕರ್ಮಣಾ – ಮನುಷ್ಯರಿಂದ ಮಾಡಲು ಅಶಕ್ಯವಾದ ಕೆಲಸದಿಂದ ಪ್ರೀತರಾದರು. ॥ ೧೬೯ ॥

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯವಿರಚಿತೇ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ
ಪಾಂಡವದಿಗ್ವಿಜಯೋನಾಮ ಅಷ್ಟಾದಶೋಽಧ್ಯಾಯಃ ॥ ೧೮ ॥

॥ ಶ್ರೀ ಕೃಷ್ಣಾರ್ಪಣಮಸ್ತು ॥

ಈ ರೀತಿಯಾಗಿ ಶ್ರೀಆನಂದತೀರ್ಥರಿಂದ ಮಾಡಲ್ಪಟ್ಟ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಪಾಂಡವರ ದಿಗ್ವಿಜಯವನ್ನು ಪ್ರತಿಪಾದಿಸುವ ಹದಿನೆಂಟನೇ ಅಧ್ಯಾಯವು ಸಮಾಪ್ತವಾಯಿತು. ಈ ಕೃತಿಯು ಶ್ರೀಕೃಷ್ಣನಿಗೆ ಅರ್ಪಿತವಾಗಲಿ.

ಭಾ.ಅ. ೧೬೨–೧೬೯ ಧೃತರಾಷ್ಟ್ರನು ಸ್ವಾಭಾವಿಕವಾಗಿ ಸಾಧುವಾದ್ದರಿಂದ, ಧರ್ಮರಾಜನು ಹಿರಿಯನಾದ್ದರಿಂದ, ಅವನ ತಮ್ಮಂದಿರಾದ ಭೀಮಾರ್ಜುನರು ಪ್ರಬಲರಾಗಿದ್ದದ್ದನ್ನು ಬಹಳ ಸಲ ಕಂಡದ್ದರಿಂದಲೂ ಸಂತೋಷದಿಂದಲೇ ಧರ್ಮರಾಜನನ್ನು ಯುವರಾಜನನ್ನಾಗಿ ಮಾಡಿದನು. ಆನಂತರ ಭೀಮಾರ್ಜುನರು ನಾಲ್ಕು ದಿಕ್ಕುಗಳಲ್ಲಿಯೂ ದಿಗ್ವಿಜಯ ಸಂಚಾರ ಮಾಡಿ ಎಲ್ಲ ರಾಜರನ್ನೂ ಗೆದ್ದು ಎಲ್ಲರೂ ಕೂಡ ಧೃತರಾಷ್ಟ್ರರಾಜನಿಗೆ ಕಪ್ಪಕಾಣಿಕೆ ಕೊಡುವಂತೆ ಮಾಡಿದ್ದಾರೆ. ಧೃತರಾಷ್ಟ್ರನು, ಊರನಾಗರಿಕರು, ರಾಷ್ಟ್ರಪ್ರಜೆಗಳು, ಭೀಷ್ಮದ್ರೋಣಾದಿಗಳು ಎಲ್ಲರೂ ಕೂಡ ಮನುಷ್ಯರ ಶಕ್ತಿಗೆ ಮೀರಿದ, ಅದ್ಭುತವಾದ ಭೀಮಾರ್ಜುನರ ಕಾರ್ಯಗಳಿಂದ ಸಂತುಷ್ಟರಾದರು.

ಇತಿ ಶ್ರೀ ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಪಾಂಡವರ ದಿಗ್ವಿಜಯವನ್ನು ವರ್ಣಿಸುವ ಹದಿನೆಂಟನೆಯ ಅಧ್ಯಾಯದ ಭಾವಾನುವಾದವು ಸಮಾಪ್ತವು.

॥ ಶ್ರೀಕೃಷ್ಣಾರ್ಪಣಮಸ್ತು ॥

॥ ಶ್ರೀಃ ॥

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ

ಶ್ರೀ ಗುರುಭ್ಯೋನಮಃ

೧೯ನೇ ಅಧ್ಯಾಯವು

ಶ್ರೀಮದ್ಧನುಮದ್ಭೀಮಮಧ್ವಾಂತರ್ಗತ ರಾಮಕೃಷ್ಣವೇದವ್ಯಾಸಾತ್ಮಕ ಲಕ್ಷ್ಮೀಹಯಗ್ರೀವಾಯನಮಃ

ಏವಂ ಶುಭೋಚ್ಚಗುಣವತ್ಸು ಜನಾರ್ದನೇನ ಯುಕ್ತೇಷು ಪಾಂಡುಷು ಚರತ್ಸ್ವಧಿಕಂಶುಭಾನಿ ॥
ನಾಸ್ತಿಕ್ಯನೀತಿ ಮತುಲಾಂ ಗುರುದೇವತಾದಿ ಸತ್ಸ್ವಂಜಸೈವಜಗೃಹುರ್ಧೃತರಾಷ್ಟ್ರಪುತ್ರಾಃ ॥ ೧ ॥

ಏವಂ—ಈ ಹಿಂದೆ ಹೇಳಿದ ಪ್ರಕಾರ ಶುಭೋಚ್ಚಗುಣವತ್ಸು – ಶುದ್ಧಗಳಾದ, ಉತ್ತಮಗಳಾದ ಗುಣಗಳುಳ್ಳ ಜನಾರ್ದನೇನ – ಶ್ರೀ ಕೃಷ್ಣನಿಂದ ಯುಕ್ತೇಷು - ಕೂಡಿದ, ಪಾಂಡುಷು – ಪಾಂಡವರು ಅಧಿಕಂ– ಹೆಚ್ಚಾಗಿ ಶುಭಾನಿ – ಉತ್ತಮ ಕರ್ಮಗಳನ್ನು ಚರತ್ಸುಸತ್ಸು - ಮಾಡುತ್ತಿರಲು ಧೃತರಾಷ್ಟ್ರಪುತ್ರಾಃ – ಧೃತರಾಷ್ಟ್ರನ ಮಕ್ಕಳು ಗುರುದೇವತಾದಿ ~~ಸತ್ಸ್ವೇವ – ಗುರುಗಳು, ದೇವತೆಗಳು, ಮೊದಲಾದ ಸಜ್ಜನರ ವಿಷಯದಲ್ಲಿಯೇ ಅತುಲಾಂ – ಅಸದೃಶವಾದ ನಾಸ್ತಿಕ್ಯ~~ ನೀತಿಂ – ಗುರುಗಳು ಇಲ್ಲ, ದೇವತೆಗಳೂ ಇಲ್ಲ ಇವೇ ಮೊದಲಾದದ್ದನ್ನು ಪ್ರತಿಪಾದಿಸತಕ್ಕ ನೀತಿಶಾಸ್ತ್ರವನ್ನು ಅಂಜಸಾ – ಚೆನ್ನಾಗಿ ಜಗೃಹುಃ ಸ್ವೀಕರಿಸಿದರು. ॥ ೧ ॥

ಅವ – ಕೌರವರಿಗೆ ನಾಸ್ತಿಕ್ಯ ನೀತಿಯಲ್ಲಿ ಗುರುಗಳು ಯಾರೆಂಬುದನ್ನು ಹೇಳುತ್ತಾರೆ –

ನಾಮ್ನಾ ಕಲಿಂಗ ಇತಿ ಚಾಸುರಕೋದ್ವಿಜೋಽಭೂಚ್ಛಿಷ್ಯಃ ಸುರೇತರಗುರೋಃ ಶಕುನೇರ್ಗುರುಃಸಃ ॥
ನೀತಿಂ ಸಕುತ್ಸಿತತಮಾಂ ಧೃತರಾಷ್ಟ್ರಪುತ್ರೇಷ್ವಾಧಾವ್ರಹೋ ವಚನತಃಶಕುನೇಃ ಸಮಸ್ತಾಂ ॥ ೨ ॥

ಅಸುರಃ (ಹಿಂದೆ) ಅತ್ಯಂತ ಕುತ್ಸಿತನಾದ ಅಸುರನು ನಾಮ್ನಾ - ಹೆಸರಿನಿಂದ ಕಲಿಂಗಇತಿ – ಈಗ ಕಲಿಂಗನೆಂಬ ದ್ವಿಜಃ – ಬ್ರಾಹ್ಮಣನು ಅಭೂತ್ – ಇದ್ದನು ಸಃ – ಆ ಕಲಿಂಗನು ಸುರೇತರಗುರೋಃ – ದೇವತೆಗಳಿಂದ ಇತರರಾದ ಅಸುರರಿಗೆ ಗುರುಗಳಾದ ಶುಕ್ರಾಚಾರ್ಯರ ಶಿಷ್ಯಃ – ಶಿಷ್ಯನು ಶಕುನೇಃ – ಶಕುನಿಗೆ ಗುರುಃ – ಉಪದೇಶಕನು ಸಃ – ಆ ಕಲಿಂಗನು ಶಕುನೇಃ – ಶಕುನಿಯ ವಚನತಃ – ಮಾತಿನಿಂದ ರಹಃ – ಏಕಾಂತದಲ್ಲಿ ಸಮಸ್ತಾಂ – ಎಲ್ಲಾ ಕುತ್ಸಿತತಮಾಂ – ಅತಿ ಕುತ್ಸಿತವಾದ ನೀತಿಂ – ನೀತಿಶಾಸ್ತ್ರವನ್ನು ಧೃತರಾಷ್ಟ್ರಪುತ್ರೇಷು - ಧೃತರಾಷ್ಟ್ರನ ಮಕ್ಕಳಲ್ಲಿ ಅಧಾತ್ – ಇಟ್ಟನು. (ಕೌರವರಿಗೆ ಉಪದೇಶಿಸಿದನು). ॥ ೨ ॥

ಛದ್ಮೈವಯತ್ರಪರಮಂ ನಸುರಾಶ್ಚಪೂಜ್ಯಾಃ ಸ್ವಾರ್ಥೇನ ವಂಚನಕೃತೇ ಜಗತೋಽಖಿಲಂಚ ॥
ಧರ್ಮಾದಿಕಾರ್ಯಮಪಿಯುಚ್ಚ ಮುಹೋಪಧಿಃಸ್ಯಾತ್ ಶ್ರೇಷ್ಠಃ ಸವಿವ ನಿಖಿಲಾಸುರದೈತ್ಯಸಂಘಾತ್ ॥೩॥

ಯತ್ರ ಯಾವ ನೀತಿಶಾಸ್ತ್ರದಲ್ಲಿ ಛದ್ಮೈವ – ಕಪಟವೇ ಪರಮಂ – ತಾತ್ಪರ್ಯ ವಿಷಯವೆಂದು ಪ್ರತಿಪಾದಿಸಲ್ಪಡುತ್ತದೋ ಅಂತಹ ನೀತಿಯನ್ನು ಇಟ್ಟನು. ಯಸ್ಯ – ಯಾವಪುರುಷನಿಗೆ ಸುರಾಶ್ಚ – ದೇವತೆಗಳೂ ಕೂಡ ಸ್ವಾರ್ಥೇನ - ತನ್ನ

ಪ್ರಯೋಜನ ನಿಮಿತ್ತದಿಂದ ನಪೂಜ್ಯಾಃ – ಪೂಜ್ಯರಲ್ಲ ಸುರಾಶ್ಚ ಎಂಬಲ್ಲಿರುವ ಚ ಶಬ್ದದಿಂದ ಇತರರು ಪೂಜ್ಯರಲ್ಲವೆಂದು ಏನು ಹೇಳತಕ್ಕದ್ದು ಎಂಬ ಕೈಮುತ್ಯವನ್ನು ಸೂಚಿಸುತ್ತಾರೆ. ಅಖಿಲಂ – ಎಲ್ಲಾ ಧರ್ಮಾದಿ ಕಾರ್ಯಮಪಿ – ಸಂಧ್ಯಾವಂದನ, ಯಜ್ಞ, ದಾನ, ಸುರಪೂಜಾದಿ ವಿಹಿತಾನುಷ್ಠಾನವೂ ಆದಿ ಪದದಿಂದ ನಿಷಿದ್ಧತ್ಯಾಗಾದಿ ಕಾರ್ಯವೂಕೂಡ ಜಗತಃ – ಲೋಕಕ್ಕೆ ವಂಚನಕೃತೇ – ಮೋಸಮಾಡುವದಕ್ಕಾಗಿ ಮಾಡತಕ್ಕದ್ದು ಯಶ್ಚ – ಯಾವನು ಮಹೋಪಧಿಃ – ಮಹತ್ತಾದ ಕಪಟವುಳ್ಳವನು ಸ್ಯಾತ್ – ಆಗುವನೋ ಸಏವ – ಅವನೇ ನಿಖಿಲಾಸುರ ದೈತ್ಯಸಂಘಾತ್ – ಎಲ್ಲಾ ರಾಕ್ಷಸರೂ, ದೈತ್ಯರೂ ಇವರ ಸಮೂಹದಿಂದ ಶ್ರೇಷ್ಠಃ – ಉತ್ತಮನು. ॥ ೩ ॥

ಇತ್ಯಾದಿಕುತ್ಸಿತತಮಾಂ ಜಗೃಹುಃಸ್ಮವಿದ್ಯಾಮಜ್ಞಾತಏವ ಧೃತರಾಷ್ಟ್ರಮುಖ್ಯೈಃ ಸಮಸ್ತೈಃ ॥
ತೇಷಾಂಸ್ವಭಾವಬಲತೋ ರುಚಿತಾಚ ಸೈವವಿಸ್ತಾರಿತಾಚ ನಿಜಬುದ್ಧಿಬಲಾದತೋಽಪಿ ॥ ೪ ॥

(ಕೌರವರು) ಇತ್ಯಾದಿಕುತ್ಸಿತತಮಾಂ – ಹಿಂದೆ ಹೇಳಿದ್ದೇ ಮೊದಲಾದ ಅತ್ಯಂತ ಕುತ್ಸಿತವಾದ ವಿದ್ಯೆಯನ್ನು ಸಮಸ್ತೈಃ– ಎಲ್ಲಾ ಧೃತರಾಷ್ಟ್ರ ಮುಖ್ಯೈಃ – ಧೃತರಾಷ್ಟ್ರನೇ ಮೊದಲಾಗಿ ಉಳ್ಳವರಿಂದ ಅಜ್ಞಾತೇಏವ – ತಿಳಿಯಲ್ಪಡದ ಪ್ರದೇಶದಲ್ಲಿಯೇ ಜಗೃಹುಃ – ಸ್ವೀಕರಿಸಿದರು ತೇಷಾಂ – ಆ ದುರ್ಯೋಧನಾದಿಗಳ ಸ್ವಭಾವಬಲತಃ – ಯೋಗ್ಯತೆಯ ಬಲದಿಂದ ಸೈವ – ಆ ದುರ್ನೀತಿಯೇ ರುಚಿತಾ – ಪ್ರಿಯವಾಯಿತು. ಸಾ – ಆ ದುರ್ನೀತಿಯು ನಿಜಬುದ್ಧಿಬಲಾತ್ – ತಮ್ಮ ತಮ್ಮ ಬುದ್ಧಿಯ ಸಾಮರ್ಥ್ಯದಿಂದ ಅತೋಪಿ – ಗುರುಗಳು ಉಪದೇಶಿಸಲ್ಪಟ್ಟದ್ದಕ್ಕಿಂತಲೂ ವಿಸ್ತಾರಿತಾ – ಹೆಚ್ಚು ಮಾಡಿಕೊಳ್ಳಲ್ಪಟ್ಟಿತು. ॥೪॥

ಅಧ್ಯಾಯ–೧೯ ಭಾವಾನುವಾದ

೧–೪ ಗುಣಶ್ರೇಷ್ಠರಾದ ಪಾಂಡವರು, ಶ್ರೀಕೃಷ್ಣನಿಂದ ಕೂಡಿಕೊಂಡು ಶುಭಕಾರ್ಯಗಳನ್ನು ನಡೆಸುತ್ತಿರಲು ದುರ್ಯೋಧನಾದಿ ಕೌರವರು ಬಹಳವಾದ ನಾಸ್ತಿಕಧರ್ಮವನ್ನು ಸ್ವೀಕರಿಸುತ್ತಿದ್ದರು. ಶುಕ್ರಾಚಾರ್ಯರ ಶಿಷ್ಯನಾದ, ಅಸುರನಾದ, ಬ್ರಾಹ್ಮಣನಾಗಿ ಹುಟ್ಟಿದ ಕಲಿಂಗ ಎಂಬವನು ಶಕುನಿಯ ಗುರುವಾಗಿದ್ದನು. ಅವನೇ ಶಕುನಿಯ ಮಾತಿನ ಪ್ರಕಾರ ಗುಪ್ತಸ್ಥಳದಲ್ಲಿ (ಧೃತರಾಷ್ಟ್ರಾದಿ ಹಿರಿಯರಿಗೆ ತಿಳಿಯದಂತೆ) ನಾಸ್ತಿಕ್ಯ ನೀತಿಯನ್ನು ಪೂರ್ಣವಾಗಿ ಕಲಿಸಿದನು. ಆ ನಾಸ್ತಿಕ ನೀತಿಯ ಪ್ರಕಾರ–ಕಪಟತನವೇ ಶ್ರೇಷ್ಠಕಾರ್ಯವು. ದೇವತೆಗಳ ಪೂಜೆ, ಧರ್ಮಾಚರಣಾದಿಗಳು ಇಂಥ ಸತ್ಕಾರ್ಯಗಳು ಸ್ವಂತ ಪುಣ್ಯ ಸಂಪಾದನೆ. ಅನುಗ್ರಹ ಸಂಪಾದನೆ ಈ ದೃಷ್ಟಿಯಿಂದ ಆಚರಣೀಯಗಳಲ್ಲ; ಆದರೆ ಜನರ ಮೋಸಮಾಡುವದಕ್ಕಾಗಿ (ಇವನೂ ಮಹಾಧಾರ್ಮಿಕನು ಎಂಬ ಭಾವನೆ ಜನರಲ್ಲಿ ಮೂಡುವದಕ್ಕೋಸ್ಕರ) ಆಚರಿಸಬೇಕು. ಇಂಥ ನೀತಿಯನ್ನು ಸರಿಯಾಗಿ ಕೃತಿಯಲ್ಲಿ ತರುವವನು ಶ್ರೇಷ್ಠನು". ಇಂಥ ಕುವಿದ್ಯೆಯನ್ನು ಹಿರಿಯರಿಗೆ ತಿಳಿಯದಂತೆ, ತಮ್ಮ ಬುದ್ಧಿ ಸ್ವಭಾವಾನುಸಾರವಾಗಿ ಅತ್ಯಂತ ಆದರದಿಂದ ಕಲಿತ್ತರು ಮತ್ತು ಬೆಳೆಸಿಕೊಂಡರು.

ಸಂಪೂರ್ಣದುರ್ಮತಿರಥೋ ಧೃತರಾಷ್ಟ್ರಸೂನು ಸ್ತಾತಪ್ಯಮಾನಹೃದಯೋ ನಿಖಿಲಾನ್ಯಹಾನಿ ॥
ದೃಷ್ಟ್ವಶ್ರಿಯಂ ಪರಮಿಕಾಂ ವಿಜಯಂಚ ಪಾರ್ಥೇಷ್ವಾಹೇದಮೇತ್ಯಪಿತರಂ ಸಹಸೌಬಲೇನ ॥ ೫ ॥

ಅಥೋ – ಅನಂತರ, ಸಂಪೂರ್ಣ ದುರ್ಮತಿಃ – ಪರಿಪೂರ್ಣ ದುರ್ಬುದ್ಧಿಯುಳ್ಳ ಧೃತರಾಷ್ಟ್ರಸೂನುಃ – ಧೃತರಾಷ್ಟ್ರನ ಮಗನಾದ ದುರ್ಯೋಧನನು ನಿಖಿಲಾನಿಅಹಾನಿ – ಎಲ್ಲಾ ದಿನಗಳಲ್ಲಿಯೂ ತಾತಪ್ಯಮಾನಹೃದಯಃಸನ್ – ಸಂತಾಪಗೊಂಡ ಮನಸ್ಸುಳ್ಳವನಾಗಿ ಪಾರ್ಥೇಷು ಪಾಂಡವರಲ್ಲಿ ಪರಮಿಕಾಂ – ಉತ್ತಮವಾದ ಶ್ರಿಯಂ – ಸಂಪತ್ತನ್ನು ವಿಜಯಂಚ – ಜಯವನ್ನೂಕೂಡ ದೃಷ್ಟ್ವಾ – ನೋಡಿ ಸೌಬಲೇನ – ಶಕುನಿಯಿಂದ ಸಹ – ಕೂಡಿಕೊಂಡು ಪಿತರಂ—ತಂದೆಯನ್ನು ಏತ್ಯ – ಹೊಂದಿ ಇದಂ – ಈ ಮಾತನ್ನು ಆಹ – ಹೇಳಿದನು. ॥ ೫ ॥

ಜ್ಯೇಷ್ಠಸ್ಯತೇಽಪಿಹಿವಯಂ ಹೃದಯಪ್ರಜಾತಾ ನಾರ್ಹತ್ವಮೇವ ಗಮಿತಾಭವತೈವರಾಜ್ಯೇ ॥
ಭ್ರಾತುಃಕನೀಯಸ ಉತಾಪಿಹಿ ದಾರಜಾತಾ ಅನ್ಯೈಶ್ಚ ರಾಜ್ಯಪದವೀಂ ಭವತೈವನೀತಾಃ ॥ ೬ ॥

ವಯಂ – ನಾವು ಜ್ಯೇಷ್ಠಸ್ಯ – ಜ್ಯೇಷ್ಠನಾದ ತೇ – ನಿನ್ನ ಹೃದಯಪ್ರಜಾತಾಃ ಅಪಿ – ಔರಸಪುತ್ರರಾದರೂ ಕೂಡ ಭವತೈವ ನಿನ್ನಿಂದಲೇ ರಾಜ್ಯೇ – ರಾಜ್ಯದಲ್ಲಿ ಅರ್ಹತ್ವಂ – ಯೋಗ್ಯತ್ವವನ್ನು ನೈವಗಮಿತಾಃ – ಹೊಂದಿಸಲ್ಪಡಲೇ ಇಲ್ಲ

ಹಿ – ಜ್ಯೇಷ್ಠ ಪುತ್ರನಿಗೇ ಯುವರಾಜ ಪಟ್ಟವು ಪ್ರಸಿದ್ಧವು ಉತ – ಮತ್ತು ಕನೀಯಸಃ – ಕನಿಷ್ಠನಾದ ಭ್ರಾತುಃ – ಸಹೋದರನಾದ ಪಾಂಡುವಿಗೆ ಅನ್ಯೈಃ - ಇತರ ಪುರುಷರಿಂದ ದಾರಜಾತಾಃ – ಪಾಂಡುವಿನ ಹೆಂಡತಿ ಕುಂತಿಯಲ್ಲಿ ಹುಟ್ಟಿದ ಧರ್ಮರಾಜಾದಿಗಳು ರಾಜ್ಯಪದವೀಂ ರಾಜ್ಯಮಾರ್ಗವನು, ಅಂದರೆ ಯುವ ರಾಜ್ಯವನ್ನು ಭವತ್ಯೈವ – ನಿನ್ನಿಂದಲೇ ನೀತಾಃ– ಹೊಂದಿಸಲ್ಪಟ್ಟರು. ॥ ೬ ॥

ರಾಜ್ಯಂ ಮಹಚ್ಚ ಸಮವಾಪ್ಸ್ಯತಿ ಧರ್ಮಸೂನುಸ್ತ್ವತ್ತೋಽಥವಾನುಜಬಲಾತ್ಪ್ರಸಭಂವಯಂತು ॥
ದಾಸಾಭವೇಮನಿಜತಂತುಭಿರೇವಸಾಕಂ ಕುಂತೀಸುತಸ್ಯಪರತೋಽಪಿ ತದನ್ವಯಸ್ಯ ॥ ೭ ॥

ಧರ್ಮಸೂನುಃ – ಧರ್ಮರಾಜನು ತ್ವತ್ತಃ ನಿನ್ನ ಅನುಗ್ರಹದಿಂದ ಅಥವಾ–ಅಲ್ಲದಿದ್ದರೆ ಅನುಜಬಲಾತ್ ತಮ್ಮಂದಿರ ಸಾಮರ್ಥ್ಯದಿಂದ ಪ್ರಸಭಂ – ಬಲಾತ್ಕಾರದಿಂದ ಮಹಚ್ಚರಾಜ್ಯಂ – ಸಂಪೂರ್ಣ ಸಾಮ್ರಾಜ್ಯವನ್ನು ಸಮವಾಪ್ಸ್ಯತಿ – ಹೊಂದುವನು ವಯಂತು – ನಾವಾದರೂ ನಿಜತಂತುಭಿಃ – ನಮ್ಮ ಸಂತಾನಗಳಿಂದ ಸಾಕಂಏವ – ಕೂಡಿಕೊಂಡೇ ಕುಂತೀ ಸುತಸ್ಯ - ಧರ್ಮರಾಜನಿಗೆ ದಾಸಾಃ – ದಾಸರು ಭವೇಮ – ಆಗುವೆವು ಪರತೋಪಿ – ಮುಂದೆಯೂ ಕೂಡ ತದನ್ವಯಸ್ಯ – ಧರ್ಮರಾಜನ ಸಂತಾನಕ್ಕೆ ಮದನ್ವಯಃ ನನ್ನ ಸಂತಾನವು ದಾಸ್ಯವನ್ನು ಹೊಂದುವುದು. ನಮ್ಮ ಸಂತಾನದವರು ಪಾಂಡವರ ಸಂತಾನದವರಿಗೆ ದಾಸರಾಗುವರು. ॥ ೭ ॥

ನಾತ್ಮಾರ್ಥಮಸ್ತಿಮಮ ದುಃಖಮುಥಾತಿಶುದ್ಧಲೋಕ ಪ್ರಸಿದ್ಧಯಶಸಸ್ತವಕೀರ್ತಿನಾಶಃ ॥
ಅಸ್ಮನ್ನಿಮಿತ್ತಮತಿದುಃಖಮತೋಹಿ ಸರ್ವೇಽಪೀಚ್ಛಾಮಮರ್ತುಮಥನಃ ಕುರು ಚಾಪ್ಯನುಜ್ಞಾಂ ॥ ೮ ॥

ಆತ್ಮಾರ್ಥಂ - ನನಗೆ ರಾಜ್ಯಪ್ರಾಪ್ತಿಗೋಸ್ಕರ ಮಮ ನನಗೆ ದುಃಖಂ ನ – ದುಃಖವಿಲ್ಲ ಅಥಾಪಿ – ಹಾಗಾದರೂ ಅತಿಶುದ್ಧಲೋಕಪ್ರಸಿದ್ಧಯಶಸಃ – ಅತ್ಯಂತ ಶುದ್ಧವಾದ. ಲೋಕದಲ್ಲಿ ಪ್ರಸಿದ್ಧವಾದ ಕೀರ್ತಿಯುಳ್ಳ ತವ – ನಿನ್ನ ಕೀರ್ತಿನಾಶಃ – ಯಶಸ್ಸಿನ ನಾಶವು, ಅಸ್ಮನ್ನಿಮಿತ್ತಂ – ನಮ್ಮನ್ನು ನಿಮಿತ್ತೀಕರಿಸಿ ಆಗುವುದೆಂದು, ಅತಿ ದುಃಖಂ – ಅತ್ಯಂತ ದುಃಖವಾಗುತ್ತದೆ ಅತಃ - ಆದ್ದರಿಂದ ಅಥ ನಿನ್ನೊಡನೆ ವಿಜ್ಞಾಪಿಸಿಕೊಂಡ ಮೇಲೆ ಸರ್ವೇ– ನಾವೆಲ್ಲರೂ ಮರ್ತುಂ – ಸಾಯಲು ಇಚ್ಛಾಮಃ - ಇಚ್ಛಿಸುತ್ತೇವೆ ಹಿ – ತಂದೆಯ ಕೀರ್ತಿನಾಶವು ಮಕ್ಕಳಿಗೆ ಸಹಿಸಲಿಕ್ಕೆ ಅಶಕ್ಯವೆಂದು ಪ್ರಸಿದ್ಧವು. ಆದ್ದರಿಂದ ತ್ವಮಪಿ – ನೀನೂ ಕೂಡ ನಃ – ನಮಗೆ ಅನುಜ್ಞಾಂ – ಸಾಯಲು ಅಪ್ಪಣೆಯನ್ನು ಕುರು - ಮಾಡು. ॥ ೮ ॥

ಭಾ.ಅ. ೫–೮ ಪರಮ ನೀಚನಾದ ದುರ್ಯೋಧನನು ಪಾಂಡವರ ಸಂಪತ್ತನ್ನು ಕೀರ್ತಿಯನ್ನು, ಸರ್ವತ್ರ ವಿಜಯವನ್ನು ಪ್ರತಿದಿನ ನೋಡುತ್ತಾ, ಮಾತ್ಸರ್ಯದಿಂದ ತಾಪ ಹೊಂದುತ್ತಾ ಶಕುನಿಯಿಂದ ಕರೆಸಿಕೊಂಡು ತಂದೆಯ ಹತ್ತಿರ ಬಂದು "ರಾಜ್ಯಕ್ಕೆ ಅರ್ಹನಾದವನು ನೀನು, ಜ್ಯೇಷ್ಠನಾದ್ದರಿಂದ. ಅಂಥ ನಿನ್ನ ಸ್ವಂತ ಮಕ್ಕಳಾದವರು ನಾವು. ಕನಿಷ್ಠನಾದ (ಸಣ್ಣವನಾದ) ಆದ್ದರಿಂದಲೇ ರಾಜ್ಯಾರ್ಹನಲ್ಲದ ಆ ಪಾಂಡುವಿನ ಹೆಂಡತಿಯಲ್ಲಿ (ಪಾಂಡುವಿನಿಂದ ಅಲ್ಲ;) ಬೇರೆಯವರಿಂದ ಹುಟ್ಟಿದವರು ಪಾಂಡವರು, ಆದ್ದರಿಂದ ರಾಜ್ಯಾನರ್ಹರಾದವರು. ಹೀಗಿದ್ದರೂ ನೀನೇ ನಿನ್ನ ಮಕ್ಕಳಾದ ನಮಗೆ ರಾಜ್ಯಾರ್ಹತೆಯನ್ನು ತಂದು ಕೊಡದೆ ಅವರಿಗೆ ತಂದುಕೊಟ್ಟಿರುತ್ತಿ. (ಯುವರಾಜನನ್ನಾಗಿ ಧರ್ಮಜನನ್ನು ಮಾಡಿದ್ದಿ). ಇದರ ಫಲವಾಗಿ ನಿನ್ನಿಂದಲೇ ಇಡೀ ರಾಜ್ಯಾಧಿಪತ್ಯವನ್ನು ಅವನು ಹೊಂದುವನು. ಅಥವಾ ತನ್ನ ತಮ್ಮಂದಿರ ಸಾಮರ್ಥ್ಯ ಸಹಾಯದಿಂದ ಹೊಂದುವನು. ನಾವು ಅವರಿಗೆ ದಾಸರಾಗಿಯೇ ಇರಬೇಕಾಗುತ್ತದೆ; ಇಷ್ಟೇ ಅಲ್ಲ; ಅವರ ಸಂತತಿಯೇ ರಾಜರಾಗುತ್ತ ಹೋಗುವದು. ನಮ್ಮ ಸಂತತಿಯೆಲ್ಲ ಅವರ ಸಂತತಿಗೆ ದಾಸರಾಗುತ್ತಾ ಇರಬೇಕಾಗುವದು. ಇದೂ ಕೂಡ ನನಗೆ ದುಃಖಕರವಲ್ಲ (ವಾಸ್ತವಿಕವಾಗಿ ಅದರಿಂದಲೇ ದುಃಖಪಡುತ್ತಿರುವ ಆ ನೀಚನಾದ ದುರ್ಯೋಧನನು ಕಪಟತನದಿಂದ ಅದನ್ನು ಮುಚ್ಚುತ್ತಾ ತಾನು ನಿಸ್ವಾರ್ಥಿ, ತಂದೆಯ ಕೀರ್ತ್ಯಭಿಮಾನಿ ಎಂಬಂತೆ ತೋರಿಕೆಯ ಮಾತನಾಡುವನು.) ನನ್ನ ಸ್ವಾರ್ಥಕ್ಕಾಗಿ ನನ್ನ ದುಃಖವಲ್ಲ, ಆದರೆ ಅತ್ಯಂತ ಶುದ್ಧವಾದ, ಲೋಕಪ್ರಸಿದ್ಧವಾದ ನಿನ್ನ ಕೀರ್ತಿಯು ನಮ್ಮ ನಿಮಿತ್ತವಾಗಿ ನಷ್ಟವಾಗುವದಲ್ಲಾ ಎಂದು ದುಃಖ ಅಷ್ಟೇ. ಆದ್ದರಿಂದ, ನಿನ್ನ ಕೀರ್ತಿನಾಶವಾಗಬಾರದೆಂದು ನಾವೆಲ್ಲರೂ ದೇಹತ್ಯಾಗ ಮಾಡಲು ಇಚ್ಛಿಸುತ್ತೇವೆ. ಅದಕ್ಕಾಗಿ ಅಪ್ಪಣೆಯನ್ನು ಕೊಡು" ಎಂದು ಮಾತನಾಡಿದನು.

ಏವಂ ಸ್ವಪುತ್ರವಚನಂ ಸನಿಶಮ್ಯ ರಾಜಾಪ್ರೋವಾಚನಾನುಗುಣ ಮೇತದಹೋಮನಸ್ತೇ ॥
ಕೋನಾಮುಪಾಂಡುತನಯೇಷು ಗುಣೋತ್ತಮೇಷು ಪ್ರೀತಿಂನಯಾತಿ ನಿಜವೀರ್ಯಭವೋಚ್ಚಯೇಷು॥೯॥

ಸ ರಾಜಾ – ಆ ಧೃತರಾಷ್ಟ್ರನು ಏವಂ – ಈ ರೀತಿಯಾಗಿ ಸ್ವಪುತ್ರವಚನಂ – ತನ್ನ ಮಗನ ಮಾತನ್ನು ನಿಶಮ್ಯ – ಕೇಳಿ ತೇ – ನಿನ್ನ ಮನಃ – ಚಿತ್ತವು ಅನುಗುಣಂ ನ – ಶ್ರೇಯಸ್ಸಿಗೆ ಅನುಕೂಲವಾದದ್ದಲ್ಲ ಅಹೋ – ಆಶ್ಚರ್ಯ ನಿಜವೀರ್ಯ ಭವೋಚ್ಚಯೇಷು – ತಮ್ಮ ಪರಾಕ್ರಮದಿಂದ ಸಂಪಾದಿಸಲ್ಪಟ್ಟ ಉತ್ಕೃಷ್ಟವಾದ ದ್ರವ್ಯಸಂಗ್ರಹವುಳ್ಳ ಗುಣೋತ್ತಮೇಷು – ಗುಣಗಳಿಂದ ಉತ್ತಮರಾದ ಪಾಂಡುತನಯೇಷು – ಪಾಂಡುಪುತ್ರರಲ್ಲಿ ಕೋ ನಾಮ ಪ್ರೀತಿಂ ನ ಯಾತಿ – ಯಾವ ಪುರುಷನು ಪ್ರೀತಿಯನ್ನು ಹೊಂದುವದಿಲ್ಲ ? ಎಲ್ಲರೂ ಪ್ರೀತಿಯನ್ನು ಹೊಂದುತ್ತಾರೆ. ಕುತ್ಸಿತರಾದ ಪುರುಷರು ಮಾತ್ರ ಪ್ರೀತಿಯನ್ನು ಹೊಂದಲಾರರು ಇತಿ ಎಂದು ಪ್ರೋವಾಚ – ಹೇಳಿದನು. ॥ ೯ ॥

ತೇಹಿ ಸ್ವಭಾವಬಲತೋऽಖಿಲ ಭೂಪಭೂತಿಂ ಮಯ್ಯಾಕೃಷಂತಿ ನಚವಃಪ್ರತಿಷೇಧಕಾಸ್ತೇ ॥
ತಸ್ಮಾಚ್ಛಮಂ ವ್ರಜಶುಭಾಯಕುಲಸ್ಯತಾತ ಕ್ಷೇಮಾಯನೋಭವತಿ ವೋಬಲವದ್ವಿರೋಧಃ ॥ ೧೦ ॥

ತೇಹಿ – ಆ ಪಾಂಡವರಾದರೂ ಸ್ವಭಾವಬಲತಃ – ಸ್ವಾಭಾವಿಕವಾದ ಭುಜಗಳ ಪರಾಕ್ರಮದಿಂದಲೇ ಅಖಿಲಭೂಪ ಭೂತಿಂ – ಎಲ್ಲಾ ರಾಜರ ಸಂಪತ್ತನ್ನು ಮಯಿ – ನನ್ನಲ್ಲಿ ಆಕೃಷಂತಿ – ಸಮರ್ಪಿಸುತ್ತಾರೆ. ತೇ – ಅವರು ವಃ – ನಿಮಗೆ ಪ್ರತಿಷೇಧಕಾಃ – ವಿರೋಧಿಗಳು ನಚ – ಅಲ್ಲವೇ ಅಲ್ಲ ತಸ್ಮಾತ್ – ಆದ್ದರಿಂದ ಕುಲಸ್ಯ – ವಂಶದ ಶುಭಾಯ – ಮಂಗಲ ಕ್ಕೋಸ್ಕರ ಹೇತಾತ – ಎಲೋಮಗನೇ ಶಮಂ – ಶಾಂತಿಯನ್ನು ವ್ರಜ – ಹೊಂದು ವಃ – ನಿಮಗೆ ಬಲವದ್ವಿರೋಧಃ – ಬಲಿಷ್ಠರಿಂದ ಜಗಳವು ಕ್ಷೇಮಾಯ – ಕುಶಲಕ್ಕೋಸ್ಕರ ನೋ ಭವತಿ – ಆಗುವದಿಲ್ಲ. ॥ ೧೦ ॥

ಏವಂಬ್ರುವತ್ಯಪಿನೃಪೇ ಪುನರಾಹಪಾಪ ಆಶ್ರಿತ್ಯಸೌ ಬಲಮತಂ ಯದಿನೈವ ಪಾರ್ಥಾನ್ ॥
ಅನ್ಯತ್ರಯಾಪಯಸಿನಾಗಪುರಾತ್ಪರೇತಾನ್ ದೃಷ್ಟ್ವಾವಿಲಾನಪಿಹಿನೋ ಮುದಮೇಹಿಪಾರ್ಥೈಃ ॥೧೧॥

ಏವಂ – ಈ ರೀತಿಯಾಗಿ ನೃಪೇ – ಧೃತರಾಷ್ಟ್ರನು ಬ್ರುವತ್ಯಪಿ – ಹೇಳಿದರೂ ಕೂಡ ಪಾಪಃ – ಪಾಪಿಷ್ಠನಾದ ದುರ್ಯೋಧನನು ಸೌ ಬಲಮತಂ – ಶಕುನಿಯ ಅಭಿಪ್ರಾಯವನ್ನು ಆಶ್ರಿತ್ಯ – ಆಶ್ರಯಿಸಿ ಪುನಃ – ಮತ್ತೂ ಆಹ – ಹೇಳಿದನು ಪಾರ್ಥಾನ್ – ಪಾಂಡವರನ್ನು ನಾಗಪುರಾತ್ – ಹಸ್ತಿನಾವತಿ ಪಟ್ಟಣದಿಂದ ಅನ್ಯತ್ರ – ಸ್ಥಳಾಂತರಕ್ಕೆ ನ ಯಾಪಯಸಿ ಯದಿ – ಕಳುಹಿಸದಿದ್ದರೆ ನಃಅವಿಲಾನಪಿ – ನಮ್ಮೆಲ್ಲರನ್ನು ಪರೇತಾನ್ – ಪರಲೋಕವನ್ನು ಹೊಂದಿದವರನ್ನಾಗಿ ಅಂದರೆ ಸತ್ತವರನ್ನಾಗಿ ದೃಷ್ಟ್ವಾ – ನೋಡಿ ಪಾರ್ಥೈಃ – ಪಾಂಡವರಿಂದ ಕೂಡಿಕೊಂಡು ಮುದಂ – ಸಂತೋಷವನ್ನು ಏಹಿ – ಹೊಂದು. ॥ ೧೧ ॥

ಏವಂ ನಿಶಮ್ಯಗದಿತಂ ಸುತಹಾರ್ದಪಾಶೈರಾಕೃಷ್ಯತಾಶುಸ ನೃಪೋऽರಿಧರೇಚ್ಛಯೈವ ॥
ಪ್ರೋವಾಚಪುತ್ರಮಪಿತೇ ಬಲಿನೋಹಿಪಾರ್ಥಾಃ ಶಕ್ಯಾಃ ಪುರಾತ್ತುನಚಯಾಪಯಿತುಂ ಕಥಂಚಿತ್ ॥ ೧೨ ॥

ಸ ನೃಪಃ – ಆ ಧೃತರಾಷ್ಟ್ರನು ಏವಂ – ಹಿಂದೆ ಹೇಳಿದ ಪ್ರಕಾರ ಗದಿತಂ – ಮಗನಿಂದ ಹೇಳಲ್ಪಟ್ಟ ಮಾತನ್ನು ನಿಶಮ್ಯ ಕೇಳಿ ಸುತಹಾರ್ದಪಾಶೈಃ – ಮಗನಲ್ಲಿರುವ ಸ್ನೇಹವೆಂಬ ಹಗ್ಗಗಳಿಂದ ಆಶು – ಕೂಡಲೇ ಅರಿಧರೇಚ್ಛಯೈವ – ಚಕ್ರಧಾರಿಯಾದ ಪರಮಾತ್ಮನ ಇಚ್ಛೆಯಿಂದಲೇ ಆಕೃಷ್ಯತ – ಸೆಳೆಯಲ್ಪಟ್ಟನು ಅಂದರೆ ಮಗನ ಅಧೀನನಾದನು ಹಿ – ಯಾವ ಕಾರಣದಿಂದ ತೇ ಪಾರ್ಥಾಃ – ಆ ಪಾಂಡವರು ಬಲಿನಃ – ಬಲಿಷ್ಠರೋ ಅತಃ – ಆದ್ದರಿಂದ ತೇ – ಆ ಪಾಂಡವರು ಪುರಾತ್ – ಹಸ್ತಿನಾವತಿಯಿಂದ ಕಥಂಚಿತ್ – ಯಾವ ರೀತಿಯಿಂದಲೂ ಯಾಪಯಿತುಂ – ಹೊರಗೆ ಕಳುಹಿಸಲು ನ ಶಕ್ಯಾಃ – ಸಾಧ್ಯವಾಗಲಾರರು. ॥ ೧೨ ॥

ಇತ್ಯುಕ್ತ ಆಹಪಿತರಂ ಶಕುನಿಂ ನಿರೀಕ್ಷ್ಯಸೃಷ್ಟೋ ಮಯಾವಿಧಿರಿಹಾದ್ಯಶೃಣುಷ್ವತಂಚ ॥
ಆಸಂಸ್ತ್ರಯೋದಶಸಮಾ ನಗರಂ ಪ್ರವಿಷ್ಟೇಷ್ವೇತೇಷು ತಾವದಯಮೇವವಿಧಿರ್ಮಯೇಷ್ಟಃ ॥ ೧೩ ॥

ಇತ್ಯುಕ್ತಃ – ಈ ರೀತಿಯಾಗಿ ಹೇಳಿಸಿಕೊಳ್ಳಲ್ಪಟ್ಟ ದುರ್ಯೋಧನನು ಶಕುನಿಂ – ಶಕುನಿಯನ್ನು ನಿರೀಕ್ಷ್ಯ – ನೋಡಿ ಏತೇಷು – ಈ ಪಾಂಡವರು ನಗರಂ – ಹಸ್ತಿನಾವತಿಯನ್ನು ಪ್ರವಿಷ್ಟೇಷುಸತ್ಸು ಪ್ರವೇಶಿಸುತ್ತಿರಲು ಇಹ – ಈ ಪಾಂಡವರನ್ನು ಹಸ್ತಿನಾವತಿಯಿಂದ ಹೊರಡಿಸುವ ವಿಷಯದಲ್ಲಿ ಯಃವಿಧಿಃ – ಯಾವ ಉಪಾಯವು ಸೃಷ್ಟಃ – ವಿಚಾರಿಸಲ್ಪಟ್ಟಿದೆಯೋ ತತಃಪಶ್ಚಾತ್ – ಆದರ ನಂತರ ತ್ರಯೋದಶಸಮಾಃ – ಹದಿಮೂರು ವರ್ಷಗಳು ಆಸನ್ – ಆದವೋ, ತಾವತ್‌ಏವ – ಆ ಹದಿಮೂರು ವರ್ಷಗಳನ್ನಾರಂಭಿಸಿಯೇ ಅಯಂವಿಧಿಃ – ಈ ಉಪಾಯವು ಮಯಾ – ನನ್ನಿಂದ ಇಷ್ಟಃ – ಕರ್ತವ್ಯವೆಂಬುದಾಗಿ ಇಚ್ಛಾವಿಷಯವಾಗಿದೆ. ತಮೇವ ವಿಧಿಂ – ಆ ಉಪಾಯವನ್ನೇ ಅದ್ಯ – ಈಗ ಶೃಣುಷ್ವ – ಕೇಳು ಇತಿ – ಎಂದು ಪಿತರಂ – ತಂದೆಯನ್ನು ಕುರಿತು ಆಹ – ಹೇಳಿದನು. ॥ ೧೩ ॥

ದ್ರೌಣೇರ್ಹಿನಾಸ್ತಿಸದೃಶೋ ಬಲವಾನ್ಪ್ರತಾಪೀಸೋ೭ಯಂಮಯಾ ಬಹುವಿಧೈಃ ಪರಮೈರುಪಾಯೈಃ ॥
ನೀತೋವಶಂ ವಶಗತೋ೭ಸ್ಯಚಮಾತುಲೇನ ಸಾಕಂ ಪಿತಾತನುನುಚ್ಚೈಷನದೀಪ್ರಸೂತಃ ॥ ೧೪ ॥

ದ್ರೌಣೇಃ – ಅಶ್ವತ್ಥಾಮನಿಗೆ ಸದೃಶಃ – ಸಮಾನನಾದ ಬಲವಾನ್ – ಬಲಿಷ್ಠನು ಪ್ರತಾಪೀ – ಪರಾಕ್ರಮವುಳ್ಳವನು ನಾಸ್ತಿ – ಇಲ್ಲ ಹಿ – ಪ್ರಸಿದ್ಧ ಸೋ೭ಯಂ – ಆ ಈ ಅಶ್ವತ್ಥಾಮನು ಮಯಾ – ನನ್ನಿಂದ ಬಹುವಿಧೈಃ – ಅನೇಕ ವಿಧಗಳಾದ ಪರಮೈಃ – ಶ್ರೇಷ್ಠಗಳಾದ ಉಪಾಯೈಃ – ಉಪಾಯಗಳಿಂದ ವಶಂ ನೀತಃ – ವಶವನ್ನು ಹೊಂದಲ್ಪಟ್ಟಿದ್ದಾನೆ. ಅಸ್ಯ – ಈ ಅಶ್ವತ್ಥಾಮನ ಪಿತಾಚ – ತಂದೆಯಾದ ದ್ರೋಣರೂ ಕೂಡ ಮಾತುಲೇನ – ಅಶ್ವತ್ಥಾಮನಸೋದರಮಾವನಾದ ಕೃಪಾಚಾರ್ಯರಿಂದ ಸಾಕಂ – ಕೂಡಿಕೊಂಡು ವಶಗತಃ – ಅಧೀನರಾಗಿರುವರು ಏಷಃ – ಈ ನದೀಪ್ರಸೂತಃ – ಗಂಗಾಪುತ್ರರಾದ ಭೀಷ್ಮರು ತಂ – ಆ ದ್ರೋಣರನ್ನು ಅನು – ಅನುಸರಿಸಿ (ವರ್ತತೇ – ಇರುತ್ತಾರೆ.) ॥ ೧೪ ॥

ಏವಂ ಹಿಸೈನಿಕಗಣಾ ಅಪಿದಾನಮಾನೈಃ ಪ್ರಾಯೋವಶಂಮಮಗತಾ ಅಪಿಚೈಷ ಕರ್ಣಃ ॥
ಅಸ್ತ್ರೇಬಲೇ೭ಪ್ಯಧಿಕ ಏವಸುರೇಂದ್ರಸೂನೋರ್ಜೇಷ್ಯೇಚ ಮಂತ್ರಬಲತಸ್ತ್ವಹಮೇವಭೀಮಂ ॥ ೧೫ ॥

ಏವಂ – ಇದೇ ರೀತಿಯಾಗಿ ಸೈನಿಕಗಣಾ ಅಪಿ – ಸೈನ್ಯಗಳ ಗುಂಪೂ ಕೂಡ ದಾನಮಾನೈಃ – ಹಣ ಕೊಡುವುದು, ಸತ್ಕರಿಸುವುದು ಇವುಗಳಿಂದ ಪ್ರಾಯಃ – ಹೆಚ್ಚಾಗಿ ಮಮ – ನನ್ನ ವಶಂಗತಾಃ – ಅಧೀನರಾಗಿರುವರು ಅಪಿಚ – ಮತ್ತೂ ಕೂಡ ಏಷಕರ್ಣಃ – ಈ ಕರ್ಣನು ಅಸ್ತ್ರೇ – ಅಸ್ತ್ರವಿದ್ಯೆಯಲ್ಲಿಯೂ ಬಲೇ೭ಪಿ – ಸಾಮರ್ಥ್ಯದಲ್ಲಿಯೂ ಕೂಡ ಸುರೇಂದ್ರ ಸೂನೋಃ – ಇಂದ್ರನ ಮಗನಾದ ಅರ್ಜುನನಿಂದ ಅಧಿಕ ಏವ – ಉತ್ತಮನೇ ಆಗಿರುತ್ತಾನೆ. (ಇಂತಹ ಕರ್ಣನು ನಮ್ಮ ಅಧೀನದಲ್ಲಿದ್ದಾನೆ. ಅವನು ಅರ್ಜುನನ್ನು ಕೊಲ್ಲುವನು) ಅಹಮೇಹ – ನಾನೇ ಮಂತ್ರಬಲತಃ – ಮಂತ್ರಗಳ ಸಾಮರ್ಥ್ಯದಿಂದ ಭೀಮಂ – ಭೀಮನನ್ನು ಜೇಷ್ಯೇ – ಗೆಲ್ಲುವೆನು. ॥ ೧೫ ॥

ಭಾ.ಅ. ೯–೧೫ ಈ ರೀತಿಯಾದ ಮಗನ ಮಾತನ್ನು ಕೇಳಿದ ಧೃತರಾಷ್ಟ್ರರಾಜನು "ಗುಣಗಳಿಂದ ಉತ್ತಮರಾದ, ತಮ್ಮ ಪರಾಕ್ರಮದಿಂದ ಸಂಪತ್ತನ್ನು, ಉತ್ಕರ್ಷವನ್ನು ಹೊಂದಿದ ಪಾಂಡವರಲ್ಲಿ ಪ್ರೀತಿಯನ್ನು ಮಾಡದಿರುವವನು ಯಾರು ? ನೀನು ಅವರ ಬಗ್ಗೆ ಹೀಗೆ ಮಾತನಾಡುವದು, ದ್ವೇಷ ಭಾವನೆ ತಾಳುವದು ಸರಿಯಲ್ಲ. ಅವರು ತಮ್ಮ ಬಾಹು ಬಲದಿಂದ ಎಲ್ಲ ರಾಜರನ್ನು ಗೆದ್ದು ಅವರ ಸಂಪತ್ತನ್ನು ನನ್ನ ವಶವನ್ನಾಗಿ ಮಾಡುತ್ತಿದ್ದಾರೆ. ನಿಮಗೆ ಯಾವ ರೀತಿಯ ವಿರೋಧವನ್ನೂ ಮಾಡುತ್ತಿಲ್ಲ. ಆದ್ದರಿಂದ ಕುಲಕ್ಷೇಮಕ್ಕಾಗಿ, ನಮ್ಮ ಕ್ಷೇಮಕ್ಕಾಗಿ ಈ ಭಾವನೆಯನ್ನು ಬಿಟ್ಟು ಬಿಡು; ಬಲಿಷ್ಠರ ವಿರೋಧವು ಕ್ಷೇಮಕರವಲ್ಲ" ಎಂದು ಹೇಳಿದನು. ಧೃತರಾಷ್ಟ್ರನು ಇಷ್ಟು ಹೇಳಿದರೂ ಕೂಡ ಪಾಪಿಷ್ಠನಾದ ದುರ್ಯೋಧನನು ಶಕುನಿಯ ಅಭಿಪ್ರಾಯದಂತೆ "ಅವರನ್ನು ಹಸ್ತಿನಾವತಿಯಿಂದ ಹೊರಗೆ ಕಳಿಸದಿದ್ದರೆ ನಮ್ಮೆಲ್ಲರನ್ನೂ ಮೃತರನ್ನಾಗಿ ನೋಡುವಿ; ಅವರಿಂದಲೇ ಕೂಡಿ ಕೊಂಡು ಸಂತೋಷದಿಂದ ಇರು" ಎಂದು ಹೇಳಿದನು. ಇದನ್ನು ಕೇಳಿದ ಧೃತರಾಷ್ಟ್ರನು ಪುತ್ರಸ್ನೇಹದಿಂದ, ಶ್ರೀಹರೀಚ್ಛೆಯಿಂದಲೇ ಸದ್ಬುದ್ಧಿಯಿಂದ ದೂರಕ್ಕೆ ಸೆಳೆಯಲ್ಪಟ್ಟವನಾಗಿ 'ಬಲಿಷ್ಠರಾದ ಆ ಪಾಂಡವರನ್ನು ಊರಿನಿಂದ ಹೊರಗೆ ಹಾಕಲು ಯಾವರೀತಿಯಿಂದಲೂ ಶಕ್ಯವಿಲ್ಲ' ಎಂದು ಹೇಳಿದನು. ಆಗ ದುರ್ಯೋಧನನು ಶಕುನಿಯ ಮುಖವನ್ನು ನೋಡುತ್ತಾ 'ಈ ಪಾಂಡವರು ಊರಿಗೆ ಬಂದು ಹದಿಮೂರು ವರ್ಷಗಳಾದವು; ಆಗಿನಿಂದಲೇ

ಇವರನ್ನು ಹೊರಹಾಕುವ ಉಪಾಯವನ್ನು ಮಾಡಿಟ್ಟಿದ್ದೇನೆ. ಅದು ಏನೆಂದರೆ ಅಶ್ವತ್ಥಾಮನಿಗೆ ಸದೃಶ ಬಲಿಷ್ಠನು ಪರಾಕ್ರಮಿಯೂ ಇಲ್ಲ. ಅಂಥವನು ಅನೇಕ ಉಪಾಯಗಳಿಂದ ಅವನ ತಂದೆ ದ್ರೋಣಾಚಾರ್ಯ,ಸೋದರಮಾವ ಕೃಪಾಚಾರ್ಯ ಸಮೇತವಾಗಿ ನನ್ನ ವಶಕ್ಕೆ ಬಂದಿದ್ದಾನೆ. ಹಾಗೆಯೇ ಗಂಗಾಪುತ್ರನಾದ ಭೀಷ್ಮನೂ ನನ್ನ ಅಧೀನತೆಯಲ್ಲಿದ್ದಾನೆ. ಅದರಂತೆ ಸೈನಿಕರೂ ದಾನ, ಸ್ಥಾನ ಇತ್ಯಾದಿಗಳಿಂದ ನನ್ನ ವಶಕ್ಕೆ ಬಂದಿದ್ದಾರೆ. ಅಸ್ತ್ರಜ್ಞಾನದಲ್ಲಿ, ಸಾಮರ್ಥ್ಯದಲ್ಲಿ ಅರ್ಜುನನಿಗಿಂತ ಶ್ರೇಷ್ಠನಾದ ಕರ್ಣನೂ ನನ್ನ ವಶದಲ್ಲಿದ್ದು ಅವನು ಅರ್ಜುನನನ್ನು ಗೆಲ್ಲುತ್ತಾನೆ; ನಾನೇ ಮಂತ್ರ ಸಾಮರ್ಥ್ಯವಿಂದ ಭೀಮನನ್ನು ಗೆಲ್ಲುತ್ತೇನೆ.

ತ್ರಿಂಶಚ್ಛತಂ ಪರಮಕಾಃ ಸುರದುರ್ಲಭಾಶ್ಚ ದುರ್ವಾಸಸೋಹಿ ಮನವೋಽದ್ಯಮಯಾಗೃಹೀತಾಃ ।।
ಅನ್ಯತ್ರತೇ ಪ್ರವಿಹಿತಾ ನಹಿವೀರ್ಯವಂತಃಸ್ಯುರ್ಭೀಮ ಇತ್ಯಹಮಮೂನ್ನ ನಿಯೋಜಯಾಮಿ ।। ೧೬ ।।

ತ್ರಿಂಶಚ್ಛತಂ – ಮೂವತ್ತು ನೂರು ಅಂದರೆ ಮೂರುಸಾವಿರ ಸಂಖ್ಯಾಕಗಳಾದ ಪರಮಕಾಃ – ಉತ್ತಮಗಳಾದ ಸುರದುರ್ಲಭಾಃ – ದೇವತೆಗಳಿಗೂ ದುರ್ಲಭಗಳೂದ ದುರ್ವಾಸಸಃ ದುರ್ವಾಸರ ಮನವಃ – ಮಂತ್ರಗಳು ಅದ್ಯ – ಈಗ ಮಯಾ – ನನ್ನಿಂದ ಗೃಹೀತಾಃ – ಸ್ವೀಕರಿಸಲ್ಪಟ್ಟವೆ ಅನ್ಯತ್ರ – ಇತರರಲ್ಲಿ ಪ್ರವಿಹಿತಾಃ – ಪ್ರಯೋಜಿತಗಳಾದ ತೇ – ಆ ಮಂತ್ರಗಳು ಭೀಮೇ – ಭೀಮನಲ್ಲಿ ವೀರ್ಯವಂತಃ – ಸಾಮರ್ಥ್ಯವುಳ್ಳವುಗಳು ಅಂದರೆ ಕಾರ್ಯವನ್ನು ಮಾಡತಕ್ಕವುಗಳು ನ ಸ್ಯುಃ – ಆಗಲಾರವು ಇತಿ – ಈ ಕಾರಣದಿಂದ ಅಹಂ – ನಾನು ಅಮೂನ್ – ಈ ಮಂತ್ರಗಳನ್ನು ಅನ್ಯತ್ರ – ಬೇರೆ ಕಡೆ ನ ನಿಯೋಜಯಾಮಿ ಪ್ರಯೋಗಿಸುವುದಿಲ್ಲ. ॥ ೧೬ ॥

ತೇವೀರ್ಯದಾ ವಿಜಯದಾ ಅಪಿ ವಹ್ನಿವಾರಿಸ್ತಂಭಾದಿದಾಃ ಸಕಲದೇವ ನಿಕಾಯರೋಧಾಃ ।।
ವೃಷ್ಟ್ಯಾದ್ಯಭೀಪ್ಸಿತ ಸಮಸ್ತಕರಾ ಅಮೂಭಿರ್ಜೇಷ್ಯಾಮಿಭೀಮಮಮುಮೇಕಮಯಾತಯಾಮೈಃ।।೧೭।।

ತೇ - ಆ ಮಂತ್ರಗಳು ವೀರ್ಯದಾಃ – ಸಾಮರ್ಥ್ಯವನ್ನು ಕೊಡತಕ್ಕವುಗಳು ವಿಜಯದಾಃ – ವಿಶೇಷವಾದ ಜಯವನ್ನು ಕೊಡತಕ್ಕವುಗಳು ವಹ್ನಿವಾರಿ ಸ್ತಂಭಾದಿದಾಃ – ಬೆಂಕಿಯ ಸ್ತಂಭನ, ನೀರಿನ ಸ್ತಂಭನ ಮೊದಲಾದವುಗಳನ್ನು ಕೊಡತಕ್ಕವುಗಳು, ಸಕಲದೇವನಿಕಾಯರೋಧಾಃ - ಎಲ್ಲಾ ದೇವತೆಗಳ ಸಮೂಹಗಳನ್ನು ತಡೆಯತಕ್ಕವುಗಳು ವೃಷ್ಟ್ಯಾದ್ಯಭೀಪ್ಸಿತಸಮಸ್ತ ಕರಾಃ – ಮಳೆಯೇ ಮೊದಲಾದ, ಇಷ್ಟಗಳಾದ ಎಲ್ಲಾ ಪದಾರ್ಥಗಳನ್ನುಂಟು ಮಾಡತಕ್ಕವುಗಳು ಅಯಾತಯಾಮೈಃ – ಗತಸಾರವಲ್ಲದ ಅಥವಾ ಜಪತರ್ಪಣಾದಿಗಳನ್ನು ಮಾಡದೇ ವ್ಯರ್ಥವಾಗಿ ಹೋದಯಾಮವಿಲ್ಲದಿರುವ ಅಮೂಭಿಃ – ಈ ಮಂತ್ರಗಳಿಂದ ಅಮುಂ ಏಕಂ ಭೀಮಂ - ಈ ಒಬ್ಬ ಭೀಮನನ್ನು ಜೇಷ್ಯಾಮಿ – ಗೆಲ್ಲುವೆನು. ॥ ೧೭ ॥

ಸೌ ಹಾರ್ದಮೇಷುಯದಿವಾತಿತರಾಂ ಕರೋಷಿ ತತ್ರಾಪಿನೈವಹಿ ಮಯಾಕ್ರಿಯತೇವಿರೋಧಃ ।।
ವತ್ಸ್ಯಂತು ವಾರಣವತೇ ಭವತುಸ್ಮರಾಷ್ಟ್ರಂ ತೇಷಾಂ ತದೇವಮಮ ನಾಗಪುರಂತ್ವದರ್ಥೇ ।। ೧೮ ।।

ಏಷು – ಈ ಪಾಂಡವರಲ್ಲಿ ಸೌಹಾರ್ದಂ – ಸ್ನೇಹವನ್ನು ಅತಿತರಾಂ – ಚೆನ್ನಾಗಿ ಕರೋಷಿಯದಿ – ಮಾಡುವಿಯಾದರೆ ತತ್ರಾಪಿ – ಆ ಸ್ನೇಹಮಾಡುವ ವಿಷಯದಲ್ಲಿಯೂ ಮಯಾ – ನನ್ನಿಂದ ವಿರೋಧಃ – ವಿರೋಧವು ನೈವಕ್ರಿಯತೇ – ಮಾಡಲ್ಪಡುವುದೇ ಇಲ್ಲ ತೇ – ಅವರು ವಾರಣವತೇ – ವಾರಣವತ ನಗರದಲ್ಲಿ ವತ್ಸ್ಯಂತು – ವಾಸಮಾಡಲಿ ತೇಷಾಂ – ಆ ಪಾಂಡವರಿಗೆ ತದೇವ - ಆ ವಾರಣವತವೇ ರಾಷ್ಟ್ರಂಭವತು – ರಾಜ್ಯವಾಗಲಿ ತ್ವದರ್ಥೇ – ನಿನ್ನ ಮಾತನ್ನು ನಡೆಸುವುದಕ್ಕಾಗಿ ಮಮ – ನನಗೆ ನಾಗಪುರಂ – ಹಸ್ತಿನಾವತಿಯು ರಾಜ್ಯವಾಗಲಿ. ॥ ೧೮ ॥

ಏವಂ ಸ್ವಪುತ್ರಪರಿಪಾಲನತೋಯಶಸ್ತೇಭೂಯಾದ್ವಿನಶ್ಯತಿ ಪರಪ್ರಸವಾತಿಪುಷ್ಟೌ ।।
ಜಾತೇಬಲೇತವ ವಿರೋಧಕೃತಶ್ಚತೇ ಸ್ಯುಃಸ್ವಾರ್ಥಂಹಿತಾವದಸುಯಾಂತ್ಯಪಿ ಕೇವಲಂತ್ವಾಂ ।। ೧೯ ।।

ಏವಂ – ಈ ರೀತಿಯಾಗಿ ಸ್ವಪುತ್ರಪರಿಪಾಲನತಃ – ತನ್ನ ಮಕ್ಕಳ ರಕ್ಷಣೆಯಿಂದ ತೇ – ನಿನಗೆ ಯಶಃಭೂಯಾತ್ – ಕೀರ್ತಿಯು ಉಂಟಾಗುವುದು ಪರಪ್ರಸವಾತಿಪುಷ್ಟೌ – ಇತರರಿಂದ ಉತ್ಪತ್ತಿಯಳ್ಳ ಪಾಂಡವರ ವೃದ್ಧಿಯಲ್ಲಿ ತೇಯಶಃ –

ವಿನಶ್ಯತಿ – ನಿನ್ನ ಕೀರ್ತಿಯು ನಾಶವಾಗುವುದು ತೇ ಅವರು ತಾವತ್ – ಈಗ ಕೇವಲಂಸ್ವಾರ್ಥಂ – ತಮ್ಮ ಪ್ರಯೋಜನ ಕ್ಕೋಸ್ಕರವೇ ತ್ವಾಂ – ನಿನ್ನನ್ನು ಅನುಯಾಂತಿ – ಅನುಸರಿಸುತ್ತಾರೆ ಬಲೇ ತಮಗೆ ಸಾಮರ್ಥ್ಯವು ಜಾತೇಸತಿ – ಉಂಟಾಗು ತ್ತಿರಲು ತವ ನಿನಗೆ ವಿರೋಧಕೃತಶ್ಚ – ಜಗಳವನ್ನು ಮಾಡತಕ್ಕವರೂ ಕೂಡ ಸ್ಯುಃ – ಆಗುವರು. ॥ ೧೯ ॥

ಕ್ಷತ್ತೈಕಪಿವ ಸತತಂ ಪರಿಪೋಷಕೋಽಲಂ ತೇಷಾಂಮಮ ದ್ವಿಡಥಮುಂತ್ರಬಲಾದಮುಷ್ಯ ॥
ಪೌರಾಶ್ಚ ಜಾನಪದಿಕಾಃಸತತಂದ್ವಿಷಂತಿ ಮಾಂತೇಷ್ವತೀವದೃಢ ಸೌಹೃದಚೇತಸಶ್ಚ ॥ ೨೦ ॥

ಕ್ಷತ್ತೈಕಪಿವ – ವಿದುರನೊಬ್ಬನೇ ತೇಷಾಂ – ಆ ಪಾಂಡವರಿಗೆ ಸತತಂ – ಯಾವಾಗಲೂ ಅಲಂ – ಚೆನ್ನಾಗಿ ಪರಿ ಪೋಷಕಃ ವೃದ್ಧಿಯನ್ನುಂಟು ಮಾಡತಕ್ಕವನು ಮಮ – ನನ್ನ ದ್ವಿಟ್ – ದ್ವೇಷಿಯು ಅಥ – ಅನಂತರ ಅಮುಷ್ಯ – ಈ ವಿದುರನ ಮಂತ್ರಬಲಾತ್ – ಆಲೋಚನೆಯ ಬಲದಿಂದ ಪೌರಾಃ ಪಟ್ಟಣಿಗರು ಜಾನಪದಿಕಾಶ್ಚ – ಹಳ್ಳಿಯಲ್ಲಿರುವವರೂ ಕೂಡ ಸತತಂ – ಯಾವಾಗಲೂ ಮಾಂ ನನ್ನನ್ನು ದ್ವಿಷಂತಿ – ದ್ವೇಷಿಸುತ್ತಾರೆ ತೇಷು – ಆ ಪಾಂಡವರಲ್ಲಿ ಅತೀವ ದೃಢ ಸೌಹೃದಚೇತಸಶ್ಚ ಅತ್ಯಂತ ಚಂಚಲವಲ್ಲದ ಸ್ನೇಹದಿಂದ ಕೂಡಿದ ಮನಸ್ಸುಳ್ಳವರು ॥ ೨೦ ॥

ಏತೇಷು ದೂರಗಮಿತೇಷು ನಿರಾಶ್ರಯತ್ವಾನ್ಮಾಮೇವ ದುರ್ಬಲತಯಾ ಪರಿತಃಶ್ರಯಂತೇ ॥
ಭೀಷ್ಮಾದಯಶ್ಚ ನಹಿ ತನ್ನಿಕಟೇವಿರೋಧಂ ಕುರ್ಯುರ್ವಿನಶ್ಯತಿ ಗತೇಷುಹಿಸೌಹೃದಂತತ್ ॥ ೨೧ ॥

ಏತೇಷು – ಈ ಪಾಂಡವರು ದೂರಗಮಿತೇಷುಸತ್ಸು – ದೂರ ಪ್ರದೇಶವನ್ನು ಕುರಿತು ಕಳುಹಿಸಲ್ಪಡುತ್ತಿರಲು ನಿರಾಶ್ರಯತ್ವಾತ್ ಆಶ್ರಯವಿಲ್ಲದವರಾಗುವದರಿಂದ ದುರ್ಬಲತಯಾ – ಬಲವಿಲ್ಲದವರಾಗುವದರಿಂದ (ಸರ್ವೇ – ಎಲ್ಲ ಜನರೂ) ಮಾಮೇವ – ನನ್ನನ್ನೇ ಪರಿತಃ – ಎಲ್ಲಾ ರೀತಿಯಿಂದಲೂ ಶ್ರಯಂತೇ ಆಶ್ರಯಿಸುತ್ತಾರೆ. ತನ್ನಿಕಟೇ – ಪಾಂಡವರ ಸನ್ನಿಧಾನದಲ್ಲಿ ಭೀಷ್ಮಾದಯಶ್ಚ – ಭೀಷ್ಮ, ದ್ರೋಣಾದಿಗಳೂ ಕೂಡ ವಿರೋಧಂ – ಅವರ ವಿರೋಧವನ್ನು ನಕುರ್ಯುಃ – ಮಾಡಲಾರರು ಗತೇಷುಸತ್ಸು ಪಾಂಡವರು ದೂರ ಪ್ರದೇಶಕ್ಕೆ ಹೋಗುತ್ತಿರಲು (ಪಾಂಡವರಿಗೆ) ತತ್ ಸೌಹೃದಂ – ಈಗ ಇರತಕ್ಕ ಸ್ನೇಹವು ವಿನಶ್ಯತಿ ನಷ್ಟವಾಗುವುದು. ॥ ೨೧ ॥

ಭೇದಃ ಕುಲಸ್ಯಭವಿತಾ ಕುಲನಾಶಹೇತುರಸ್ಮಾಭಿರೇಷು ಸಹಿತೇಷು ಪುರೇವಸತ್ಸು ॥
ತಸ್ಮಾದುಪಾಯಬಲತಃಪ್ರತಿಯಾಪನೀಯಾಸ್ತೇ ವಾರಣಾವತಮಿತೋ ವಿಹಿತೋಽಪ್ಯುಪಾಯಃ ॥ ೨೨ ॥

ಯತ್ ಯಾವ ಕಾರಣದಿಂದ ಅಸ್ಮಾಭಿಃ – ನಮ್ಮಿಂದ ಸಹಿತೇಷು – ಯುಕ್ತರಾದ ಏಷು – ಈ ಪಾಂಡವರು ಪುರೇ – ಹಸ್ತಿನಾವತಿ ಪಟ್ಟಣದಲ್ಲಿ ವಸತ್ಸುಸತ್ಸು – ವಾಸಮಾಡಿಕೊಂಡಿರುತ್ತಿರಲು ಕುಲಸ್ಯ–ವಂಶಕ್ಕೆ ಭೇದಃ – ವಿರೋಧವು ಭವಿತಾ– ಆಗುವುದೋ ಸಃ– ಆ ವಿರೋಧವಾದರೂ ಕುಲನಾಶಹೇತುಃ–ವಂಶದ ನಾಶಕ್ಕೆ ಕಾರಣವಾದದ್ದೋ ತಸ್ಮಾತ್–ಆ ಕಾರಣ ದಿಂದ ಇತಃ ಈ ಹಸ್ತಿನಾವತಿಯ ದೆಸೆಯಿಂದ ಉಪಾಯಬಲತಃ–ಉಪಾಯದ ಸಾಮರ್ಥ್ಯದಿಂದ ತೇ–ಆ ಪಾಂಡವರು ವಾರಣಾವತಂ ಪ್ರತಿ–ವಾರಣಾವತವನ್ನು ಕುರಿತು ಯಾಪನೀಯಾಃ–ಕಳುಹಿಸಲು ಯೋಗ್ಯರು ಅಯಂ ಈ ಉಪಾಯಃ– ಉಪಾಯವು ನಮ್ಮ ನಗರಕ್ಕೆ ಸಮಾನವಾದ ನಗರದಾನ ನಿಮಿತ್ತದಿಂದ ವಿಹಿತೋಪಿ–ನಿರ್ಮಿತವೂ ಆಗಿದೆ. ॥ ೨೨ ॥

ಭಾ.ಅ. ೧೬–೨೨ ದುರ್ವಾಸರಿಂದ ನಾನು ಸ್ವೀಕರಿಸಿದ ಮೂರುಸಾವಿರ ಮಂತ್ರಗಳು ಇವೆ. ಅವು ದೇವತೆ ಗಳಿಗೂ ಸಿಗಲಶಕ್ಯವಾದವುಗಳು. ವೃಷ್ಟಿ ವಿಜಯ ಮೊದಲಾದ ಎಲ್ಲ ಅಭೀಷ್ಟಗಳನ್ನುಂಟು ಮಾಡುವವು ಎಲ್ಲ ಕಷ್ಟಗಳನ್ನೂ ಪರಿಹರಿಸುವವು ಅಗ್ನಿ, ನೀರು ಇವುಗಳ ಶಕ್ತಿಯನ್ನೇ ಸ್ತಂಭನ ಮಾಡಬಹುದಾದ ಮಂತ್ರಗಳು. ಎಲ್ಲ ದೇವತೆಗಳಿಗೂ ತೊಂದರೆ ಕೊಡುವ ಮಂತ್ರಗಳು. ನಿತ್ಯ ಜಪಿಸದೇ ಹೋದರೆ ಫಲಪ್ರದವಾಗುವದಿಲ್ಲವಾದ್ದರಿಂದ ಅವುಗಳ ಜಪಮಾಡದೇ ಇದ್ದ ದಿನವೇ ಇಲ್ಲ ಬೇರೆ ಕಡೆಗೆ ಅವುಗಳ ಪ್ರಯೋಗ ಮಾಡಿದರೆ ಅವುಗಳ ಸಾಮರ್ಥ್ಯ ಕಮ್ಮಿ ಆದೀತೆಂದು ಭೀಮನ ಮೇಲೆ ಪ್ರಯೋಗಿಸುವದಕ್ಕಾಗಿಯೇ ಕಾಯ್ದು ಇಟ್ಟಿದ್ದೇನೆ. ಅವುಗಳಿಂದ ಆ ಭೀಮನೊಬ್ಬನನ್ನು ಗೆಲ್ಲುವೆನು. ಇಷ್ಟೇ

ಅಲ್ಲದೆ ನೀನು ಅವರ ಮೇಲೆ ಹೆಚ್ಚಿನ ಪ್ರೀತಿಯನ್ನು ಮಾಡುವದಾದರೆ ಅದರ ಬಗ್ಗೆ ನನ್ನ ವಿರೋಧವೇನೂ ಇಲ್ಲ. ಆದರೆ ನಿನಗೆ ತನ್ನ ಮಕ್ಕಳನ್ನು ಹಾಳು ಮಾಡಿದ ಎಂಬ ಅಪಯಶಸ್ಸು ಬರಬಾರದು ಎಂಬ ಕಾರಣದಿಂದ ಅವರು ವಾರಣವತಕ್ಕೆ ಹೋಗಲಿ; ನಮಗೆ ಈ ಹಸ್ತಿನಾವತಿಯು ಇರಲಿ. (ಅರಗಿನ ಮನೆಗೆ ಕಳಿಸಿ ಸುಡುವ ದುರುದ್ದೇಶದಿಂದ ಆಡಿದ ಮಾತಿದು ಹೊರತು; ವಿರೋಧವಿಲ್ಲ ಎಂದು ಅಲ್ಲ). ಪರ ಸಂತತಿಯನ್ನು ಹೆಚ್ಚು ರಕ್ಷಿಸಿದರೆ ಸ್ವ ಸಂತತಿಯನ್ನು ರಕ್ಷಿಸಿದ ಯಶಸ್ಸೂ ನಷ್ಟವಾದೀತು. ಅಲ್ಲದೇ ನಿನ್ನನ್ನು ಅವರು ಈಗ ಅನುಸರಿಸಿರುವದು ಸ್ವಾರ್ಥಕ್ಕಾಗಿ ಹೊರತು; ಸದ್ಭಾವನೆಯಿಂದಲ್ಲ. ತಾವು ಬಲಿಷ್ಠರಾದ ಮೇಲೆ ನಿನ್ನ ವಿರೋಧವನ್ನು ಮಾಡುತ್ತಾರೆ. ಆ ವಿದುರನೊಬ್ಬನು ಯಾವಾಗಲೂ ಅವರ ಪಕ್ಷಕ್ಕಿದ್ದು ಪ್ರೋತ್ಸಾಹಕನಾಗಿರುವನು. ನನ್ನ ವಿರೋಧಿಯಾಗಿರುವನು. ಅವನ ಗುಪ್ತವಿಚಾರಗಳಿಂದ ಊರಿನ, ರಾಜ್ಯದ ಪ್ರಜೆಗಳೂ ಕೂಡ ಆ ಪಾಂಡವರ ಬಗ್ಗೆ ಬಹಳ ಸ್ನೇಹವುಳ್ಳವರಾಗಿ ನನ್ನನ್ನು ದ್ವೇಷಿಸುತ್ತಾರೆ. ಆ ಪಾಂಡವರೇ ದೂರ ಹೋಗಿ ಬಿಟ್ಟರೆ, ಬೇರೆ ಆಶ್ರಯವಿಲ್ಲದೆ ನನ್ನನ್ನೇ ಆ ಜನರೆಲ್ಲ ಆಶ್ರಯಿಸುತ್ತಾರೆ. ಸಂಪರ್ಕ ತಪ್ಪಿದ ಮೇಲೆ ಅವರ ಮೇಲೆ ಪ್ರೀತಿಯೂ ಕಡಿಮೆಯಾಗುತ್ತದೆ. ಭೀಷ್ಮಾದಿಗಳೂ ಕೂಡ ಪಾಂಡವರು ಇಲ್ಲಿರುವಾಗ ಅವರ ವಿರೋಧವನ್ನು ಮಾಡಲಾರರು. ದೂರ ರಾದಾಗ ಅವರಿಗೂ ಸ್ನೇಹ ಕಡಿಮೆಯಾದೀತು. ಇಲ್ಲಿಯೇ ನಮ್ಮ ಜೊತೆಗೆ ಇದ್ದರೆ ನಮಗೂ ಅವರಿಗೂ ಜಗಳವೂ ಪ್ರಾರಂಭವಾಗಬಹುದು; ಅದರಿಂದ ಇಡೀ ಕುಲವೇ ನಷ್ಟವಾಗಬಹುದು. ಆದ್ದರಿಂದ ಉಪಾಯದಿಂದ ಅವರನ್ನು ಇಲ್ಲಿಂದ ಹೊರಗೆ ಕಳಿಸಬೇಕು. ಅದಕ್ಕಾಗಿಯೂ ಉಪಾಯ ಮಾಡಲ್ಪಟ್ಟಿದೆ.

ವಿಷ್ಣುರ್ಜಯಂತ ಇತಿ ಶಂಭು ಸಹಾಯ ಆಸ್ತೇದೇವೋತ್ಸವಶ್ಚ ಸುಮಹಾನ್ಭವಿತಾತ್ರಸುಷ್ಠು ॥
ಭಕ್ತಾಶ್ಚತೇಹಿ ನಿತರಾಮರಿಶಂಖಪಾಣೌ ತ್ವಚ್ಚೋದಿತಾಃ ಸಮುಪಯಾಂತಿತಮುತ್ಸವಂದ್ರಾಕ್ ॥ ೨೩ ॥

ಅತ್ರ ಈ ವಾರಣಾವತದಲ್ಲಿ ಶಂಭುಸಹಾಯಃ - ರುದ್ರನು ಸಹಾಯಕನಾಗಿ ಉಳ್ಳ ಜಯಂತಃ - ಜಯಂತನಾಮಕ ನಾದ ವಿಷ್ಣುಃ – ನಾರಾಯಣನು ಆಸ್ತೇ – ಇದ್ದಾನೆ ಅಲ್ಲಿ ವಿಷ್ಣು ಮತ್ತು ರುದ್ರದೇವಾಲಯಗಳಿರಡಿವೆ ತತ್ರ – ಅಲ್ಲಿ ಸುಮಹಾನ್ – ಅತಿ ದೊಡ್ಡ, ದೇವೋತ್ಸವಶ್ಚ – ದೇವರ ಉತ್ಸವವೂ ಕೂಡ ಸುಷ್ಠು – ಒಳ್ಳೇ ರೀತಿಯಿಂದ ಭವಿತಾ – ಆಗುವುದು ತೇ – ಆ ಪಾಂಡವರು ಅರಿಶಂಖಪಾಣೌ – ಚಕ್ರವೂ ಶಂಖವೂ ಕೈಯಲ್ಲಿರುವ ಶ್ರೀಹರಿಯಲ್ಲಿ ನಿತರಾಂ – ಚೆನ್ನಾಗಿ ಭಕ್ತಾಃ – ಭಕ್ತರು ತೇ – ಅವರು ತ್ವಚ್ಚೋದಿತಾಃಸಂತಃ ನಿನ್ನಿಂದ ಪ್ರೇರಿಸಲ್ಪಟ್ಟವರಾಗಿ ತಂ ಉತ್ಸವಂ – ಆ ಉತ್ಸವವನ್ನು ನೋಡಲು ದ್ರಾಕ್ – ಕೂಡಲೇ ಸಮುಪಯಾಂತಿ – ಭಕ್ತಿಯಿಂದ ಹೋಗುತ್ತಾರೆ. ॥ ೨೩ ॥

ಅಜ್ಞಾಪ್ಯಮುತ್ಪುರುಷತಾಂ ಪುರುಷೈರ್ಮದೀಯೈಃ ಮಧ್ಯಸ್ಥವದ್ಬಹುಗುಣಾ ಉದಿತಾಶ್ಚ ತತ್ರ ॥
ತೇಷಾಂಪುರೋಽತ್ರಗಮನಾಭಿರುಚಿಶ ಜಾತಾ ದ್ರಷ್ಟುಂ ಪುರಂಬಹುಗುಣಂ ನನುಪಾಂಡವಾನಾಂ ॥ ೨೪ ॥

ಮತ್ಪುರುಷತಾಂ ನನ್ನ ಭೃತ್ಯತ್ವವನ್ನು ಅಜ್ಞಾಪ್ಯ ಪಾಂಡವರನ್ನು ಕುರಿತು ತಿಳಿಸದೇ ಮದೀಯೈಃ – ನನ್ನವರಾದ ಪುರುಷೈಃ ಭೃತ್ಯರಿಂದ ಮಧ್ಯಸ್ಥವತ್ – ಮಧ್ಯಸ್ಥರಿಂದ ಹೇಗೋ ಹಾಗೆ ಅತ್ರ – ಸಭೆಯಲ್ಲಿ ತೇಷಾಂ – ಪಾಂಡವರ ಪುರಃ – ಮುಂಭಾಗದಲ್ಲಿ ತತ್ರ – ಆ ವಾರಣಾವತದ ಬಗ್ಗೆ ಬಹುಗುಣಾಃ - ಬಹಳ ಗುಣಗಳು ಉದಿತಾಃ—ಹೇಳಲ್ಪಟ್ಟಿವೆ. ಪಾಂಡವಾನಾಂ—ಪಾಂಡವರಿಗೆ ಬಹುಗುಣಂ—ಬಹಳ ಗುಣಗಳುಳ್ಳ ಪುರಂ—ಆ ಪಟ್ಟಣವನ್ನು ದ್ರಷ್ಟುಂ—ನೋಡಲು ಗಮನಾಭಿರುಚಿಶ್ಚ ಹೋಗಲಿಕ್ಕೆ ಇಚ್ಛೆಯೂ ಕೂಡ ಜಾತಾ – ಉಂಟಾಗಿದೆ. ॥ ೨೪ ॥

ಇತ್ಯುಕ್ತವತ್ಯಥಸುತೇಸ ತಥೇತ್ಯುವಾಚ ಪ್ರಾಪ್ತೇಷು ಪಾಂಡುತನಯೇಷು ತದೈವಚೋಚೇ ॥
ಜ್ಞಾತ್ವೈವತೇಽಪಿ ನೃಪತೇ ಹೃದಯಂ ಸಮಸ್ತಂ ಜಗ್ಮುಃಪಿತೇತಿಪೃಥಯಾ ಸಹ ನೀತಿಹೇತೋಃ ॥ ೨೫ ॥

ಇತಿ ಈ ರೀತಿಯಾಗಿ ಸುತೇ ಮಗನು ಉಕ್ತವತಿಸತಿ – ಹೇಳುತ್ತಿರಲು ಅಥ - ಆನಂತರ ಸಃ – ಆ ಧೃತರಾಷ್ಟ್ರನು ತಥೇತಿ – ಹಾಗೆಯೇ ಆಗಲೆಂದು ಉವಾಚ – ಹೇಳಿದನು ತದೈವ – ಆಗಲೇ ಪಾಂಡುತನಯೇಷು — ಪಾಂಡುಪುತ್ರರು ಪ್ರಾಪ್ತೇಷು ಸತ್ಸು – ಬರುತ್ತಿರಲು ಊಚೇ ಹೇಳಿದನು. ತೇಪಿ – ಆ ಪಾಂಡವರಾದರೂ ಸಮಸ್ತಂ – ನಾವು ಹೋಗುವು ದೆಲ್ಲವೂ ನೃಪತೇಃ ಹೃದಯಂ – ರಾಜನಾದ ಧೃತರಾಷ್ಟ್ರನ ಇಷ್ಟವೆಂದು ಜ್ಞಾತ್ವೈವ – ತಿಳಿದುಕೊಂಡೇ ಪಿತೇತಿ – ದೊಡ್ಡಪ್ಪನ

ಮಾತು ಮಾನ್ಯ ಮಾಡಲು ಯೋಗ್ಯವು ಎಂಬ ನೀತಿಹೇತೋಃ – ನ್ಯಾಯಕ್ಕೋಸ್ಕರ ಪೃಥಯಾ – ಕುಂತಿಯಿಂದ ಸಹ – ಕೂಡಿಕೊಂಡು ಜಗ್ಮುಃ – ಹೋದರು. ॥ ೨೫ ॥

ಭೀಮುಸ್ತದಾಹ ಭವಿತಾತ್ರಹಿ ಭೈಕ್ಷ್ಯಚಾರ ಇತ್ಯೇವಸಮ್ಯಗನುವಿದ್ಯ ನಿಜಂನಕರ್ಮ ॥
ತ್ಯಾಜ್ಯಂತ್ವಿತಿ ಪ್ರತಿಜಗಾದ ನಿಜಾಗ್ರಜಾಯ ಯಾವೋವಯಂ ನಹಿಗೃಹಾತ್ಸಹಿನಃ ಸ್ವಧರ್ಮಃ ॥ ೨೬ ॥

ತದಾ – ಆಗ ಭೀಮಃ - ಭೀಮನು ಆಹ - ಹೇಳಿದನು ಅತ್ರ—ಈ ವಾರಣಾವತದಲ್ಲಿ ಭೈಕ್ಷ್ಯಚಾರಃ – ಅನ್ನಕ್ಕಾಗಿ ಸಂಚಾರವು ಅಂದರೆ ಭಿಕ್ಷಾಟನವು ಭವಿತಾ – ಆಗುವದು ನಿಜಂ – ಕ್ಷತ್ರಿಯರಿಗೆ ಯೋಗ್ಯವಾದ ಕರ್ಮ – ಪರರ ಅನ್ನವನ್ನು ಉಪಜೀವಿಸದೇ ಇರುವ ಕೆಲಸವು ನ ತ್ಯಾಜ್ಯಂ – ಬಿಡಲು ಯೋಗ್ಯವಲ್ಲ ಇತಿ ಈ ರೀತಿಯಾಗಿ ಸಮ್ಯಕ್ - ಚೆನ್ನಾಗಿ ಅನುವಿದ್ಯೈವ - ತಿಳಿದುಕೊಂಡೇ ನಿಜಾಗ್ರಜಾಯ ತನ್ನ ಅಣ್ಣನಾದ ಧರ್ಮರಾಜನಿಗೋಸ್ಕರ ಪ್ರತಿಜಗಾದ ಹೇಳಿದನು. ಪಯಂ – ನಾವು ಗೃಹಾತ್ – ಮನೆಯಿಂದ ನ ಯಾಮಃ ಹೊರಟು ಹೋಗುವುದಿಲ್ಲ. ನಃ – ನಮಗೆ ಸಃ – ಮನೆಯಿಂದ ಹೋಗದಿರುವುದೇ ಸ್ವಧರ್ಮೋಹಿ – ನಮಗೆ ವಿಹಿತ ಧರ್ಮವಷ್ಟೆ ॥ ೨೬ ॥

ನಿಷ್ಕಾಸ(ಲ)ಯಂತಿಯದಿನೋ ನಿಜಧರ್ಮಸಂಸ್ಥಾನ್ಕೋತ್ಸ್ಯಾಮಹೇsತ್ರ ನಹಿದಸ್ಯುವಧೋsಪ್ಯಧರ್ಮಃ॥
ಇತ್ಯೂಚಿವಾಂಸಮುಮು ವಾಹಚಧರ್ಮಸೂನುಃ ಕೀರ್ತಿರ್ವಿನಶ್ಯತಿಹಿನೋ ಗುರುಭಿರ್ವಿರೋಧೇ ॥ ೨೭ ॥

ನಿಜಧರ್ಮಸಂಸ್ಥಾನ್ – ನಮ್ಮ ಕ್ಷತ್ರಿಯ ಧರ್ಮದ ರತಕ್ಕ ನಃ – ನಮ್ಮನ್ನು ನಿಷ್ಕಾಸಯಂತಿಯದಿ - ಬಲಾತ್ಕಾರದಿಂದ ಹೊರಹಾಕಿದರೆ ಅತ್ರ – ಇಲ್ಲಿಯೇ ಯೋತ್ಸ್ಯಾಮಹೇ – ಯುದ್ಧ ಮಾಡುವೆವು ದಸ್ಯುವಧಃ – ದುಷ್ಟರ ನಾಶವು ಅಧರ್ಮಃನಹಿ - ಅಧರ್ಮವಲ್ಲವಷ್ಟೇ ಇತಿ – ಈ ರೀತಿಯಾಗಿ ಊಚಿವಾಂಸಂ – ಹೇಳತಕ್ಕ ಅಮುಂ ಈ ಭೀಮನನ್ನು ಕುರಿತು ಧರ್ಮಸೂನುಃ–ಧರ್ಮರಾಜನು ನಃ–ನಮಗೆ ಗುರುಭಿಃ–ಗುರುಗಳಾದ (ಹಿರಿಯರಾದ)ಧೃತರಾಷ್ಟ್ರಾದಿಗಳಿಂದ ವಿರೋಧೇಸತಿ–ಜಗಳವು ಉಂಟಾಗುತ್ತಿರಲು ಕೀರ್ತಿಃ – ಯಶಸ್ಸು ವಿನಶ್ಯತಿ – ನಷ್ಟವಾಗುವುದು ಇತಿ ಎಂದು ಆಹ—ಹೇಳಿದನು. ॥೨೭॥

ಇತ್ಯುಕ್ತವಾಕ್ಯಮುಮು ಮಗ್ರಜಮನ್ವಗಾತ್ಸಭೀಮಃ ಪ್ರದರ್ಶ್ಯನಿಜಧರ್ಮಮಥಾನುವೃತ್ಯೈ ॥
ದೋಷೋಭವೇದುಭಯತೋ ಯತಪಿವತೇನವಾಚ್ಯಃ ಸ್ವಧರ್ಮ ಉತನಸ್ಥಿತಿರತ್ರಕಾರ್ಯಾ ॥ ೨೮ ॥

ಸ ಭೀಮಃ – ಆ ಭೀಮನು ಇತಿ – ಈ ರೀತಿಯಾಗಿ ಉಕ್ತವಾಕ್ಯಂ - ಹೇಳಲ್ಪಟ್ಟಮಾತುಳ್ಳ ಅಗ್ರಜಂ – ಅಣ್ಣನಾದ ಅಮುಂ ಈ ಧರ್ಮರಾಜನನ್ನು ಕುರಿತು ನಿಜಧರ್ಮಂ ತಮ್ಮ ಧರ್ಮವನ್ನು ಪ್ರದರ್ಶ್ಯ—ತೋರಿಸಿ ಅಥ – ಅನಂತರ ಅನುವೃತ್ತ್ಯೈ - ಜೇಷ್ಠನನ್ನು ಅನುಸರಿಸುವುದಕ್ಕಾಗಿ ಅನ್ವಗಾತ್—ಅನುಸರಿಸಿ ಹೋದನು ಉಭಯತಃ—ಧರ್ಮವನ್ನು ತಿಳಿದುಕೊಂಡು ಹೇಳದಿರುವುದು, ಅಣ್ಣನ ಮಾತನ್ನು ಉಲ್ಲಂಘಿಸುವುದು ಈ ಎರಡರಿಂದ ಯತಃ—ಯಾವ ಕಾರಣದಿಂದ ದೋಷ – ಪಾಪವು ಭವೇತ್—ಉಂಟಾಗುವುದೋ ತೇನ—ಆ ಕಾರಣದಿಂದ ತಿಳಿದ ಧರ್ಮವನ್ನು ಹೇಳದಿರುವ ದೋಷ ಪರಿಹಾರಕ್ಕಾಗಿ ಸ್ವಧರ್ಮಃ – ತಮ್ಮ ಧರ್ಮವು ವಾಚ್ಯಃ—ಹೇಳಲು ಯೋಗ್ಯವು ಉತ—ಮತ್ತು ಅಣ್ಣನು ಹೋಗಬೇಕೆಂದು ಹೇಳುವಾಗ ಹೋಗದಿದ್ದರೆ ದೋಷವಿರುವುದರಿಂದ ಅತ್ರ—ಇಲ್ಲಿ ಸ್ಥಿತಿಃ—ವಾಸವು ನ ಕಾರ್ಯಾ—ಮಾಡಲುಯೋಗ್ಯವಲ್ಲ. ॥ ೨೮ ॥

ಅವ — ಹಾಗಾದರೆ ಮನೆಯನ್ನು ಬಿಟ್ಟು ಹೋದರೆ ಸ್ವಧರ್ಮ ತ್ಯಾಗದಿಂದ ದೋಷವು ಪ್ರಾಪ್ತವಾಗುವುದಿಲ್ಲವೇ ಎಂಬ ಶಂಕೆಗೆ ಉತ್ತರವನ್ನು ಹೇಳುತ್ತಾರೆ —

ಕೀರ್ತ್ಯರ್ಥಮೇವ ನಿಜಧರ್ಮಪರಿಪ್ರಹಾಣೇ ಪ್ರಾಪ್ತೇsಗ್ರಜಸ್ಯವಚನಾತ್ಪ್ರತಿಹಾತುಮೇವ ॥
ಭೀಮುಸ್ಯ ದೋಷಮುಭಯಂ ಪ್ರತಿಹಂತುವಿಶೋ ಜ್ಯೇಷ್ಠಂಚಕಾರಹರಿರತ್ರ ಸುತಂ ವೃಷಸ್ಯ ॥ ೨೯ ॥

ಈಶಃ—ಸ್ವಾಮಿಯಾದ ಹರಿಃ—ಪರಮಾತ್ಮನು ಅತ್ರ—ಈ ಲೋಕದಲ್ಲಿ ನಿಜಧರ್ಮಪರಿಪ್ರಹಾಣೇ ಪ್ರಾಪ್ತೇಸತಿ—ತಮ್ಮ ಧರ್ಮದ ನಾಶ ಉಂಟಾಗುತ್ತಿರಲು ಭೀಮಸ್ಯ—ಭೀಮನಿಗೆ ಕೀರ್ತ್ಯರ್ಥಮೇವ—ದೊಡ್ಡಪ್ಪನ ಆಜ್ಞಾಪರಿಪಾಲನ

ರೂಪ ಯಶಸ್ಸಿಗೋಸ್ಕರವೇ ಅಗ್ರಜಸ್ಯ – ಅಣ್ಣನ ವಚನಾದೇವ – ಮಾತಿನಿಂದಲೇ ಪ್ರತಿಹಾತುಂ – ತಮ್ಮ ಧರ್ಮವನ್ನು ಬಿಡುವದಕ್ಕಾಗಿ ಅತಪಿವ – ಆದ್ದರಿಂದಲೇ ಭೀಮಸ್ಯ – ಭೀಮನಿಗೆ ಉಭಯಂ ದೋಷಂಚ – ಸ್ವಧರ್ಮಾತಿಕ್ರಮ ದೋಷವನ್ನೂ ಅಗ್ರಜಾತಿಕ್ರಮ ದೋಷವನ್ನೂ ಕೂಡ ಪ್ರತಿಹಾತುಂ – ನಾಶಮಾಡುವದಕ್ಕಾಗಿ ವೃಷಸ್ಯ – ಯಮನ ಸುತಂ – ಮಗನಾದ ಧರ್ಮರಾಜನನ್ನು ಜ್ಯೇಷ್ಠಂ – ಅಣ್ಣನನ್ನಾಗಿ ಚಕಾರ – ಮಾಡಿದನು. ॥ ೨೯ ॥

ಹಂತವ್ಯತಾಮುಪಗತೇಷು ಸುಯೋಧನಾದಿಷ್ವನ್ಯೋವಧಾನ್ನಹಿ ಭವೇನ್ನಿಜಧರ್ಮಏವ ॥
ಪೂರ್ವಂವಧೇನಹಿ ಸಮುಸ್ತಶಏವ ದೋಷಾಸ್ತೇಷಾಂ ಪ್ರಯಾಂತಿವಿವೃತಿಂಚ ತದರ್ಥತೋಽಪಿ ॥ ೩೦ ॥

ಧರ್ಮರಾಜನನ್ನು ಜ್ಯೇಷ್ಠನನ್ನಾಗಿ ಮಾಡಲು ಪ್ರಯೋಜನಾಂತರವನ್ನು ಹೇಳುತ್ತಾರೆ.

ಸುಯೋಧನಾದಿಷು – ದುರ್ಯೋಧನಾದಿಗಳು ತದೈವ – ಆಗಲೇ ಹಂತವ್ಯತಾಂ ಅಪರಾಧಿಗಳಾದ್ದರಿಂದ ಕೊಲ್ಲಲು ಯೋಗ್ಯತೆಯನ್ನು ಉಪಗತೇಷುಸತ್ಸು – ಹೊಂದುತ್ತಿರಲು ವಧಾದನ್ಯಃ – ಸಂಹಾರಕ್ಕಿಂತ ಬೇರೆಯಾದುದು ನಿಜಧರ್ಮಃ – ತಮ್ಮ ಧರ್ಮವು ನ ಭವೇದೇವ ಸರ್ವಥಾ ಆಗಲಾರದು. ಹಾಗಾದರೆ ತಮ್ಮ ಧರ್ಮರಕ್ಷಣೆಗಾಗಿ ಅವರನ್ನು ಕೊಲ್ಲಬಹುದಷ್ಟೇ ಅಂದರೆ ಅದೂ ಸರಿಯಲ್ಲ. ಏಕೆಂದರೆ ಪೂರ್ವಂ – ಮೊದಲು ಅಂದರೆ ನಮ್ಮನ್ನು ಮನೆಯಿಂದ ಹೊರಡಿಸುವ ಪ್ರಥಮಾಪರಾಧ ಸಮಯದಲ್ಲಿಯೇ ತೇಷಾಂ ವಧೇಸತಿ – ದುರ್ಯೋಧನಾದಿಗಳ ನಾಶವಾಗುತ್ತಿರಲು ತೇಷಾಂ – ಆ ದುರ್ಯೋಧನಾದಿಗಳ ಸಮುಸ್ತಶಃದೋಷಾಃ – ಮುಂದೆ ಮಾಡತಕ್ಕ ನಮ್ಮನಾಶಕ್ಕೋಸ್ಕರ ಲಾಕ್ಷಾಗೃಹನಿರ್ಮಾಣ ದ್ರೌಪದಿಯ ಕೇಶಗ್ರಹಣ, ಕೃಷ್ಣನನ್ನು ಕಟ್ಟುವ ಉದ್ಯೋಗ ಮೊದಲಾದ ವಿಷ್ಣು, ವೈಷ್ಣವರ ದ್ರೋಹರೂಪವಾದ ಎಲ್ಲಾ ದೋಷಗಳು ವಿವೃತಿಂ – ಲೋಕದಲ್ಲಿ ಪ್ರಸಿದ್ಧಿಯನ್ನು ನ ಪ್ರಯಾಂತಿ – ಹೊಂದುವುದಿಲ್ಲ ಅದಕ್ಕಾಗಿಯೂ ಧರ್ಮರಾಜನನ್ನು ಅನುಸರಿಸಿ ಹೋದನು. ॥ ೩೦ ॥

ಭಾ.ಅ. ೨೩–೩೦ ಆ ವಾರಣವತದಲ್ಲಿ ರುದ್ರದೇವಾಲಯವೂ ರುದ್ರರಕ್ಷಕನಾದ, ಜಯಂತ ಎಂಬ ಹೆಸರಿನ ವಿಷ್ಣುವಿನ ದೇವಾಲಯವೂ ಇದೆ. ದೊಡ್ಡ ಉತ್ಸವವೂ ಅಲ್ಲಿದೆ; ಅಲ್ಲಿಗೆ ಹೋಗಲು ಇಚ್ಛೆ ಹುಟ್ಟುವಂತೆ ವಾರಣಾವತವನ್ನೂ, ದೇವಾಲಯವನ್ನೂ, ಉತ್ಸವವನ್ನೂ ಪ್ರಶಂಸಿಸುವ ಕಾರ್ಯವನ್ನು ನನ್ನ ಸೇವಕರು (ನನ್ನ ಪಕ್ಷದವರಿವರು ಎಂದು ತಿಳಿಸದಂತೆ) ಸಾಮಾನ್ಯ ಜನರಂತೆ ಮಾಡುತ್ತಲಿದ್ದಾರೆ. ಅಲ್ಲಿಗೆ ಹೋಗುವ ಇಚ್ಛೆಯೂ ಆ ಪಾಂಡವರಿಗೆ ಹುಟ್ಟಿದೆ.” ಈ ರೀತಿಯಾಗಿ ಹೇಳಿದನು. ಆಗ ಧೃತರಾಷ್ಟ್ರನು ಹಾಗೆ ಆಗಲಿ ಎಂದು ಹೇಳಿ ಪಾಂಡವರಿಗೆ ಅದೇ ರೀತಿಯಾಗಿ ತಿಳಿಸಿದನು. ಅವರಾದರೂ ಧೃತರಾಷ್ಟ್ರನ ಮನಸ್ಸಿನಲ್ಲಿದ್ದುದನ್ನು ಎಲ್ಲ ತಿಳಿದೂ, ಕಕ್ಕನ ಮಾತನ್ನು ನಡೆಸಬೇಕು ಎಂಬ ಲೋಕ ನೀತಿಗೆ ಅನುಸಾರವಾಗಿ ಹೊರಡಲು ಸಿದ್ಧರಾದರು. ಆಗ ಭೀಮಸೇನದೇವರು ಎಲ್ಲವನ್ನು ತಿಳಿದು (ದುರ್ಯೋಧನನ, ಶಕುನಿಯ ಕಾರಸ್ಥಾನವಿದು ಎಂದು) ನಮ್ಮ ಸ್ಥಾನವನ್ನು ಬಿಟ್ಟು ಹೋದರೆ, ಭಿಕ್ಷಾಚರಣ ಮಾಡುವ ಪ್ರಸಂಗ ಬರುವದು, ಪರಾನ್ನದಿಂದ ಬದುಕುವುದು ನಮ್ಮ ಸ್ವಧರ್ಮವಲ್ಲ. ಪರಾನ್ನವನ್ನು ಸ್ವೀಕರಿಸದಿರುವದು ನಮ್ಮ ಧರ್ಮವು. ಅದನ್ನು ತ್ಯಜಿಸಬಾರದು ಎಂದು ತಿಳಿದು ಅಣ್ಣನಿಗೆ ಹಾಗೆ ಹೇಳುತ್ತಾರೆ; ಮತ್ತು ನಾವು ಊರನ್ನು ಬಿಡುವದೇ ಬೇಡ; ಒಂದು ವೇಳೆ ಬಲಾತ್ಕಾರದಿಂದ ಹೊರ ಹಾಕಲು ಬಂದರೆ, ಯುದ್ಧ ಮಾಡೋಣ; ಆ ದುಷ್ಟರನ್ನು ಸಂಹರಿಸೋಣ. ದುಷ್ಟರ ಸಂಹಾರವು ಅಧರ್ಮವಲ್ಲ” ಎಂದೂ ಕೂಡ ಹೇಳಿದಂಥ ಶ್ರೀಭೀಮಸೇನರನ್ನು ಕುರಿತು ಧರ್ಮರಾಜನು “ಹಿರಿಯರಾದ ಭೀಷ್ಮದ್ರೋಣಾದಿಗಳಿಂದ ವಿರೋಧ (ಯುದ್ಧ ಮಾಡಿದರೆ) ಧೃತರಾಷ್ಟ್ರನ ವಿರೋಧ (ಮಾತು ನಡೆಸದಿದ್ದರೆ) ಮಾಡಿದರೆ ನಮ್ಮ ಕೀರ್ತಿಯು ನಾಶ ಹೊಂದುವದು” ಎಂದು ಹೇಳಿದನು. ಆಗ ಹಾಗೆ ಹೇಳಿದ ಅಣ್ಣನನ್ನು ಅನುಸರಿಸಿ ಶ್ರೀಭೀಮಸೇನರೂ ಹೊರಟರು. ಈ ಸಂದರ್ಭದಲ್ಲಿ ಸರ್ವಜ್ಞರಾದ ಆಚಾರ್ಯರು ನಿರ್ಣಯಕೊಟ್ಟಿದ್ದಾರೆ. “ಧರ್ಮವಿರುದ್ಧವಾದದ್ದನ್ನು ಹೇಳುತ್ತಿರುವಾಗ ಅದು ತಪ್ಪು ಎಂದು ಗೊತ್ತಿದ್ದವರು ಹಾಗೆ ಹೇಳದಿರುವದು ಅಧರ್ಮವಾದದ್ದರಿಂದ ಧರ್ಮರಾಜನಿಗೆ ತಮ್ಮ ಅಭಿಪ್ರಾಯವನ್ನು ತಿಳಿಸಿಬಿಟ್ಟರು. ಅಣ್ಣನ ಮಾತನ್ನು ಉಲ್ಲಂಘಿಸಬಾರದಾದ್ದರಿಂದ (ಉಲ್ಲಂಘಿಸುವದು ಅಧರ್ಮವಾದ್ದರಿಂದ) ಅನುಸರಿಸಿ ಹೊರಟರು. ಶ್ರೀ ಭೀಮಸೇನರ ಭಾಗವತಧರ್ಮ ಪರಿಪಾಲನವನ್ನು ಸರಿಯಾಗಿ ನಡೆಸುವದಕ್ಕಾಗಿಯೇ ಶ್ರೀಭೀಮಪಡನ್ನು ತಮ್ಮನನ್ನಾಗಿ, ಧರ್ಮರಾಜನನ್ನು ಅಣ್ಣನನ್ನಾಗಿ ಶ್ರೀಹರಿಯು ಮಾಡಿದ್ದಾನೆ. ಅದು ಹೇಗೆಂದರೆ, ಒಂದು ವೇಳೆ

ಶ್ರೀಭೀಮಸೇನರೇ ಹಿರಿಯರಾಗಿದ್ದರೆ. ಧೃತರಾಷ್ಟ್ರ ಊರು ಬಿಡಲು ಹೇಳಿದಾಗ ಹಿರಿಯರ ಮಾತನ್ನು ನಡೆಸುವದಕ್ಕಾಗಿ ಅಧರ್ಮವಾದ ಪರಾನ್ನದಿಂದ ಉಪಜೀವಿಸುವ ಮಾರ್ಗವನ್ನು ಆಗಲಿ, ಅಥವಾ ಇದು ಬರಬಾರದು ಎಂಬ ಇಚ್ಛೆಯಿಂದ ಹಿರಿಯರ (ಧೃತರಾಷ್ಟ್ರನ) ಮಾತನ್ನು ನಡೆಸದಿರುವ ಅಧರ್ಮವನ್ನಾಗಲಿ ಅವರು ಮಾಡಬೇಕಾಗುತ್ತಿತ್ತು. ಆದರೆ ಇವರೇ ಅನುಜರಾದ್ದರಿಂದ ಧರ್ಮಜನು ನಿರ್ಣಯ ತೆಗೆದುಕೊಂಡವನು. ಅದರ ಬಗ್ಗೆ ತಮ್ಮ ಅಭಿಪ್ರಾಯ ಕೊಡುವಷ್ಟು ಇವರ ಜವಾಬದಾರಿ. ಆ ಕಾರ್ಯವನ್ನು ಮಾಡಿದರು. ಹೀಗೆ ಅಣ್ಣನ ಮಾತಿನ ಪ್ರಕಾರ ಸ್ವಧರ್ಮ ಬಿಟ್ಟದ್ದು; ಸ್ವತಃ ಅಲ್ಲ ಎಂಬ ಕೀರ್ತಿ ಭೀಮಸೇನರಿಗೆ ಬರುವದಕ್ಕಾಗಿಯೂ ಹೀಗೆ ಅನುಜನನ್ನಾಗಿ ಮಾಡಿದರು. ಧರ್ಮರಾಜನನ್ನು ಅನುಸರಿಸಿ ಹೊರಡುವ ದದಕ್ಕೆ ಇನ್ನೊಂದು ಕಾರಣವನ್ನು ಹೇಳಿದ್ದಾರೆ. ದುರ್ಯೋಧನಾದಿಗಳು ಸ್ವ ಸಂಹಾರ ಯೋಗ್ಯ ಅಪರಾಧ ಮಾಡಿದಾಗ ಅವರ ಸಂಹಾರ ಮಾಡುವ ಶಕ್ತಿ ಉಳ್ಳ ಭೀಮಸೇನದೇವರಿಗೆ ಅವರ ಸಂಹಾರ ಮಾಡುವದೇ ಧರ್ಮವು. ಅದಕ್ಕಿಂತ ಬೇರೆ ಯಾದುದು ಧರ್ಮವಾಗುವದಿಲ್ಲ. ಇವರನ್ನು ಹೊರ ಹಾಕಿದ ಅಪರಾಧದಲ್ಲಿಯೇ (ಇದೂ ಕೂಡ ಅವರ ಸಂಹಾರ ಮಾಡಲು ಯೋಗ್ಯವಾದ ಅಪರಾಧವೇ) ಅವರ ಸಂಹಾರ ಮಾಡಿಬಿಟ್ಟರೆ: ಅವರು ಮಾಡಲಿರುವ ಲಾಕ್ಷಾಗೃಹನಿರ್ಮಾಣ, ಅಲ್ಲಿ ಪಾಂಡವರ ದಹನ ಪ್ರಯತ್ನ, ದ್ರೌಪದೀ ಕೇಶಗ್ರಹಣ ಶ್ರೀಕೃಷ್ಣ ಬಂಧನ ಇತ್ಯಾದಿ ದೋಷಗಳು ಲೋಕದಲ್ಲಿ ಬಯಲಿಗೆ ಬರದಂತೆ ಆಗುವದು. ಆದ್ದರಿಂದ ಹಾಗಾಗದೆಯೇ ಅವುಗಳು ಬಯಲಿಗೆ ಬಂದು ಅವರ ನೀಚತನ ಲೋಕಕ್ಕೆ ತಿಳಿಯ ಬೇಕೆಂದೂ ಕೂಡ ಧರ್ಮರಾಜನನ್ನು ಅನುಸರಿಸಿ ಹೋದರು.

ಕ್ಷತ್ತಾ ತಥಚಾಹಸುವಚೋಂತ್ಯಜಭಾಷಯೈವ ಧರ್ಮಾತ್ಮಜಂ ವಿಷಹುತಾಶಭಯಾತ್ಪ್ರತೀತಾಃ ॥
ಆಧ್ವಂತ್ವಿತಿಸ್ಮ ಸತಥೇತಿವಚೋಭ್ಯದೀರ್ಯ ಪ್ರಾಯಾಚ್ಚವಾರಣವತಂ ಪೃಥಯಾನುಜೈಶ್ಚ ॥ ೩೧ ॥

ಅಥ – ಅನಂತರ ಕ್ಷತ್ತಾ – ವಿದುರನು ವಿಷಹುತಾಶಭಯಾತ್ – ವಿಷ, ಅಗ್ನಿ ಇವುಗಳ ಹೆದರಿಕೆಯು ನಿಮಿತ್ತವಾಗಿ ಪ್ರತೀತಾಃ – ಲಾಕ್ಷಾಗೃಹದಲ್ಲಿ ವಿಷ, ಅಗ್ನಿಗಳ ಭಯ ಉಂಟಾಗುವದೆಂದು ತಿಳಿವಳಿಕೆ ಉಳ್ಳವರಾಗಿ ಆಧ್ವಂ – ಲಾಕ್ಷಾಗೃಹದಲ್ಲಿ ಕುಳಿತುಕೊಳ್ಳಿರಿ ಇತಿ – ಎಂದು ಸುವಚಃ – ಹಿತವಾದ ಮಾತನ್ನು ಅಂತ್ಯಜಭಾಷಯಾ – ಮ್ಲೇಂಛ ಭಾಷೆಯಿಂದ ಧರ್ಮಾತ್ಮಜಂ – ಧರ್ಮರಾಜನನ್ನು ಕುರಿತು ಆಹ – ಹೇಳಿದನು ಸಃ – ಆ ಧರ್ಮರಾಜನು ತಥೇತಿ – ಹಾಗೆಯೇ ಆಗಲಿ ಎಂದು ವಚಃ – ಮಾತನ್ನು ಅಭ್ಯುದೀರ್ಯ – ಹೇಳಿ ಪೃಥಯಾ – ಕುಂತಿಯಿಂದ ಅನುಜೈಶ್ಚ – ತಮ್ಮಂದಿರಿಂದಲೂ ಕೂಡ ಸಹ – ಕೂಡಿಕೊಂಡು ವಾರಣವತಂ ವಾರಣಾವತವನ್ನು ಕುರಿತು ಪ್ರಾಯಾತ್ – ಹೋದನು. ॥ ೩೧ ॥

ತಾನ್ಹಂತುಮೇವಚತದಾ ಧೃತರಾಷ್ಟ್ರಸೂನುರ್ಲಾಕ್ಷಾಗೃಹಂ ಸಪದಿಕಾಂಚನರತ್ನಗೂಢಂ ॥
ಕೃತ್ವಾಭ್ಯಯಾತಯದವಮುತ್ರಚ ವಿಷ್ಣುಪದ್ಯಾಸ್ವಾಮಾತ್ಯಮೇವಚ ಪುರೋಚನ ನಾಮಧೇಯಂ ॥ ೩೨ ॥

ತದಾ – ಆಗ ಧೃತರಾಷ್ಟ್ರಸೂನುಃ – ಧೃತರಾಷ್ಟ್ರನ ಮಗನಾದ ದುರ್ಯೋಧನನು ತಾನ್ – ಆ ಪಾಂಡವರನ್ನು ಹಂತುಮೇವ – ಕೊಲ್ಲುವುದಕ್ಕಾಗಿಯೇ ಸಪದಿ – ಕೂಡಲೇ ಕಾಂಚನರತ್ನಗೂಢಂ – ಭಂಗಾರ, ರತ್ನಗಳಿಂದ ಆಚ್ಛಾದಿತವಾದ ಲಾಕ್ಷಾಗೃಹಂ – ಅರಗಿನ ಮನೆಯನ್ನು ಕೃತ್ವಾ – ಮಾಡಿ ಅವಮುತ್ರ – ಈ ಲಾಕ್ಷಾಗೃಹದಲ್ಲಿ ಅಪೇಕ್ಷಿತವಾದ ಯಾವ ಧನ ಧಾನ್ಯಾದಿ ವಸ್ತುಗಳೋ ಅವುಗಳನ್ನೂ ಕೂಡ ಕೃತ್ವಾ – ತುಂಬಿಸಿ ವಿಷ್ಣುಪದ್ಯಾ – ದೋಣಿಯಿಂದ ಗಂಗಾಮಾರ್ಗದಿಂದ ಹೋಗಿರಿ ಎಂದು ಒಡಗಿಗಳಿಂದ ಸಹಿತನಾದ ಪುರೋಚನನಾಮಧೇಯಂ – ಪುರೋಚನ ಎಂದು ಹೆಸರುಳ್ಳ ಸ್ವಾಮಾತ್ಯಮೇವ – ತನ್ನ ಮಂತ್ರಿಯನ್ನೇ ಅಭ್ಯಯಾತಯತ್ – ಕಳುಹಿಸಿದನು. ॥ ೩೨ ॥

ಪೂರ್ವಂ ಪ್ರಹಸ್ತ ಇತಿ ಯಸ್ತ್ವಭವತ್ಸುಪಾಪಃ ಸೋಭ್ಯೇತ್ಯ ಪಾಂಡುತನಯಾನಭವಚ್ಚಮಂತ್ರೀ ॥
ದುರ್ಯೋಧನಂ ಪ್ರತಿವಿಹಾಯ ಭವತ್ಸಕಾಶಮಾಯಾತ ಇತ್ಯವದದೇಷುಸ ಕೂಟವಾಕ್ಯಂ ॥ ೩೩ ॥

ಪೂರ್ವಂ – ಹಿಂದೆ ರಾಮಾವತಾರ ಕಾಲದಲ್ಲಿ ಸುಪಾಪಃ – ಅತಿ ಪಾಪಿಷ್ಠನಾದ ಯಃ – ಯಾವ ಪ್ರಹಸ್ತ ಇತಿ – ಪ್ರಹಸ್ತನೆಂಬ ರಾಕ್ಷಸನು ಅಭವತ್ – ಇದ್ದನೋ ಅವನೇ ಈಗ ಪುರೋಚನ ನಾಮದಿಂದ ಹುಟ್ಟಿದನು. ಅವನನ್ನು ದುರ್ಯೋಧನನು ವಾರಣಾವತಕ್ಕೆ ಕಳುಹಿಸಿದನು ಸಃ – ಆ ಪುರೋಚನನು ಪಾಂಡುತನಯಾನ್ – ಪಾಂಡವರನ್ನು ಅಭ್ಯೇತ್ಯ – ಹೊಂದಿ

ಮಂತ್ರೀ – ಪಾಂಡವರಿಗೆ ಮಂತ್ರಿಯು ಅಭವತ್ – ಆದನು ಸಃ – ಆ ಪುರೋಚನನು ಪ್ರತಿ – ನಿಮಗೆ ಪ್ರತಿಕೂಲನಾದ ದುರ್ಯೋಧನಂ – ದುರ್ಯೋಧನನನ್ನು ವಿಹಾಯ ಬಿಟ್ಟು ಭವತ್ಸಕಾಶಂ – ನಿಮ್ಮ ಸಮೀಪವನ್ನು ಆಯಾತಃ – ಬಂದಿದ್ದೇನೆ ಇತಿ – ಎಂಬುದಾಗಿ ಏಷು – ಈ ಪಾಂಡವರಲ್ಲಿ ಕೂಟವಾಕ್ಯಂ – ಕಪಟವಾಕ್ಯವನ್ನು ಅವದತ್ – ಹೇಳಿದನು. ॥ ೩೩ ॥

ದಿವ್ಯಂಗೃಹಂಚಭವತಾಂಹಿ ಮಯೋಪನೀತಂಪ್ರೀತ್ಯೈವ ಪಾಪಮನುಯಾತುಮಹಂನಶಕ್ತಃ ॥
ಯುಷ್ಮಾಸು ಧರ್ಮಧೃತಿಮತ್ಸು ಸದಾನಿವತ್ಸ್ಯ ಇತ್ಯೂಚಿವಾಂಸಮಮುಮಾಹುರಹೋಸುಭದ್ರಂ ॥ ೩೪ ॥

ಭವತಾಂ – ನಿಮಗೋಸ್ಕರ ಮಯಾ ನನ್ನಿಂದ ದಿವ್ಯಂ – ಸುಂದರವಾದ ಗೃಹಂ – ಮನೆಯು ಪ್ರೀತ್ಯೈವ – ಸ್ನೇಹದಿಂದಲೇ ಉಪನೀತಂ ತರಲ್ಪಟ್ಟಿತು ಅಹಂ – ನಾನು ಪಾಪಂ – ಪಾಪಿಷ್ಠನಾದ ದುರ್ಯೋಧನನನ್ನು ಅನುಯಾತುಂ – ಅನುಸರಿಸಿಕೊಂಡು ಹೋಗಲು ನ ಶಕ್ತಃ – ಸಮರ್ಥನಲ್ಲ ಧರ್ಮಧೃತಿಮತ್ಸು – ಧರ್ಮ ಮತ್ತು ಧೈರ್ಯಗಳುಳ್ಳ ಯುಷ್ಮಾಸು ನಿಮ್ಮಲ್ಲಿ ಸದಾ – ಯಾವಾಗಲೂ ನಿವತ್ಸ್ಯೆ – ವಾಸಮಾಡುವೆನು ಇತಿ – ಈ ರೀತಿಯಾಗಿ ಊಚಿವಾಂಸಂ – ಹೇಳತಕ್ಕ ಅಮುಂ – ಈ ಪುರೋಚನನನ್ನು ಕುರಿತು ಸುಭದ್ರಂ – ಅತ್ಯಂತ ಮಂಗಲವು ಅಹೋ – ನಿನ್ನಾಗಮನವು ಆಶ್ಚರ್ಯವು ಇತಿ – ಎಂದು ಆಹುಃ – ಹೇಳಿದರು. ॥ ೩೪ ॥

ದೃಷ್ಟ್ವೈವ ವಜಾತುಷಗೃಹಂ ವಸಯಾಸಮೇತಂ ತದ್ಗಂಧತೋ ವೃಷಸುತಃಪವಮಾನಜಾತಂ ॥
ತಂಚಾತಿಪಾಪವದತ್ಸುಮುಖೈಷಪಾಪೋ ಹಂತುಂನಇಚ್ಛತಿ ಸದಾಭವಚಪ್ರತೀತಃ ॥ ೩೫ ॥

ವೃಷಸುತಃ – ಯಮನ ಮಗನಾದ ಧರ್ಮರಾಜನು ವಸಯಾ – ಎಮ್ಮಿನ ಉದರದಲ್ಲಿರುವ ಘೃತದಿಂದ ಸಮೇತಂ – ಯುಕ್ತವಾದ ಜಾತುಷಗೃಹಂ – ಅರಗಿನ ಮನೆಯನ್ನು ತದ್ಗಂಧತಏವ – ಅರಗು ಮತ್ತು ಎಮ್ಮಿನ ಎಣ್ಣೆಯ ಪರಿಮಳದಿಂದಲೇ ದೃಷ್ಟ್ವೈವ – ನೋಡಿ ಪವಮಾನಜಾತಂ – ವಾಯುದೇವರ ಮಗನಾದ ಭೀಮನನ್ನು ಕುರಿತು ತಂ – ಆ ಪುರೋಚನನನ್ನು ಅತಿಪಾಪಂ – ಅತ್ಯಂತ ಪಾಪಿಷ್ಠನನ್ನಾಗಿ ಅವದತ್ – ಹೇಳಿದನು ಹೇ ಸುಮುಖ – ಎಲೋ ಸುಂದರ ವದನವುಳ್ಳ ಭೀಮನೇ ಪಾಪಃ – ಪಾಪಿಷ್ಠನಾದ ಏಷಃ – ಈ ಪುರೋಚನನು ನಃ – ನಮ್ಮನ್ನು ಹಂತುಂ – ಕೊಲ್ಲಲು ಇಚ್ಛತಿ – ಇಚ್ಛಿಸುತ್ತಾನೆ. ತ್ವಂಚ – ನೀನಾದರೂ ಸದಾ – ಯಾವಾಗಲೂ ಪ್ರತೀತಃ – ಜ್ಞಾನವುಳ್ಳವನು ಭವ – ಆಗು (ಜಾಗರೂಕನಾಗಿರು) ಇತಿ – ಎಂದು ಅವದತ್ – ಹೇಳಿದನು. ॥ ೩೫ ॥

ಕ್ಷತ್ತಾಥನೀತಿಬಲತೋಽಖಿಲ ಲೋಕವೃತ್ತಂಜಾನನ್ ಸ್ವಚಾರಮುಖತಃ ಖನಕಾಯಚೋಚೇ ॥
ಉಕ್ತ್ವೈವ ಧರ್ಮತನಯಾಯಮದೀಯ ವಾಕ್ಯಂಪೂರ್ವೋಕ್ತವಾಶು ಕುರುತತ್ರಬಿಲಂಸುದೂರಂ ॥೩೬॥

ಅಥ – ಅನಂತರ ಕ್ಷತ್ತಾ – ವಿದುರನು ಅಖಿಲಲೋಕವೃತ್ತಂ ಎಲ್ಲಾ ಲೋಕದ ವೃತ್ತಾಂತವನ್ನು ನೀತಿಬಲತಃ – ನೀತಿಯ ಸಾಮರ್ಥ್ಯದಿಂದಲೂ ಸ್ವಚಾರಮುಖತಃ – ತನ್ನ ಸೇವಕನ ಮುಖದಿಂದಲೂ ಜಾನನ್‌ಸನ್ – ತಿಳಿದವನಾಗಿ (ಧರ್ಮರಾಜನಿಗೆ ವಿಶ್ವಾಸ ಹುಟ್ಟುವುದಕ್ಕಾಗಿ ಧರ್ಮರಾಜನನ್ನು ಕುರಿತು) ಪೂರ್ವೋಕ್ತಂ – ಹಿಂದೆ ಹೇಳಲ್ಪಟ್ಟ ಮದೀಯ ವಾಕ್ಯಂ – ವಿಷಾಗ್ನಿ ಭಯಗಳಿಂದ ಜಾಗರೂಕರಾಗಿರಿ ಎಂಬ ನನ್ನ ಮಾತನ್ನು ತ್ವಮಪಿ – ನೀನೂ ಕೂಡ ಧರ್ಮತನಯಾಯ– ಧರ್ಮರಾಜನಿಗೋಸ್ಕರ ಉಕ್ತ್ವೈವ ಹೇಳಿಯೇ ಸುದೂರಂ – ಬಹು ದೂರದ ತನಕ ಬಿಲಂ – ಬಿಲವನ್ನು ತತ್ರ – ಅಲ್ಲಿ ಆಶು – ಕೂಡಲೇ ಕುರು – ಮಾಡು ಇತಿ – ಎಂದು ಖನಕಾಖ್ಯ – ಸುರಂಗ ಅಗಿಯುವವನಿಗೆ ಊಚೇ ಹೇಳಿದನು. ॥೩೬॥

ಚಕ್ರೇಸಚೈವ ಮಥವರ್ತ್ಮವೃತಿಚ್ಛಲೇನ ದ್ವಾರಂಚತಸ್ಯಸಪಿಧಾಯಯಯೌ ಗೃಹಂಸ್ವಂ ॥
ಭೀಮಃ ಪುರೋಚನ ಉಭಾವಪಿ ತೌ ವಧಾಯಖಿದ್ರಾರ್ಥಿನೌ ಮಿಥ ಉತೋಷತುಂಬ್ದಕಾರ್ಧಂ॥ ೩೭ ॥

ಅಥ – ಅನಂತರ ಸಚ ಆ ಖನಕನಾದರೂ ಏವಂ – ವಿದುರನು ಹೇಳಿದ ರೀತಿಯಿಂದ ಉಕ್ತ್ವಾ–ಹೇಳಿ ವೃತಿಚ್ಛಲೇನ–ಗ್ರಾಮದ ಸುತ್ತಲೂ ಆವರಣ ಮಾಡುವ ವ್ಯಾಜದಿಂದ ಸುದೂರಂ – ಬಹುದೂರದ ತನಕ ವರ್ತ್ಮ – ಬಿಲ ಮಾರ್ಗವನ್ನು ಚಕ್ರೇ ಮಾಡಿದನು ಸಚ – ಆ ಖನಕನು ತಸ್ಯ – ಆ ಬಿಲಕ್ಕೆ ದ್ವಾರಂ – ಬಾಗಿಲನ್ನು ಪಿಧಾಯ – ಮುಚ್ಚಿ ಸ್ವಂ ಗೃಹಂ –

ತನ್ನ ಮನೆಯನ್ನು ಕುರಿತು ಯಯೌ – ಹೋದನು ಉತ – ಮತ್ತು ಭೀಮಃ ಭೀಮನು ಪುರೋಚನಃ – ಪುರೋಚನನು ತೌ ಉಭಾವಪಿ – ಆವರಿಬ್ಬರೂ ಕೂಡ ವಧಾಯ – ನಾಶಕ್ಕೋಸ್ಕರ ಮಿಥಃ - ಪರಸ್ಪರವಾಗಿ ಛಿದ್ರಾರ್ಥಿನೌ ಸಂತೌ – ಅವಕಾಶವನ್ನು ನಿರೀಕ್ಷಿಸತಕ್ಕವರಾಗಿ ಆಬ್ದಕಾರ್ಧಂ – ಆರು ತಿಂಗಳ ಪರ್ಯಂತ ಊಷತುಃ – ವಾಸಮಾಡಿದರು. ॥ ೩೭ ॥

ತಸ್ಯಾಗ್ರಜಾಚಸಹಿತಾ ಸುತಪಂಚಕೇನ ತತ್ರಾಗಮತ್ತದನು ಮಾರುತಿರೇಷಕಾಲಃ ॥
ಇತ್ಥಂವಿಚಿಂತ್ಯಸನಿಶಾಮ್ಯಚ ತಾನ್ಪ್ರಸುಪ್ತಾನ್ಭ್ರಾಂತೃಂಶ್ಚ ಮಾತರಮುಥಾಶುಬಿಲೇನ್ಯಧಾತ್ಪ್ರಾಕ್ ॥೩೮॥

ತಸ್ಯ – ಆ ಪುರೋಚನನ ಅಗ್ರಜಾ ಅಕ್ಕನು ಸುತಪಂಚಕೇನ – ಐದು ಮಕ್ಕಳಿಂದ ಸಹಿತಾಸತೀ – ಕೂಡಿದವಳಾಗಿ ತತ್ರ – ಅಲ್ಲಿಗೆ ಆಗಮತ್–ಬಂದಳು ಅಥ–ಅನಂತರ ಸಃ ಮಾರುತಿಃ – ಆ ಭೀಮಸೇನನು ತದನು–ಅವಳು ಬಂದದ್ದನ್ನನುಸರಿಸಿ ಏಷಕಾಲಃ – ಸಂಹಾರಕ್ಕೆ ಈ ಸಮಯವು ಪ್ರಶಸ್ತವಾದದ್ದು ಇತ್ಥಂ ಈ ರೀತಿಯಾಗಿ ವಿಚಿಂತ್ಯ–ಆಲೋಚಿಸಿ ಪ್ರಸುಪ್ತಾನ್– ನಿದ್ರಿಸಿರುವ ತಾನ್ ಆ ಪುರೋಚನಾದಿಗಳನ್ನು ನಿಶಾಮ್ಯ – ನೋಡಿ ಪ್ರಾಕ್ – ಅವರನ್ನು ಸಂಹರಿಸುವ ಮೊದಲು ಭ್ರಾತೃನ್ – ಸಹೋದರರನ್ನು ಮಾತರಂಚ – ತಾಯಿಯನ್ನೂ ಕೂಡ ಆಶು – ಕೂಡಲೇ ಬಿಲೇ – ಬಿಲದಲ್ಲಿ ನ್ಯಧಾತ್ – ಕಳಿಸಿದನು. ॥ ೩೮ ॥

ತಂಭಾಗಿನೇಯಸಹಿತಂ ಭಗಿನೀಂಚತಸ್ಯಪಾಪಾಂ ದದಾಹಸಗೃಹಾಂ ಪವಮಾನಸೂನುಃ ॥
ಸಾಪ್ಯಾಗತಾಹಿಗರಲೇನನಿಹಂತು ಮೇತಾನ್ಭೀಮಸ್ಯ ಪೂರ್ವಭುಜಿತೋನಶಶಾಕಚೈತತ್ ॥ ೩೯ ॥

ಪವಮಾನಸೂನುಃ – ವಾಯುಪುತ್ರನಾದ ಭೀಮನು ಭಾಗಿನೇಯಸಹಿತಂ – ಅಕ್ಕನ ಮಕ್ಕಳಿಂದ ಕೂಡಿದ ತಂ – ಆ ಪುರೋಚನನನ್ನು ಸಗೃಹಾಂ – ಅರಗಿನ ಮನೆಯಿಂದ ಕೂಡಿದ ಪಾಪಾಂ – ಪಾಪಿಷ್ಠಳಾದ ತಸ್ಯ – ಆ ಪುರೋಚನನ ಭಗಿನೀಂಚ – ಅಕ್ಕನನ್ನೂ ಕೂಡ ದದಾಹ – ಸುಟ್ಟನು ಸಾಪಿ – ಅವಳಾದರೂ ಏತಾನ್ – ಈ ಪಾಂಡವರನ್ನು ಗರಲೇನ – ವಿಷದಿಂದ ನಿಹಂತುಮೇವ – ಕೊಲ್ಲುವುದಕ್ಕಾಗಿಯೇ ಆಗತಾ – ಬಂದಿದ್ದಳು ಭೀಮಸ್ಯ – ಭೀಮನ ಪೂರ್ವಭುಜಿತಃ – ಮೊದಲೇ ವಿಷಮಿಶ್ರಿತ ಭಕ್ಷದ ಭಕ್ಷಣನಿಮಿತ್ತದಿಂದ ಏತತ್ – ಈ ವಿಷವು ಏತಾನ್ – ಈ ಪಾಂಡವರನ್ನು ನಿಹಂತುಂ – ಕೊಲ್ಲಲು ನ ಶಶಾಕ – ಸಮರ್ಥವಾಗಲಿಲ್ಲ. ವಿಶೇಷಾಂಶ — ಭೀಮನು ತಾನು ಮೊದಲು ಊಟಮಾಡಿ ವಿಷವಿದೆ ಎಂದು ತಿಳಿದವನಾಗಿ ಸಹೋದರರಿಗೆ ಕೊಡಲಿಲ್ಲ. ಭೀಮನಿಗೆ ಆ ವಿಷವು ಜೀರ್ಣವಾದದ್ದರಿಂದ ಇತರರು ತಿನ್ನದೇ ಇರುವದರಿಂದ ಅವಳು ಕೊಟ್ಟ ವಿಷದಿಂದ ಯಾರೂ ಸಾಯಲಿಲ್ಲ. ॥ ೩೯ ॥

ಅವ – ಮಕ್ಕಳಿಂದ ಕೂಡಿದ ಪುರೋಚನನ ಅಕ್ಕನನ್ನು ಕೊಲ್ಲಲು ಕಾರಣವನ್ನು ಹೇಳುತ್ತಾರೆ.

ತಪ್ತಂ ತಯಾಸಸುತಯಾ ಚ ತಪೋನಿತಾಂತಂಸ್ಯಾಂಸೂನುಭಿಃಸಹಬಲಾದದಿತಿಸ್ತಥಾಬ್ದಾತ್ ॥
ತಸ್ಯಾ ಅದಾಚ್ಚ ಗಿರಿಶೋಯದಿಪುತ್ರಕೈಸ್ತ್ವಂ ಯುಕ್ತಾನಯಾಸಿ ಮೃತಿಮೇಷ ವರಸ್ತವೇತಿ ॥ ೪೦ ॥

ಬಲಾತ್ – ತಪಸ್ಸಿನ ಸಾಮರ್ಥ್ಯದಿಂದ ಸೂನುಭಿಃಸಹ ಮಕ್ಕಳಿಂದ ಕೂಡಿಕೊಂಡು ಅಹಂ – ನಾನು ಅದಿತಿಃ – ದೇವ ಮಾತೆಯು ಸ್ಯಾಂ – ಆಗುವೆನು ಇತಿ – ಈ ರೀತಿಯಾಗಿ ಸಸುತಯಾ – ಮಕ್ಕಳಿಂದ ಕೂಡಿದ ತಯಾ – ಅವಳಿಂದ ನಿತಾಂತಂ – ಚೆನ್ನಾಗಿ ತಪಃ – ತಪಸ್ಸು ತಪ್ತಂ – ಮಾಡಲ್ಪಟ್ಟಿತು ಗಿರಿಶಃ – ರುದ್ರನು ಆಬ್ದಾತ್ - ಒಂದು ಸಂವತ್ಸರದ ನಂತರ ತಸ್ಯಾಃ – ಅವಳಿಗೆ ತ್ವಂ – ನೀನು ಪುತ್ರಕೈಃ–ಮಕ್ಕಳಿಂದ ಯುಕ್ತಾಸತೀ – ಕೂಡಿದವಳಾಗಿ ಮೃತಿಂ ಯದಿ ನ ಯಾಸಿ– ಮರಣವನ್ನು ಹೊಂದದಿದ್ದರೆ ತಥಾ – ನೀನು ಹೇಳಿದಂತೆ ಆಗಲಿ ಏಷಃ ವರಃ – ಈ ವರವು ಇತಿ – ಎಂದು ಅದಾತ್ – ವರವನ್ನು ಕೊಟ್ಟನು. ॥ ೪೦ ॥

ಜಾನನ್ನಿದಂ ಸಕಲಮೇವಚ ಭೀಮಸೇನೋಹತಾ್ಜಸುತೈಸ್ಸಹ ಕುಬುದ್ಧಿಮಿಮಾಂಹಿತಂಚ ॥
ಭ್ರಾತೃಂಶ್ಚ ಮಾತರಮುದೂಹ್ಯ ಯಯೌ ಬಿಲಾತ್ಸನಿರ್ಗತ್ಯಭೀತಿವಶತೋsಬಲತಾಂ ಪ್ರಯಾತಾನ್ ॥೪೧॥

ಭೀಮಸೇನಃ — ಭೀಮಸೇನನು ಇದಂ ಸಕಲಂ — ಹಿಂದೆ ಹೇಳಿದ ಎಲ್ಲಾ ವಿಷಯವನ್ನು ಜಾನನ್ನೇವ — ತಿಳಿದವನಾಗಿಯೇ ಸುತೈಃ — ಮಕ್ಕಳಿಂದ ಸಹ — ಕೂಡಿಕೊಂಡು ಕುಬುದ್ಧಿಂ — ಕೆಟ್ಟಬುದ್ಧಿಯುಳ್ಳ ಇಮಾಂ — ಈ ಪುರೋಚನನ ಅಕ್ಕನನ್ನು ತಂಚ — ಆ ಪುರೋಚನನನ್ನೂ ಕೂಡ ಹತ್ವಾ—ಕೊಂದು ಭೀತಿವಶತಃ — ಭಯಕ್ಕೊಳಗಾಗಿ ಅಬಲತಾಂ — ಅಶಕ್ತಿಯನ್ನು ಪ್ರಯಾತಾನ್ — ಹೊಂದಿದ ಭ್ರಾತೃನ್ — ಸಹೋದರರನ್ನು ಮಾತರಂ ಚ — ತಾಯಿಯನ್ನೂ ಕೂಡ ಉದೂಹ್ಯ — ಹೊತ್ತು ಕೊಂಡು ಬಿಲಾತ್ — ಬಿಲದಿಂದ ನಿರ್ಗತ್ಯ — ಹೊರಗೆ ಬಂದು ಯಯೌ — ಹೋದನು. ॥ ೪೧ ॥

ಭಾ.ಅ. ೩೧-೪೧ ವಿದುರನು ಪಾಂಡವರು ಹೊರಟಾಗ ಧರ್ಮರಾಜನಿಗೆ ವಾರಣವತದಲ್ಲಿರುವಾಗ ಅಗ್ನಿ, ವಿಷ ಮೊದಲಾದವುಗಳ ಬಗ್ಗೆ ಜಾಗರೂಕರಾಗಿ ಇರಬೇಕು ಎಂದು ಮ್ಲೇಚ್ಛ ಭಾಷಾದಿಂದ ಹೇಳಿದನು. ಅದಕ್ಕೆ ಹೂಂ ಹೇಳಿದ ಧರ್ಮಜನು ತಾಯಿ ತಮ್ಮಂದಿರೊಡಗೂಡಿ ವಾರಣವತಕ್ಕೆ ಹೊರಟನು. ಇವರು ಅಲ್ಲಿ ಇಳಿಯುವದಕ್ಕಾಗಿ ಕಪಟಿ, ನೀಚ ದುರ್ಯೋಧನನು ಮೀನಿನ ಕೊಬ್ಬು (ನೆಣ), ಅರಗುಗಳಿಂದ (ಕೂಡಲೇ ಬೆಂಕಿ ಹತ್ತುವ ಹಾಗೆ) ಗೃಹವನ್ನು ಮಾಡಿಸಿ ಮೇಲೆ ಎಲ್ಲ ಭಂಗಾರ-ರತ್ನಗಳಿಂದ ಖಚನ ಮಾಡಿಸಿ ಅರಗಿನ ಮನೆ ಎಂದು ಗೊತ್ತಾಗದಂತೆ ಮಾಡಿಸಿದ್ದನು. ಅವರನ್ನು ಸುಡುವ ಕಾರ್ಯಕ್ಕಾಗಿ ತನ್ನ ಮಂತ್ರಿಯಾದ ಪುರೋಚನನೆಂಬವನನ್ನು ಕಳಿಸಿದ್ದಾನೆ. ಇವನು ರಾಮಾಯಣ ಕಾಲದಲ್ಲಿ ರಾವಣನ ಮಂತ್ರಿಯಾದ ಪ್ರಹಸ್ತನು. ಅವನು ಈಗ ಪಾಂಡವರ ಬಳಿಗೆ ಬಂದು ಕಪಟದಿಂದ - 'ನಾನು ಆ ಪಾಪಿಷ್ಠ ದುರ್ಯೋಧನನನ್ನು ಬಿಟ್ಟು ಬಂದಿರುವೆನು. ಅವನನ್ನು ಅನುಸರಿಸುವದು ನನ್ನಿಂದ ಆಗುವದಿಲ್ಲ. ಧರ್ಮಿಷ್ಠರಾದ ನಿಮ್ಮ ಹತ್ತಿರ ನಾನು ಯಾವಾಗಲೂ ವಾಸಿಸುವೆನು' ಎಂದು ಹೇಳಿದನು. ಅವನ ಕಪಟವನ್ನು ತಿಳಿದ ಪಾಂಡವರು ಓಹೋ ! ಬಹಳ ಒಳ್ಳೆಯದು ಎಂದು ಹೇಳಿದರು. ಆ ಲಾಕ್ಷಾಗೃಹಕ್ಕೆ ಬಂದ ಕೂಡಲೇ ಧರ್ಮರಾಜನು ಆ ಮನೆಯಲ್ಲಿಯ ವಾಸನೆಯಿಂದಲೇ ಅದು ಅರಗಿನ ಮನೆ ಎಂದು ತಿಳಿದು, ಬಂದ ಈ ಪುರೋಚನನನ್ನು ನೀಚನನ್ನಾಗಿ ತಿಳಿದು ಶ್ರೀಭೀಮಸೇನರಿಗೆ ಹೇ ಸುಂದರ ಮುಖದವನಾದ ಶ್ರೀಭೀಮಸೇನನೇ - ಈ ಪಾಪಿಷ್ಠನು ನಮ್ಮನ್ನು ಕೊಲ್ಲುವ ಹವಣಿಕೆಯಲ್ಲಿದ್ದಾನೆ. ನೀನು ಜಾಗರೂಕನಾಗಿರು ಎಂದು ಹೇಳಿದನು. ವಿದುರನು ತನ್ನ ನೈತಿಕ ಸಾಮರ್ಥ್ಯದಿಂದ, ತನ್ನ ದೂತರ ಮುಖದಿಂದಲೂ ಕೂಡ ದುರ್ಯೋಧನನ ಕಾರಸ್ಥಾನವನ್ನು ತಿಳಿದು ಪಾಂಡವರಿಗೆ ಅಲ್ಲಿಂದ ಪಾರಾಗಲು ಅನುಕೂಲವಾಗುವಂತೆ ಬಿಲವನ್ನು ಗುಪ್ತವಾದ ಸುರಂಗ ಮಾರ್ಗವನ್ನು ಮಾಡಲು ಅಗಿಯುವ ಕೆಲಸ ಮಾಡುವನಿಗೆ ಹೇಳಿದನು. ಅವನ ಮೇಲೆ ಪಾಂಡವರಿಗೆ ವಿಶ್ವಾಸ ಬರುವದಕ್ಕಾಗಿ ತಾನು ಮ್ಲೇಂಛ ಭಾಷೆಯಿಂದ ಹೇಳಿದ ಮಾತನ್ನು ಪಾಂಡವರೆದುರು ಹೇಳಲು ಹೇಳಿದ್ದನು. ಆ ಪ್ರಕಾರವೇ ಅವನು ಮಾಡಿದನು. ಏನು ಮಾಡುವಿ ? ಎಂದು ಕೇಳಿದವರ ಎದುರು ಊರಿಗೆ ಆವರಣ ಗೋಡೆಯನ್ನು ಕಟ್ಟುವದಾಗಿ ಹೇಳುತ್ತಾ ಬಿಲವನ್ನು ಸಿದ್ಧಪಡಿಸಿ ಹೋದನು. ಆ ದುಷ್ಟ ಪುರೋಚನನು ಇವರನ್ನು ಸುಡಲು ಅವಕಾಶವನ್ನು ಕಾಯುತ್ತಿದ್ದನು. ಭೀಮಸೇನ ದೇವರು ಅವನನ್ನೇ ಸುಡಲು ಅವಕಾಶವನ್ನು ನಿರೀಕ್ಷಿಸುತ್ತಿದ್ದರು. ಹೀಗೆಯೇ ಆರು ತಿಂಗಳ ಕಳೆಯಿತು. ಒಂದು ದಿನ ಪುರೋಚನನ ಅಕ್ಕನು ತನ್ನ ಐದು ಮಕ್ಕಳಿಂದ ಸಹಿತವಾಗಿ ಅಲ್ಲಿಗೆ ಬಂದಳು. ಅವಳು ಪಾಂಡವರಿಗೆ ವಿಷಕೊಡಲು ಬಂದಿದ್ದಳು. ಆದರೆ ಭೀಮಸೇನರು ಮೊದಲು ತಿಂದು ವಿಷ ಇದೆ ಎಂದು ಗೊತ್ತಾದರೆ ಉಳಿದವರಿಗೆ ಕೊಡುತ್ತಲೇ ಇರಲಿಲ್ಲ. ತಾವು ತಿಂದದ್ದನ್ನು ಅರಗಿಸಿಕೊಂಡು ಬಿಡುತ್ತಿದ್ದರು. ಹೀಗಾಗಿ ಅವಳಿಗೆ ವಿಷದಿಂದ ಕೊಲ್ಲುವ ಕಾರ್ಯವೇ ಶಕ್ಯವಾಗಲಿಲ್ಲ. ಒಂದು ದಿನ ಅವರೆಲ್ಲ ಮಲಗಿದ್ದರು. ಈ ಅವಕಾಶವನ್ನೇ ಕಾಯುತ್ತಿದ್ದ ಶ್ರೀಭೀಮಸೇನದೇವರು ಇದು ಸರಿಯಾದ ಸಮಯವೆಂದುಕೊಂಡು ತಮ್ಮ ತಾಯಿ ಹಾಗೂ ಸಹೋದರರನ್ನು ಸುರಂಗ ಮಾರ್ಗದಲ್ಲಿಟ್ಟು ಪುರೋಚನನನ್ನು, ಅಕ್ಕ ಹಾಗೂ ಅವಳ ಮಕ್ಕಳಿಂದ ಸಹಿತವಾಗಿ ಅರಗಿನ ಮನೆಗೆ ಬೆಂಕಿ ಇಟ್ಟು ಸುಟ್ಟು ಭಸ್ಮ ಮಾಡಿದರು. ಅವಳು ಬರುವವರೆಗೆ ಕಾಯ್ದು ಬಂದ ನಂತರ ಸುಡಲು ಕಾರಣವನ್ನು ಅಧ್ಯಾತ್ಮ ಜ್ಞಾನನೇತೃಗಳಾದ ಆಚಾರ್ಯರು ತಿಳಿಸುತ್ತಾರೆ. ಅವಳು ತಾನು ಅದಿತಿಯಾಗಬೇಕೆಂದು, ತನ್ನ ಮಕ್ಕಳು ಆಗಲೂ ತನ್ನ ಮಕ್ಕಳಾಗಿ (ಅದಿತಿಯ ಮಕ್ಕಳು) ದೇವತೆಗಳಾಗಬೇಕೆಂಬ ಅಯೋಗ್ಯ ಉದ್ದೇಶದಿಂದ ಒಂದು ವರ್ಷ ಪರ್ಯಂತ ಶ್ರೀರುದ್ರದೇವರನ್ನು ಕುರಿತು ತಪಸ್ಸನ್ನಾಚರಿಸಿದಾಗ, ಶ್ರೀರುದ್ರದೇವರು 'ಒಂದು ವೇಳೆ ನಿನ್ನ ಮಕ್ಕಳಿಂದ ಸಹಿತವಾಗಿ ಮರಣವನ್ನು ಹೊಂದದಿದ್ದರೆ ನಿನ್ನ ಇಚ್ಛೆ ಪೂರ್ಣವಾಗುವದೆಂದು ಹೇಳಿದ್ದರು. ಇದೆಲ್ಲವನ್ನು ತಿಳಿದ ಶ್ರೀಭೀಮಸೇನದೇವರು ಆ ಕುಬುದ್ಧಿ ಹೆಂಗಸನ್ನು ಮಕ್ಕಳಿಂದ ಸಮೇತವಾಗಿ ಸುಟ್ಟು ಭಸ್ಮ ಮಾಡಿ, ತಮ್ಮ ತಾಯಿ-ಸಹೋದರರನ್ನು ಹೆಗಲ ಮೇಲೆ ಹೊತ್ತುಕೊಂಡು ಸುರಂಗಮಾರ್ಗದಿಂದ ಹೊರಗೆ ಹೋದರು. ಹೊತ್ತುಕೊಂಡು ಹೋಗಲು ಕಾರಣವನ್ನು ಆಚಾರ್ಯರು 'ಭೀತಿವಶತೋಽ ಬಲತಾಂ ಪ್ರಯಾತಾನ್' ಎಂಬುದರಿಂದ ತಿಳಿಸಿದರು. ಭಯದಿಂದ ಅಶಕ್ತತೆಯನ್ನು ಹೊಂದಿದ್ದರು. ಆದ್ದರಿಂದ ಹೊತ್ತುಕೊಂಡು ಹೋದರು.

ಅವ – ಅವರಿಗೆ ಭಯದ ಕಾರಣವನ್ನು ಹೇಳುತ್ತಾರೆ.

ಜ್ಞಾತ್ವಾಪುರೋಚನ ವಧಂಯದಿಭೀಷ್ಮಮುಖ್ಯೈರ್ವೈಚಿತ್ರವೀರ್ಯತನಯಾ ಅಭಿಯೋಧಯೇಯುಃ ॥
ಕಿಂನೋಭವೇದಿತಿ ಭಯಂ ಸುಮಹದ್ವಿವೇಶ ಭೀಮಂತ್ವಪೃತೇಚ ತನಯಾನ್ಸಕಲಾನ್ಪೃಥಾಯಾಃ ॥ ೪೨ ॥

ವೈಚಿತ್ರವೀರ್ಯತನಯಾಃ – ಧೃತರಾಷ್ಟ್ರನ ಮಕ್ಕಳಾದ ದುರ್ಯೋಧನಾದಿಗಳು ಪುರೋಚನವಧಂ – ಪುರೋಚನನ ನಾಶವನ್ನು ಜ್ಞಾತ್ವಾ ತಿಳಿದು ಭೀಷ್ಮಮುಖ್ಯೈಃಸಹ – ಭೀಷ್ಮನೇ ಪ್ರಧಾನರಾಗಿ ಉಳ್ಳವರಿಂದ ಕೂಡಿಕೊಂಡು ಯದಿ ಅಭಿಯೋಧಯೇಯುಃ – ಯುದ್ಧ ಮಾಡಿದರೆ ತರ್ಹಿ – ಆ ಪಕ್ಷದಲ್ಲಿ ನಃ – ನಮಗೆ ಕಿಂಭವೇತ್ – ಏನಾಗುವುದು ಇತಿ – ಎಂಬುದಾಗಿ ಸುಮಹತ್ – ಅತಿ ಮಹತ್ತಾದ ಭಯಂ – ಹೆದರಿಕೆಯು ಭೀಮಂತುಋತೇ – ಭೀಮನೊಬ್ಬನನ್ನೇ ಬಿಟ್ಟು ಪೃಥಾಯಾಃ – ಕುಂತಿಯ ಸಕಲಾನ್‌ತನಯಾನ್ ಎಲ್ಲಾ ಮಕ್ಕಳನ್ನೂ ವಿವೇಶ – ಪ್ರವೇಶಿಸಿತು ॥ ೪೨ ॥

ಭೀಮೋ೭ಭಯೋ೭ಪಿ ಗುರುಭಿಃಸ್ವಮುಖೇನ ಯುದ್ಧಮುಪ್ರೀಯಮಾಣ ಉತಧರ್ಮಜ ವಾಕ್ಯಹೇತೋಃ ॥
ಊಹ್ಯೈವತಾನಪಿಯಯೌ ದ್ಯುನದೀಂಚತೀರ್ತ್ವಾಕ್ಷತ್ತ್ರಾತಿ ಸೃಷ್ಟಮುಧಿರುಹ್ಯ ಜಲಪ್ರಯಾಣಂ ॥ ೪೩ ॥

ವಿಶ್ವಾಸಿತಾ ವಿದುರಪೂರ್ವವಚೋಭಿರೇವ ದಾಶೋದಿತಾಭಿರಧಿರುಹ್ಯಚ ಭೀಮಪೃಷ್ಠಂ ॥
ಸರ್ವೇಯಯುರ್ವನಮಥಾಭ್ಯುದಿತೇಚ ಸೂರ್ಯೇ ದೃಷ್ಟ್ವಾವಸಪ್ತಮೃತಕಾನ್ರುರುದುಶ್ಚಪೌರಾಃ॥೪೪॥

ಭೀಮಃ – ಭೀಮನು ಅಭಯೋಪಿ ಭಯವಿಲ್ಲದವನಾದರೂ ಕೂಡ ಯತಃ – ಯಾವ ಕಾರಣದಿಂದ ಗುರುಭಿಃ – ಗುರುಗಳಾದ ಭೀಷ್ಮದ್ರೋಣಾದಿಗಳಿಂದ ಸ್ವಮುಖೇನ – ತಾನೇ ಸಾಕ್ಷಾತ್ತಾಗಿ ಯುದ್ಧಂ – ಸಂಗರವನ್ನು ಅಪ್ರೀಯಮಾಣಃ – ಇಚ್ಛಿಸುವುದಿಲ್ಲವೋ ಅತಃ – ಆದಕಾರಣ ನಮಗೆ ಏನಾಗುವುದೋ ಎಂಬ ಭಯವು ಉಂಟಾಯಿತು ಉತ – ಮತ್ತು ಧರ್ಮ ಜವಾಕ್ಯಹೇತೋಃ ನಡೆಯಲು ಅಶಕ್ತರಾದ ನಮ್ಮನ್ನು ಕರೆದುಕೊಂಡು ಹೋಗು ಎಂಬ ಧರ್ಮರಾಜನಮಾತಿನ ನಿಮಿತ್ತ ದಿಂದ ತಾನ್ – ಅವರನ್ನು ಊಹ್ಯೈವ – ಹೊತ್ತುಕೊಂಡೇ ಯಯೌ – ಹೋದನು ಸರ್ವೇ – ಧರ್ಮರಾಜಾದಿಗಳೆಲ್ಲರೂ ದಾಶೋದಿತಾಭಿಃ – ನಾವಿಕರಿಂದ ಹೇಳಲ್ಪಟ್ಟ ವಿದುರಪೂರ್ವವಚೋಭಿಃ – ವಿಷಾದಿಗಳಿಂದ ಜಾಗರೂಕರಾಗಿರಿ ಎಂಬ ವಿದುರನ ಮೊದಲಿನ ಮಾತುಗಳಿಂದ ವಿಶ್ವಾಸಿತಾಸ್ಸಂತಃ – ನಂಬಿಗೆಯನ್ನು ಹೊಂದಿದವರಾಗಿ ಕ್ಷತ್ತ್ರಾ – ವಿದುರನಿಂದ ಅತಿಸೃಷ್ಟಂ – ಕಳುಹಿಸಲ್ಪಟ್ಟ ಜಲಪ್ರಯಾಣಂ ನಾವೆಯನ್ನು ಅಧಿರುಹ್ಯ – ಏರಿ ದ್ಯುನದೀಂ–ಭಾಗೀರಥಿಯನ್ನು ತೀರ್ತ್ವಾ – ದಾಟಿ ಅಥ – ಅನಂತರ ಭೀಮಪೃಷ್ಠಂ – ಭೀಮನ ಹೆಗಲನ್ನು ಅಧಿರುಹ್ಯ – ಏರಿ ವನಂ – ಅರಣ್ಯವನ್ನು ಕುರಿತು ಯಯೌ – ಹೋದರು ಸೂರ್ಯೇ ಸೂರ್ಯನು ಅಭ್ಯುದಿತೇಸತಿ – ಉದಯಿಸುತ್ತಿರಲು ಪೌರಾಃ – ಪಟ್ಟಣಿಗರು ಸಪ್ತ ಮೃತಕಾನ್ – ಏಳುಮಂದಿ ಸತ್ತವರನ್ನು ದೃಷ್ಟ್ವಾವಿವ – ನೋಡಿಯೇ ರುರುದುಃ – ರೋದನವನ್ನು ಮಾಡಿದರು. ॥ ೪೩–೪೪ ॥

ಹಾಪಾಂಡವಾನದಹದೇಷಹಿ ಧಾರ್ತರಾಷ್ಟ್ರೋ ಧರ್ಮಸ್ಥಿತಾನ್ಮತಿರೇವ ಪುರೋಚನೇನ ॥
ಸೋ೭ಪ್ಯೇಷದಗ್ಧ ಇಹದೈವವಶಾತ್ಸಪಾಪಃ ಕೋನಾಮಸತ್ಸುವಿಷಮಃ ಪ್ರಭವೇತ್ಸುಖಾಯ ॥ ೪೫ ॥

ಕುಮತಿಃ – ಕೆಟ್ಟ ಬುದ್ಧಿಯುಳ್ಳ ಏಷಃದುರ್ಯೋಧನಃ – ಈ ದುರ್ಯೋಧನನು ಧರ್ಮಸ್ಥಿತಾನ್ – ಧರ್ಮಾಚರಣೆಯಲ್ಲಿರತಕ್ಕ ಪಾಂಡವಾನ್ – ಪಾಂಡವರನ್ನು ಪುರೋಚನೇನ – ಪುರೋಚನನಿಂದ ಅದಹತ್ – ಸುಡಿಸಿದನು ಹಾ – ಕಷ್ಟವು ಸುಪಾಪಃ – ಅತಿ ಪಾಪಿಷ್ಠನಾದ ಸ ಏಷೋಪಿ ಆ ಈ ಪುರೋಚನನೂ ಕೂಡ ಇಹ – ಇಲ್ಲಿ ದಗ್ಧಃ – ಸುಡಲ್ಪಟ್ಟನು ಸತ್ಸು – ಸಜ್ಜನರಲ್ಲಿ ವಿಷಮಃ – ವಿರೋಧವನ್ನುಮಾಡತಕ್ಕ ಕೋನಾಮ – ಯಾವ ಪುರುಷನು ಸುಖಾಯ – ಸುಖವನ್ನು ಅನುಭವಿಸುವದಕ್ಕೆ ಪ್ರಭವೇತ್ – ಸಮರ್ಥನಾದಾನು. ॥ ೪೫ ॥

ಪೌರೇಭ್ಯ ಏವನಿಖಿಲಂ ನನುಭೀಷ್ಮಮುಖ್ಯೈ ವೈಚಿತ್ರವೀರ್ಯಸಹಿತಾಸ್ತು ನಿಶಮ್ಯಹೇತಿ ॥
ಊಚುಃಸುದುಃಖಿತಧಿಯೋ೭ಥ ಸುಯೋಧನಾದ್ಯಾಃಕ್ಷತ್ತಾಮೃಷ್ಯೈವರುರುದುರ್ಯುಯುಜುಶ್ಚಕರ್ಮ ೪೬

ವೈಚಿತ್ರವೀರ್ಯೈ ಸಹಿತಾಃ -- ವಿಚಿತ್ರವೀರ್ಯನ ಮಗನಾದ ಧೃತರಾಷ್ಟ್ರನಿಂದ ಕೂಡಿದ ಭೀಷ್ಮಮುಖ್ಯಾಃ -- ಭೀಷ್ಮನೇ ಪ್ರಧಾನರಾಗಿ ಉಳ್ಳವರು ಪೌರೇಭ್ಯಏವ - ಪಟ್ಟಣಿಗರಿಂದಲೇ ನಿಖಿಲಂ -- ಎಲ್ಲವನ್ನು ಶ್ರುತ್ವಾ -- ಕೇಳಿ ಸುದುಃಖಿತಧಿಯಸ್ಸಂತಃ -- ಅತಿ ದುಃಖದಿಂದ ಕೂಡಿದ ಮನಸ್ಸುಳ್ಳವರಾಗಿ ಹಾ -- ಕಷ್ಟವು ಇತಿ -- ಎಂದು ಊಚುಃ--ಹೇಳಿದರು. ಅಥ -- ಅನಂತರ ಸುಯೋಧನಾದ್ಯಾಃ -- ದುರ್ಯೋಧನನೇ ಮೊದಲಾಗಿ ಉಳ್ಳವರು ಮೃಷೈವ -- ವ್ಯರ್ಥವಾಗಿಯೇ ಅಂದರೆ ದುಃಖವಿಲ್ಲದೇನೆ ರುರುದುಃ ಕಣ್ಣೀರನ್ನು ಸುರಿಸಿದರು. ಕ್ಷತ್ತಾಚ -- ವಿದುರನೂ ಕೂಡ ಮೃಷೈವ -- ಪಾಂಡವರು ಜೀವಿಸಿಕೊಂಡಿರುವುದರಿಂದ ಕೌರವರನ್ನು ವಂಚಿಸುವುದಕ್ಕೋಸ್ಕರ ದುಃಖವಿಲ್ಲದವನಾಗಿಯೇ ಅತ್ತನು ಅಥ -- ಮರಣವನ್ನು ಕೇಳಿದನಂತರ ಕರ್ಮ -- ಸ್ನಾನ, ತಿಲಾಂಜಲಿ ಮೊದಲಾದ ಕ್ರಿಯೆಗಳನ್ನು ಯುಯುಜುಃ -- ಮಾಡಿದರು. ॥ ೪೬ ॥

ಭಾ.ಅ. ೪೨--೪೬ ಉಳಿದ ಸಹೋದರರಿಗೆ ಬಂದ ಭಯದ ಕಾರಣವನ್ನು ತಿಳಿಸುತ್ತಿದ್ದಾರೆ. ಒಂದು ವೇಳೆ ಪುರೋಚನನ ವಧ ಆಗಿದೆ ಎಂದು ದುರ್ಯೋಧನಾದಿಗಳಿಗೆ ತಿಳಿದು, ಅವರು ಯುದ್ಧಕ್ಕೆ ಬಂದರೆ ಭೀಷ್ಮಾದಿಗಳ ಜೊತೆಗೆ ಶ್ರೀಭೀಮಸೇನರು ಯುದ್ಧ ಮಾಡದೇ ಇರುವದರಿಂದ ಹೇಗೆ ಎಂಬ ಭಯ ಬಂದಿತ್ತು. ಹೀಗಾಗಿ ಅಶಕ್ತತೆಯುಂಟಾಗಿತ್ತು. ಎಲ್ಲರನ್ನು ಹೊತ್ತುಕೊಂಡು ಗಂಗಾದಂಡೆಗೆ ಬಂದಾಗ ಅಲ್ಲಿರುವ ನಾವಿಕರು (ವಿದುರನಿಂದ ಕಳಿಸಲ್ಪಟ್ಟವರು) ವಿದುರನ ಹಿಂದಿನ ಮಾತನ್ನು (ಮ್ಲೇಂಛ ಭಾಷೆಯ) ಹೇಳಿದಾಗ ಅದರಿಂದ ಅವರ ಮೇಲೆ ವಿಶ್ವಾಸವನ್ನು ಹೊಂದಿದ್ದಾರೆ. ಅವರು ಪಾಂಡವರನ್ನು ದಾಟಿಸಿದರು. ಪುನಃ ಶ್ರೀಭೀಮಸೇನರ ಮೇಲೆ ಏರಿ ಎಲ್ಲರೂ ಮುಂದೆ ಹೋದರು. ಪ್ರಾತಃಕಾಲವಾಗುವಾಗ ವಾರಣವತದಲ್ಲಿಯ ಜನರೆಲ್ಲ ಅರಗಿನ ಮನೆ ಭಸ್ಮವಾದದ್ದನ್ನು ಕಂಡು "ಹಾ! ಈ ದುಷ್ಟ ದುರ್ಯೋಧನನು ಪಾಂಡವರನ್ನು ಸುಟ್ಟು ಹಾಕಿದನು. ಪುರೋಚನನು ಈ ಧರ್ಮಾತ್ಮರನ್ನು ಸುಡುವ ದುಷ್ಟ ಕೆಲಸ ಮಾಡಿ ದೈವ ಲೀಲೆಯಿಂದ ತಾನೂ ಭಸ್ಮನಾಗಿದ್ದಾನೆ. ಸಜ್ಜನರಿಗೆ, ಮಹಾತ್ಮರಿಗೆ ದ್ರೋಹ ಬಗೆದವನು ಯಾವನು ಸುಖವನ್ನು ಹೊಂದಿಯಾನು ?" ಎಂಬುದಾಗಿ ಉದ್ಗರಿಸಿ ದುಃಖಪಟ್ಟಿದ್ದಾರೆ. ಭೀಷ್ಮ, ದ್ರೋಣ, ಧೃತರಾಷ್ಟ್ರ ಮೊದಲಾದವರು ಪಾಂಡವರು ಮೃತರಾಗಿದ್ದಾರೆಂದು ವಾರ್ತೆಯನ್ನು ಕೇಳಿ ಬಹಳ ದುಃಖಪಟ್ಟು 'ಅಯ್ಯೋ! ಕಷ್ಟ ಎಂದರು. ವಿದುರರು, ದುರ್ಯೋಧನಾದಿ ನೀಚರು ಮಾತ್ರ ಸುಳ್ಳೇ ದುಃಖ ಪಟ್ಟಂತೆ ತೋರಿಸಿದ್ದಾರೆ. ವಿದುರರಿಗೆ ಪಾಂಡವರು ಸತ್ತಿಲ್ಲ ಎಂದು ನಿಶ್ಚಿತವಾಗಿ ಗೊತ್ತಿದ್ದದ್ದರಿಂದ ಸುಳ್ಳು ದುಃಖ; ಸತ್ತಾರೆಂದೇ ತಿಳಿದ ದುರ್ಯೋಧನಾದಿಗಳು ಒಳಗೆ ಬಹಳ ಆನಂದಪಟ್ಟು, ಕಪಟದಿಂದ ಸುಳ್ಳು ದುಃಖ ಪ್ರದರ್ಶನ ಮಾಡಿದ್ದಾರೆ.

ಭೀಮೋಽಪ್ಯುದೂಹ್ಯ ವನಮಾಪಹಿಡಿಂಬಕಸ್ಯ ಭ್ರಾತೃನ್ಪೃಥಾಂಚ ತೃಷಿತೈರಭಿಯಾಚಿತಶ್ಚ ॥
ಪಾನೀಯಮುತ್ತರಪಟೇಂಽಬುಜಪತ್ರನದ್ಧಂದೂರಾದುದೂಹ್ಯದದೃಶೇ ಸ್ವಪತೋಽಥತಾಂಶ್ಚ ॥ ೪೭ ॥

ಭೀಮೋಽಪಿ - ಭೀಮನಾದರೂ ಭ್ರಾತೄನ್--ಸಹೋದರರನ್ನು ಪೃಥಾಂಚ - ಕುಂತಿಯನ್ನೂ ಕೂಡ ಉದೂಹ್ಯ -- ಹೊತ್ತುಕೊಂಡು ಹಿಡಿಂಬಕಸ್ಯ -- ಹಿಡಿಂಬರಾಕ್ಷಸನ ವನಂ - ಅರಣ್ಯವನ್ನು ಆಪ -- ಹೊಂದಿದನು ತೃಷಿತೈಃ -- ಜಾಯಾರಿಕೆ ಉಳ್ಳ ಪಾಂಡವರಿಂದ ಅಭಿಯಾಚಿತಃ -- ಬೇಡಲ್ಪಟ್ಟ ಭೀಮನು ಉತ್ತರಪಟೇ -- ಉತ್ತರೀಯ ವಸ್ತ್ರದಲ್ಲಿ ಅಂಬುಜಪತ್ರನದ್ಧಂ-ಕಮಲ ಪತ್ರದಲ್ಲಿ ಸ್ಥಾಪಿತವಾದ ಪಾನೀಯಂ -- ನೀರನ್ನು ಉದೂಹ್ಯ--ಹೊತ್ತುಕೊಂಡು ದೂರಾತ್--ದೂರದಿಂದ ಆನಯತ್--ತಂದನು ಅಥ -- ಅನಂತರ ಸ್ವಪತಃ -- ನಿದ್ರಿಸಿರುವ ತಾನ್ ಆ ಸಹೋದರರನ್ನು ದೂರಾತ್ -- ದೂರದಿಂದಲೇ ದದೃಶೇ -- ಕಂಡನು. ॥ ೪೭ ॥

ರಕ್ಷಾರ್ಥಮೇವ ಪರಿಜಾಗ್ರತಿ ಭೀಮಸೇನೇ ರಕ್ಷಃಸ್ವಸಾರ ಮಭಿಯಾಪಯತೇಹಿಡಿಬೀಂ ॥
ಸಾರೂಪಮೇತ್ಯ ಶುಭಮೇವದದರ್ಶ ಭೀಮಂ ಸಾಕ್ಷಾತ್ಸಮಸ್ತ ಶುಭಲಕ್ಷಣಸಾರಭೂತಂ ॥ ೪೮ ॥

ಭೀಮಸೇನೇ - ಭೀಮಸೇನನು ರಕ್ಷಾರ್ಥಮೇವ -- ಸಹೋದರರ ರಕ್ಷಣೆಗೋಸ್ಕರವೇ ಪರಿಜಾಗ್ರತಿ ಸತಿ ಜಾಗರೂಕನಾಗಿ ಇರುತ್ತಿರಲು ರಕ್ಷಃ -- ಹಿಡಿಂಬ ರಾಕ್ಷಸನು ಸ್ವಸಾರಂ -- ತಂಗಿಯಾದ ಹಿಡಿಂಬೀಂ -- ಹಿಡಿಂಬಿಯನ್ನು ಅಭಿಯಾಪಯತೇ -- ಪಾಂಡವರನ್ನು ತಿನ್ನಲು ತರುವುದಕ್ಕಾಗಿ ಕಳುಹಿಸಿದನು. ಸಾ -- ಆ ಹಿಡಿಂಬಿಯು ಶುಭಂ -- ಸುಂದರವಾದ ರೂಪಮೇವ --

ರೂಪವನ್ನೇ ಏತ್ಯ – ಹೊಂದಿ ಸಾಕ್ಷಾತ್ – ಮುಖ್ಯವಾಗಿ ಸಮಸ್ತಶುಭಲಕ್ಷಣ ಸಾರಭೂತಂ – ಎಲ್ಲಾ ದ್ವಾತ್ರಿಂಶಲ್ಲಕ್ಷಣಗಳ ಸ್ವರೂಪ ಭೂತನಾದ ಭೀಮಂ – ಭೀಮನನ್ನು ದದರ್ಶ – ಕಂಡಳು. ॥ ೪೮ ॥

ಸಾರಾಕ್ಷಸೀತನುಮವಾಪ ಸುರೇಂದ್ರಲೋಕ ಶ್ರೀರೇವಶಕ್ರದಯಿತಾತ್ವಪರೈವಶಚ್ಯಾಃ ॥
ಶಾಪಾತ್ಸ್ಪೃಧಾಪತಿಮವಾಪ್ಯ ಚ ಮಾರುತಿಂ ಸಾಪ್ರಾಪ್ತುಂನಿಜಾಂತನುಮಯಾಚತ ಭೀಮಸೇನಂ ॥೪೯॥

ಸಾ – ಆ ಹಿಡಿಂಬಿಯು ಸುರೇಂದ್ರಲೋಕಶ್ರೀಃಏವ – ಅಮರಾವತಿಯ ಸಂಪತ್ತಿಗೆ ಅಭಿಮಾನಿನಿಯಾದ ಶ್ರೀ ಎಂದು ಹೆಸರುಳ್ಳ ಒಬ್ಬಳಾದ ಅಪ್ಸರಾಸ್ತ್ರೀಯೇ; ಸಾಕ್ಷಾತ್ ಲಕ್ಷ್ಮಿಯೇ ಅಲ್ಲ ಶಚ್ಯಾಃ–ಶಚಿಯುದೆಸೆಯಿಂದ ಅಪರೈವ – ಬೇರೆಯೇ ಆದ ಶಕ್ರದಯಿತಾಸತೀ – ಇಂದ್ರನ ಹೆಂಡತಿಯಾಗಿ ಸ್ಪೃಧಾ – ಶಚಿಯಿಂದ ಕೂಡಿಕೊಂಡು ಸ್ಪರ್ಧೆಯ ಕಾರಣದಿಂದ ಶಚ್ಯಾಃ – ಶಚಿಯ ಶಾಪಾತ್ – ಶಾಪದಿಂದ ರಾಕ್ಷಸೀತನುಂ – ರಾಕ್ಷಸೀಯಶರೀರವನ್ನು ಅವಾಪ – ಹೊಂದಿದಳು ಸಾ – ಅವಳು ಮಾರುತಿಂ – ಭೀಮನನ್ನು ಪತಿಂ – ಗಂಡನನ್ನಾಗಿ ಹೊಂದಿ ನಿಜಾಂ – ತನ್ನದಾದ ತನುಂ – ಶರೀರವನ್ನು ಪ್ರಾಪ್ತುಂ – ಹೊಂದಲು ಭೀಮಸೇನಂ – ಭೀಮಸೇನನನ್ನು ಅಯಾಚತ – ಬೇಡಿದಳು. ॥ ೪೯ ॥

ತಾಂ ಭೀಮ ಆಹಕಮನೀಯತನುಂ ನಪೂರ್ವಂ ಜ್ಯೇಷ್ಠಾದುಪೈಮಿವನಿತಾಂನಹಿಧರ್ಮಏಷಃ ॥
ಸಾಚಾಹಕಾಮವಶಗಾ ಪುನರೇತದೇವ ಸ್ವಾವೇಶಯುಗ್ಮರುದಗ್ರ್ಯಪರಿಗ್ರಹಸ್ಯ ॥ ೫೦ ॥

ಭೀಮಃ – ಭೀಮನು ಕಮನೀಯತನುಂ – ಸುಂದರವಾದ ಶರೀರವುಳ್ಳ ತಾಂ – ಆ ಹಿಡಿಂಬಿಯನ್ನು ಕುರಿತು ಜ್ಯೇಷ್ಠಾತ್ – ಅಣ್ಣನಿಂದ ಪೂರ್ವಂ – ಮೊದಲು ವನಿತಾಂ – ಸ್ತ್ರೀಯನ್ನು ನೋಪೈಮಿ – ಮದುವೆಯಾಗಲಾರೆನು ಏಷಃ – ಅಣ್ಣನಿಂದ ಮೊದಲು ಮದುವೆಯಾಗುವುದು ಧರ್ಮಃ – ಧರ್ಮವು ನಹಿ – ಅಲ್ಲವಷ್ಟೆ ಇತಿ – ಎಂದು ಆಹ – ಹೇಳಿದನು. ಮರುದಗ್ರ್ಯಪರಿಗ್ರಹಸ್ಯ – ಮುಖ್ಯಪ್ರಾಣನ ಹೆಂಡತಿಯಾದ ಭಾರತಿಯ ಸ್ವಾವೇಶಯುಕ್ – ಚೆನ್ನಾಗಿ ಆವೇಶದಿಂದ ಕೂಡಿದ ಸಾಚ – ಆ ಹಿಡಿಂಬಿಯಾದರೂ ಪುನಃ – ಮತ್ತೂ ಕಾಮವಶಗಾಸತೀ – ಮನ್ಮಥನ ಅಧೀನಳಾಗಿ ಏತದೇವ – ಹಿಂದೆ ~~ಹೇಳಿದ ಪ್ರಾರ್ಥನಾರೂಪವಾಕ್ಯವನ್ನೇ ಆಹ – ಹೇಳಿದಳು ಹಿ – ಭಾರತಿಯ ಆವೇಶದಿಂದ ಭೀಮನ ಪ್ರಾರ್ಥನೆಯು ಯುಕ್ತ~~ ವೆಂದು ಪ್ರಸಿದ್ಧವು. ॥ ೫೦ ॥

ಸಾ ಭಾರತೀವರವಿಮುಂ ಪ್ರದದಾವಮುಷ್ಯೈಸ್ವಾವೇಶಮಾತ್ಮದಯಿತಸ್ಯಚ ಸಂಗಮೇನ ॥
ಶಾಪಾದ್ವಿಮುಕ್ತಿಮತೀವ್ರತಪಃ ಪ್ರಸನ್ನಾ ತೇನಾಹಸಾ ನಿಜತನುಂಪವಮಾನಸೂನೋಃ ॥ ೫೧ ॥

ಅತಿತೀವ್ರತಪಃಪ್ರಸನ್ನಾ – ಬಹಳ ತೀವ್ರವಾದ ತಪಸ್ಸಿನಿಂದ ಸಂತುಷ್ಟಳಾದ ಸಾ ಭಾರತೀ – ಆ ಭಾರತಿಯು ಅಮುಷ್ಯೈ – ಈ ಹಿಡಿಂಬಿಗೋಸ್ಕರ ಸ್ವಾವೇಶಂ – ತನ್ನ ಸನ್ನಿಧಾನವನ್ನು ಆತ್ಮದಯಿತಸ್ಯ – ತನಗೆ ಪ್ರಿಯನಾದ ಪವಮಾನ ಸೂನೋಃ – ವಾಯುಪುತ್ರನಾದ ಭೀಮನ ಸಂಗಮೇನ – ಅಂಗಸಂಗದಿಂದ ಶಾಪಾತ್–ಶಾಪದಿಂದ ವಿಮುಕ್ತಿಂ – ಮೋಕ್ಷ ರೂಪವಾದ ಇಮಂವರಂ – ಈ ವರವನ್ನು ಪ್ರದದೌ – ಕೊಟ್ಟಳು ತೇನ – ಆ ಶಾಪವಿಮೋಚನ ರೂಪ ಕಾರಣದಿಂದ ಪವಮಾನಸೂನೋಃಸಕಾಶಾತ್ ಭೀಮನ ಸಕಾಶದಿಂದ ನಿಜತನುಂ – ತನ್ನ ಶರೀರವನ್ನು ಪ್ರಾಪ್ತುಂ – ಹೊಂದುವುದಕ್ಕಾಗಿ ಪುನಃ – ಮತ್ತೊಮ್ಮೆ ಆಹ – ಹೇಳಿದಳು. ॥ ೫೧ ॥

ಜ್ಞಾನಂಚನೈಜ ಮಭಿದರ್ಶಯಿತುಂ ಪುನಶ್ಚಾಹೇಶ್ವರೋಽಖಿಲಜಗದ್ಗುರುರಿಂದಿರೇಶಃ ॥
ವ್ಯಾಸಸ್ವರೂಪ ಇಹಚೇತ್ಯಪರಶ್ವಏವ ಮಾಂತೇಪ್ರದಾಸ್ಯತಿ ತದಾಪ್ರಕರೋಷಿಮೇಽರ್ಥಂ ॥ ೫೨ ॥

ಪುನಃ – ಮತ್ತು ಸಾ – ಆ ಹಿಡಿಂಬಿಯು ನೈಜಂಜ್ಞಾನಂ – ತನ್ನ ಜ್ಞಾನವನ್ನು ಅಭಿದರ್ಶಯಿತುಂ – ತಿಳಿಸುವುದಕ್ಕೋಸ್ಕರ ಈಶ್ವರಃ – ಸ್ವಾಮಿಯಾದ ಅಖಿಲಜಗದ್ಗುರುಃ – ಎಲ್ಲಾ ಜಗತ್ತಿಗೆ ಉಪದೇಶಕರಾದ ವ್ಯಾಸಸ್ವರೂಪಃ – ವೇದವ್ಯಾಸಸ್ವರೂಪವುಳ್ಳ ಇಂದಿರೇಶಃ–ಲಕ್ಷ್ಮೀಪತಿಯಾದ ಶ್ರೀಹರಿಯು ಪರಶ್ವಏವ – ನಾಳೆಯೇ ಇಹ–ಇಲ್ಲಿಗೆ ಏತ್ಯ ಬಂದು ಮಾಂ–ನನ್ನನ್ನು ತೇ–ನಿನಗೋಸ್ಕರ ಪ್ರದಾಸ್ಯತಿ–ಕೊಡುವರು ತದಾ–ಆಗ ಮೇ–ನನ್ನ ಅರ್ಥ್ಯಂ–ಅಭೀಷ್ಟವನ್ನು ಪ್ರಕರೋಷಿ–ಮಾಡುವಿ ಇತ್ಯಾಹ–ಎಂದು ಹೇಳಿದಳು. ॥ ೫೨ ॥

ಭಾ ಅ. ೪೭-೫೨ ಶ್ರೀ ಭೀಮಸೇನದೇವರು ತಾಯಿ-ಸಹೋದರರನ್ನು ಹೊತ್ತುಕೊಂಡು ಹೋಗುತ್ತಾ ಹಿಡಿಂಬ ರಾಕ್ಷಸನ ವನಕ್ಕೆ ಬಂದಿದ್ದಾರೆ. ಅಲ್ಲಿಗೆ ಬಂದಾಗ ಎಲ್ಲರೂ ನೀರಡಿಸಿ ನೀರನ್ನು ತರಲು ಶ್ರೀಭೀಮಸೇನರಿಗೆ ಕೇಳಿದಾಗ ಅವರು ಹೋಗಿ ಉತ್ತರೀಯ ವಸ್ತ್ರದಲ್ಲಿ ಕಮಲದ ಎಲೆಯನ್ನು ಇಟ್ಟು ಅದರಲ್ಲಿ ನೀರು ತುಂಬಿಸಿಕೊಂಡು ತಂದಿದ್ದಾರೆ. (ಹೀಗೆ ಪಾತ್ರೆ ಇಲ್ಲದಿದ್ದರೂ ಉಪಾಯದಿಂದ ತಂದರು. ಇದೂ ಒಂದು ಶ್ರೀಕೃಷ್ಣನು 'ಯೋಗಃ ಕರ್ಮಸು ಕೌಶಲಂ ಎಂದು ಹೇಳಿದ ಯೋಗ ಅಥವಾ ಕರ್ಮ ಕೌಶಲ) ದೂರದಿಂದ ನೀರು ತಂದಿರುವಾಗ ಶ್ರೀಭೀಮಸೇನರು ಎಲ್ಲರೂ ನಿದ್ರಿಸುತ್ತಿರುವದನ್ನು ಕಂಡು ಅವರೆಲ್ಲರನ್ನು ರಕ್ಷಿಸುವದಕ್ಕಾಗಿ ತಾವು ಎಚ್ಚರಿಕೆಯಿಂದಲೇ ಇದ್ದಾರೆ. ಈ ಸಮಯದಲ್ಲಿ ಹಿಡಿಂಬನು ತನ್ನ ತಂಗಿ ಹಿಡಿಂಬಿಯನ್ನು ಅವರನ್ನೆಲ್ಲ ಆಹಾರವಾಗಿ ತರುವದಕ್ಕಾಗಿ ಕಳಿಸಿದನು. ಅವಳು ಬಂದು ಶ್ರೀಭೀಮಸೇನದೇವರನ್ನು ದೂರದಲ್ಲಿ ಕಂಡು, ಶುಭರೂಪಳುಳ್ಳವಳಾಗಿ ಬಂದು, ಸಮೀಪದಿಂದ ಸರ್ವದೇಹ ಲಕ್ಷಣ ಸಂಪನ್ನರಾದ ಅವರನ್ನು ನೋಡಿದ್ದಾಳೆ. ಅವರನ್ನು ತನ್ನ ಪತಿಯನ್ನಾಗಿ ಮಾಡಿಕೊಂಡು ವಿಹರಿಸಿ ತನ್ನ ರಾಕ್ಷಸದೇಹವನ್ನು ತ್ಯಜಿಸಿ ತನ್ನ ಮೂಲರೂಪವನ್ನು ಹೊಂದುವದಕ್ಕಾಗಿಯೇ ಅವಳು ಪ್ರಾರ್ಥಿಸಿದಳು. ಅವಳು ಸ್ವರ್ಗಲೋಕದ ಸಂಪತ್ತಿನ ಅಭಿಮಾನಿ ದೇವತೆಯಃ, ಇಂದ್ರದೇವರ ಭಾರ್ಯಾಳೂ, ಶಚೀದೇವಿಯಿಂದ ಭಿನ್ನಳಾಗಿ ಅವಳಿಗಿಂತ ಕಡಿಮೆಯಾದ 'ಶ್ರೀ' ಎಂಬ ಹೆಸರಿನ ಅಪ್ಸರಾಸ್ತ್ರೀಯು. ಸ್ವರ್ಗದಲ್ಲಿ ಶಚೀದೇವಿಯಿಂದ ಸ್ಪರ್ಧೆ ಮಾಡಿದ್ದರಿಂದ ಶಚೀ ಶಾಪದಿಂದ ರಾಕ್ಷಸಿ ಶರೀರವನ್ನು ಹೊಂದಿದ್ದಳು. ಅವಳಿಂದ ಪ್ರಾರ್ಥಿತರಾದಾಗ ಆ ಸುಂದರಿಯನ್ನು ಕುರಿತು ನಾನು ಅಣ್ಣನಿಗಿಂತ ಮೊದಲು ಮದುವೆಯಾಗುವದಿಲ್ಲ; ಹಾಗೆ ಆಗುವದು ಧರ್ಮವಲ್ಲ ಎಂದು ಹೇಳಿದರು. ಅವಳಲ್ಲಿ ಶ್ರೀಭಾರತಿದೇವಿಯರ ಆವೇಶವಿತ್ತು ಹೀಗಾಗಿ ಶ್ರೀಭೀಮರನ್ನು ಪ್ರಾರ್ಥಿಸುವದು ಯುಕ್ತವಾದದ್ದೇ. ಅವಳು ಪುನಃ ಪುನಃ ಪ್ರಾರ್ಥಿಸಿದರೂ ಕೂಡ (ಮೊದಲು ಕಾಮವಶಳಾಗಿ, ನಂತರ ತನ್ನ ಶಾಪಮೋಚನೆಗಾಗಿ) ಶ್ರೀಭೀಮಸೇನರು ಇಲ್ಲವೆಂದೇ ಹೇಳಿದಾಗ, ತನ್ನಲ್ಲಿರುವ ದಿವ್ಯ ಜ್ಞಾನವನ್ನು ತೋರಿಸುವದಕ್ಕಾಗಿ ನಾಡಿದು ಇಲ್ಲಿಗೆ ಶ್ರೀವೇದವ್ಯಾಸದೇವರು ಬಂದು ನನ್ನನ್ನು ನಿನ್ನ ಜೊತೆಗೆ ವಿವಾಹ ಮಾಡಿಸುತ್ತಾರೆ. ಆಗ ನೀನು ನನ್ನ ಅಪೇಕ್ಷೆಯನ್ನು ಪೂರ್ಣಮಾಡುತ್ತೀ ಎಂದು ಅಂದಳು. (ಅವಳು ಶಚೀ ದೇವಿಯಿಂದ ಶಪ್ತಳಾದಾಗ ಶ್ರೀಭಾರತೀದೇವಿಯು ಕಠಿಣ ತಪಸ್ಸನ್ನು ಮಾಡಿ ಸಂತೋಷಪಡಿಸಿ ಅವಳಿಂದ ಅವಳ ಆವೇಶವನ್ನು, ಅವಳ ಪತಿಯಾದ ವಾಯ್ವಂತರ್ಗತ ಭೀಮನ ಸಂಗಮದಿಂದ ಶಾಪಮೋಚನೆಯನ್ನು ವರವನ್ನಾಗಿ ಪಡೆದಿದ್ದಳು.)

ಕಾಲೇತದೈವ ಕುಪಿತಃಪ್ರಯಯೌ ಹಿಡಿಂಬೋ ಭೀಮಂನಿಹಂತುಮಪಿ ತಾಂಚನಿಜಸ್ವಸಾರಂ ॥
ಭಕ್ಷಾರ್ಥಮೇವಹಿಪುರಾ ಸತುತಾಂನ್ಯಯುಂಕ್ತ ನೇತುಂಚತಾನಥ ಸಮಾಸದದಾಶು ಭೀಮಂ ॥ ೫೩ ॥

ತದೈವಕಾಲೇ ಅದೇ ಸಮಯದಲ್ಲಿಯೇ ಕುಪಿತಃ – ಕೋಪಗೊಂಡ ಹಿಡಿಂಬಃ - ಹಿಡಿಂಬನು ಭೀಮಂ – ಭೀಮನನ್ನು ನಿಜಸ್ವಸಾರಂ – ತನ್ನ ತಂಗಿಯಾದ ತಾಂಚ – ಆ ಹಿಡಿಂಬಿಯನ್ನೂ ಕೂಡ ನಿಹಂತುಂ – ಕೊಲ್ಲಲು ಪ್ರಯಯೌ - ಹೋದನು ಸತು – ಆ ಹಿಡಿಂಬನಾದರೂ ಪುರಾ – ಮೊದಲು ಭಕ್ಷಾರ್ಥಂ – ತಿನ್ನುವುದಕ್ಕಾಗಿ ತಾನ್ – ಆ ಪಾಂಡವರನ್ನು ನೇತುಮೇವ – ತರುವುದಕ್ಕಾಗಿಯೇ ತಾಂ – ಆ ಹಿಡಿಂಬಿಯನ್ನು ನ್ಯಯುಂಕ್ತ ಕಳುಹಿಸಿದನು ಅಥ – ಆಮೇಲೆ ಸಃ – ಆ ಹಿಡಿಂಬನು ಭೀಮಂ – ಭೀಮನನ್ನು ಆಶು - ಕೂಡಲೇ ಸಮಾಸದತ್ – ಹೊಂದಿದನು. ॥ ೫೩ ॥

ಸಾಭೀಮಮೇವ ಶರಣಂಪ್ರಜಗಾಮ ತಾಂಚಭ್ರಾತೃಂಶ್ಚ ಮಾತರಮುಥಾವಿತುಮುಭ್ಯಯಾತ್ತಂ ॥
ಭೀಮಃ ಸುದೂರಮುಪಕೃಷ್ಯ ಸಹೋದರಾಣಾಂ ನಿದ್ರಾಪ್ರಭಂಗಭಯತೋಯುಯುಧೇ೪ಮುನಾಚ ॥೫೪॥

ಸಾ ಆ ಹಿಡಿಂಬಿಯು ಭೀಮಮೇವ – ಭೀಮನನ್ನೇ ಶರಣಂ – ರಕ್ಷಕನನ್ನಾಗಿ ಪ್ರಜಗಾಮ – ಹೊಂದಿದಳು ಅಥ – ಅನಂತರ ಭೀಮಃ – ಭೀಮನು ತಾಂಚ ಆ ಹಿಡಿಂಬಿಯನ್ನೂ ಭ್ರಾತೃನ್ – ಸಹೋದರರನ್ನು ಮಾತರಂಚ – ತಾಯಿಯನ್ನೂ ಕೂಡ ಅವಿತುಂ – ರಕ್ಷಿಸುವುದಕ್ಕೋಸ್ಕರ ತಂ – ಆ ಹಿಡಿಂಬನನ್ನು ಅಭ್ಯಯಾತ್ – ಎದುರಾಗಿ ಬಂದನು ಭೀಮಃ – ಭೀಮನು ಸಹೋದರಾಣಾಂ - ಅಣ್ಣ ತಮ್ಮಂದಿರ ನಿದ್ರಾಪ್ರಭಂಗಭಯತಃ – ನಿದ್ದೆಗೆ ತೊಂದರೆಯಾಗುವುದೆಂಬ ಹೆದರಿಕೆಯಿಂದ ತಂ – ಆ ಹಿಡಿಂಬನನ್ನು ಸುದೂರಂ – ಬಹುದೂರ ಅಪಕೃಷ್ಯ – ಸೆಳೆದುಕೊಂಡು ಹೋಗಿ ಅಮುನಾ – ಈ ಹಿಡಿಂಬನಿಂದ ಯುಯುಧೇ – ಯುದ್ಧ ಮಾಡಿದನು. ॥ ೫೪ ॥

ತೌ ಮುಷ್ಟಿಭಿಸ್ತರುಭಿರಶ್ಮಭಿರದ್ರಿಭಿಶ್ಚ ಯುಧ್ವಾನಿತಾಂತರವತಃ ಪ್ರತಿಬೋಧಿತಾಂಸ್ತಾನ್ ॥
ಸಂಚಕ್ರತುಸ್ತದನು ಸೋದರಸಂಭ್ರಮಂತಂದೃಷ್ಟ್ವೈವ ಮಾರುತಿರಹನ್ನುರಸಿಸ್ಮರಕ್ಷಃ ॥ ೫೫ ॥

ತೌ – ಆ ಭೀಮಹಿಡಿಂಬರಿಬ್ಬರು ಮುಷ್ಟಿಭಿಃ – ಮುಷ್ಟಿಪ್ರಹಾರಗಳಿಂದಲೂ ತರುಭಿಃ – ಮರಗಳಿಂದಲೂ ಅಶ್ಮಭಿಃ – ಕಲ್ಲುಗಳಿಂದಲೂ ಅದ್ರಿಭಿಶ್ಚ – ಪರ್ವತಗಳಿಂದಲೂ ಯುಧ್ವಾ–ಯುದ್ಧಮಾಡಿ ನಿತಾಂತರವತಃ – ಉಚ್ಚಧ್ವನಿಯಿಂದ ತ ನ್ – ಆ ಸಹೋದರರನ್ನು ಪ್ರತಿಬೋಧಿತಾನ್ – ಎಚ್ಚತ್ತವರನ್ನಾಗಿ ಸಂಚಕ್ರತುಃ – ಮಾಡಿದರು ತದನು ಎಚ್ಚರಿಕೆಯಾದ ನಂತರ ಮಾರುತಿಃ – ಭೀಮನು ತಂ ಸೋದರಸಂಭ್ರಮಂ – ಸಹೋದರರ ಆ ಭಯವನ್ನು ದೃಷ್ಟ್ವೈವ–ನೋಡಿಯೇ ರಕ್ಷಃ – ಹಿಡಿಂಬನನ್ನು. ಉರಸಿ – ಎದೆಯಲ್ಲಿ ಅಹನ್ – ಹೊಡೆದನು. ॥ ೫೫ ॥

ತದ್ಭೀಮು ಬಾಹುಬಲತಾಡಿತ ವಿಶವಾಕ್ಯಾತ್ಸರ್ವೈರಜೇಯಮುಪಿ ಭೂವಿತಲೇಪಪಾತ ॥
ವಕ್ತ್ರಸ್ರವದ್ಬಹುಲಶೋಣಿತಮಾಪಮೃತ್ಯುಂ ಪ್ರಾಯಾತ್ತಮೋಂಧಮುಪಿ ನಿತ್ಯಮಥಕ್ರಮೇಣ ॥ ೫೬ ॥

ತತ್ – ಆ ಹಿಡಿಂಬರಾಕ್ಷಸನು ಈಶವಾಕ್ಯಾತ್ – ರುದ್ರನ ಮಾತಿನಿಂದ ಸರ್ವೈಃ – ಎಲ್ಲರಿಂದಲೂ ಅಜೇಯಮುಪಿ – ಪರಾಜಯಿಸಲ್ಪಡದವನಾದರೂ ಭೀಮಬಾಹುಬಲ ತಾಡಿತಂಸತ್ – ಭೀಮನ ಭುಜ ಸಾಮರ್ಥ್ಯದಿಂದ ಹೊಡೆಯಲ್ಪಟ್ಟವನಾಗಿ ಭೂವಿತಲೇ – ಭೂತಲದಲ್ಲಿ ಪಪಾತ – ಬಿದ್ದನು. ವಕ್ತ್ರಸ್ರವದ್ಬಹುಲಶೋಣಿತಂಸತ್ – ಮುಖದಿಂದ ಸುರಿಯುವ ಬಹಳ ರಕ್ತ ಉಳ್ಳವನಾಗಿ ಮೃತ್ಯುಂ – ಮರಣವನ್ನು ಆಪ – ಹೊಂದಿದನು ಅಥ – ಅನಂತರ ಕ್ರಮೇಣ – ಕ್ರಮದಿಂದ ನಿತ್ಯಂ – ನಿತ್ಯವಾದ ಅಂಧಂತಮೋsಪಿ – ಅಂಧಂತಮಸ್ಸನ್ನೂ ಪ್ರಾಯಾತ್ – ಹೊಂದಿದನು. ॥ ೫೬ ॥

ಹತ್ವೈವಶರ್ವವರರಕ್ಷಿತ ರಾಕ್ಷಸಂತಂ ಸರ್ವೈರವಧ್ಯಮುಪಿ ಸೋದರಮಾತೃಯುಕ್ತಃ ॥
ಭೀಮೋಯಯೌ ತದನು ಸಾಪ್ರಯಯೌ ಹಿಡಿಂಬೀಕುಂತೀಂಯುಧಿಷ್ಠಿರ ಮಥಾಸ್ಯಕೃತೇಯಯಾಚೇ॥೫೭॥

ಸೋದರಮಾತೃಯುಕ್ತಃ–ಸಹೋದರರಾದ ಧರ್ಮಾದಿಗಳಿಂದ, ತಾಯಿಯಾದ ಕುಂತಿಯಿಂದಲೂ ಕೂಡಿರುವ ಭೀಮಃ– ಭೀಮನು ಸರ್ವೈಃ ಎಲ್ಲರಿಂದಲೂ ಅವಧ್ಯಮಪಿ – ಕೊಲ್ಲಲುಅಶಕ್ಯನಾದ ರುದ್ರವರರಕ್ಷಿತರಾಕ್ಷಸಂ - ಶಿವನ ವರದಿಂದ ರಕ್ಷಿಸಿಕೊಳ್ಳಲ್ಪಟ್ಟ ರಾಕ್ಷಸನಾದ ತಂ – ಆ ಹಿಡಿಂಬನನ್ನು ಹತ್ವೈವ – ಕೊಂದೇ ಯಯೌ – ಹೋದನು ತದನು – ಆ ಭೀಮನನ್ನು ಅನುಸರಿಸಿ ಸಾ ಹಿಡಿಂಬೀ – ಆ ಹಿಡಿಂಬಿಯು ಪ್ರಯಯೌ – ಹೋದಳು ಅಥ – ಅನಂತರ ಅಸ್ಯಕೃತೇ – ಭೀಮನು ತನ್ನನ್ನು ಪರಿಗ್ರಹಿಸುವುದಕ್ಕೋಸ್ಕರ ಯುಧಿಷ್ಠಿರಂ – ಧರ್ಮರಾಜನನ್ನು ಕುಂತೀಂಚ – ಕುಂತಿಯನ್ನು ಕೂಡ ಯಯಾಚೇ– ಬೇಡಿದಳು. ॥ ೫೭ ॥

ತಾಭ್ಯಾಮನೂಕ್ತಮುಪಿಯನ್ನ ಕರೋತಿಭೀಮಃ ಪ್ರಾದುರ್ಬಭೂವನಿಖಿಲೋರುಗುಣಾಭಿಪೂರ್ಣಃ ॥
ವ್ಯಾಸಾತ್ಮಕೋಹರಿರನಂತ ಸುಖಾಂಬುರಾಶಿರ್ವಿದ್ಯಾಮರೀಚಿವಿತತಃ ಸಕಲೋತ್ತಮೋsಲಂ ॥ ೫೮ ॥

ಭೀಮಃ – ಭೀಮನು ತಾಭ್ಯಾಂ – ಕುಂತಿ ಮತ್ತು ಧರ್ಮರಾಜರಿಬ್ಬರಿಂದ ಅನೂಕ್ತಮಪಿ – ಪುನಃ ಪುನಃ ಹೇಳಲ್ಪಟ್ಟ ಮಾತನ್ನೂ ಕೂಡ ಯತ್ – ಯಾವಾಗ ನ ಕರೋತಿ – ಮಾಡಲಿಲ್ಲವೋ ತದಾ – ಆಗ ನಿಖಿಲೋರುಗುಣಾಭಿಪೂರ್ಣಃ – ಎಲ್ಲಾ ಉತ್ತಮ ಜ್ಞಾನಾದಿಗುಣಗಳಿಂದ ಪರಿಪೂರ್ಣರಾದ ಅನಂತಸುಖಾಂಬುರಾಶಿಃ—ಅಪರಿಮಿತ ಆನಂದಗಳಿಂದ ಸಮುದ್ರದಂತಿರುವ ವಿದ್ಯಾಮರೀಚಿವಿತತಃ—ವಿದ್ಯೆಗಳೆಂಬ ಕಿರಣಗಳಿಂದ ವ್ಯಾಪ್ತರಾದ ಅಲಂ—ಮುಖ್ಯವಾಗಿ ಸಕಲೋತ್ತಮಃ— ಎಲ್ಲರಿಂದಲೂ ಶ್ರೇಷ್ಠರಾದ ವ್ಯಾಸಾತ್ಮಕಃ—ವೇದವ್ಯಾಸರ ಸ್ವರೂಪವುಳ್ಳ ಹರಿಃ—ಪರಮಾತ್ಮನು ಪ್ರಾದುರ್ಬಭೂವ— ಪ್ರಕಟನಾದನು. ॥ ೫೮ ॥

ದೃಷ್ಟ್ವೈವ ತಂ ಪರಮನೋದಿನ ಆಶುಪಾರ್ಥಾ ಮಾತ್ರಾಸಹೈವ ಪರಿಪೂಜ್ಯ ಗುರುಂವಿರಿಂಚೇಃ ॥
ಉಲ್ಲಾಲಿತಾಶ್ಚ ಹರಿಣಾಪರಮಾತಿಹಾರ್ದಪ್ರೋತ್ಫುಲ್ಲ ಪದ್ಮನಯನೇನ ತದೋಪವಿಷ್ಟಾಃ ॥ ೫೯ ॥

ತದಾ - ಆಗ ಪಾರ್ಥಾಃ -- ಪಾಂಡವರು ಮಾತ್ರಾ—ತಾಯಿಯಿಂದ ಸಹೈವ—ಕೂಡಿಕೊಂಡೇ ವಿರಿಂಚೇಃ —ಬ್ರಹ್ಮ ದೇವರಿಗೆ ಗುರುಂ—ಉಪದೇಶಕರಾದ ವೇದವ್ಯಾಸದೇವರನ್ನು ಆಶು —ಕೂಡಲೇ ಪರಿಪೂಜ್ಯ—ಭಕ್ತಿಪೂರ್ವಕವಾಗಿ ಪೂಜಿಸಿ ತಂ—ಆ ವ್ಯಾಸರನ್ನು ದೃಷ್ಟೈವ—ನೋಡಿಯೇ ಪರಮಮೋದಿನಸ್ಸಂತಃ—ಅತಿ ಸಂತೋಷವುಳ್ಳವರಾಗಿ ಪರಮಾತಿ ಹಾರ್ದಪ್ರೋತ್ಫುಲ್ಲಪದ್ಮನಯನೇನ—ಉತ್ತಮವಾದ ಅತ್ಯಂತ ಸ್ನೇಹದಿಂದ ಅರಳಿದ ಕಮಲದಂತಿರುವ ಕಣ್ಣುಗಳುಳ್ಳ ಹರಿಣಾ — ವೇದವ್ಯಾಸದೇವರಿಂದ ಉಲ್ಲಾಲಿತಾಸ್ಸಂತಃ — ಲಾಲಿಸಿಕೊಳ್ಳಲ್ಪಟ್ಟವರಾಗಿ ಉಪವಿಷ್ಟಾಃ — ಕುಳಿತು ಕೊಂಡರು. ॥ ೫೯ ॥

ತಾನ್ಭಕ್ತಿನಮ್ರಶಿರಸಃ ಸಮುದೀಕ್ಷ್ಯ ಕೃಷ್ಣೋ ಭೀಮಂಜಗಾದನತ ಆಶುಹಿಡಿಂಬಯಾಚ ॥
ಏತಾಂಗೃಹಾಣಯುವತೀಂ ಸುರಸದ್ಮಶೋಭಾಂ ಜಾತೇಸುತೇಸಹ ಸುತಾಪ್ರತಿಯಾತುಚೈಷಾ ॥ ೬೦ ॥

ಹಿಡಿಂಬಯಾ — ಹಿಡಿಂಬಿಯಿಂದ ನತಃ — ನಮಸ್ಕರಿಸಿಕೊಳ್ಳಲ್ಪಟ್ಟ ಕೃಷ್ಣಃ — ವೇದವ್ಯಾಸರು ಭಕ್ತಿನಮ್ರಶಿರಸಃ — ಭಕ್ತಿಯಿಂದ ಬಗ್ಗಿದ ಶಿರಸ್ಸುಳ್ಳ ತಾನ್ — ಆ ಪಾಂಡವರನ್ನು ಸಮುದೀಕ್ಷ್ಯ — ನೋಡಿ ಭೀಮಂ — ಭೀಮನನ್ನು ಕುರಿತು ಸುರಸದ್ಮಶೋಭಾಂ ಅಮರಾವತಿಗೆ ಅಲಂಕಾರಭೂತಳಾದ ಏತಾಂ ಯುವತೀಂ — ಈ ತರುಣಿಯನ್ನು ಗೃಹಾಣ — ಮದುವೆ ಮಾಡಿಕೊ ಸುತೇ — ಮಗನು ಜಾತೇಸತಿ ಹುಟ್ಟುತ್ತಿರಲು ಸಹಸುತಾ - ಮಗನಿಂದ ಕೂಡಿದ ಏಷಾ — ಇವಳು ಪ್ರತಿಯಾತು— ಹೋಗಲಿ. ॥ ೬೦ ॥

ಏವಂ ಬ್ರುವತ್ಯಗಣಿತೋರುಗುಣೇ ರಮೇಶೇ ಓಮಿತ್ಯುದೀರ್ಯಕೃತವಾಂಶ್ಚತಥೈವಭೀಮಃ ॥
ಸ್ಕಂಧೇನ ಚೋಹ್ಯವಿಬುಧಾಚರಿತ ಪ್ರದೇಶಾನ್ಭೀಮಂ ಪ್ರಯಾತ್ಯುದಯು ಏವರವೇರ್ಹಿಡಿಂಬೀ ॥ ೬೧ ॥

ಅಗಣಿತೋರುಗುಣೇ — ಅಸಂಖ್ಯಾತಗಳಾದ ಉತ್ಕೃಷ್ಟ ಗುಣಗಳುಳ್ಳ ರಮೇಶೇ—ಲಕ್ಷ್ಮೀಪತಿಯಾದ ವೇದವ್ಯಾಸ ದೇವರು ಏವಂ ಬ್ರುವತಿ ಸತಿ ಹಿಂದೆ ಹೇಳಿದ ಪ್ರಕಾರ ಹೇಳುತ್ತಿರಲು ಭೀಮಃ — ಭೀಮನು ಓಮಿತಿ — ಹಾಗೆಯೇ ಆಗ ಲೆಂದು ಉದೀರ್ಯ - ಹೇಳಿ ತಥೈವ — ವೇದವ್ಯಾಸರು ಹೇಳಿದಂತೆ ಕೃತವಾನ್—ಮಾಡಿದನು ಹಿಡಿಂಬೀ — ಹಿಡಿಂಬಿಯು ರವೇಃ — ಸೂರ್ಯನ ಉದಯೇಸತಿ — ಉದಯವಾಗುತ್ತಿರಲು ಭೀಮಂ — ಭೀಮನನ್ನು ಸ್ಕಂಧೇನ — ಹೆಗಲಿನಿಂದ ಊಹ್ಯ — ಹೊತ್ತುಕೊಂಡು ವಿಬುಧಾಚರಿತಪ್ರದೇಶಾನ್ — ದೇವತೆಗಳ ಸಂಚಾರಕ್ಕೆ ಯೋಗ್ಯಗಳಾದ ಉದ್ಯಾನವನಾದಿ ಪ್ರದೇಶಗಳನ್ನು ಪ್ರಯಾತಿ — ಹೋಗುತ್ತಾಳೆ. ॥ ೬೧ ॥

ಸಾನಂದನಾದಿಷು ವನೇಷುವಿಹೃತ್ಯತೇನ ಸಾಯಂಪ್ರಯಾತಿ ಪೃಥಯಾಸಹಿತಾಂಶ್ಚಪಾರ್ಥಾನ್ ॥
ಏವಂ ಯುಯೂವಪಿತಯೋರಿಹ ವತ್ಸರಾರ್ಧೋ ಜಾತಶ್ಚ ಸೂನುರತಿವೀರ್ಯಬಲೋಪಪನ್ನಃ ॥ ೬೨ ॥

ಸಾ — ಆ ಹಿಡಿಂಬಿಯು ನಂದನಾದಿಷುವನೇಷು — ನಂದನ ಮೊದಲಾದ ಇಂದ್ರನ ವನಗಳಲ್ಲಿ ತೇನ — ಆ ಭೀಮನಿಂದ ಕೂಡಿ ವಿಹೃತ್ಯ — ಕ್ರೀಡಿಸಿ ಸಾಯಂ - ಸಾಯಂಕಾಲದಲ್ಲಿ ಪೃಥಯಾ — ಕುಂತಿಯಿಂದ ಸಹಿತಾನ್ — ಕೂಡಿದ ಪಾರ್ಥಾನ್ — ಪಾಂಡವರನ್ನು ಪ್ರಯಾತಿ ಹೊಂದುತ್ತಾಳೆ. ಇಹ — ಈ ಅರಣ್ಯದಲ್ಲಿ ತಯೋಃ ಕ್ರೀಡಿಸಿಕೊಂಡಿರುವ ಅವರಿಬ್ಬರಿಗೆ ವತ್ಸರಾರ್ಧೋಪಿ — ಆರು ತಿಂಗಳ ಕಾಲವೂ ಕೂಡ ಏವಂ — ಇದೇ ರೀತಿಯಾಗಿ ಯಯೌ — ಹೋಯಿತು ಅತಿವೀರ್ಯ ಬಲೋಪಪನ್ನಃ — ಅತ್ಯಂತ ಪರಾಕ್ರಮ ಸಾಮರ್ಥ್ಯಗಳಿಂದ ಕೂಡಿದ ಸೂನುಶ್ಚ — ಮಗನೂ ಕೂಡ ಜಾತಃ — ಹುಟ್ಟಿದನು. ॥ ೬೨ ॥

ದೇವೋsಪಿ ರಾಕ್ಷಸತನುರ್ನಿರ್ಋತಿಃ ಪುರಾಯ ಆವೇಶಯುಕ್ಚ ಗಿರಿಶಸ್ಯಘಟೋತ್ಕಚಾಖ್ಯಃ ॥
ಪೂರ್ವಂಘಟೋಪಮಮುಷ್ಯ ಶಿರೋಬಭೂವಕೇಶಾನಿಮೇಷತ ಉದಾಸುರತೋಹಿನಾಮು ॥ ೬೩ ॥

ಪುರಾ — ಹಿಂದೆ ದೇವೋsಪಿ — ದೇವತೆಯಾದರೂ ರಾಕ್ಷಸತನುಃ — ರಾಕ್ಷಸ ಶರೀರವುಳ್ಳ ಯಃ — ಯಾವ ನಿರ್ಋತಿಃ — ನಿರ್ಋತಿಯೋ ಸಃ — ಅವನು ಗಿರಿಶಸ್ಯ — ರುದ್ರನ ಆವೇಶಯುಕ್ಸನ್ — ಆವೇಶದಿಂದ ಕೂಡಿದವನಾಗಿ ಘಟೋತ್ಕಚಾಖ್ಯಃ

ಸನ್ – ಘಟೋತ್ಕಚನೆಂದು ಹೆಸರುಳ್ಳವನಾಗಿ ಜಾತಃ – ಹುಟ್ಟಿದನು ಹಿ – ಯಾವ ಕಾರಣದಿಂದ ಪೂರ್ವಂ ಹುಟ್ಟಿದ ಸಮಯದಲ್ಲಿ ಅಮುಷ್ಯ – ಇವನಿಗೆ ಘಟೋಪಮಮ್ – ಮಡಿಕೆಗೆ ಸದೃಶವಾದ ಶಿರಃ – ತಲೆಯು ಬಭೂವ – ಇತ್ತೋ ನಿಮೇಷತಃ – ಹುಟ್ಟಿದ ಒಂದು ನಿಮಿಷ ಕಾಲಾನಂತರ ಕೇಶಾಃ – ಕೂದಲುಗಳು ಉದಾಸುಃ – ಹುಟ್ಟಿದವೋ ಅತಃ – ಆ ಕಾರಣದಿಂದ ನಾಮ – ಘಟೋತ್ಕಚನೆಂಬ ಹೆಸರು. ॥ ೬೩ ॥

ಜಾತೇ ಸುತೇಸಮಯತೋ ಭಗವತ್ಕೃತಾತ್ಸ ಭೀಮೋಜಗಾದಸಸುತಾಂ ಗಮನಾಯತಾಂಚ ॥
ಸ್ಮೃತ್ಯಾಭಿಯಾನ ಉಭಯೋರಪಿ ಸಾಪ್ರತಿಜ್ಞಾಂತೇಷಾಂ ವಿಧಾಯಚಯಯೌ ಸುರಲೋಕಮೇವ ॥೬೪॥

ಸಭೀಮಃ – ಆ ಭೀಮನು ಸುತೇ – ಮಗನು ಜಾತೇಸತಿ – ಹುಟ್ಟುತ್ತಿರಲು ಭಗವತ್ಕೃತಾತ್ – ವೇದವ್ಯಾಸರಿಂದ ಮಾಡಲ್ಪಟ್ಟ ಸಮಯತಃ – ಕಾಲನಿಯಮದಿಂದ ಸಸುತಾಂ – ಮಗನಿಂದ ಕೂಡಿದ ತಾಂ – ಆ ಹಿಡಿಂಬಿಯನ್ನು ಗಮನಾಯ ಹೋಗಲಿಕ್ಕೂ ಸ್ಮೃತ್ಯಾ – ಸ್ಮರಣದಿಂದ ಉಭಯೋಃ – ಮಾತೃಪುತ್ರರ ಅಭಿಯಾನೇ – ಆಗಮನ ವಿಷಯದಲ್ಲಿಯೂ ಜಗಾದ – ಹೇಳಿದನು ಸಾ – ಆ ಹಿಡಿಂಬಿಯು ತೇಷಾಂ – ಆ ಪಾಂಡವರ (ಮುಂಭಾಗದಲ್ಲಿ) ಪ್ರತಿಜ್ಞಾಂ ಪ್ರತಿಜ್ಞೆಯನ್ನು ವಿಧಾಯ – ಮಾಡಿ ಸುರಲೋಕಮೇವ – ದೇವಲೋಕವನ್ನೇ ಯಯೌ – ಹೋದಳು. ॥ ೬೪ ॥

ಭಾ.ಅ. ೫೩–೬೪ ಆ ಸಮಯದಲ್ಲಿಯೇ ಹಿಡಿಂಬ ರಾಕ್ಷಸನು ತನ್ನ ತಂಗಿ ಬರಲಿಲ್ಲವೆಂಬ ಸಿಟ್ಟಿನಿಂದ ಬಂದು ಈ ದೃಶ್ಯವನ್ನು ಕಂಡು ಶ್ರೀಭೀಮಸೇನದೇವರನ್ನು, ತಂಗಿಯನ್ನೂ ಕೂಡ ಕೊಲ್ಲಲು ಪ್ರಯತ್ನಿಸಿದಾಗ ಅವಳು ಭೀಮಸೇನದೇವರನ್ನೇ ಮೊರೆ ಹೊಕ್ಕಳು. ಆಗ ಶ್ರೀಭೀಮಸೇನದೇವರು ಅವಳನ್ನು, ತಮ್ಮ ತಾಯಿ, ಹಾಗೂ ಅಣ್ಣ ತಮ್ಮಂದಿರನ್ನು ರಕ್ಷಿಸುವದಕ್ಕಾಗಿ ಅವನ ಮೇಲೆ ಏರಿ ಹೋಗಿ, ಮಲಗಿದವರ ನಿದ್ರೆಗೆ ಭಂಗವಾಗಬಾರದೆಂದು ದೂರಕ್ಕೆ ಏಳೆದುಕೊಂಡು ಹೋಗಿ, ಮುಷ್ಟಿ, ಮರ, ಬಂಡೆಗಲ್ಲು, ಪರ್ವತಗಳಿಂದ ಪರಸ್ಪರ ಯುದ್ಧ ಮಾಡಿದರು. ಆದರೂ, ಇವರ ಯುದ್ಧ ಧ್ವನಿಯಿಂದ ಎಚ್ಚತ್ತ ಕುಂತಿ ಹಾಗೂ ಧರ್ಮರಾಜಾದಿಗಳು ಇವರ ಯುದ್ಧವನ್ನು ನೋಡುತ್ತಾರೆ; ಭೀತರಾಗುತ್ತಾರೆ. ಆಗ ಶ್ರೀವೃಕೋದರರು ಅವರ ಭಯ ಪರಿಹಾರಕ್ಕಾಗಿ ಶ್ರೀರುದ್ರವರದಿಂದ ಅಜೇಯನಾದ ಆ ಹಿಡಿಂಬನನ್ನು ಎದೆಯಲ್ಲಿ ಹೊಡೆಯುತ್ತಾರೆ. ಆಗ ಆ ರಾಕ್ಷಸನು ತುಂಬಾ ರಕ್ತವನ್ನು ಕಾರುತ್ತಾ ಸತ್ತು ಹೋದನು; ಕ್ರಮವಾಗಿ ಅಂಧ ತಮಿಸ್ರಿಗೆ ಹೋದನು. ಆ ದುಷ್ಟಸಂಹಾರ ಮಾಡಿದ ನಂತರ ಎಲ್ಲರಿಂದ ಕೂಡಿಕೊಂಡು ಮುಂದೆ ಹೊರಟರು. ಆಗ ಹಿಡಿಂಬಿಯು ಕುಂತಿ, ಯುಧಿಷ್ಠಿರರ ಹತ್ತಿರ ತನ್ನ ಅಭೀಷ್ಟಪೂರ್ಣಮಾಡಿಕೊಡಲು ಪ್ರಾರ್ಥಿಸಿದಳು. ಅವರಿಬ್ಬರೂ ಶ್ರೀಭೀಮಸೇನರಿಗೆ ಹೇಳಿದರೂ ಕೂಡ ಅವರು ಒಪ್ಪದಿದ್ದಾಗ, ಶ್ರೀವೇದವ್ಯಾಸದೇವರು ಪ್ರಕಟರಾದರು. ಅವರನ್ನು ನೋಡಿ ಎಲ್ಲರೂ ಸಂತೋಷಪಟ್ಟರು; ಅವರನ್ನು ಪೂಜಿಸಿದರು. ಅವರಿಂದ ತಾವೂ ಕೂಡ ಕೃಪಾದೃಷ್ಟಿಯಿಂದ, ಪ್ರೀತಿಯ ಮಾತುಗಳಿಂದಲೂ ಆದೃತರಾದರು. ಹಿಡಿಂಬಿಯು ಶ್ರೀವೇದವ್ಯಾಸರಿಗೇ ಪ್ರಾರ್ಥಿಸಿದಾಗ ಅವರು ಶ್ರೀಭೀಮಸೇನದೇವರಿಗೆ 'ಈ ಸ್ತ್ರೀಯನ್ನು ಸ್ವೀಕರಿಸು, ಅವಳಿಗೆ ಒಬ್ಬ ಮಗ ಹುಟ್ಟಿದಾಗ ಸಪುತ್ರಳಾಗಿ ಹೊರಟು ಹೋಗಲಿ' ಎಂದು ಹೇಳಿದರು. ಆಗ ಶ್ರೀಭೀಮಸೇನರು ಒಪ್ಪಿಕೊಂಡು ವಿವಾಹಿತರಾದರು. ಅವಳು ರಾತ್ರಿಯ ಸಮಯದಲ್ಲಿ ಶ್ರೀ ಭೀಮಸೇನದೇವರು ಉಳಿದವರ ರಕ್ಷಣೆಗಾಗಿ ಇರಬೇಕಾದ್ದರಿಂದ ಪ್ರಾತಃಕಾಲದಲ್ಲಿ ದೇವ ಸಂಚಾರವುಳ್ಳ ನಂದನವೇ ಮೊದಲಾದ ದಿವ್ಯ ವನಗಳನ್ನು ಕುರಿತು ಅವರನ್ನು ತಾನೇ ಹೊತ್ತುಕೊಂಡು ಹೋಗಿ ವಿಹರಿಸಿ ಸೂರ್ಯಾಸ್ತ ಸಮಯಕ್ಕೆ ಬರುತ್ತಿದ್ದಳು. ಹೀಗೆ ಅರ್ಧವರ್ಷ ಕಳೆಯುವಾಗ ಅತಿ ಬಲಿಷ್ಠನಾದ ಮಗನು ಹುಟ್ಟಿದನು. ನಿಋತಿ ಎಂಬ ದೇವತೆಯೇ ಅವತರಿಸಿದನು. ಅವತರಿಸುವಾಗ ಘಟ (ಕೊಡ) ದಂತೆ ತಲೆಯು ಕೂದಲುಗಳಿಂದ ರಹಿತವಾಗಿದ್ದು, ಉತ್ಕಚ (ಉದ್ದವಾದ ಕೂದಲು) ಗಳು ನಿಮಿಷಮಾತ್ರದಲ್ಲಿ ಬಂದದ್ದರಿಂದ ಘಟೋತ್ಕಚ ಎಂದು ಹೆಸರು ಅವನಿಗೆ ಬಂದಿತು. ಅವನಲ್ಲಿ ಶ್ರೀರುದ್ರದೇವರ ಆವೇಶವಿದ್ದು ಬಹಳ ಬಲಿಷ್ಠನಾಗಿದ್ದನು. ಮಗನು ಹುಟ್ಟಿದ ಮೇಲೆ ಶ್ರೀಭೀಮರು ಅವಳನ್ನು ಕುರಿತು ಶ್ರೀವೇದವ್ಯಾಸರ ವಚನ ಪ್ರಕಾರ, ಹೋಗಲು ಮತ್ತು ಸ್ಮರಿಸಿದಾಗ ಮಗನಿಂದ ಸಹಿತಳಾಗಿ ಬರಲು ಆಜ್ಞಾಪಿಸಿದರು. ಅವಳು ಹಾಗೆ ಪ್ರತಿಜ್ಞೆಮಾಡಿ ತನ್ನ ಸ್ವರ್ಗಲೋಕಕ್ಕೆ ಹೋದಳು.

ವ್ಯಾಸೋಪಿ ಸಾಂಡುತನಯೈಃ ಸಹಿತೋ ಬಕಸ್ಯ ರೌದ್ರಾದ್ವರಾಜ್ಜಯವಧಾಪಗತಸ್ಯ ನಿತ್ಯಂ ॥
ಯಾತೋವಧಾಯ ಪರಮಾಗಣಿತೋರುಧಾಮಾಪೂರ್ಣಾಕ್ಷಯೋರು ಸುಖಆಶುತದ್ವೈಕಚಕ್ರಾಂ ॥ ೬೫ ॥

ಪರಮಾಗಣಿತೋರುಧಾಮಾ–ಶ್ರೇಷ್ಠಗಳಾದ, ಎಣೆಸಲಶಕ್ಯಗಳಾದ, ಉತ್ಕೃಷ್ಟ ತೇಜಸ್ಸುಳ್ಳ, ಪೂರ್ಣಾಕ್ಷಯೋರುಸುಖಃ–ಪರಿಪೂರ್ಣಗಳಾವ, ನಾಶವಿಲ್ಲದ, ಉತ್ತಮ ಆನಂದವುಳ್ಳ ವ್ಯಾಸೋಽಪಿ – ವೇದವ್ಯಾಸರೂ ಕೂಡ ಪಾಂಡುತನಯೈಃ – ಪಾಂಡುಪುತ್ರರಿಂದ ಸಹಿತಸ್ಸನ್ – ಕೂಡಿದವರಾಗಿ ರೌದ್ರಾತ್ – ರುದ್ರಸಂಬಂಧಿಯಾದ ವರಾತ್ – ವರದಿಂದ ಜಯವಧಾಪಗತಸ್ಯ—ಇತರರಿಂದ ಪರಾಜಯವೂ, ನಾಶವೂ ಇಲ್ಲದಿರುವ ಬಕಸ್ಯ – ಬಕಾಸುರನ ವಧಾಯ – ನಾಶಕ್ಕೋಸ್ಕರ ತದಾ – ಆಗಲೇ ಆಶು – ಕೂಡಲೇ ಏಕಚಕ್ರಾಂ – ಏಕಚಕ್ರಾ ನಗರವನ್ನು ಕುರಿತು ಯಾತಃ – ಹೋದರು. ॥ ೬೫ ॥

ತಾನ್ಬ್ರಾಹ್ಮಣಸ್ಯಚಗೃಹೇ ಪ್ರಣಿಧಾಯಕೃಷ್ಣಃ ಶಿಷ್ಯಾನಮೈತಇತಿ ವಿಪ್ರಕುಮಾರರೂಪಾನ್ ॥
ಆಯಾಮಿಕಾಲತಇತಿ ತಾನನುಶಾಸ್ಯಚಾಯಾತ್ತೇತತ್ರ ವಾಸಮಥಚಕ್ರುರನೂಚ್ಯವೇದಾನ್ ॥ ೬೬ ॥

ಕೃಷ್ಣಃ – ವೇದವಾಸರು ಏತೇ – ಇವರು ಮಮ – ನನ್ನ ಶಿಷ್ಯಾಃ – ಅಂತೇವಾಸಿಗಳು ಇತಿ – ಎಂದು ವಿಪ್ರಕುಮಾರರೂಪಾನ್ – ಬ್ರಾಹ್ಮಣ ಕುಮಾರರ ರೂಪವನ್ನು ಧರಿಸಿರುವ ತಾನ್ ಆ ಪಾಂಡವರನ್ನು ಬ್ರಾಹ್ಮಣಸ್ಯ – ಬ್ರಾಹ್ಮಣನ ಗೃಹೇ – ಮನೆಯಲ್ಲಿ ಪ್ರಣಿಧಾಯ – ಕುಳ್ಳಿರಿಸಿ ಕಾಲತಃ – ಕಾಲಾಂತರದಲ್ಲಿ ಆಯಾಮಿ – ಬರುವೆನು ಇತಿ – ಎಂದು ತಾನ್ – ಆ ಪಾಂಡವರನ್ನು ಅನುಶಾಸ್ಯ – ಹೋಗುವಾಗ ಆಜ್ಞಾಪಿಸಿ ಅಯಾತ್ – ಹೋದರು ಅಥ – ಅನಂತರ ತೇ – ಆ ಪಾಂಡವರು ತತ್ರ – ಅಲ್ಲಿ ವೇದಾನ್ – ವೇದಗಳನ್ನು ಅನೂಚ್ಯ – ಅಧ್ಯಯನ ಮಾಡಿ ವಾಸಂ – ಆವಾಸವನ್ನು ಚಕ್ರುಃ – ಮಾಡಿದರು. ॥ ೬೬ ॥

ಭಿಕ್ಷಾಮಟತ್ಸುಸತತಂ ಪ್ರತಿಹುಂಕೃತೇನ ಭೀಮೋವಿಶಾಂಸದನಏವ ಗೃಹಪ್ರಮಾಣಂ ॥
ಭಾಂಡಂಕುಲಾಲವಿಹಿತಂ ಪ್ರತಿಗೃಹ್ಯಗಚ್ಛತ್ಯಾಶಂಕಯಾವಗಮನಸ್ಯತಮಾಹಧರ್ಮಃ ॥ ೬೭ ॥

(ತೇ – ಆ ಪಾಂಡವರು) ಭಿಕ್ಷಾಂ – ಭಿಕ್ಷೆಯನ್ನು ಅಟತ್ಸು – ಬೇಡುತ್ತಿರಲು ಸತತಂ – ಯಾವಾಗಲೂ ಭೀಮಃ – ಭೀಮನು ಪ್ರತಿಹುಂಕೃತೇನೈವ – ಪ್ರತಿಗೃಹದಲ್ಲಿಯೂ ಹುಂಕಾರದಿಂದಲೇ ವಿಶಾಂ – ವೈಶ್ಯರ ಸದನೇ – ಮನೆಯಲ್ಲಿ ಗೃಹ ಪ್ರಮಾಣಂ – ಮನೆಯ ಪರಿಮಿತವಾದ ಕುಲಾಲವಿಹಿತಂ – ಕುಂಬಾರನಿಂದ ಕೊಡಲ್ಪಟ್ಟ ಭಾಂಡಂ – ಪಾತ್ರೆಯನ್ನು ಪ್ರತಿಗೃಹ್ಯ – ಹಿಡಿದುಕೊಂಡು ಗಚ್ಛತಿ ಹೋಗುತ್ತಿದ್ದನು ಅವಗಮನಸ್ಯ – ಭೀಮನೆಂಬ ತಿಳಿವಳಿಕೆಯ ಆಶಂಕಯಾ – ಸಂಶಯದಿಂದ ಧರ್ಮಃ – ಧರ್ಮರಾಜನು ತಂ – ಆ ಭೀಮನನ್ನು ಕುರಿತು ಆಹ – ಹೇಳಿದನು. ॥ ೬೭ ॥

ಸ್ಥೂಲಂಹಿಸದ್ಮ ಪೃಥಿವೀಸಹಿತಂತ್ವರಕ್ಷ ಉದ್ಧೃತ್ಯವಹ್ನಿ ಮುಖತಸ್ತು ತದೇಕದೋಷ್ಣಾ ॥
ಭಾಂಡಂತದರ್ಥಮುರುಕುಂಭಕರೇಣದತ್ತಂ ಭಿಕ್ಷಾಂಚತೇನಚರಸಿ ಪ್ರತಿಹುಂಕೃತೇನ ॥ ೬೮ ॥

ಹಿ – ಯಾವ ಕಾರಣದಿಂದ ಏಕದೋಷ್ಣಾ – ಒಂದು ಕೈಯಿಂದ ವಹ್ನಿಮುಖತಃ – ಬೆಂಕಿಯ ಬಾಯಿಂದ ಪೃಥಿವೀ ಸಹಿತಂ ಭೂಮಿಯಿಂದ ಸಹಿತವಾದ ಸ್ಥೂಲಂ – ದೊಡ್ಡದಾದ ಸದ್ಮ – ಮನೆಯನ್ನು ಉದ್ಧೃತ್ಯ—ಎತ್ತಿ ಅರಕ್ಷಃ – ರಕ್ಷಿಸಿರುವಿಯೋ ತತ್ ಆ ಕಾರಣದಿಂದ ತದರ್ಥಂ – ಆ ಉಪಕಾರಕ್ಕಾಗಿ ಕುಂಭಕರೇಣ – ಕುಲಾಲನಿಂದ ಉರು – ದೊಡ್ಡದಾದ ಭಾಂಡಂ – ಪಾತ್ರೆಯು ದತ್ತಂ – ಕೊಡಲ್ಪಟ್ಟಿತು. ತೇನ – ಆ ಪಾತ್ರೆಯಿಂದ ಪ್ರತಿಹುಂಕೃತೇನ – ಪ್ರತಿ ಮನೆಯಲ್ಲಿ ಹುಂಕಾರದಿಂದಲೇ ಭಿಕ್ಷಾಂ – ಭಿಕ್ಷೆಯನ್ನು ಚರಸಿ – ಬೇಡುತ್ತಿ. ॥ ೬೮ ॥

ಧರ್ಮಸ್ಯತೇಸುನಿಯತೇರ್ಬಲತಶ್ಚ ಬೋಧೋಭೂಯಾತ್ಸುಯೋಧನಜನಸ್ಯತತೋಭಯಂಮೇ ॥
ಮಾತ್ರಾಸಹೈವ ವಸಫಲ್ಗುನಪೂರ್ವಕೈಸ್ತ್ವ ಮಾನೀತಮೇವ ಪರಿಭುಂಕ್ಷ್ವನತುವ್ಯಜೇಥಾಃ ॥ ೬೯ ॥

ತೇ – ನಿನ್ನ ಧರ್ಮಸ್ಯ – ಧರ್ಮಕ್ಕೆ ಸುನಿಯತೇಃ–ಅತಿ ನಿಯತತ್ವವಿರುವುದರಿಂದಲೂ ಅಂದರೆ ನೀನು ಯಾವ ಕಾಲಕ್ಕೂ ಧರ್ಮವನ್ನು ಬಿಡದವನಾದ್ದರಿಂದಲೂ ಬಲತಶ್ಚ—ನಿನ್ನ ಸಾಮರ್ಥ್ಯದಿಂದಲೂ ಸುಯೋಧನಜನಸ್ಯ—ದುರ್ಯೋಧನನ ಜನಕ್ಕೆ ಬೋಧಃ—ಪಾಂಡವರು ಏಕಚಕ್ರಾ ನಗರದಲ್ಲಿರುವರು ಎಂಬ ತಿಳಿವಳಿಕೆಯು ಭೂಯಾತ್—ಆಗುವುದು ತತಃ—ಆವರಿಗೆ ತಿಳಿಯುವುದರಿಂದ ಮೇ – ನನಗೆ ಭಯಂ—ಹೆದರಿಕೆಯು ಭವತಿ—ಆಗುತ್ತದೆ ತ್ವಂ—ನೀನು ಮಾತ್ರಾ—ತಾಯಿ

ಯಿಂದ ಸಹೈವ—ಕೂಡಿಕೊಂಡೇ ವಸ—ವಾಸಮಾಡು ಫಲ್ಗುನಪೂರ್ವಕೈಃ—ಅರ್ಜುನನೇ ಮೊದಲಾದವರಿಂದ ಆನೀತ ಮೇವ ತರಲ್ಪಟ್ಟದ್ದನ್ನೇ ಪರಿಭುಂಕ್ಷ್ವ—ಊಟಮಾಡು ನತು ವ್ರಜೇಥಾಃ—ಹೋಗಬೇಡ. ॥ ೬೯ ॥

ಇತ್ಯುಕ್ತ ಆಶುಸಚಕಾರತಥೈವ ಭೀಮುಸ್ತೇಽಪಿ ಸ್ವಧರ್ಮಪರಿರಕ್ಷಣಹೇತುವೌ ನಾಃ ॥
ಭಿಕ್ಷಾಂ ಚರಂತ್ಯಥ ಚತುರ್ಷ್ವಪಿತೇಷುಯಾತೇಷ್ವೇಕತ್ರಮಾತೃಸಹಿತಃ ಸಕದಾಚಿದಾಸ್ತೇ ॥ ೭೦ ॥

ಇತಿ—ಈ ರೀತಿಯಾಗಿ ಉಕ್ತಃ—ಹೇಳಿಸಿಕೊಳ್ಳಲ್ಪಟ್ಟ ಸ ಭೀಮಃ—ಆ ಭೀಮನು ಆಶು—ಆಗಲೇ ತಥೈವ-ಹಾಗೆಯೇ ಚಕಾರ—ಮಾಡಿದನು ತೇಪಿ—ಆ ಅರ್ಜುನಾದಿಗಳಾದರೂ ಸ್ವಧರ್ಮಪರಿರಕ್ಷಣಹೇತುಮೌ ನಾಸ್ಸಂತಃ — ಬೇಡದಿರುವಿಕೆ ಎಂಬ ತಮ್ಮ ಧರ್ಮದ ರಕ್ಷಣೆಯ ನಿಮಿತ್ತವಾಗಿ ಮಾತನಾಡದಿರುವವರಾಗಿ ಅಂದರೆ ಭಿಕ್ಷೆಯನ್ನು ಕೊಡಿ ಎಂದು ಕೇಳದಿರುವವರಾಗಿ ಭಿಕ್ಷಾಂ—ಭಿಕ್ಷೆಗಾಗಿ ಚರಂತಿ—ಸಂಚರಿಸುತ್ತಾರೆ ಅಥ--ಅನಂತರ ತೇಷು ಚತುರ್ಷ್ವಪಿ—ಧರ್ಮರಾಜಾದಿ ನಾಲ್ಕೂ ಜನರೂ ಕೂಡ, ಯಾತೇಷುಸತ್ಸು--ಭಿಕ್ಷೆಗಾಗಿ ಹೋಗುತ್ತಿರಲು ಸಃ—ಆ ಭೀಮನು ಏಕತ್ರ —ಒಂದು ಸ್ಥಳದಲ್ಲಿ ಕದಾಚಿತ್-ಒಂದು ದಿನದಲ್ಲಿ ಮಾತೃಸಹಿತಸ್ಸನ್—ತಾಯಿಯಿಂದ ಕೂಡಿದವನಾಗಿ ಆಸ್ತೇ—ಇದ್ದಾನೆ. ॥ ೭೦ ॥

ತತ್ಕಾಲಏವರುದಿತಂ ನಿಜವಾಸಹೇತೋರ್ವಿಪ್ರಸ್ಯದಾರಸಹಿತಸ್ಯನಿಶಮ್ಯಭೀಮಃ ॥
ಸ್ತ್ರೀ ಬಾಲಸಂಯುತಗೃಹೇಸುತಲಾಲನಾದೌ ಲಜ್ಜೇದಿತಿಸ್ಮ ಜನನೀಮವದನ್ನ ಚಾಗಾತ್ ॥ ೭೧ ॥

ತತ್ಕಾಲಏವ—ಅದೇ ಸಮಯದಲ್ಲಿ ಭೀಮಃ—ಭೀಮನು ನಿಜವಾಸಹೇತೋಃ—ತಮ್ಮ ನಿವಾಸಕ್ಕೆ ಕಾರಣನಾದ, ದಾರ ಸಹಿತಸ್ಯ ಹೆಂಡತಿಯಿಂದ ಕೂಡಿದ ವಿಪ್ರಸ್ಯ—ಬ್ರಾಹ್ಮಣನ ರುದಿತಂ—ರೋದನವನ್ನು ನಿಶಮ್ಯ—ಕೇಳಿ ಬಾಲಸಂಯುತ ಗೃಹೇ—ಮಕ್ಕಳಿಂದ ಕೂಡಿದ ಮನೆಯಲ್ಲಿ ಸ್ತ್ರೀ – ಹೆಂಗಸು ಸುತಲಾಲನಾದೌ—ಮಕ್ಕಳ ಮುದ್ದಾಟ, ಸ್ತನಪಾನಾದಿಗಳಲ್ಲಿ (ಪರಪುರುಷರನ್ನು ನೋಡಿದರೆ) ಲಜ್ಜೇತ್—ನಾಚಿಕೆ ಪಟ್ಟಾಳು ಇತಿ – ಈ ಕಾರಣದಿಂದ ಜನನೀಂ—ತಾಯಿಯನ್ನು ಕುರಿತು ಅವದತ್—ನೀನು ಹೋಗು ಎಂದನು ನಚಾಗಾತ್—ತಾನು ಹೋಗಲಿಲ್ಲ. ॥ ೭೧ ॥

ಜಾನೀಹಿವಿಪ್ರರುದಿತಂ ಕುತಇತ್ಯತಶ್ಚಯೋಗ್ಯಂ ವಿಧಾಸ್ಯಇತಿ ಸಾಪ್ರಯಯೌ ಚಶೀಘ್ರಂ ॥
ಸಾಸಂವೃತೈವ ಸಕಲಂವಚನಂಗೃಹೇಽಸ್ಯಶುಶ್ರಾವ ವಿಪ್ರವರಆಹ ತದಾಪ್ರಿಯಾಂಸಃ ॥ ೭೨ ॥

ವಿಪ್ರರುದಿತಂ — ಬ್ರಾಹ್ಮಣನ ರೋದನವು ಕುತಃ—ಯಾವಕಾರಣದಿಂದ ಇತಿ—ಎಂಬುದನ್ನು ಜಾನೀಹಿ—ತಿಳಿ ಅತಃ—ಈ ರೋದನಕ್ಕೆ ಯೋಗ್ಯಂ—ಸರಿಯಾದ ಪ್ರತೀಕಾರವನ್ನು ವಿಧಾಸ್ಯೇ—ಮಾಡುವೆನು ಇತಿ - ಎಂದು ಭೀಮನು ತಾಯಿಯನ್ನು ಕುರಿತು ಹೇಳಿದನು ಸಾ - ಆ ತಾಯಿಯು ಶೀಘ್ರಂ - ಕೂಡಲೇ ಪ್ರಯಯೌ ಹೋದಳು ಸಾ – ಆ ಕುಂತಿಯು ಸಂವೃತೈವ – ಅಡಗಿದವಳಾಗಿಯೇ ಅಸ್ಯ - ಈ ಬ್ರಾಹ್ಮಣನ ಗೃಹೇ – ಮನೆಯಲ್ಲಿ ಸಕಲಂ ವಚನಂ – ಹೇಳಲ್ಪಟ್ಟ ಎಲ್ಲಾ ಮಾತನ್ನು ಶುಶ್ರಾವ – ಕೇಳಿದಳು ತದಾ – ಆಗ ಸಃ – ಆ ಬ್ರಾಹ್ಮಣನು ಪ್ರಿಯಾಂ – ಹೆಂಡತಿಯನ್ನು ಕುರಿತು ಆಹ – ಹೇಳಿದನು. ॥ ೭೨ ॥

ದಾತವ್ಯಏವಹಿ ಕರೋಽದ್ಯಚರಾಕ್ಷಸಸ್ಯ ಸಾಕ್ಷಾದ್ಬಕಸ್ಯಗಿರಿಸನ್ನಿಭಭಕ್ಷ್ಯಭೋಜ್ಯಃ ॥
ಪುಂಸಾನಸಾಚಸಹಿತಾನಡುಹಾ ಪುನಾಂಸ್ತ್ವನೈವಾಸ್ತಿ ನೋಽಪ್ರದದತಾಂಚ ಸಮಸ್ತನಾಶಃ ॥ ೭೩ ॥

ಸಾಕ್ಷಾತ್ ಔಪಚಾರಿಕವಲ್ಲದ ಗಿರಿಸನ್ನಿಭಭಕ್ಷ್ಯಭೋಜ್ಯಃ–ಪರ್ವತಕ್ಕೆ ಸಮಾನವಾದ ಭಕ್ಷ್ಯವೂ, ಭೋಜ್ಯವಾದ ಅನ್ನವೂ ಇವುಗಳುಳ್ಳ, ಸಹಿತಾನಡುಹಾ – ಯುಕ್ತಗಳಾದ ಎರಡು ಎತ್ತುಗಳುಳ್ಳ ಅನಸಾ—ಭಂಡಿಯಿಂದಲೂ ಪುಂಸಾಚ – ಪುರುಷನಿಂದಲೂ ಸಹಿತಃ – ಕೂಡಿದ ಕರಃ – ಕಪ್ಪವು ಅದ್ಯ – ಈ ದಿನ ರಾಕ್ಷಸಸ್ಯಬಕಸ್ಯ - ರಾಕ್ಷಸನಾದ ಬಕನಿಗೆ ದಾತವ್ಯಏವಹಿ – ಕೊಡಲ್ಪಲೇಡಬೇಕಷ್ಟೆ ನಃ – ನಮಗೆ ತು – ವಿಶೇಷವಾಗಿ ಪುಮಾಂಸ್ತು ಪುರುಷನಾದರೂ ನೈವಾಸ್ತಿ ಇಲ್ಲವೇ ಇಲ್ಲ ಅಪ್ರದದತಾಂ - ಪುರುಷನನ್ನು ಕೊಡದೇ ಇರತಕ್ಕ ನಃ – ನಮ್ಮ ಸಮಸ್ತನಾಶಃ - ಎಲ್ಲಾ ವಸ್ತುಗಳ ನಾಶವು ಭವಿತಾ—ಆಗುವುದು ಅಂದರೆ ನಮ್ಮನ್ನೆಲ್ಲ ತಿಂದು ಬಿಡುವನು. ॥ ೭೩ ॥

ಅನ್ಯತ್ರಯಾಮ ಇತಿಪೂರ್ವಮುದಾಹೃತಂ ಮೇ ನೈತತ್ಪ್ರಿಯೇ ತವಮನೋಗತಮಾಸತೇನ ॥
ಯಾಸ್ಯಾಮಿರಾಕ್ಷಸಮುಖಂ ಸ್ವಯಮೇವಮರ್ತುಂ ಭಾರ್ಯೇನಮಾಹನಭವಾನಹಮುತ್ರಯಾಮಿ ॥ ೭೪ ॥

ಅನ್ಯತ್ರ – ನಮ್ಮ ಗ್ರಾಮದಿಂದ ಬೇರೆದೇಶಕ್ಕೆ ಯಾಮಃ – ಹೋಗುವಾ ಇತಿ – ಎಂದು ಪೂರ್ವಂ – ಮೊದಲು ಮೇ– ನನ್ನಿಂದ ಉದಾಹೃತಂ – ಹೇಳಲ್ಪಟ್ಟಿತು ಹೇಪ್ರಿಯೇ ಎಲೋ ಪ್ರಿಯಳೇ ಏತತ್ – ನನ್ನಿಂದ ಹೇಳಲ್ಪಟ್ಟದ್ದು ತವ – ನಿನ್ನ ಮನೋಗತಂ – ಮನಸ್ಸಿನಿಂದ ಆಂಗೀಕರಿಸಲ್ಪಟ್ಟದ್ದು ನಾಸ – ಆಗಲಿಲ್ಲ ತೇನ – ಆ ಕಾರಣದಿಂದ ಸ್ವಯಮೇವ – ನಾನೇ ಮರ್ತುಂ – ಸಾಯಲು ರಾಕ್ಷಸ ಮುಖಂ. ಬಕರಾಕ್ಷಸನ ಬಾಯಿಯನ್ನು ಕುರಿತು ಯಾಮಿ–ಹೋಗುವೆನು ಭಾರ್ಯಾ – ಹೆಂಡತಿಯು ಏನಂ – ಈ ಪತಿಯನ್ನು ಕುರಿತು ಆಹ – ಹೇಳಿದಳು ಭವಾನ್ – ತಾವು ನ – ಹೋಗಕೂಡದು ಅತ್ರ – ಈ ರಾಕ್ಷಸನ ಮುಖಕ್ಕೆ ಅಹಂ ನಾನು ಯಾಮಿ – ಹೋಗುತ್ತೇನೆ ಎಂದಳು. ॥ ೭೪ ॥

ಅರ್ಥೇತವಾದ್ಯತನು ಸಂತ್ಯಜನಾದಹಂಸ್ಯಾಂ ಲೋಕೇಸತೀಪ್ರಚರಿತೇ ತದೃತೇತ್ವಧಶ್ಚ ॥
ಕನ್ಯಾssಹಚೈನಮಹಮೇಮಿ ನಕನ್ಯಯಾರ್ಥ ಇತ್ಯುಕ್ತ ಆಹಧಿಗಿತಿಸ್ಮಸವಿಪ್ರವರ್ಯಃ ॥ ೭೫ ॥

ತವಾರ್ಥೇ – ನಿಮಗೋಸ್ಕರ ಅದ್ಯ – ಈಗ ಅಹಂ – ನಾನು ಶರೀರಸಂತ್ಯಜನಾತ್ – ದೇಹವನ್ನು ಪರಿತ್ಯಾಗ ಮಾಡು ವುದರಿಂದ ಲೋಕೇ – ಲೋಕದಲ್ಲಿ ಪ್ರಚರಿತೇ – ಪ್ರಕೃಷ್ಟ ಚರಿತ್ರೆಯುಳ್ಳ ಸ್ತ್ರೀಜನರ ಮಧ್ಯದಲ್ಲಿ ಸತೀ – ಇರತಕ್ಕವಳು ಸ್ಯಾಂ – ಆಗುವೆನು ಅಂದರೆ ಉತ್ತಮ ಸ್ತ್ರೀಯರ ಮಧ್ಯದಲ್ಲಿ ನಾನು ಕೂಡ ಎಣಿಸಲ್ಪಡುವೆನು ಅಥವಾ ಸತೀಪ್ರಚರಿತೇ – ಪತಿವ್ರತಾ ಸ್ತ್ರೀಯರಿಂದ ಸುಖವಾಗಿ ಹೋಗಲ್ಪಟ್ಟ ಲೋಕೇ – ಸ್ವರ್ಗ ಲೋಕವಲ್ಲಿಸ್ಯಾಂ – ಇರುವೆನು ತದೃತೇ – ನಿನಗೋಸ್ಕರ ಶರೀರ ತ್ಯಾಗ ಮಾಡುವುದನ್ನು ಬಿಟ್ಟರೆ ಅಧಃ ನರಕದಲ್ಲಿ ಸ್ಯಾಂ – ಇರುವೆನು ಕನ್ಯಾ – ಮಗಳು ಏನಂ – ಈ ತಂದೆಯನ್ನು ಕುರಿತು ಅಹಂ – ನಾನು ಏಮಿ – ಹೋಗುತ್ತೇನೆ ಕನ್ಯಯಾ – ಕನ್ಯೆಯಿಂದ ಅರ್ಥಃ – ಪ್ರಯೋಜನವು ನ – ಇಲ್ಲ ಇತಿ – ಎಂದು ಆಹ – ಹೇಳಿದಳು ಇತ್ಯುಕ್ತಃ – ಈ ರೀತಿಯಾಗಿ ಹೇಳಿಸಿಕೊಳ್ಳಲ್ಪಟ್ಟ ಸ ವಿಪ್ರವರ್ಯಃ – ಆ ಬ್ರಾಹ್ಮಣಶ್ರೇಷ್ಠನು ಧಿಕ್ ನಿನ್ನ ಮಾತು ನಿಂದ್ಯವು ಇತಿ ಎಂದು ಆಹ – ಹೇಳಿದನು. ॥ ೭೫ ॥

ಕನ್ಯೋದಿತಾಬತ ಕುಲದ್ವಯತಾರಿಣೇತಿಜಾಯಾ ಸಖೇತಿವಚನಂಶ್ರುತಿಗಂಸುತಶ್ಚ ॥
ಆತ್ಮೈವತೇನ ನತುಜೀವನಹೇತುತೋssಹಂ ಧೀಪೂರ್ವಕಂ ನೃಶನಕೇಪ್ರತಿಪಾದಯಾಮಿ ॥ ೭೬ ॥

ಕನ್ಯಾ ಮಗಳು ಕುಲದ್ವಯತಾರಿಣೀ ಮಾತೃ ಮತ್ತು ಭರ್ತೃಕುಲ ಇವೆರಡನ್ನು ನರಕದಿಂದ ದಾಟಿಸತಕ್ಕವಳು ಇತಿ– ಎಂದು ಉದಿತಾ – ಹೇಳಲ್ಪಟ್ಟಿದ್ದಾಳೆ ಜಾಯಾ ಹೆಂಡತಿಯು ಸಖಾ – ಮಿತ್ರಳು ಇತಿ – ಎಂಬ ವಚನಂ – ಮಾತು ಶ್ರುತಿಗಂ – ವೇದದಲ್ಲಿರತಕ್ಕದ್ದು ಸುತಶ್ಚ ಮಗನಾದರೂ ಆತ್ಮೈವ ತಾನೇ ತೇನ ಆ ಕಾರಣದಿಂದ ಅಹಂ – ನಾನು ಜೀವನಹೇತುತಃ ನನ್ನ ಪ್ರಾಣರಕ್ಷಣ ನಿಮಿತ್ತದಿಂದ ಧೀಪೂರ್ವಕಂ – ಬುದ್ಧಿಪೂರ್ವಕವಾಗಿ ನೃಶನಕೇ – ಮನುಷ್ಯರು ಅನ್ನವಾಗಿ ಉಳ್ಳ ಬಕಾಸುರನಲ್ಲಿ ನ ಪ್ರತಿಪಾದಯಾಮಿ – ಹೆಂಡತಿ, ಮಗಳು, ಮಗ ಇವರನ್ನು ಕೊಡಲಾರೆನು. ॥ ೭೬ ॥

ಏವಂರುದತ್ಸು ಸಹಿತೇಷು ಕುಮಾರಕೋssಸ್ಯಪ್ರಾಹ ಸ್ವಹಸ್ತಗತೃಣಂಪ್ರತಿದರ್ಶ್ಯಚೈಷಾಂ ॥
ಏತೇನರಾಕ್ಷಸಮಹಂ ನಿಹನಿಷ್ಯಏನೇತ್ಯುಕ್ತೇ ಸುವಾಕ್ಯಮನುಸಾ ಪ್ರವಿವೇಶಕುಂತೀ ॥ ೭೭ ॥

ಏವಂ— ಈ ರೀತಿಯಾಗಿ ಸಹಿತೇಷು – ಮಿಲಿತರಾದ ತಂದೆ, ತಾಯಿ, ಮೊದಲಾದವರು ರುದತ್ಸುಸತ್ಸು – ಅಳು ತ್ತಿರಲು ಅಸ್ಯ – ಈ ಬ್ರಾಹ್ಮಣನ ಕುಮಾರಕಃ ಮಗನು ಏಷಾಂ – ಈ ತಂದೆ ಮೊದಲಾದವರಿಗೆ ಸ್ವಹಸ್ತಗತೃಣಂ – ತನ್ನ ಕೈಯಲ್ಲಿರುವ ಹುಲ್ಲನ್ನು ಪ್ರತಿದರ್ಶ್ಯ – ತೋರಿಸಿ ಏತೇನ ಈ ತೃಣದಿಂದ ಅಹಂ – ನಾನು ರಾಕ್ಷಸಂ – ಬಕನನ್ನು ನಿಹ ನಿಷ್ಯಏವ – ಕೊಂದೇ ಬಿಡುವೆನು ಇತಿ – ಎಂದು ಪ್ರಾಹ – ಹೇಳಿದನು ಇತ್ಯುಕ್ತೇಸತಿ – ಈ ಪ್ರಕಾರ ಹೇಳುತ್ತಿರಲು ಸಾ ಕುಂತೀ – ಆ ಕುಂತಿಯು ಸುವಾಕ್ಯಂ–ಬಾಲಕನ ತೃಣದಿಂದ ಕೊಲ್ಲುವೆನು ಎಂಬ ಶಕುನರೂಪವಾದ ಶೋಭನ ವಾಕ್ಯವನ್ನು ಅನು – ಅನುಸರಿಸಿಯೇ ಪ್ರವಿವೇಶ – ಪ್ರವೇಶಿಸಿದಳು ಭೀಮನೂ ಕೂಡ ಬಕನನ್ನು ತೃಣಪ್ರಾಯನನ್ನಾಗಿ ಮಾಡಿ ಕೊಲ್ಲುವ ನೆಂದು ನಿಶ್ಚಯಿಸಿ ಪ್ರವೇಶಿಸಿದಳು. ॥ ೭೭ ॥

ಪೃಷ್ಟಸ್ತಯಾಹ ಸತುವಿಪ್ರವರೋ ಬಕಸ್ಯವೀರ್ಯಂಬಲಂಚದಿತಿಜಾರಿಭಿರಪ್ಯಸಹ್ಯಂ ॥
ಸಂವತ್ಸರತ್ರಯಯುಯುತೇ ದಶಕೇಕರಂಚ ಪ್ರಾತಿಸ್ವಿಕಂ ದಶಮುಖಸ್ಯಚಮಾತುಲಸ್ಯ ॥ ೭೮ ॥

ತಯಾ – ಆ ಕುಂತಿಯಿಂದ ಪೃಷ್ಟಃ - ಕೇಳಲ್ಪಟ್ಟ ಸ ವಿಪ್ರವರಃ – ಆ ಬ್ರಾಹ್ಮಣ ಶ್ರೇಷ್ಠನು ದಶಮುಖಸ್ಯ – ರಾವಣನ ಮಾತುಲಸ್ಯ – ಸೋದರ ಮಾವನಾದ ಬಕಸ್ಯ – ಬಕಾಸುರನ ದಿತಿಜಾರಿಭಿಃಅಪಿ – ದೈತ್ಯರಿಗೆ ಶತ್ರುಗಳಾದ ದೇವತೆಗಳಿಂದಲೂ ಕೂಡ ಅಸಹ್ಯಂ – ಸಹಿಸಲಶಕ್ಯವಾದ ವೀರ್ಯಂ ಪರಾಕ್ರಮವನ್ನೂ ಬಲಂ ಚ—ಸಾಮರ್ಥ್ಯವನ್ನೂಕೂಡ ಸಂವತ್ಸರತ್ರಯ ಯುತೇದಶಕೇ - ಸಂವತ್ಸರಗಳ ಮೂರರಿಂದ ಕೂಡಿದ ಹತ್ತು ಅಂದರೆ ಹದಿಮೂರು ಸಂವತ್ಸರಗಳು ಅತೀತೇಸತಿ – ದಾಟು ತ್ತಿರಲು ಪ್ರಾತಿಸ್ವಿಕಂ - ಪ್ರತಿಮಸೆಯಲ್ಲಿ ಕೊಡಶಕ್ಕ ಕರಂಚ – ಕಪ್ಪವನ್ನೂ ಕೂಡ ಅಹ ಹೇಳಿದನು. ॥ ೭೮ ॥

ಶ್ರುತ್ವಾತನುಗ್ರಬಲಮತ್ಯುರುವೀರ್ಯಮೇವ ರಾಮಾಯಣೇ ರಘುವರೋರುಶರಾತಿಭೀತಂ ॥
ವಿಷ್ಟಂಬಿಲೇಷ್ವಥ ನೃಪಾನ್ವಶಮಾಶುಕೃತ್ವಾಭೀತ್ಯೈವ ತೈಸ್ತದನು ದತ್ತಕರಂನನಂದ ॥ ೭೯ ॥

ಕುಂತೀ – ಕುಂತಿಯು ರಾಮಾಯಣೇ - ರಾಮನ ಕಾಲದಲ್ಲಿ ರಘುವರೋರು ಶರಾತಿಭೀತಂ – ರಾಮಚಂದ್ರನ ಉತ್ತಮ ಬಾಣಗಳಿಂದ ಅತ್ಯಂತಹೆದರಿದ ಬಿಲೇಷು – ಬಿಲಗಳಲ್ಲಿ ವಿಷ್ಟಂ – ಅಡಗಿಕೊಂಡಿರುವ ಅಥ ರಾಮಾವತಾರವ ನಂತರ ನೃಪಾನ್ – ರಾಜರನ್ನು ಆಶು – ಕೂಡಲೇ ವಶಂಕೃತ್ವಾ ವಶೀಕರಿಸಿಕೊಂಡು ತೈಃ—ಆ ರಾಜರಿಂದ ಭೀತ್ಯೈವ – ಅವನ ಭಯದಿಂದಲೇ ತದನುದತ್ತಕರಂ – ಆ ರಾಕ್ಷಸನಿಗೆ ಅನುಕೂಲವಾಗಿ ಕೊಡಲ್ಪಟ್ಟ ಕಪ್ಪವುಳ್ಳ ಉಗ್ರಬಲಂ – ಕ್ರೂರವಾದ ಸಾಮರ್ಥ್ಯವುಳ್ಳ ಅತ್ಯುರುವೀರ್ಯಂ ಅತಿಶಯಿತವಾದ, ಉತ್ಕೃಷ್ಟ ಪರಾಕ್ರಮವುಳ್ಳ ತಂ – ಆ ಬಕನನ್ನು ಶ್ರುತ್ವಾ ಕೇಳಿ ನನಂದ ಸಂತೋಷಪಟ್ಟಳು. ॥ ೭೯ ॥

ಏವ — ಕುಂತಿಯು ಸಂತೋಷಪಡಲು ಕಾರಣವನ್ನು ಹೇಳುತ್ತಾರೆ.

ಏವಂಬಲಾಢ್ಯಮಮುಮಾಶು ನಿಹತ್ಯಭೀಮಃ ಕೀರ್ತಿಂಚಧರ್ಮಮಧಿಕಂ ಪ್ರತಿಯಾಸ್ಯತೀಹ ॥
ಸರ್ವೇವಯಂಚತಮನುಪ್ರ ಗೃಹೀತಧರ್ಮಾಯಾಸ್ಯಾಮ ಇತ್ಯವದದಾಶುಧರಾಸುರಂತಂ ॥ ೮೦ ॥

ಏವಂ – ಈ ರೀತಿಯಾಗಿ ಬಲಾಢ್ಯಂ – ಬಲಸಂಪನ್ನನಾದ ಅಮುಂ—ಈ ಬಕಾಸುರನನ್ನು ಆಶು –ಕೂಡಲೇ ಭೀಮಃ– ಭೀಮನು ನಿಹತ್ಯ—ಕೊಂದು ಕೀರ್ತಿಂ—ಯಶಸ್ಸನ್ನು ಅಧಿಕಂಧರ್ಮಂಚ—ಬಹಳ ಪುಣ್ಯವನ್ನೂ ಕೂಡ ಪ್ರತಿಯಾಸ್ಯತಿ— ಪೊಂದುವನು ಇಹ— ಈ ನಗರದಲ್ಲಿ ತಮನು—ಭೀಮನನ್ನು ಅನುಸರಿಸಿ ಪ್ರಗೃಹೀತಧರ್ಮಾಃ—ಹೊಂದಲ್ಪಟ್ಟ ಧರ್ಮವುಳ್ಳ ವಯಂಸರ್ವೇ—ನಾವೆಲ್ಲರೂ ಯಾಸ್ಯಾಮಃ—ಕೀರ್ತಿಪುಣ್ಯಗಳನ್ನು ಹೊಂದುವೆವು ಇತಿ—ಎಂದು ಆಲೋಚ್ಯ—ಆಲೋಚಿಸಿ ಆಶು—ಕೂಡಲೇ ತಂ ಧರಾಸುರಂ - ಆ ಬ್ರಾಹ್ಮಣ ಶ್ರೇಷ್ಠನನ್ನು ಕುರಿತು ಅವದತ್—ಹೇಳಿದಳು, ॥ ೮೦ ॥

ಸಂತಿಸ್ಮವಿಪ್ರವರ ಪಂಚಸುತಾ ಮಮಾದ್ಯತೇಷ್ವೇಕವಿವ ನರವೈರಿಮುಖಾಯಯಾತು ॥
ಇತ್ಯುಕ್ತಆಹ ಸನತೇಸುತವಧ್ಯಯಾಹಂ ಪಾಪೋಭವಾಮಿತವಹಂತಮನೋsತಿಧೀರಂ ॥ ೮೧ ॥

ಹೇವಿಪ್ರವರ— ಎಲೋ ಬ್ರಾಹ್ಮಣಶ್ರೇಷ್ಠನೇ ಮಮ—ನನಗೆ ಪಂಚಸುತಾಃ—ಐವರು ಮಕ್ಕಳು ಸಂತಿ—ಇರುತ್ತಾರೆ ತೇಷು – ಅವರ ಮಧ್ಯದಲ್ಲಿ ಅದ್ಯ – ಈಗ ಏಕವಿವ – ಒಬ್ಬನೇ ನರವೈರಿಮುಖಾಯ - ಮನುಷ್ಯರಿಗೆ ಶತ್ರುವಾದ ಬಕನ ಬಾಯಿಗೆ ಯಾತು – ಹೋಗಲಿ ಇತ್ಯುಕ್ತಃ – ಈ ರೀತಿಯಾಗಿ ಹೇಳಿಸಿಕೊಳ್ಳಲ್ಪಟ್ಟ ಸಃ – ಆ ಬ್ರಾಹ್ಮಣನು ತೇ – ನಿನ್ನ ಸುತ ವಧ್ಯಯಾ – ಮಗನ ನಾಶದಿಂದ ಅಹಂ - ನಾನು ಪಾಪಃ – ಪಾಪವುಳ್ಳವನು ನ ಭವಾಮಿ – ಆಗಲಾರೆನು ತವ – ನಿನ್ನ ಮನಃ – ಚಿತ್ತವು ಅತಿಧೀರಂ – ಅತ್ಯಂತ ಧೈರ್ಯವುಳ್ಳದ್ದು ಹಂತ – ಆಶ್ಚರ್ಯವು. ॥ ೮೧ ॥

ಉಕ್ತ್ವೈನಮಾಹಚ ಪೃಥಾತನಯೇಮದೀಯೇ ವಿದ್ಯಾಸ್ತಿದಿಕ್ಪತಿಭಿರಪ್ಯವಿಷಹ್ಯರೂಪಾ ॥
ಉಕ್ತೋsಪಿ ನೋಗುರುಭಿರೇಷ ನಿಯುಂಕ್ತಏತಾಂ ವಧ್ಯಸ್ತಥಾಪಿ ನಸುರಾಸುರಪಾಲಕೈಶ್ಚ ॥ ೮೨ ॥

ಉಕ್ತಾ – ಈ ರೀತಿಯಾಗಿ ಹೇಳಿಸಿಕೊಳ್ಳಲ್ಪಟ್ಟ ಪೃಥಾ – ಕುಂತಿಯು ತಂ-ಆ ಬ್ರಾಹ್ಮಣನನ್ನು ಕುರಿತು ಅಹ–ಹೇಳಿದಳು ಮದೀಯೇ – ನನ್ನವನಾದ ತನಯೇ – ಮಗನಲ್ಲಿ ದಿಕ್ಪತಿಭಿರಪಿ – ಇಂದ್ರಾದಿ ದಿಕ್ಪಾಲರಿಂದಲೂ ಕೂಡ ಅವಿಷಹ್ಯರೂಪಾ – ಸಹಿಸಲು ಅಶಕ್ಯವಾದ ಸ್ವರೂಪವುಳ್ಳ ವಿದ್ಯಾ—ವಿದ್ಯೆಯು ಅಸ್ತಿ – ಇದೆ ಗುರುಭಿಃ – ಗುರುಗಳಿಂದ ಉಕ್ತೋಪಿ – ಹೇಳಿಸಿ ಕೊಳ್ಳಲ್ಪಟ್ಟರೂ ಕೂಡ ಏಷಃ – ಈ ಭೀಮನು ಏತಾಂ – ಈ ವಿದ್ಯೆಯನ್ನು ನೋ ನಿಯುಂಕ್ತೇ – ಮಹಾಸಂಕಟ ಪ್ರಾಪ್ತ ವಾದಾಗ್ಯೂ ಪ್ರಯೋಗಿಸುವುದಿಲ್ಲ ವಿದ್ಯೋಪಜೀವನವುಳ್ಳವನಾಗುವುದಿಲ್ಲ. ತಥಾಪಿ - ವಿದ್ಯೋಪಜೀವನವಿಲ್ಲದಿದ್ದರೂ ಸುರಾ ಸುರಪಾಲಕೈಶ್ಚ – ದೇವತೆಗಳೂ, ಅಸುರರೂ ಇವರನ್ನು ರಕ್ಷಿಸುವ ದೇವಶ್ರೇಷ್ಠರಿಂದಲೂ ವಧ್ಯೋನ – ವಜ್ರಕಾಯನಾದ್ದ ರಿಂದ ಸ್ವಾಭಾವಿಕವಾಗಿಯೇ ಕೊಲ್ಲಲು ಯೋಗ್ಯನಲ್ಲ. ಆದ್ದರಿಂದ ಇವನನ್ನು ರಾಕ್ಷಸನ ಬಾಯಲ್ಲಿ ಕೊಟ್ಟರೂ ಭಯ ವಿಲ್ಲ. ॥ ೮೨ ॥

ಉಕ್ತೈವಮೇತ್ಯನಿಖಿಲಂ ಚ ಜಗಾದಭೀಮ ಉದ್ಧರ್ಷಆಸ ಸನಿಶಮ್ಯಮಹಾಸ್ವಧರ್ಮಂ ॥
ಪ್ರಾಪ್ತಂ ವಿಲೋಕ್ಯತಮತೀವ ವಿಘೂರ್ಣನೇತ್ರಂ ದೃಷ್ಟ್ವಜಗಾದಯಮಸೂನುರುಪೇತ್ಯ ಚಾನ್ಯೈಃ ॥೮೩॥

ಕುಂತೀ – ಕುಂತಿಯು ಏವಂ – ಈ ರೀತಿಯಾಗಿ ಉಕ್ತ್ವಾ – ಬ್ರಾಹ್ಮಣನನ್ನು ಕುರಿತು ಹೇಳಿ ಏತ್ಯ – ಭೀಮನ ಹತ್ತಿರ ಬಂದು ನಿಖಿಲಂ - ಎಲ್ಲವನ್ನೂ ಭೀಮೇ – ಭೀಮನಲ್ಲಿ ಜಗಾದ – ಹೇಳಿದಳು ಸಃ – ಆ ಭೀಮನು ನಿಶಮ್ಯ – ತಾಯಿಯು ಹೇಳಿದ್ದನ್ನು ಕೇಳಿ ಮಹಾಸ್ವಧರ್ಮಂ – ದುಷ್ಪ್ರವಧರೂಪವಾದ, ಮಹತ್ತಾದ, ತನಗೆ ಯೋಗ್ಯವಾದ ಧರ್ಮವನ್ನು ಪ್ರಾಪ್ತಂ– ಪ್ರಾಪ್ತವಾದದ್ದನ್ನಾಗಿ ವಿಲೋಕ್ಯ – ವಿಚಾರಮಾಡಿ ಉದ್ಧರ್ಷಃ – ಉತ್ಕೃಷ್ಟವಾದ ಆನಂದವುಳ್ಳವನು ಆಸ – ಆದನು ಯಮಸೂನುಃ – ಯಮನ ಮಗನಾದ ಧರ್ಮರಾಜನು ಅನ್ಯೈಃ – ಅರ್ಜುನಾದಿಗಳಿಂದ ಸಹ – ಕೂಡಿಕೊಂಡು ಉಪೇತ್ಯ– ತಮ್ಮನ ವಾಸಸ್ಥಾನಕ್ಕೆ ಬಂದು ಅತೀವ ವಿಘೂರ್ಣನೇತ್ರಂ—ಅತ್ಯಂತ ಸಂತೋಷದಿಂದ ಆರಳಿದ ಕಣ್ಣುಗಳುಳ್ಳ ಭೀಮಂ – ಭೀಮನನ್ನು ದೃಷ್ಟ್ವಾ - ನೋಡಿ ಜಗಾದ – ತಾಯಿಯನ್ನು ಕುರಿತು ಹೇಳಿದನು. ॥ ೮೩ ॥

ಭಾ.ಅ. ೬೫–೮೩ ಶ್ರೀವೇದವ್ಯಾಸದೇವರು ಶ್ರೀರುದ್ರವರದಿಂದ ಅಜೇಯ, ಅವಧ್ಯನಾದ ಬಕಾಸುರನ ಸಂಹಾರ ಮಾಡಿಸುವದಕ್ಕಾಗಿ ಪಾಂಡವರನ್ನು ಕರೆದುಕೊಂಡು ಏಕಚಕ್ರನಗರಕ್ಕೆ ಬಂದು ಅಲ್ಲಿ ಒಬ್ಬ ಬ್ರಾಹ್ಮಣನ ಮನೆಗೆ ~~ಕರೆದುಕೊಂಡು ಹೋಗಿ, ಬ್ರಾಹ್ಮಣ ವೇಷದಲ್ಲಿರುವ ಈ ಪಾಂಡವರನ್ನು ಅವನಿಗೆ ಪರಿಚಯ ಮಾಡಿಸಿ ಇವರು ನನ್ನ~~ ಶಿಷ್ಯರು ಇವರಿಗೆ ವಾಸಕ್ಕಾಗಿ ಸ್ಥಳ ಕೊಡಬೇಕೆಂದು ಕೇಳಿ ಪಡೆದು ಅಲ್ಲಿ ಇವರನ್ನು ಇಟ್ಟು, ಆಗಾಗ ಬರುತ್ತಿರುವೆ ಎಂದು ಹೇಳಿ ಹೊರಟು ಹೋದರು. ಪಾಂಡವರು ಅಲ್ಲಿ ವೇದಪಠಣಮಾಡಿಕೊಂಡಿದ್ದರು. ಆಹಾರಕ್ಕಾಗಿ ಭಿಕ್ಷಾವೃತ್ತಿಯನ್ನು ಕೈಕೊಂಡರು. ಭೀಮಸೇನದೇವರೂ ಕೂಡ ಹೋಗುತ್ತಿದ್ದರು. ಇವರು ಕೈಯಲ್ಲಿ ಹಿಡಿದಿದ್ದ ಪಾತ್ರೆ ಮಾತ್ರ ಒಂದು ಮನೆ ಯಷ್ಟು ದೊಡ್ಡದು. ಒಬ್ಬ ಕುಂಬಾರನ ಮನೆಗೆ ಬೆಂಕಿ ಹತ್ತಿದಾಗ ಅವನ ಸೊತ್ತನ್ನು ರಕ್ಷಿಸುವದಕ್ಕಾಗಿ ಭೂ ಸಹಿತವಾಗಿ ಅವನ ಮನೆಯನ್ನು ಬೆಂಕಿಯಿಂದ ಹೊರಗೆ ಇಟ್ಟು ಉಪಕರಿಸಿದರು. ಅದರ ಬಗ್ಗೆ ಕೃತಜ್ಞತಾ ದೃಷ್ಟಿಯಿಂದ ಆ ಕುಂಬಾರನು ಆ ಪಾತ್ರೆಯನ್ನು ಮಾಡಿಕೊಟ್ಟಿದ್ದನು. ಭಿಕ್ಷೆ ಕೇಳಲು ಹೋದಾಗ ಕೂಡ ಹುಂಕಾರದಿಂದಲೇ ಕೇಳುತ್ತಿದ್ದರು. (ವೈಶ್ಯರಿಂದ ಕರವನ್ನು ಸ್ವೀಕರಿಸುವಂತೆ ನಿರ್ಣಯ ಅಧ್ಯಾಯ ೧೮) ಇದನ್ನು ಕಂಡ ಯುಧಿಷ್ಠಿರನು "ಇಂಥ ದೊಡ್ಡ ಪಾತ್ರಧಾರಣ, ಹುಂಕಾರದಿಂದ ಭಿಕ್ಷೆ ತೆಗೆದುಕೊಳ್ಳುವದು (ಭಾಗವತ ಧರ್ಮರಕ್ಷಣ ನಿಯಮ) ಇವನ್ನು ಕೇಳಿ ತಿಳಿದ ದುರ್ಯೋಧನಾದಿ ಗಳಿಗೆ ಇವನು ಭೀಮನೇ ಎಂದು ಗೊತ್ತಾಗುತ್ತದೆ ಎಂಬ ಹೆದರಿಕೆ ನನಗೆ ಇದೆ. ಆದ್ದರಿಂದ ನೀನು ಭಿಕ್ಷೆಗೆ ಹೋಗು ವದೇ ಬೇಡ ಉಳಿದವರು ತಂದದ್ದನ್ನೇ ಊಟಮಾಡಿಕೊಂಡಿರು" ಎಂದು ಹೇಳಿದನು. ತನ್ನ ಧರ್ಮರಕ್ಷಣ (ಭಿಕ್ಷೆ ಕೇಳದಿರುವ) ಮಾಡಿಕೊಳ್ಳಲು ಅನುಕೂಲವಾದ ಮಾತನ್ನು ಅಣ್ಣನು ಹೇಳಿದಾಗ ಸಮ್ಮತಿಯಿಂದ ಸುಮ್ಮನೆ ಇದ್ದರು.

ನಾಲ್ಕು ಸಹೋದರರು ಭಿಕ್ಷೆಯನ್ನು ತರಲು ಹೋಗಿರುವಾಗ ತಾಯಿಯ ಕೂಡ ಇವರು ಇರುತ್ತಿದ್ದರು. ಒಂದು ದಿನ ಇವರು ವಾಸಮಾಡಿದ ಮನೆಯ ಮಾಲಕನ ಮನೆಯಲ್ಲಿ ಎಲ್ಲರ ಅಳುವ ಧ್ವನಿಯನ್ನು ಕೇಳಿ ತಾಯಿಯನ್ನು ಏಕೆಂದು ತಿಳಿಯಲು, ತಿಳಿದು ದುಃಖ ಪರಿಹಾರಮಾಡಿ ರಕ್ಷಿಸಲು ಕಳಿಸಿದರು. ತಾನೇ ಹೋದರೆ ಪರಪುರುಷ ಬಂದಾಗ ಹೆಣ್ಣು ಮಕ್ಕಳಿಗೆ ಸಾಮಾನ್ಯವಾಗಿ ಲಜ್ಜಾ ಆಗುತ್ತಿರುವದು; ತತ್ರಾಪಿ ಮಕ್ಕಳಿರುವ ಮನೆಯಲ್ಲಿ ಮಕ್ಕಳಿಗೆ ಸ್ತನಪಾನಾದಿ ಗಳನ್ನು ಮಾಡಿಸುವ ಸಂದರ್ಭವಿರುವದು; ಆಗ ಹೋದರಂತೂ ಇನ್ನೂ ಹೆಚ್ಚಿನ ಲಜ್ಜಾ ಆಗಿ ಅವರಿಗೆ ತೊಂದರೆಯಾಗು

ವದು ಎಂಬ ಸೂಕ್ಷ್ಮ ವಿವೇಕದಿಂದ ತಾನು ಹೋಗಲಿಲ್ಲ. ಕುತಿದೇವಿಯು ಅವರ ಮನೆಯ ಹೊರಗೆ ಅಡಗಿಕೊಂಡು ನಿಂತು, ಒಳಗೆ ನಡೆದಿರುವ ಮಾತುಕತೆಗಳನ್ನು ಕೇಳಿಕೊಂಡಳು. ಬ್ರಾಹ್ಮಣನು ಹೆಂಡತಿಗೆ "ನಾನು ಮೊದಲೇ ಹೇಳಿದೆ ಇಲ್ಲಿಂದ ಹೋಗಿಬಿಡೋಣ ಎಂದು; ನನ್ನ ಮಾತು ರುಚಿಸಲಿಲ್ಲ, ಆಗಲಿ ನಾನೇ ಇಂದು ಆ ಬಕಾಸುರನ ಮುಖಕ್ಕೆ ಆಹಾರ ವಾಗಿ ಹೋಗುತ್ತೇನೆಂದನು. ಆಗ ಹೆಂಡತಿಯು ಇಲ್ಲ ನಾನು ಹೋಗಿ ನಿನ್ನ ಸೇವೆ ಮಾಡಿದಂತಾಗಿ ಉತ್ತಮ ಲೋಕವನ್ನು ಕುರಿತು ಹೋಗುವೆನು. ಆದ್ದರಿಂದ ನಾನು ಹೋಗುವೆ ಎಂದಳು. ಇವರಿಬ್ಬರ ಮಾತನ್ನು ಕೇಳಿದ ಮಗಳು ಹೆಣ್ಣಿನಿಂದ ಏನೂ ಪ್ರಯೋಜನವಿಲ್ಲ, ಆವ್ದರಿಂದ ತಾನು ಹೋಗುವದಾಗಿ ಹೇಳಿದಳು. ಆಗ ತಂದೆಯು ಇಲ್ಲಮ್ಮ ಮಗಳು ಪಿತೃ, ಭರ್ತೃ (ಗಂಡ) ಇಬ್ಬರ ಕುಲವನ್ನು ಉದ್ಧರಿಸುವವಳು ಎಂದು ಶ್ರುತಿಯು ಹೇಳುವದು. ಮಗನಂತೂ ತಂದೆಯ ಒಂದು ರೂಪವಿದ್ದಂತೆ ಎಂದು ಹೇಳುವದು. ಕುಲದೀಪಕನಾದವನು ಅವನು. ಆದ್ದರಿಂದ ನನ್ನ ರಕ್ಷಣೆಗಾಗಿ ಯಾರನ್ನೂ ಹೋಗಲು ಕೊಡುವದಿಲ್ಲ ಎಂದನು. ಆಗ ಮಗನು (ಸಣ್ಣ ವಯಸ್ಸಿನ) ಒಂದು ಹುಲ್ಲು ಕಡ್ಡಿಯನ್ನು ತೋರಿಸುತ್ತಾ ಇದರಿಂದಲೇ ನಾನು ಆ ರಾಕ್ಷಸನನ್ನು ಸಂಹರಿಸುವೆನು ಎಂದು ಹೇಳಿದನು. ಇಲ್ಲಿಯವರೆಗೆ ಕೇಳುತ್ತಾನಿಂತ ಕುಂತಿಯು ಈ ಮಾತನ್ನು ಶುಭ ಶಕುನ ಎಂದು (ನನ್ನ ಮಗ ಭೀಮನು ಬಕನನ್ನು ತೃಣಪ್ರಾಯಮಾಡಿ ಅನಾಯಾಸವಾಗಿ ಸಂಹರಿಸುವನು ಎಂಬ ನಿಶ್ಚಯ ಮಾಡಿಕೊಂಡು) ತಿಳಿದು ಒಳಗೆ ಹೋಗಿ ಬ್ರಾಹ್ಮಣನನ್ನು ಅಳುವ ಕಾರಣದ ಬಗ್ಗೆ ಕೇಳಿದಳು. ಆಗ ಬ್ರಾಹ್ಮಣನು ಆ ದುಷ್ಟ ಬಕನ ಶಕ್ತಿಯ ಬಗ್ಗೆ, ದೇವತೆಗಳಿಂದಲೂ ಅಸಂಹಾರ್ಯನಾಗಿರುವ ಬಗ್ಗೆ, ಊರಿನವರೆಲ್ಲ ಪ್ರತಿಯೊಬ್ಬರೂ ಸರದಿ ಪ್ರಕಾರ ಹದಿಮೂರು ವರ್ಷಗಳಿಗೊಮ್ಮೆ ಕೊಡಬೇಕಾದ ಅನ್ನ, ಪಶು, ಪುರುಷರೂಪವಾದ ಕರ (ಬಲಿ) ದ ಬಗ್ಗೆಯೂ ಹೇಳಿದನು. ಅದನ್ನು ತಿಳಿದ ಕುಂತಿಯು ರಾಮಾಯಣ ಕಾಲದಲ್ಲಿದ್ದ, ಶ್ರೀರಾಮಬಾಣಕ್ಕೆ ಹೆದರಿ ಗುಹೆಯಲ್ಲಿ ಅಡಗಿದ, ಶ್ರೀರಾಮದೇವರ ಅವತಾರ ಸಮಾಪ್ತಿಯ ನಂತರ ಬಲಾತ್ಕಾರದಿಂದ ಎಲ್ಲರಿಂದ ಕರವನ್ನು ತೆಗೆದುಕೊಳ್ಳುತ್ತಿರುವ, ರಾವಣನ ಸೋದರ ಮಾವನಾದ ಈ ಬಲಿಷ್ಠ ಬಕನನ್ನು ಕೊಂದು ತನ್ನ ಮಗ ಭೀಮನು ಶ್ರೇಷ್ಠ ಧರ್ಮವನ್ನು (ದುಷ್ಟ ನಿಗ್ರಹರೂಪ) ಆಚರಿಸಿದಂತಾಗಿ ಶ್ರೀಹರಿಪ್ರೀತಿ, ಪುಣ್ಯ ಸಂಪಾದನೆ ಮಾಡುವನು, ಕೀರ್ತಿಯನ್ನು ಸಂಪಾದಿಸುವನು, ಅವನ ನಂತರ ನಮ್ಮ ನಮ್ಮ ಯೋಗ್ಯತಾನುಸಾರ (ಆ ಕಾರ್ಯಕ್ಕೆ ಪ್ರೇರಣಾದಿ ಅನುಕೂಲ ಮಾಡಿದ್ದರಿಂದ) ಪುಣ್ಯ, ಕೀರ್ತಿಗಳನ್ನು ಹೊಂದುವೆವು ಎಂಬ ಭಾವನೆಯಿಂದ 'ಬ್ರಾಹ್ಮಣನೇ, ನನಗೆ ಐದು ಮಕ್ಕಳಿದ್ದಾರೆ. ಅವರಲ್ಲಿ ಒಬ್ಬನನ್ನು ನಾನು ಈ ಕಾರ್ಯಕ್ಕಾಗಿ ಕಳಿಸುತ್ತೇನೆ, ಎಂದು ಹೇಳಿದಳು. ಆಗ ಬ್ರಾಹ್ಮಣನು, ಪರಪುತ್ರನನ್ನು ಸಂಹಾರ ಮಾಡಿಸಿ ನಾನು ಪಾಪಕ್ಕೆ ಗುರಿಯಾಗಲಾರೆ; ಬೇಡ ಎಂದು ನಿಷೇಧ ಮಾಡಿದರೆ, ಆಗ ಕುಂತಿಯು ನನ್ನ ಮಗನೆಂದರೆ ಸಾಮಾನ್ಯನಲ್ಲ; ಅವನಲ್ಲಿ ಲೊ ಕಪಾಲಕ, ದಿಕ್ಪಾಲಕರಿಗೂ ಸಹಿಸಲಾಗದ ವಿದ್ಯೆಯಿದೆ; ಅವನು ಯಾರಿಂದಲೂ ಸಂಹಾರ್ಯನಾಗುವದಿಲ್ಲ. (ವಿದ್ಯೆಯನ್ನು ಉಪಯೋಗಿಸದಿದ್ದರೂ ಕೂಡ) ಎಂದು ಹೇಳಿ, ಬಂದು ಶ್ರೀಭೀಮಸೇನದೇವರ ಹತ್ತಿರ ಎಲ್ಲ ವಿಷಯವನ್ನು ತಿಳಿಸಿದಾಗ ಅವರು ಮಹಾಧರ್ಮಾನುಷ್ಠಾನ ಮಾಡುವ ಅವಕಾಶ ಒದಗಿ ಬಂದದ್ದನ್ನು ತಿಳಿದು ಪರಮ ಸಂತುಷ್ಟರಾದರು.

ಮಾತಃ ಕಿಮೇಷನುದಿತೋನಿತರಾಮಿತಿಸ್ಮತಸ್ಮೈಚ ಸಾನಿಖಿಲಮಾಹಸಚಾಬ್ರವೀತ್ತಾಂ ॥
ಕಷ್ಟಂತ್ವಯಾಕೃತ ಮಹೋಬಲಮೇವಯಸ್ಯ ಸರ್ವೇಶ್ರಿತಾವಯಮುಮುಂಚನಿಹಂಸಿ ಭೀಮಂ ॥ ೮೪ ॥

ಮಾತಃ – ಎಲೋ ತಾಯಿಯೇ ಏಷಃ – ಈ ಭೀಮನು ಕಿಂ – ಏತಕ್ಕಾಗಿ ನಿತರಾಂ – ಚೆನ್ನಾಗಿ ಮುದಿತಃ – ಸಂತೋಷ ಗೊಂಡಿರುವನು ಸಾ – ಆ ಕುಂತಿಯು ತಸ್ಮೈ – ಆ ಧರ್ಮರಾಜನಿಗೋಸ್ಕರ ನಿಖಿಲಂ – ಎಲ್ಲವನ್ನು ಆಹ – ಹೇಳಿದಳು ಸಚ – ಆ ಧರ್ಮರಾಜನಾದರೂ ತಾಂ – ಆ ಕುಂತಿಯನ್ನು ಕುರಿತು ಅಬ್ರವೀತ್ – ಹೇಳಿದನು ಮಾತಃ – ತಾಯಿಯೇ ತ್ವಯಾ – ನಿನ್ನಿಂದ ಕಷ್ಟಂ – ಕಷ್ಟವು ಕೃತಂ—ಮಾಡಲ್ಪಟ್ಟಿತು ಅಹೋ—ಆಶ್ಚರ್ಯವು ಸರ್ವೇವಯಂ — ನಾವೆಲ್ಲರೂ ಯಸ್ಯ—ಯಾವಭೀಮನ ಬಲಮೇವ – ಸಾಮರ್ಥ್ಯವನ್ನೇ ಶ್ರಿತಾಃ — ಆಶ್ರಯಿಸಿರುವೆವೋ ಅಮುಂಭೀಮಂಚ—ಇಂತಹ ಭೀಮನನ್ನೂ ಕೂಡ ನಿಹಂಸಿ—ಕೊಲ್ಲಲು ಇಚ್ಛಿಸುತ್ತಿ. ॥ ೮೪ ॥

ಯದ್ಬಾಹುವೀರ್ಯ ಪರಮಾಶ್ರಯತೋಹಿ ರಾಜ್ಯಮಿಚ್ಛಾಮಪಿವ ನಿಖಿಲಾರಿವಧಂಸ್ವಧರ್ಮಂ ॥
ಸೋಽಯಂತ್ವಯಾದ್ಯ ನಿಶಿಚಾರಮುಪಾಯಮಾತಃ ಪ್ರಸ್ಥಾಪ್ಯತೇ ವದಮುಮಾಶುಕಯೈವಬುದ್ಧ್ಯಾ ॥೮೫॥

* ಯದ್ಬಾಹುವೀರ್ಯಪರಮಾಶ್ರಯತಏವ — ಯಾವ ಭೀಮನ ಭುಜ ಪರಾಕ್ರಮದ ಮುಖ್ಯಾಶ್ರಯದಿಂದಲೇ ರಾಜ್ಯಂ – ರಾಜ್ಯವನ್ನು ಸ್ವಧರ್ಮಂ – ಕ್ಷತ್ರಿಯರ ಧರ್ಮವಾದ ನಿಖಿಲಾರಿವಧಂ – ಎಲ್ಲ ಶತ್ರುಗಳ ಸಂಹಾರವನ್ನು ಇಚ್ಛಾಮಃ – ಅಪೇಕ್ಷಿಸುತ್ತೇವೋ ಸೋಯಂ – ಅಂತಹ ಈ ಭೀಮನು ಹೇಮಾತಃ – ಎಲೋ ತಾಯಿಯೇ ತ್ವಯಾ – ನಿನ್ನಿಂದ ಅದ್ಯ – ಈಗ ನಿಶಿಚಾರ ಮುಖಾಯ – ರಾಕ್ಷಸನಾದ ಬಕನ ಬಾಯಿಗೆ ಕಯಾ ಬುದ್ಧ್ಯಾ – ಯಾವ ಬುದ್ಧಿಯಿಂದ ಪ್ರಸ್ಥಾಪ್ಯತೇ – ಕಳುಹಿಸಲ್ಪಡುತ್ತಾನೆ ಮಮ – ನನಗೆ ಆಶು – ಬೇಗನೇ ವದ – ಹೇಳು. ॥ ೮೫ ॥

ಇತ್ಯುಕ್ತವಂತಮಮುಮಾಹ ಸುಧೀರಬುದ್ಧಿಃ ಕುಂತೀನಪುತ್ರಕ ನಿಹಂತುಮಯುಂಹಿಶಕ್ಯಃ ॥
ಸರ್ವೈಃ ಸುರೈರಸುರಯೋನಿಭಿರಪ್ಯನೇನ ಚೂರ್ಣೀಕೃತೋಹಿ ಶತಶೃಂಗಗಿರಿಃ ಪ್ರಸೂತ್ಯಾಂ ॥ ೮೬ ॥

ಸುಧೀರಬುದ್ಧಿಃ – ಅತಿಧೈರ್ಯದಿಂದ ಕೂಡಿದ ಸ್ವಭಾವವುಳ್ಳ ಕುಂತೀ – ಕುಂತಿಯು ಇತಿ – ಈ ರೀತಿಯಾಗಿ ಉಕ್ತವಂತಂ – ಹೇಳತಕ್ಕ ಅಮುಂ – ಈ ಧರ್ಮರಾಜನನ್ನು ಕುರಿತು ಹೇಪುತ್ರ – ಎಲೋ ಮಗನೇ ಅಯಂ – ಈ ಭೀಮನು ಸರ್ವೈಃ ಎಲ್ಲಾ ಸುರೈಃ – ದೇವತೆಗಳಿಂದಲೂ ಅಸುರಯೋನಿಭಿರಪಿ – ಅಸುರರಿಂದಲೂ ಕೂಡ ನಿಹಂತುಂ – ಕೊಲ್ಲಲು ನಶಕ್ಯೋಹಿ – ಸಾಧ್ಯನಲ್ಲವಷ್ಟೇ ಅನೇನ – ಈ ಭೀಮನಿಂದ ಪ್ರಸೂತ್ಯಾಂ – ಜನನ ಸಮಯದಲ್ಲಿ ಶತಶೃಂಗಗಿರಿಃ – ಶತಶೃಂಗ ಪರ್ವತವು ಚೂರ್ಣೀಕೃತೋಹಿ – ಪುಡಿಮಾಡಲ್ಪಟ್ಟಿದೆಯಷ್ಟೆ ಇತಿ – ಎಂದು ಆಹ – ಹೇಳಿದಳು. ॥ ೮೬ ॥

ಏಷಸ್ವಯಂಹಿ ಮರುದೇವ ನರಾತ್ಮಕೋಽಭೂತ್ಕೋನಾಮುಹಂತುಮಿಮುಮಾಪ್ತಬಲೋ ಜಗತ್ಸು ॥
ಇತ್ಯೇವಮುಸ್ತ್ವಿತಿ ಸ ತಾಮುವದತ್ಪರೇದ್ಯುರ್ಭೀಮೋಜಗಾಮುಶಕಟೇನ ಕೃತೋರುಭೋಗಃ ॥ ೮೭ ॥

ಏಷಃ – ಈ ಭೀಮನು ಸ್ವಯಂ – ಸಾಕ್ಷಾತ್ತಾಗಿ ನರಾತ್ಮಕಃ – ಮನುಷ್ಯ ದೇಹವುಳ್ಳ ಮರುದೇವ – ವಾಯುದೇವನೇ ಅಭೂತ್ – ಆಗಿರುವನು ಜಗತ್ಸು – ಲೋಕಗಳಲ್ಲಿ ಆಪ್ತಬಲಃ – ಹೊಂದಲ್ಪಟ್ಟ ಪೂರ್ಣಬಲಉಳ್ಳವನು ಇಮಂ – ಈ ಭೀಮನನ್ನು ಹಂತುಂ – ಕೊಲ್ಲಲು ಕೋನಾಮ ಸಮರ್ಥಃ ? – ಯಾವನು ಸಮರ್ಥನು ಇದ್ದಾನೆ ? ಯಾರೂ ಇಲ್ಲವೆಂದರ್ಥ. ಇತಿ – ಎಂದು ಆಹ – ಹೇಳಿದಳು ಸಃ – ಆ ಧರ್ಮರಾಜನು ಏವಂ ಅಸ್ತು – ಹೀಗಾದರೆ ಹಾಗೆಯೇ ಆಗಲಿ ಇತಿ – ಎಂದು ತಾಂ – ಆ ತಾಯಿಯನ್ನು ಅವದತ್ – ಹೇಳಿದನು ಭೀಮಃ – ಭೀಮನು ಪರೇದ್ಯುಃ – ಮರುದಿವಸ ಕೃತೋರುಭೋಗಃ ಸನ್ – ಮಾಡಲ್ಪಟ್ಟ ಅಭ್ಯಂಜನ, ಮಾಲಾ, ಗಂಧವಿಲೇಪನಾದಿ ಉತ್ಕೃಷ್ಟ ಭೋಗವುಳ್ಳವನಾಗಿ ಶಕಟೇನ – ಭಂಡಿಯಿಂದ ಜಗಾಮ – ಹೋದನು. ॥ ೮೭ ॥

ಭಾ.ಅ. ೮೪–೮೭ ಯುದಿಷ್ಠಿರಾದಿಗಳು ಬಂದ ನಂತರ ಅತ್ಯಂತ ಸಂತೋಷದಿಂದಿರುವ ಈ ಭೀಮಸೇನ ದೇವರನ್ನು ನೋಡಿದ ಯುಧಿಷ್ಠಿರನು ಅಮ್ಮ, ಈ ಭೀಮನು ಇಷ್ಟಾಕೆ ಸಂತೋಷದಲ್ಲಿದ್ದನೆ ಎಂದು ಕೇಳಿದನು. ಆಗ ಕುಂತಿಯು ಎಲ್ಲ ವಿಷಯವನ್ನು ತಿಳಿಸಿದಾಗ ಯುಧಿಷ್ಠಿರನು ತಾಯಿಗೆ 'ಅಮ್ಮಾ, ಎಂಥ ತಪ್ಪು ಕೆಲಸ ಮಾಡಿದಿ. ಯಾವ ಭೀಮನ ಬಲವನ್ನು ನಂಬಿ, ಆಶ್ರಯಿಸಿ ನಾವು ಬದುಕಿದ್ದೇವೆಯೋ, ಯಾವನ ಬಾಹುಬಲದ ಆಶ್ರಯದಿಂದ ನಾವು ರಾಜ್ಯವನ್ನು, ಸ್ವಧರ್ಮವಾದ ಎಲ್ಲ ಶತ್ರು ನಾಶವನ್ನು ಆಪೇಕ್ಷಿಸುತ್ತಿದ್ದೇವೆಯೋ, ಅಂಥ ಭೀಮನನ್ನು ಇಂದು ರಾಕ್ಷಸನ ಮುಖಕ್ಕೆ ಕಳಿಸುತ್ತಿದ್ದೀ, ಎಂಥ ಅಯುಕ್ತ ವಿಚಾರವಿದು ಎಂದು ಎಂದನು. ಆಗ ಶ್ರೀಭೀಮರ ಬಲದ ಬಗ್ಗೆ ನಿಶ್ಚಿತ ತಿಳಿವಳಿಕೆಯುಳ್ಳ ಕುಂತಿಯು 'ಈ ಭೀಮನನ್ನು ಕೊಲ್ಲಲು ಯಾವ ದೇವಾಸುರರಿಗೂ ಶಕ್ಯವಿಲ್ಲ; ಇವನು ಹುಟ್ಟಿದ ಕ್ಷಣದಲ್ಲಿಯೇ ಅವನ ದೇಹ ಸಂಬಂಧದಿಂದಲೇ ಶತಶೃಂಗ ಪರ್ವತವು ಪುಡಿ ಪುಡಿಯಾಗಿ ಹೋಗಿದೆ. ಇವನು ಸಾಕ್ಷಾತ್ ವಾಯುವಿನ ಅವತಾರನು. ಇವನನ್ನು ಸಂಹರಿಸುವ ಗಂಡು ಜಗತ್ತಿನಲ್ಲಿ ಯಾವನಿದ್ದಾನೆ ?' ಎಂದು ಯುಧಿಷ್ಠಿರನಿಗೆ ಹೇಳಿದಳು. ಅದನ್ನು ಕೇಳಿದ ಧರ್ಮರಾಜನು ಹಾಗಾದರೆ ಆಗಲಿ ಎಂದು ಸಮ್ಮತಿಸಿದನು. ಮರುದಿನ ಪ್ರಾತಃಕಾಲದಲ್ಲಿ ಶ್ರೀಭೀಮಸೇನರು ಉತ್ಕೃಷ್ಟ ಭೋಜನವನ್ನು ಮಾಡಿ ಬಂಡಿ ಸಮೇತವಾಗಿ ಹೊರಟರು.

ಗತ್ವಾತ್ವರನ್ಬಕವನಸ್ಯ ಸಕಾಶಮಾಶು ಭೀಮಃ ಸಪಾಯುಸಸುಭಕ್ಷ್ಯಪಯೋಘಟಾದ್ಯೈಃ ॥
ಯುಕ್ತಂಚ ಶೈಲಸಭಮುತ್ತಮಮುನ್ನರಾಶಿಂ ಸ್ಪರ್ಶಾತ್ಪರೈವ ನರಭಕ್ಷಿತುರತ್ತುಮೈಚ್ಛತ್ ॥ ೮೮ ॥

ಭೀಮಃ – ಭೀಮನು ಬಕಮನಸ್ಯ – ಬಕಾಸುರನ ಅರಣ್ಯದ ಸಕಾಶಂ – ಸಮೀಪಕ್ಕೆ ತ್ವರನ್‌ಸನ್ – ವೇಗಯುಕ್ತನಾಗಿ ಗತ್ವಾ – ಹೋಗಿ ಆಶು – ಕೂಡಲೇ ಸಪಾಯಸ ಸುಭಕ್ಷ್ಯಪಯೋಘಟಾದ್ಯೈಃ – ಪಾಯಸವೂ, ಒಳ್ಳೆ ಭಕ್ಷ್ಯಗಳು, ಹಾಲಿನಿಂದ ಪೂರ್ಣಗಳಾದ ಕೊಡಗಳು ಇವುಗಳಿಂದ ಕೂಡಿದವುಗಳೇ ಮೊದಲಾಗಿಉಳ್ಳ ದಧಿ, ಮಧು, ಘೃತ ಇವುಗಳಿಂದ ಪೂರ್ಣಗಳಾದ ಕೊಡಗಳಿಂದ ಕೂಡಿದ ಶೈಲನಿಭಂ – ಪರ್ವತಕ್ಕೆ ಸಮಾನವಾದ ಉತ್ತಮಂ – ಶ್ರೇಷ್ಠವಾದ ಅನ್ನರಾಶಿಂ – ಅನ್ನದ ರಾಶಿಯನ್ನು ನರಭಕ್ಷಿತುಃ – ಮನುಷ್ಯರನ್ನು ತಿನ್ನುವ ರಾಕ್ಷಸನ ಸ್ಪರ್ಶಾತ್ – ಮುಟ್ಟುವಿಕೆಯಿಂದ ಪುರೈವ – ಮೊದಲೇ ಅತ್ತುಂ – ತಿನ್ನಲು ಇಚ್ಛತಿ – ಇಚ್ಛಿಸಿದನು. ॥ ೮೮ ॥

ತೇನೈವಚಾನ್ನಸಮಿತೌ ಪರಿಭುಜ್ಯಮಾನ ಉತ್ಪಾಟ್ಯವೃಕ್ಷಮುಮು ಮಾದ್ರವದಾಶುರಕ್ಷಃ ॥
ವಾಮೇನಮಾರುತಿರಪೋಹ್ಯತದಾ ಪ್ರಹಾರಾನ್‌ಹಸ್ತೇನ ಭೋಜ್ಯಮುಖಿಲಂ ಸಹಭಕ್ಷ್ಯಮಾದತ್ ॥೮೯॥

ತೇನೈವ – ಆ ಭೀಮನಿಂದಲೇ ಅನ್ನಸಮಿತೌ – ಅನ್ನದ ರಾಶಿಯು ಚ – ಭಕ್ಷ್ಯ, ಪರಮಾನ್ನ, ಹಾಲು, ತುಪ್ಪ ಮೊದಲಾದವುಗಳ ರಾಶಿಯೂ ಕೂಡ ಪರಿಭುಜ್ಯಮಾನೇಸತಿ – ತಿನ್ನಲ್ಪಡುತ್ತಿರಲು ರಕ್ಷಃ – ರಾಕ್ಷಸನಾದಬಕನು ವೃಕ್ಷಂ – ಮರವನ್ನು ಉತ್ಪಾಟ್ಯ ಕಿತ್ತು ಅಮುಂ – ಈ ಭೀಮನನ್ನು ಪ್ರತಿ ಆಶು – ಕೂಡಲೇ ಅದ್ರವತ್ – ಓಡಿ ಹೋದನು ತದಾ – ಆಗ ಮಾರುತಿಃ – ಭೀಮನು ಪ್ರಹಾರಾನ್ – ಹೊಡೆತಗಳನ್ನು ವಾಮೇನ ಹಸ್ತೇನ – ಎಡಗೈಯಿಂದ ಅಪೋಹ್ಯ – ತಡೆದು ಸಹಭಕ್ಷ್ಯಂ – ಭಕ್ಷ್ಯಗಳಿಂದ ಕೂಡಿದ ಅಖಿಲಂಭೋಜ್ಯಂ – ಎಲ್ಲಾ ಅನ್ನವನ್ನು ಅದತ್ – ತಿಂದನು. ॥ ೮೯ ॥

ಪೀತ್ವಾಪಯೋಽತ್ವರಿತವಿನ ಮವೇಕ್ಷಮಾಣ ಆಚಮ್ಯತೇನಯುಯುಧೇಗುರುವೃಕ್ಷಶೈಲೈಃ ॥
ತೇನಾಹತೋಽಥ ಬಹುಭಿರ್ಗಿರಿಭಿರ್ಬಲೇನ ಜಗ್ರಾಹಚೈನಮಥ ಭೂಮಿತಲೇಪಿಪೇಷ ॥ ೯೦ ॥

ಅತ್ವರಿತಃ – ವೇಗವಿಲ್ಲದ ಅಥವಾ ಭಯವಿಲ್ಲದ ಭೀಮನು ಏನಂ – ಈ ಬಕನನ್ನು ಅವೇಕ್ಷಮಾಣಸ್ಸನ್ – ನೋಡುವವನಾಗಿ ಪಯಃ – ಹಾಲನ್ನು ಪೀತ್ವಾ – ಕುಡಿದು, ಆಚಮ್ಯ – ಕೈ, ಕಾಲು, ಮುಖಿಗಳನ್ನು ತೊಳೆದುಕೊಂಡು ಆಚಮನ ಮಾಡಿ ತೇನ – ಆ ಬಕನಿಂದ ಗುರುವೃಕ್ಷಶೈಲೈಃ – ದೊಡ್ಡಮರಗಳು ಪರ್ವತಗಳೂ, ಇವುಗಳಿಂದ ಯುಯುಧೇ – ಯುದ್ಧಮಾಡಿದನು ಅಥ – ಅನಂತರ ತೇನ – ಆ ಬಕನಿಂದ ಬಹುಭಿಃಗಿರಿಭಿಃ – ಬಹಳ ಪರ್ವತಗಳಿಂದ ಆಹತಃ – ಹೊಡೆಸಿಕೊಳ್ಳಲ್ಪಟ್ಟ ಭೀಮನು ಬಲೇನ ಭುಜಸಾಮರ್ಥ್ಯದಿಂದ ಏನಂ – ಈ ಬಕನನ್ನು ಭೂಮಿತಲೇ – ಭೂತಲದಲ್ಲಿ ಪಿಪೇಷ – ಪುಡಿ ಮಾಡಿದನು. ॥ ೯೦ ॥

ಆಕ್ರಮ್ಯಪಾದಮಪಿ ಪಾದತಲೇನತಸ್ಯ ದೋರ್ಭ್ಯಾಂ ಪ್ರಗೃಹ್ಯಚಪರಂವಿದದಾರಭೀಮಃ ॥
ಮೃತ್ವಾಸಚೋರುತಮಪಿವ ಜಗಾಮಸಾಪೋ ವಿಷ್ಣ್ವಿಡೇವಹಿಂಶನೈರನಿವೃತ್ತಿಚೋಗ್ರಂ ॥ ೯೧ ॥

ಭೀಮಃ – ಭೀಮನು ತಸ್ಯ – ಆ ಬಕನ ಪಾದಮಪಿ – ಪಾದವನ್ನಾದರೂ ಪಾದತಲೇನ – ತನ್ನ ಕಾಲಿನ ಅಡಿಭಾಗದಿಂದ ಆಕ್ರಮ್ಯ – ಒತ್ತಿಹಿಡಿದು ಪರಂ – ಇನ್ನೊಂದು ಕಾಲನ್ನು ದೋರ್ಭ್ಯಾಂ – ತನ್ನ ಎರಡು ಕೈಗಳಿಂದ ಪ್ರಗೃಹ್ಯ – ಹಿಡಿದು ವಿದದಾರ – ಕುತ್ತಿಗೆಯ ತನಕ ಸೀಳಿದನು. ಹಿ – ಯಾವ ಕಾರಣದಿಂದ ಸಃ – ಆ ಬಕಾಸುರನು ವಿಷ್ಣ್ವಿಡೇವ – ವಿಷ್ಣುದ್ವೇಷಿಯೇ ಆಗಿರುತ್ತಾನೋ ತೇನ – ಆ ಕಾರಣದಿಂದ ಪಾಪಃ – ಪಾಪಿಷ್ಠನಾದ ಬಕಾಸುರನು ಮೃತ್ವಾ – ಮರಣವನ್ನು ಹೊಂದಿ ಶನೈಃ – ಕ್ರಮದಿಂದ ಅನಿವೃತ್ತಿ – ಪುನರಾವೃತ್ತಿ ಇಲ್ಲದ ಉಗ್ರಂ – ಕ್ರೂರವಾದ ಉರುತಮುಪಿವ – ಉತ್ಕೃಷ್ಟವಾದ ಅಂಧಂ ತಮಸ್ಸನ್ನೇ ಜಗಾಮ – ಹೊಂದಿದನು. ॥ ೯೧ ॥

ಹತ್ವಾತಮುಕ್ಷತಬಲೋ ಜಗದಂತಕಂ ಸಯೋರಾಕ್ಷಸೋನವಶ ಆಸಜರಾಸುತಸ್ಯ ॥
ಭೌಮುಸ್ಯಪೂರ್ವಮುಪಿನೋ ಭರತಸ್ಯರಾಜ್ಞೋ ಭೀಮೋನ್ಯಧಾಪಯದಮುಷ್ಯಶರೀರಮಗ್ರೇ ॥ ೯೨ ॥

ಯಃರಾಕ್ಷಸಃ – ಯಾವ ಬಕಾಸುರನು ಪೂರ್ವಂ – ಸಾಯುವ ಮೊದಲು ಜರಾಸುತಸ್ಯ – ಜರಾಸಂಧನ ಭೌಮುಸ್ಯ – ನರಕಾಸುರನ ವಶೇ – ಅಧಿನದಲ್ಲಿ ನಆಸ – ಇರಲಿಲ್ಲವೋ ರಾಜ್ಞಃಭರತಸ್ಯ – ರಾಜನಾದ ಭರತನ ವಶೇ – ಅಧೀನದಲ್ಲಿ

ನೋಆಸ – ಇರಲಿಲ್ಲವೋ ತಂ ಜಗದಂತಕಂ – ಆಂತಹ ಜಗತ್ತಿಗೆ ನಾಶಕನಾದ ಬಕಾಸುರನನ್ನು ಅಕ್ಷತಬಲಃ – ನಾಶವಿಲ್ಲದ ಸಾಮರ್ಥ್ಯವುಳ್ಳ ಸಃ – ಆ ಭೀಮನು ಹತ್ವಾ – ಕೊಂದು ಅಮುಷ್ಯ – ಈ ಬಕನ ಶರೀರಂ – ದೇಹವನ್ನು ಅಗ್ರೇ – ಭಂಡಿಯ ಮುಂದೆ ನ್ಯಧಾಪಯತ್ – ಸ್ಥಾಪಿಸಿದನು. ॥ ೯೨ ॥

ದ್ವಾರ್ಯೇವತತ್ಪ್ರತಿನಿಧಾಯ ಪುರಃಸಭೀಮಃ ಸ್ನಾತ್ವಾಜಗಾಮ ನಿಜಸೋದರಪಾರ್ಶ್ವಮೇವ ॥
ಶ್ರುತ್ವಾಸ್ಯಕರ್ಮಪರಮಂ ತುತುಷುಃಸಮೇತಾ ಮಾತ್ರಾಚತೇತದನುವವ್ರುರತಃ (ಭೀತಿಯುತಾಃ)
ಪುರಸ್ಥಾಃ ॥ ೯೩ ॥

ದೃಷ್ಟ್ವೈವರಾಕ್ಷಸ ಶರೀರಮುರುಪ್ರಭೀತಾಜ್ಞಾತ್ವೈವ ಹೇತುಭಿರಥಕ್ರಮುಶೋಮೃತಂಚ ॥
ವಿಪ್ರಸ್ಯತಸ್ಯವಚನಾದಪಿ ಭೀಮಸೇನಭಗ್ನಂ ನಿಶಮ್ಯಪರಮಂ ತುತುಷುಶ್ಚತಸ್ಮೈ ॥ ೯೪ ॥

ಸ ಭೀಮಃ – ಆ ಭೀಮನು ತತ್ – ಆ ಮೃತದೇಹವನ್ನು ಪುರಃ – ಪಟ್ಟಣದ ದ್ವಾರ್ಯೇವ – ದ್ವಾರದಲ್ಲಿಯೇ ಪ್ರತಿನಿಧಾಯ – ಇಟ್ಟು ಸ್ನಾತ್ವಾ – ಸ್ನಾನಮಾಡಿ ನಿಜಸೋದರಪಾರ್ಶ್ವಮೇವ – ತನ್ನ ಸಹೋದರರಾದ ಧರ್ಮರಾಜಾದಿಗಳ ಸಮೀಪಕ್ಕೇ ಜಗಾಮ – ಹೋದನು ಅಥ – ಅನಂತರ ಮಾತ್ರಾ – ತಾಯಿಯಿಂದ ಸಮೇತಾಃ – ಕೂಡಿದ ತೇ – ಆ ಧರ್ಮಾದಿಗಳು ಅಸ್ಯ – ಈ ಭೀಮನ ಪರಮಂಕರ್ಮ – ಶ್ರೇಷ್ಠವಾದ ಬಕಸಂಹಾರರೂಪಕರ್ಮವನ್ನು ಶ್ರುತ್ವಾ – ಕೇಳಿ ತುತುಷುಃ – ಸಂತೋಷಪಟ್ಟರು ಪುರಸ್ಥಾಃ – ಪಟ್ಟಣಿಗರು ಉರು ಶರೀರಂ – ದೊಡ್ಡ ಶರೀರವನ್ನು ದೃಷ್ಟ್ವೈವ – ನೋಡಿಯೇ ಪ್ರಭೀತಾಃಸಂತಃ – ಭಯಗ್ರಸ್ತರಾಗಿ ತತ್ – ಆ ಶರೀರವನ್ನು ಅನುವವ್ರುಃ – ಸುತ್ತುವರಿದರು ಅಥ – ಅನಂತರ ಕ್ರಮಶಃ– ಕ್ರಮದಿಂದ ಹೇತುಭಿಃ – ಅಂಗಚಲನಾಭಾವ, ಶ್ವಾಸಾಭಾವಾದಿ ಕಾರಣಗಳಿಂದ ಮೃತಂಚ–ಸತ್ತವನನ್ನಾಗಿಯೂ ಜ್ಞಾತ್ವೈವ – ತಿಳಿದೇ ತಸ್ಯ ವಿಪ್ರಸ್ಯ – ಭೀಮಸೇನನಿರುತ್ತಿದ್ದ ಮನೆಯ ಬ್ರಾಹ್ಮಣನ ವಚನಾದಪಿ – ಮಾತಿನಿಂದಲೂ ಕೂಡ ಭೀಮಸೇನ ಭಗ್ನಂ – ಭೀಮಸೇನನಿಂದ ಸಂಹೃತನನ್ನಾಗಿ ನಿಶಮ್ಯ – ಕೇಳಿ ಪರಮಂ ತುತುಷುಃ – ಅತಿಸಂತೋಷಪಟ್ಟರು. (ತಸ್ಮೈ ಎಂಬ ಪದಕ್ಕೆ ಮುಂದಿನ ಶ್ಲೋಕದಲ್ಲಿ ಅನ್ವಯವು). ॥ ೯೩–೯೪ ॥

ಅನ್ನಾತ್ಮಕಂಕರಮಮುಷ್ಯಚಸಂಪ್ರಚಕ್ರುಃ ಸೋಽಪ್ಯೇನಮಾಶು ನರಸಿಂಹವಪುರ್ಧರಸ್ಯ ॥
ಚಕ್ರೇಹರೇಸ್ತದನು ಸತ್ಯವತೀಸುತಸ್ಯವಿಷ್ಣೋರ್ಹಿವಾಕ್ಪ್ರಚುದಿತಾಃ ಪ್ರಯಯುಸ್ತತಶ್ಚ ॥ ೯೫ ॥

ಅಮುಷ್ಯ – ಈ ಬಕಾಸುರನ ಅನ್ನಾತ್ಮಕಂಕರಂ – ಅನ್ನ ಸ್ವರೂಪವಾದ ಕಪ್ಪವನ್ನು ತಸ್ಮೈ – ಆ ಭೀಮನಿಗೋಸ್ಕರ ಸಂಪ್ರಚಕ್ರುಃ – ಮಾಡಿದರು ಸೋಽಪಿ – ಆ ಭೀಮನಾದರೂ ಏನಂ – ಈ ಅನ್ನಾತ್ಮಕ ಕರವನ್ನು ನರಸಿಂಹ ವಪುರ್ಧರಸ್ಯ– ಅದೇ ಗ್ರಾಮದಲ್ಲಿರುವ ನರಸಿಂಹರೂಪವನ್ನು ಧರಿಸಿರುವ ಹರೇಃ – ಪರಮಾತ್ಮನಿಗೆ ಚಕ್ರೇ – ಪೂಜೆಗಾಗಿ ಕಟ್ಟಳೆಯನ್ನು ಮಾಡಿದನು ತದನು – ಅನಂತರ ಸತ್ಯವತೀಸುತಸ್ಯ – ಸತ್ಯವತಿಯ ಮಗನಾದ ವಿಷ್ಣೋಃ – ವೇದವ್ಯಾಸರ ವಾಕ್ಪ್ರಚುದಿತಾಃಸಂತಃ– ಮಾತಿನಿಂದ ಪ್ರೇರಿಸಲ್ಪಟ್ಟವರಾಗಿ ತತಃ – ಆ ಏಕಚಕ್ರಾನಗರದಿಂದ ಪ್ರಯಯುಃ – ಹೊರಟು ಹೋದರು. ॥ ೯೫ ॥

ಭಾ.ಅ. ೮೮-೯೫ ಶ್ರೀಭೀಮಸೇನದೇವರು ಬೇಗನೇ ಬಕನ ವನಕ್ಕೆ ಬಂದು ಪಾಯಸ, ಭಕ್ಷ್ಯ, ಅನ್ನ, ಹಾಲು ಇವುಗಳ ರಾಶಿಯನ್ನು, ರಾಕ್ಷಸನನ್ನು (ಅಶುದ್ಧನನ್ನು)ಮುಟ್ಟುವ ಮೊದಲೇ ಭುಂಜಿಸಲು ಅಪೇಕ್ಷಿಸಿ, ಹಾಗೆ ಮಾಡುತ್ತಿರುವಾಗ. ಅದನ್ನು ಕಂಡು ಬಕನು ದೊಡ್ಡ ವೃಕ್ಷಗಳನ್ನು ಕೆತ್ತಿ ಅವುಗಳಿಂದ ಹೊಡೆತಗಳನ್ನು ಕೊಡುತ್ತಿರುವಾಗ, ಆ ಹೊಡೆತಗಳನ್ನು ಎಡಗೈಯಿಂದ ತಡೆದು ಬಲಗೈಯಿಂದ ಎಲ್ಲವನ್ನು ಉಂಡು, ಹಾಲನ್ನೆಲ್ಲ ಕುಡಿದು, ಆಚಮನಮಾಡಿ (ಹೀಗೆ ಶ್ರೀಭೀಮಸೇನರು ಶುದ್ಧವಾಗಿ ಭೋಜನ ಮಾಡಬೇಕು, ಅಶುದ್ಧರ ಸ್ಪರ್ಶಾದಿಗಳನ್ನು ಮಾಡಬಾರದು, ಊಟಮಾಡಿ ಆಚಮನಮಾಡಬೇಕು ಎಂಬ ಧರ್ಮಗಳನ್ನು ತಿಳಿಸಿದ್ದಾರೆ) ಆ ಬಕನಿಂದ ಕೂಡಿಕೊಂಡು ದೊಡ್ಡ ಗಿಡ, ಪರ್ವತಗಳಿಂದ ಯುದ್ಧ ಮಾಡುತ್ತಾ ಅವನನ್ನು ಬಾಹುಗಳಿಂದ ಹಿಡಿದು ನೆಲದ ಮೇಲೆ ಕೆಡವಿ ಅವನ ಒಂದು ಕಾಲಿನ ಮೇಲೆ ತಮ್ಮ ಕಾಲನ್ನಿಟ್ಟು ಕೈಗಳಿಂದ ಅವನ ಇನ್ನೊಂದು ಪಾದವನ್ನು ಹಿಡಿದು ಕಬ್ಬನ್ನು ಸೀಳುವಂತೆ ಸೀಳಿದರು. ಆ ವಿಷ್ಣುದ್ವೇಷಿಯಾದ ಬಕನು ಸತ್ತು ತಿರುಗಿಬಾರದ ಅಂಧ ತಮಸ್ಸಿಗೆ ಹೋದನು. ಈ ಬಕನು ಜರಾಸಂಧ, ನರಕಾಸುರ, ಭರತರಾಜ ಇವರಾರಿಗೂ ವಶನಾಗಿರಲಿಲ್ಲ. ಅಷ್ಟು ಬಲಿಷ್ಠನು. ಅಂಥವನನ್ನು ಶ್ರೀಭೀಮರು ಸಂಹರಿಸಿದರು. ಅವನ ಶರೀರವನ್ನು ತಂದು ಊರ ಬಾಗಿಲಿಗೆ ಇಟ್ಟು ತಾವು ಸ್ನಾನಮಾಡಿ

ತಮ್ಮ ವಾಸಸ್ಥಳಕ್ಕೆ ಹೋದರು: ಎಲ್ಲ ವೃತ್ತಾಂತವನ್ನು ತಿಳಿದು ತಾಯಿ ಮತ್ತು ಸಹೋದರರು ಬಹಳ ಸಂತುಷ್ಟರಾದರು. ಊರಿನ ಜನರು ಶವವನ್ನು ನೋಡಿ ಗಾಬರಿಯಾಗಿ (ರಾಕ್ಷಸನೇ ಬಂದಿದ್ದಾನೋ ಎಂಬ ಭ್ರಾಂತಿಯಿಂದ) ಅವಯವಚಲನ, ಶ್ವಾಸಗಳಿಲ್ಲದ್ದರಿಂದ, ಬ್ರಾಹ್ಮಣ ಬಂದು ಹೇಳಿದ್ದರಿಂದಲೂ ಭೀಮಸೇನನಿಂದ ಮೃತನೆಂದು ತಿಳಿದು, ಬಹಳ ಸಂತೋಷದಿಂದ ಶ್ರೀಭೀಮಸೇನರನ್ನು ಸ್ತುತಿಸಿದರು. ಬಕನಿಗೆ ಕೊಡುತ್ತಿದ್ದ ಅನ್ನದ ಕರವನ್ನು ಇವರಿಗೆ ಕೊಡುವದಾಗಿ ಊರಿನವರು ನಿಶ್ಚಯಿಸಿದಾಗ ಶ್ರೀಭೀಮರು ಆ ಊರಿನಲ್ಲಿರುವ ಶ್ರೀನೃಸಿಂಹ ದೇವಾಲಯದಲ್ಲಿ ದೇವರಿಗೆ ಅದನ್ನು ಪೂಜಾ ಕಟ್ಟಳೆಯನ್ನಾಗಿ ಕೊಡಲು ಹೇಳಿದರು. ನಂತರ ಪಾಂಡವರು ಶ್ರೀವೇದವ್ಯಾಸರ ಆಜ್ಞೆಯಂತೆ ಆ ಊರಿನಿಂದ ಹೊರಟರು.

ಉತ್ಪತ್ತಿಪೂರ್ವಕಕಥಾಂದ್ರುಪದಾತ್ಮಜಾಯಾ ವ್ಯಾಸೋಽನೂಚ್ಯ ಜಗತಾಂಗುರುರೀಶ್ವರಶ್ಚ ॥
ಯಾತೇತ್ಯಚೋದಯದಥಾಪ್ಯಪರೇ ದ್ವಿಜಾಗ್ರ್ಯಾಸ್ತಾನ್ಬ್ರಾಹ್ಮಣಾಇತಿ ಭುಜಿರ್ಭವಿತೇತಿಚೋಚುಃ ॥ ೯೬ ॥

ಜಗತಾಂ – ಲೋಕಗಳಿಗೆ ಗುರುಃ – ಉಪದೇಶಕರಾದ ಈಶ್ವರಶ್ಚ – ನಿಯಾಮಕರೂ ಆದ ವ್ಯಾಸಃ – ವೇದವ್ಯಾಸರು ದ್ರುಪದಾತ್ಮಜಾಯಾಃ – ದ್ರುಪದರಾಜನ ಮಗಳಾದ ದ್ರೌಪದಿಯ ಉತ್ಪತ್ತಿಪೂರ್ವಕಕಥಾಂ – ಜನನವನ್ನು ಆರಂಭಿಸಿ ಎಲ್ಲಾ ಕಥೆಯನ್ನೂ ಅನೂಚ್ಯ – ಹೇಳಿ ಯಾತ – ನೀವು ಹೋಗಿರಿ ಇತಿ – ಎಂದು ಅಚೋದಯತ್ – ಪ್ರೇರಿಸಿದರು ಅಥಾಪಿ – ವೇದವ್ಯಾಸರ ವಚನದಿಂದಲೇ ಪಾಂಡವರು ಹೋಗುವವರಾದರೂ ಅಪರೇ – ಇತರರಾದ ದ್ವಿಜಾಗ್ರ್ಯಅಪಿ – ಬ್ರಾಹ್ಮಣ ಶ್ರೇಷ್ಠರೂ ಕೂಡ ತಾನ್ – ಆ ಪಾಂಡವರನ್ನು ಬ್ರಾಹ್ಮಣಾ ಇತಿ – ಬ್ರಾಹ್ಮಣರೆಂಬ ಕಾರಣದಿಂದ ಭುಜಿಃ – ನಾಳೆ ದ್ರುಪದನ ಮನೆಯಲ್ಲಿ ಭೋಜನವು ಭವಿತಾ – ಆಗುವುದು ಇತಿ – ಎಂದು ಊಚುಃ – ಹೇಳಿದರು. ॥ ೯೬ ॥

ಪೂರ್ವಂಹಿಸಾರ್ಷತ ಇವಾನ ತುಗೇಹದಗ್ಧಾನ್ ಶ್ರುತ್ವಾತಿದುಃಖಿತಮನಾಃ ಪುನರೇವಮುಂತ್ರಃ ॥
ಯಾಜೋಪಯಾಜಮುಖನಿಃಸೃತಪಿವ ಮೇಷನಾಸತ್ಯತಾರ್ಹ ಇತಿಜೀವನಮೇಷುಮೇನೇ ॥ ೯೭ ॥

ಪಾರ್ಷತಃ – ದ್ರುಪದನು ಪೂರ್ವಂ – ಮೊದಲು ಜತುಗೇಹದಗ್ಧಾನ್ – ಅರಗಿನ ಮನೆಯಲ್ಲಿ ಸುಡಲ್ಪಟ್ಟ ಇವಾನ್ – ಈ ಪಾಂಡವರನ್ನು ಶ್ರುತ್ವಾ – ಕೇಳಿ ಅತಿದುಃಖಿತಮನಾಃಸನ್ ಅತ್ಯಂತ ದುಃಖದಿಂದ ಕೂಡಿದ ಮನಸ್ಸುಳ್ಳವನಾಗಿ ಪುನಃ– ಆಮೇಲೆ ಯಾಜೋಪಯಾಜಮುಖನಿಃಸೃತಃ – ಯಾಜೋಪಯಾಜರ ಮುಖಗಳಿಂದ ಹೊರಟು ಬಂದ ಏಷಃಮಂತ್ರಃ – "ಪಾರ್ಥಾಯದಾತುಂ ಕನ್ಯಾಭೂಯಾತ್" – (ಅರ್ಜುನನಿಗೆ ಕೊಡಲು ಕನ್ಯೆಯು ಉಂಟಾಗಲಿ) ಎಂಬ ಮಂತ್ರವು ಏವಂ – ಈ ರೀತಿಯಾಗಿ ಅಂದರೆ ಲಾಕ್ಷಾಗೃಹದಲ್ಲಿ ಮರಣದಿಂದ ಅಸತ್ಯತಾರ್ಹಃ – ಸುಳ್ಳಾಗಲಿಕ್ಕೆ ಯೋಗ್ಯವು ನೈವ ಅಲ್ಲವೇ ಅಲ್ಲ ಇತಿ – ಈ ಕಾರಣದಿಂದ ಏಷು—ಈ ಪಾಂಡವರಲ್ಲಿ ಜೀವನಂ – ಬದುಕಿಕೊಂಡಿರುವಿಕೆಯನ್ನು ಮೇನೇ – ತಿಳಿದನು.॥೯೭॥

ಯತ್ರಕ್ವಚಿತ್ಪ್ರತಿವಸಂತಿ ನಿಲೀನರೂಪಾಃಪಾರ್ಥಾಇತಿಸ್ಮ ಸತುಫಲ್ಗುನಕಾರಣೇನ ॥
ಚಕ್ರೇಸ್ಯಯುಂವರವಿಘೋಷಣಮಾಶುರಾಜಾತ್ವನ್ಯೈರಧಾರ್ಯ ಧನುರೀಶವರಾಚ್ಚ ಚಕ್ರೇ ॥ ೯೮ ॥

ಪಾರ್ಥಾಃ – ಪಾಂಡವರು ಯತ್ರಕ್ವಚಿತ್ ಎಲ್ಲಿಯಾದರೂ ಒಂದು ಸ್ಥಳದಲ್ಲಿ ನಿಲೀನರೂಪಾಃಸಂತಃ – ಗುಪ್ತವಾದ ವೇಷಉಳ್ಳವರಾಗಿ ಪ್ರತಿವಸಂತಿ – ವಾಸಮಾಡಿಕೊಂಡಿದ್ದಾರೆ ಇತಿ – ಈ ಕಾರಣದಿಂದ ಫಲ್ಗುನಕಾರಣೇನ – ಅರ್ಜುನನಿಗೋಸ್ಕರ ಮಾಡಿದ ಪ್ರತಿಜ್ಞಾರೂಪಕಾರಣದಿಂದ ಸ ರಾಜಾ - ಆ ದ್ರುಪದರಾಜನು ಈಶವರಾತ್ – ರುದ್ರನವರಿಂದ ಅನ್ಯೈಃ – ಅರ್ಜುನನನ್ನು ಹೊರತು ಇತರರಿಂದ ಅಧಾರ್ಯಧನುಃ – ಧರಿಸಲಿಕ್ಕೆ ಅಶಕ್ಯವಾದಬಿಲ್ಲನ್ನು ಚಕ್ರೇ – ಸಂಪಾದಿಸಿದನು. ॥ ೯೮ ॥

ತತ್ಕಾಲಏವ ವಸುದೇವಸುತೋಽಪಿ ಕೃಷ್ಣಃಸಂಪೂರ್ಣನೈಜ ಪರಿಬೋಧತಏವಸರ್ವಂ ॥
ಜಾನನ್ನಪಿಸ್ಮ ಹಲಿನಾ ಸಹಿತೋಜಗಾವುಪಾರ್ಥಾನ್ನಿಶಮ್ಯಚ ಮೃತಾನಥ ಕುಲ್ಯಹೇತೋಃ ॥ ೯೯ ॥

ಅಥ – ಅನಂತರ ವಸುದೇವಸುತಃಕೃಷ್ಣೋಽಪಿ – ವಸುದೇವನ ಮಗನಾದ ಕೃಷ್ಣನಾದರೂ ಪಾರ್ಥಾನ್ – ಪಾಂಡವರನ್ನು ಮೃತಾನ್ ಸತ್ತವರನ್ನಾಗಿ ನಿಶಮ್ಯ – ಕೇಳಿ ಸರ್ವಂ - ಪಾಂಡವರ ಜೀವನಾದಿಗಳನ್ನು ಸಂಪೂರ್ಣನೈಜಪರಿಬೋಧತಏವ–

ಪರಿಪೂರ್ಣವಾದ ಸ್ವಾಭಾವಿಕವಾದ ಜ್ಞಾನದಿಂದಲೇ ಜಾನನ್ನಪಿ – ತಿಳಿದವನಾದರೂ ಕೂಡ ತತ್ಕಾಲಏವ – ಸ್ವಯಂವರ ವಿಘೋಷಣ ಕಾಲದಲ್ಲಿಯೇ ಕುಲ್ಯಹೇತೋಃ – ಬಂಧುಗಳು ಮೃತರಾಗುತ್ತಿರಲು ಹೋಗಿ ವಿಚಾರವನ್ನು ಮಾಡಬೇಕು ಎಂಬ ಕುಲೋಚಿತ ಕರ್ಮವನ್ನು ಮಾಡುವುದಕ್ಕೋಸ್ಕರ ಹಲಿನಾ – ಬಲರಾಮನಿಂದ ಸಹಿತಃಸನ್ – ಕೂಡಿದವನಾಗಿ ಜಗಾಮ – ಹಸ್ತಿನಾವತಿಗೆ ಹೋದನು. ॥ ೯೯ ॥

ಸಂಪ್ರಾಪ್ಯ ಹಸ್ತಿನಪುರಂ ಧೃತರಾಷ್ಟ್ರಪುತ್ರಾನ್ಸಂವಂಚಯಂಸ್ತದನುಸಾರಿ ಕಥಾಶ್ಚ ಕೃತ್ವಾ ॥
ಭೀಷ್ಮಾದಿಭಿಃ ಪರಿವೃತೋಽಪ್ರಿಯವಜ್ಜಗಾಮ ದ್ವಾರಾವತೀಮುದಿತ ಪೂರ್ಣಸುನಿತ್ಯಸೌ ಖ್ಯಃ ॥ ೧೦೦ ॥

ಉದಿತಪೂರ್ಣಸುನಿತ್ಯಸೌ ಖ್ಯಃ – ಯಾವಾಗಲೂ ವ್ಯಕ್ತವಾಗಿರುವ, ಪರಿಪೂರ್ಣವಾದ, ದುಃಖಸಂಪರ್ಕವಿಲ್ಲದ, ನಾಶವಿಲ್ಲದ ಆನಂದವುಳ್ಳ ಕೃಷ್ಣನು ಹಸ್ತಿನಪುರಂ – ಹಸ್ತಿನಾವತಿ ಪಟ್ಟಣವನ್ನು ಸಂಪ್ರಾಪ್ಯ – ಹೊಂದಿ ಭೀಷ್ಮಾದಿಭಿಃ – ಭೀಷ್ಮಾದಿಗಳಿಂದ ಪರಿವೃತಃಸನ್ – ಕೂಡಿದವನಾಗಿ ಧೃತರಾಷ್ಟ್ರಪುತ್ರಾನ್ – ಧೃತರಾಷ್ಟ್ರನ ಮಕ್ಕಳಾದ ದುರ್ಯೋಧನಾದಿಗಳನ್ನು ಸಂವಂಚಯನ್‌ಸನ್ – ಮೋಸಗೊಳಿಸುವವನಾಗಿ ಅಪ್ರಿಯವತ್ – ಪಾಂಡವರಿಗೆ ಅಪ್ರಿಯರಾದವರಂತೆ ತದನುಸಾರಿ ಕಥಾಶ್ಚ – ತತ್ಕಾಲಕ್ಕೆ ಅನುಸಾರಿಗಳಾದ ದೈವಹೀನರಾದ ಪಾಂಡವರು ಮೃತರಾದರು ಇತ್ಯಾದಿ ಕಥೆಗಳನ್ನು ಕೃತ್ವಾ – ಮಾಡಿ ದ್ವಾರಾವತೀಂ – ದ್ವಾರಕಾ ಪಟ್ಟಣಕ್ಕೆ ಜಗಾಮ – ಹೋದನು. ॥ ೧೦೦ ॥

ಭಾ.ಅ. ೯೬-೧೦೦ ಶ್ರೀವೇದವ್ಯಾಸರು ಬಂದು ಶ್ರೀದ್ರೌಪದೀದೇವಿಯ ಕಥಾವನ್ನೆಲ್ಲ ಹೇಳಿ ಅವಳ ಸ್ವಯಂವರ ಇದೆ; ಅಲ್ಲಿಗೆ ಹೋಗಿರಿ ಎಂದು ಹೇಳಿದರು. ಊರಬ್ರಾಹ್ಮಣರು ಈ ಪಾಂಡವರನ್ನು ಬ್ರಾಹ್ಮಣರೆಂದು ತಿಳಿದು ಆ ಸ್ವಯಂವರದಲ್ಲಿ ಉತ್ಕೃಷ್ಟ ಭೋಜನ ಸಿಗುತ್ತದೆ ಅಲ್ಲಿಗೆ ಹೋಗೋಣ ನಡೆಯಿರಿ ಎಂದರು. ದ್ರುಪದರಾಜನು ಪಾಂಡವರು ಅರಗಿನ ಮನೆಯಲ್ಲಿ ಸುಟ್ಟು ಸತ್ತುಹೋದರೆಂಬ ಸುದ್ದಿಯನ್ನು ಕೇಳಿದಾಗ ಬಹಳ ದುಃಖಪಟ್ಟನು. ಆದರೆ, ಅರ್ಜುನನಿಗೆ ಕೊಡುವದಕ್ಕಾಗಿ ಕನ್ಯೆಯು ಬೇಕೆಂದು ಕೇಳಿದ ಪ್ರಕಾರ ಯಾಜೋಪಯಾಜರಿಂದ ಹೇಳಲ್ಪಟ್ಟ ಮಂತ್ರವು ಸುಳ್ಳಾಗಲಾರದು. ಆದ್ದರಿಂದ ಎಲ್ಲಿಯಾದರೂ ಬದುಕಿ ರೂಪಾಂತರದಲ್ಲಿರಬೇಕು ಎಂದು ವಿಚಾರಿಸಿ ಶ್ರೀರುದ್ರವರದಿಂದ ಬೇರೆ ಯಾರಿಗೂ ಎತ್ತಲೂ ಕೂಡ ಅಶಕ್ಯವಾದ ಧನುಸ್ಸನ್ನು ಬಾಣ ಹೂಡಲು ಇಟ್ಟನು. ಶ್ರೀಕೃಷ್ಣನಾದರೂ ಸರ್ವಜ್ಞನಾದವನು. ಎಲ್ಲವನ್ನು ತಿಳಿದೂಕೂಡ ಮನುಷ್ಯರಂತೆ ನಟಿಸುತ್ತಾ ಪಾಂಡವರ ಮರಣ ವಾರ್ತೆಯನ್ನು ಕೇಳಿ ಕೌರವರನ್ನು ಮಾತನಾಡಿಸುವದಕ್ಕಾಗಿ ಅಣ್ಣನಿಂದ ಸಹಿತನಾಗಿ ಹೋದನು. ಹಸ್ತಿನಾವತಿಗೆ ಬಂದು ಧೃತರಾಷ್ಟ್ರಪುತ್ರರ ಹತ್ತಿರ ಅವರಂತೆಯೇ ವಂಚನೆಯ ಮಾತು ಗಳನ್ನಾಡಿ (ನಿರ್ಭಾಗ್ಯರಾದ ಪಾಂಡವರು ಸತ್ತರು; ಯಾರೇನು ಮಾಡುವದು ? ದುಃಖಮಾಡಿಕೊಳ್ಳಬೇಡಿ. ಇತ್ಯಾದಿ), ಭೀಷ್ಮಾದಿಗಳಿಂದ ಕೂಡ ಮಾತಾಡಿ ತನ್ನ ದ್ವಾರಕೆಗೆ ಹೋದನು.

ತಸ್ಯಾಂತರೇ ಹೃದಿಕಸೂನುರನಂತರಂ ಸ್ವಂಶ್ವಾಫಲ್ಕಿಬುದ್ಧಿ ಬಲಮಾಶ್ರಿತ ಇತ್ಯುವಾಚ ॥
ಸತ್ರಾಜಿದೇಷಹಿಂಪುರಾ ಪ್ರತಿಜಜ್ಞ ಏನಾಮುಸ್ಮತ್ಕೃತೇ ಸ್ವತನಯಾಂ ಮಣಿನಾಸಹೈವ ॥ ೧೦೧ ॥

ತಸ್ಯ – ಹಸ್ತಿನಾವತೀದ್ವಾರಕಾ ಪಟ್ಟಣ ಇವುಗಳ ಗಮನದ ಅಂತರೇ – ಮಧ್ಯದಲ್ಲಿ ಹೃದಿಕಸೂನುಃ – ಹೃದಿಕನ ಮಗ ನಾದ ಕೃತವರ್ಮನು ಸ್ವಂ ಅನಂತರಂ–ತನ್ನ ತಮ್ಮನಾದ ಶತಧನ್ವನನ್ನು ಕುರಿತು ಶ್ವಾಫಲ್ಕಿ ಬುದ್ಧಿ ಬಲಂ–ಶ್ವಫಲ್ಕನ ಮಗನಾದ ಅಕ್ರೂರನ ಬುದ್ಧಿಯ ಬಲವನ್ನು ಆಶ್ರಿತಸ್ಸನ್ – ಆಶ್ರಯಿಸಿದವನಾಗಿ ಇತಿ – ಈ ರೀತಿಯಾಗಿ ಉವಾಚ – ಹೇಳಿದನು ಏಷಃ – ಈ ಸತ್ರಾಜಿತ್ – ಸತ್ರಾಜಿದ್ರಾಜನು ಪುರಾ – ಹಿಂದೆ ಸ್ವತನಯಾಂ – ತನ್ನ ಮಗಳಾದ ಏನಾಂ – ಈ ಸತ್ಯ ಭಾಮೆಯನ್ನು ಮಣಿನಾ - ಸ್ಯಮಂತಕ ಮಣಿಯಿಂದ ಸಹೈವ - ಕೂಡಿಕೊಂಡೇ ಅಸ್ಮತ್ಕೃತೇ – ನಮಗೋಸ್ಕರ ಪ್ರತಿಜಜ್ಞೇ– ಕೊಡುವುದಾಗಿ ಪ್ರತಿಜ್ಞೆಯನ್ನು ಮಾಡಿದ್ದನು. ॥ ೧೦೧ ॥

ಸರ್ವಾಂಶ್ಚ ನಃ ಪುನರಸಾವವಮತ್ಯಕೃಷ್ಣಾಯಾದಾತ್ಸುತಾಂ ಜಹಿಂಚತಂನಿಶಿಪಾಪಬುದ್ಧಿಂ ॥
ಆದಾಯರತ್ನಮುಪಯಾಹಿಂಚ ನೌವಿರೋಧೇಕೃಷ್ಣಸ್ಯ ದಾನಪತಿನಾ ಸಹಸಾಹ್ಯಮೇಮಿ ॥ ೧೦೨ ॥

ಅಸೌ – ಈ ಸತ್ರಾಜಿದ್ರಾಜನು ಪುನಃ – ನಂತರ ನಃ ಸರ್ವಾನ್ – ನಮ್ಮೆಲ್ಲರನ್ನು ಅವಮತ್ಯ – ತಿರಸ್ಕರಿಸಿ ಕೃಷ್ಣಾಯ– ಕೃಷ್ಣನಿಗೋಸ್ಕರ ಸುತಾಂ – ಮಗಳಾದ ಸತ್ಯಭಾಮೆಯನ್ನು ಅದಾತ್ – ಕೊಟ್ಟನು ಪಾಪಬುದ್ಧಿಂ – ಪಾಪಯುಕ್ತವಾದ ಬುದ್ಧಿಯುಳ್ಳತಂ – ಆ ಸತ್ರಾಜಿತನನ್ನು ನಿಶಿ – ರಾತ್ರಿಯಲ್ಲಿ ಜಹಿ – ಕೊಲ್ಲು ರತ್ನಂ – ಸ್ಯಮಂತಕ ಮಣಿಯನ್ನು ಆದಾಯ – ಹಿಡಿದುಕೊಂಡು ಉಪಯಾಹಿ – ನಮ್ಮ ಸಮೀಪಕ್ಕೆ ಬಾ ಕೃತವರ್ಮನ ತಮ್ಮನಾದ ಶತಧನ್ವನು ನನ್ನ ಮಾವನಾದ ಸತ್ರಾಜಿದ್ರಾಜನನ್ನು ಕೊಂದನು ಎಂಬುದಾಗಿ ನೌ – ನಮ್ಮಿಬ್ಬರಿಂದ ಕೃಷ್ಣಸ್ಯ – ಕೃಷ್ಣನ ವಿರೋಧೇಸತಿ - ವಿರೋಧ ಉಂಟಾ ಗುತ್ತಿರಲು ದಾನಪತಿನಾ – ದಾನದಲ್ಲಿ ಆಸಕ್ತನಾದ ಅಕ್ರೂರನಿಂದ ಸಹ – ಕೂಡಿಕೊಂಡು ಸಾಹ್ಯಂ – ಸಾಹಾಯ್ಯವನ್ನು ಏಮಿ – ಹೊಂದುತ್ತೇನೆ. ॥ ೧೦೨ ॥

ಅವ — ಶತಧನ್ವನಿಗೆ ನಿಂದ್ಯವಾದ ಸಂಹಾರ ರೂಪಕರ್ಮದಲ್ಲಿ ಪ್ರವೃತ್ತಿಯಾಗಲು ಕಾರಣವನ್ನು ಹೇಳುತ್ತಾರೆ.

ಇತ್ಯುಕ್ತ ಆಶುಕುಮತಿಃಸಹಿ ಪೂರ್ವದೇಹೇದೈತ್ಯೋಯತಸ್ತದಕರೋದಥಸತ್ಯಭಾಮಾ ॥
ಆನಂದಸಂವಿದಪಿ ತೋಕವಿಡಂಬನಾಯತದ್ದೇಹ ಮುಸ್ಯತಿಲಜೇಪತಿ ಮಭ್ಯುಪಾಗಾತ್ ॥ ೧೦೩ ॥

ಇತಿ – ಈ ರೀತಿಯಾಗಿ ಉಕ್ತಃ – ಕೃತವರ್ಮನಿಂದ ಹೇಳಿಸಿಕೊಳ್ಳಲ್ಪಟ್ಟ ಕುಮತಿಃ – ದುಷ್ಟಬುದ್ಧಿಯುಳ್ಳ ಸಃ – ಆ ಶತಧನ್ವನು ಯತಃ – ಯಾವ ಕಾರಣದಿಂದ ಪೂರ್ವದೇಹೇ – ಹಿಂದಿನ ಶರೀರದಲ್ಲಿ ದೈತ್ಯಃ – ದೈತ್ಯನೋ ತತಃ – ಆ ಕಾರಣ ದಿಂದ ಆಶು – ಕೂಡಲೇ ತತ್ – ಆ ನಿಂದ್ಯವಾದ ಸಂಹಾರೂಪ ಕರ್ಮವನ್ನು ಅಕರೋತ್ – ಮಾಡಿದನು ಅಥ – ಅನಂತರ ಸತ್ಯಭಾಮಾ – ಸತ್ಯಭಾಮೆಯು ಆನಂದಸಂವಿದಪಿ – ಸುಖಜ್ಞಾನವುಳ್ಳವರಾದರೂ ಕೂಡ ತದ್ದೇಹಂ – ತಂದೆಯ ಮೃತ ಶರೀರವನ್ನು ಲೋಕವಿಡಂಬನಾಯ – ಲೋಕವನ್ನು ಅನುಸರಿಸುವುದಕ್ಕಾಗಿ ತಿಲಜೇ – ತೈಲದಲ್ಲಿ ಅಸ್ಯ – ಇಟ್ಟು ಪತಿಂ – ಕೃಷ್ಣನ ಹತ್ತಿರ ಅಭ್ಯುಪಾಗಾತ್ – ಬಂದಳು. ॥ ೧೦೩ ॥

ಶ್ರುತ್ವಾತದೀಯವಚನಂ ಭಗವಾನ್ಪುರೀಂ ಸ್ವಾಮಾಯಾತಏವ ತು ನಿಶಮ್ಯಮಹೋತ್ಸವಂತಂ ॥
ಪಾಂಚಾಲರಾಜ ಪುರುಷೋದಿತವಾಶು ವೃಷ್ಣಿವರ್ಯೈರಗಾನ್ಮುಸಲಿನಾಸಹ ತತ್ಪುರೀಂಚ ॥ ೧೦೪ ॥

ಭಗವಾನ್ – ಷಡ್ಗುಣೈಶ್ವರ್ಯ ಸಂಪನ್ನನಾದ ಶ್ರೀಕೃಷ್ಣನು ತದೀಯವಚನಂ – ಸತ್ಯಭಾಮೆಯ ಮಾತನ್ನು ಶ್ರುತ್ವಾ– ಕೇಳಿ ಸ್ವಾಂ ಪುರೀಂ – ತನ್ನ ಪಟ್ಟಣವನ್ನು ಕುರಿತು ಆಯಾತೇಸತಿ – ಬರುತ್ತಿರಲು ತದೈವ - ಆಗಲೇ ಪಾಂಚಾಲರಾಜ ಪುರುಷೋದಿತಂ – ದ್ರುಪದರಾಜನ ಭೃತ್ಯನಿಂದ ಹೇಳಲ್ಪಟ್ಟ ತಂ ಮಹೋತ್ಸವಂ – ಆ ದ್ರೌಪದಿಯ ಸ್ವಯಂವರ ಮಹೋತ್ಸವವನ್ನು ಶ್ರುತ್ವಾ - ಕೇಳಿ ಆಶು – ಕೂಡಲೇ ವೃಷ್ಣಿವರ್ಯೈಃ – ಯಾದವಶ್ರೇಷ್ಠರಿಂದಲೂ ಮುಸಲಿನಾ – ಬಲರಾಮನಿಂದಲೂ ಸಹ – ಕೂಡಿಕೊಂಡು ತತ್ಪುರೀಂ ದ್ರುಪದನ ನಗರವನ್ನು ಕುರಿತು ಅಗಾತ್ – ಹೋದನು. ॥೧೦೪॥

ಭೀಮೋಽಪಿರುದ್ರವರ ರಕ್ಷಿತರಾಕ್ಷಸಂತಂಹತ್ವಾ ತೃಣೋಪಮತಯಾ ಹರಿಭಕ್ತವಂದ್ಯಃ ॥
ಉಷ್ಯಾಥತತ್ರ ಕತಿಚಿದ್ದಿನಮಚ್ಯುತಸ್ಯವ್ಯಾಸಾತ್ಮನೋ ವಚನತಃ ಪ್ರಯಯೌ ನಿಜೈಶ್ಚ ॥ ೧೦೫ ॥

ಹರಿಭಕ್ತವಂದ್ಯಃ – ಹರಿಭಕ್ತರಿಂದ ನಮಸ್ಕರಿಸಿಕೊಳ್ಳಲ್ಪಟ್ಟ ಭೀಮೋಪಿ – ಭೀಮನಾದರೂ ರುದ್ರವರ ರಕ್ಷಿತರಾಕ್ಷಸಂ– ಶಿವವರದಿಂದ ಪಾಲಿಸಿಕೊಳ್ಳಲ್ಪಟ್ಟ ರಾಕ್ಷಸನಾದ ತಂ – ಬಕಾಸುರನನ್ನು ತೃಣೋಪಮತಯಾ - ತೃಣಕ್ಕೆ ಸದೃಶನನ್ನಾಗಿ ಮಾಡಿ ಹತ್ವಾ – ಕೊಂದು ಅಥ – ಅನಂತರ ತತ್ರ – ಆ ಏಕಚಕ್ರಾನಗರದಲ್ಲಿಯೇ ಕತಿಚಿದ್ದಿನಂ - ಕೆಲವು ದಿನಗಳಲ್ಲಿ ಉಷ್ಯ – ವಾಸ ಮಾಡಿ ವ್ಯಾಸಾತ್ಮನಃ – ವ್ಯಾಸಸ್ವರೂಪವುಳ್ಳ ಅಚ್ಯುತಸ್ಯ – ಶ್ರೀಹರಿಯ ವಚನತಃ – ಮಾತಿನಿಂದ ನಿಜೈಶ್ಚ – ತನ್ನವರಿಂದ ಸಹ – ಕೂಡಿಕೊಂಡು ಪ್ರಯಯೌ – ಹೋದನು. ॥ ೧೦೫ ॥

ಮಾಂಗಲ್ಯಮೇತದತುಲಂ ಪ್ರತಿಯಾತಶೀಘ್ರಂ ಪಾಂಚಾಲಕಾನ್ಪರಮಭೋಜನ ಮತ್ರಸಿಧ್ಯೇತ್ ॥
ವಿಪ್ರೈರಿತಸ್ತತ ಇತೀರಿತವಾಕ್ಯಮೇತೇ ಶೃಣ್ವಂತಏವ ಪರಿಚಕ್ರಮುರುತ್ತರಾಶಾಂ ॥ ೧೦೬ ॥

ಅತುಲಂ – ಅಸದೃಶವಾದ ಏತತ್ – ಈ ಮಾಂಗಲ್ಯಂ – ಮಗಲೋತ್ಸವವು ಭವಿಷ್ಯತಿ – ಆಗುವುದು ಶೀಘ್ರಂ – ಬೇಗನೇ ಪಾಂಚಾಲಕಾನ್ – ಪಾಂಚಾಲ ನಗರವನ್ನು ಕುರಿತು ಯಾತ – ಹೋಗಿರಿ ಅತ್ರ – ಈ ಪಾಂಚಾಲ ದೇಶದಲ್ಲಿ ಎರಪಮಭೋಜನಂ – ಉತ್ತಮವಾದ ಊಟವು ಸಿಧ್ಯೇತ್ – ಸಿಗುವುದು ಇತಿ – ಈ ರೀತಿಯಾಗಿ ಇತಸ್ತತಃ – ಮಾರ್ಗ ರಡು ಪಾರ್ಶ್ವಗಳಲ್ಲಿ ವಿಪ್ರೈಃ ಬ್ರಾಹ್ಮಣರಿಂದ ಈರಿತಂ – ಹೇಳಲ್ಪಟ್ಟ ವಾಕ್ಯಂ – ಮಾತನ್ನು ಏತೇ – ಈ ಪಾಂಡವರುದ ಶೃಣ್ವಂತಏವ - ಕೇಳತಕ್ಕವರಾಗಿಯೇ ಉತ್ತರಾಶಾಂ – ಉತ್ತರದಿಕ್ಕನ್ನು ಕುರಿತು ಪರಿಚಕ್ರಮುಃ – ಹೋದರು. ॥ ೧೦೬ ॥

ಭಾ.ಅ. ೧೦೧–೧೦೬ ಶ್ರೀಕೃಷ್ಣನು ಹಸ್ತಿನಾವತಿಗೆ ಬಂದ ಸಮಯದಲ್ಲಿ ಕೃತವರ್ಮನು ಅಕ್ರೂರನಿಂದಲೂ ಕೂಡಿ 'ಈ ಸತ್ರಾಜಿತರಾಜನು ತನ್ನ ಮಗಳಾದ ಸತ್ಯಭಾಮೆಯನ್ನು ಮಣಿಸಹಿತವಾಗಿ ನಮಗೆ ಕೊಡುವದಾಗಿ ವಚನಕೊಟ್ಟು, ನಮ್ಮನ್ನು ತಿರಸ್ಕರಿಸಿ ಕೃಷ್ಣನಿಗೆ ಕೊಟ್ಟಿದ್ದಾನೆ. ಆದ್ದರಿಂದ ಇವನನ್ನು ಸಂಹರಿಸುವದು ಯೋಗ್ಯ, ಎಂದು ವಿಚಾರಿಸಿ ತನ್ನ ತಮ್ಮನಾಗಿ ಹುಟ್ಟಿದ, ಮೂಲ ರೂಪದಲ್ಲಿ ದೈತ್ಯನೇ ಆಗಿರುವ ಶತಧನ್ವನಿಗೆ ಆ ಸಂಹಾರಕಾರ್ಯ ಮಾಡಿ ರತ್ನವನ್ನು ತರಲು ಹೇಳಿ, ನಮ್ಮ ಮೇಲೆ ಏನಾದರೂ ಕೃಷ್ಣನು ಜಗಳಕ್ಕೆ ಬಂದರೆ ಅಕ್ರೂರನಿಂದ ಸಹಾಯ ಪಡೆದು ಅವನ ಜೊತೆಗೆ ಯುದ್ಧಕ್ಕೆ ಬರುವೆ ಎಂದು ವಿಶ್ವಾಸವನ್ನು ಕೊಟ್ಟು ಕಳಿಸಿದನು. ಆ ಪಾಪಿಯೂ ಕೂಡ ಆ ಪ್ರಕಾರ ಸತ್ರಾಜಿತರಾಜನನ್ನು ರಾತ್ರಿಯಲ್ಲಿ ಕೊಂದನು. ಸುದ್ದಿಯನ್ನು ತಿಳಿದ ಭೂನಾಮಕ ಲಕ್ಷ್ಮೀದೇವಿಯ ಅವತಾರಳಾದ ಸತ್ಯಭಾಮೆಯು ದುಃಖ, ಅಜ್ಞಾನಾದಿ ದೋಷರಹಿತಳಾದರೂ ಕೂಡ ಮನುಷ್ಯ ಸ್ತ್ರೀಯಂತೆ ನಟಿಸುತ್ತಾ ತಂದೆಯ ದೇಹವನ್ನು ತೈಲ ಪಾತ್ರದಲ್ಲಿಟ್ಟು ಶ್ರೀಕೃಷ್ಣನಿಗೆ ಹೇಳಲು ಹೊರಟಳು. ಆ ಸುದ್ದಿಯನ್ನು ತಿಳಿದ ಶ್ರೀಕೃಷ್ಣನು ಊರಿಗೆ ಬಂದು ದ್ರೌಪದೀಸ್ವಯಂವರ ವಾರ್ತೆಯನ್ನು ಕೇಳಿ ಅಣ್ಣ ಹಾಗೂ ಯಾದವರಿಂದ ಕೂಡಿ ಅಲ್ಲಿಗೆ ಹೊರಟನು. ಶ್ರೀಭೀಮಸೇನದೇವರಾದರೂ ಆ ಬಕನ ಸಂಹಾರ ಮಾಡಿದ ಮೇಲೆ ಕೆಲ ದಿನ ಏಕಚಕ್ರದಲ್ಲಿಯೇ ಇದ್ದು, ಹಿಂದೆ ಹೇಳಿದಂತೆ ಶ್ರೀವ್ಯಾಸರ ಮಾತಿನ ಪ್ರಕಾರ, ಬ್ರಾಹ್ಮಣರ ಮಾತಿನಂತೆಯೂ ತಾಯಿ ಸಹೋದರರಿಂದ ಕೂಡಿಕೊಂಡು ಸ್ವಯಂವರಕ್ಕೆ ಹೊರಟರು.

ಷಣ್ಣಾಂಚ ಮಧ್ಯಗಮುದೀರ್ಣಭುಜಂ ವಿಶಾಲವಕ್ಷಸ್ಥಲಂ ಬಹುಲಪೌರುಷ ಲಕ್ಷಣಂಚ ॥
ದೃಷ್ಟೈವ ಮಾರುತಿಮುಸಾವುಪಲಪ್ಸ್ಯತೀಹ ಕೃಷ್ಣಾಮಿತಿಸ್ಮ ವಚವಚಃ ಪ್ರವದಂತಿವಿಪ್ರಾಃ ॥ ೧೦೭ ॥

ವಿಪ್ರಾಃ – ಬ್ರಾಹ್ಮಣರು ಷಣ್ಣಾಂ – ಆರು ಜನರ ಮಧ್ಯಗಂ - ಮಧ್ಯದಲ್ಲಿರತಕ್ಕ ಉದೀರ್ಣಭುಜಂ – ದೀರ್ಘಭುಜ ಗಳುಳ್ಳ ವಿಶಾಲವಕ್ಷಸ್ಥಲಂ – ವಿಶಾಲವಾದ ಎದೆಯುಳ್ಳ ಬಹುಲಪೌರುಷಲಕ್ಷಣಂಚ - ಪುರುಷ ಸಂಬಂಧಿಯಾದ ಬಹಳ ಲಕ್ಷಣಗಳುಳ್ಳ ಮಾರುತಿಂ – ವಾಯುದೇವರ ಮಗನಾದ ಭೀಮನನ್ನು ದೃಷ್ಟೈವ – ನೋಡಿಯೇ ಅಸೌ – ಇವನು ಕೃಷ್ಣಾಂ ದ್ರೌಪದಿಯನ್ನು ಇಹ – ಈ ಸ್ವಯಂವರದಲ್ಲಿ ಉಪಲಪ್ಸ್ಯತಿ – ಹೊಂದುವನು ಇತಿ – ಎಂಬ ವಚಃ – ಮಾತನ್ನು ಪ್ರವದಂತಿಸ್ಮ – ಹೇಳುತ್ತಿದ್ದರು. ॥ ೧೦೭ ॥

ರಾತ್ರೌದಿವಾಚಸತತಂ ಪಥಿಗಚ್ಛಮಾನಾಃಪ್ರಾಪುಃ ಕದಾಚಿದಥವಿಷ್ಣುಪದೀಂನಿಶಾಯಾಂ ॥
ಸರ್ವಾಂಶ್ಚರಕ್ಷಿತುಮುಗಾದಿಹ ಪೃಷ್ಠತಶ್ಚ ಭೀಮೋಽಗ್ರೇಏವ ಶತಮನ್ಯುಸುತೋಽಂತರೇಽನ್ಯೇ ॥ ೧೦೮ ॥

ಸತತಂ – ಯಾವಾಗಲೂ ಪಥಿ – ಮಾರ್ಗದಲ್ಲಿ ದಿವಾರಾತ್ರೌಚ – ಹಗಲಿನಲ್ಲಿಯೂ ರಾತ್ರಿಯಲ್ಲಿಯೂ ಗಚ್ಛಮಾನಾಃ – ಹೋಗುತ್ತಿರುವ ಪಾಂಡವರು ಕದಾಚಿತ್ – ಒಮ್ಮೆ ನಿಶಾಯಾಂ – ರಾತ್ರಿಯಲ್ಲಿ ವಿಷ್ಣುಪದೀಂ – ಗಂಗೆಯನ್ನು ಪ್ರಾಪುಃ – ಹೊಂದಿದರು ಅಥ – ಅನಂತರ ಇಹ – ಈ ಗಂಗಾನದಿಯಲ್ಲಿ ಸರ್ವಾಂಶ್ಚ – ಎಲ್ಲರನ್ನೂ ರಕ್ಷಿತುಂ – ರಕ್ಷಿಸುವುದಕ್ಕಾಗಿ ಪೃಷ್ಠತಃ – ಹಿಂಬದಿಯಲ್ಲಿ ಭೀಮಃ – ಭೀಮನೂ ಅಗ್ರೇ – ಮುಂಭಾಗದಲ್ಲಿ ಶತಮನ್ಯುಸುತಃ – ಇಂದ್ರನ ಮಗನಾದ ಅರ್ಜುನನೂ ಅಂತರೇ – ಮಧ್ಯದಲ್ಲಿ ಅನ್ಯೇ – ಇತರರಾದ ಧರ್ಮರಾಜಾದಿಗಳೂ ಯಯುಃ – ಹೋದರು. ॥ ೧೦೮ ॥

ಪ್ರಾಪ್ತೇ ತದೋಲ್ಕಕಧರೇಽರ್ಜುನಏವ ಗಂಗಾಂಗಂಧರ್ವರಾಜ ಇಹಚಿತ್ರರಥೋಽರ್ಧರಾತ್ರೇ ॥
ದೃಷ್ಟೈವ ವಿಪ್ರರಹಿತಾನುದಕಾಂತರಸ್ಥಃಕ್ಷತ್ರಾತ್ಮಜಾ ಇತಿಹಿಧರ್ಷಯಿತುಂ ಸಚಾಗಾತ್ ॥ ೧೦೯ ॥

ತದಾ – ಆಗ ಉಲ್ಮುಕಧರೇ – ಬೆಳಕಿಗಾಗಿ ಉರಿಯುವ ಕೊಳ್ಳಿಯನ್ನು ಹಿಡಿದಿರುವ ಅರ್ಜುನೇ – ಅರ್ಜುನನು ಅರ್ಧರಾತ್ರೇ – ಮಧ್ಯರಾತ್ರಿಯಲ್ಲಿ ಗಂಗಾಂ – ಗಂಗೆಯನ್ನು ಪ್ರಾಪ್ತೇಸತಿ – ಹೊಂದುತ್ತಿರಲು ಇಹ – ಈ ಗಂಗೆಯಲ್ಲಿ ಉದಕಾಂತರಸ್ಥಃ – ನೀರಿನಲ್ಲಿದ್ದ ಗಂಧರ್ವರಾಜಃ – ಗಂಧರ್ವರಿಗೆ ರಾಜನಾದ ಚಿತ್ರರಥಃ – ಚಿತ್ರರಥನು ವಿಪ್ರರಹಿತಾನ್ – ಬ್ರಾಹ್ಮಣರಿಲ್ಲದವರನ್ನಾಗಿಯೂ ಕ್ಷತ್ರಾತ್ಮಜಾ ಇತಿ – ಕ್ಷತ್ರಿಯರ ಪುತ್ರರೆಂದೂ ದೃಷ್ಟ್ವಾ – ನೋಡಿ ಧರ್ಷಯಿತುಂ – ಬಲಾತ್ಕರಿಸಲು (ಹೆದರಿಸಲು) ಅಗಾತ್ – ಬಂದನು (ಪಾಂಡವರ ಜತೆಯಲ್ಲಿ ಬ್ರಾಹ್ಮಣರಿದ್ದರೂ ಕತ್ತಲೆಯಿಂದಲೂ, ಸ್ವಲ್ಪ ದೂರದಲ್ಲಿದ್ದದ್ದರಿಂದಲೂ, ಕೆಲವರು ನಿದ್ರೆಮಾಡಿದ್ದರಿಂದಲೂ ವಿಪ್ರರಹಿತಾನ್ ಎಂದು ಹೇಳಿರುವರು.) ॥ ೧೦೯ ॥

ಹಂತಾಸ್ಮಿ ವೋಹ್ಯುಪಗತಾನುದಕಾಂತಮುಸ್ಯಾನದ್ಯಾಶ್ಚ ಮರ್ತ್ಯಚರಣಾಯನಿಷಿದ್ಧ ಕಾಲೇ ॥
ಇತ್ಥಂವದಂತಮಮುಮಾಹ ಸುರೇಂದ್ರಸೂನು ರ್ಗಂಧರ್ವನಾಸ್ತ್ರವಿದುಷಾಂ ಭಯಮುಸ್ತಿತೇಽದ್ಯ ॥ ೧೧೦ ॥

ಮರ್ತ್ಯಚರಣಾಯ – ಮನುಷ್ಯರ ಸಂಚಾರಕ್ಕೆ ನಿಷಿದ್ಧಕಾಲೇ – ವಿಹಿತವಲ್ಲದ ಸಮಯದಲ್ಲಿ ಅಸ್ಯಾಃ – ಈ ಗಂಗೆಯ ಉದಕಾಂತಂ – ನೀರಿನ ಸಮೀಪವನ್ನು ಉಪಗತಾನ್ – ಹೊಂದಿರುವ ವಃ – ನಿಮ್ಮನ್ನು ಹಂತಾಸ್ಮಿ – ಕೊಲ್ಲುವವನಾಗುತ್ತೇನೆ ಇತ್ಥಂ – ಈ ರೀತಿಯಾಗಿ ವದಂತಂ – ಹೇಳತಕ್ಕ ಅಮುಂ – ಈ ಚಿತ್ರರಥನನ್ನು ಕುರಿತು ಸುರೇಂದ್ರಸೂನುಃ – ಇಂದ್ರನ ಮಗನಾದ ಅರ್ಜುನನು ಹೇಗಂಧರ್ವ – ಎಲೋ ಗಂಧರ್ವನೇ ಅಸ್ತ್ರವಿದುಷಾಂ – ಅಸ್ತ್ರವನ್ನು ತಿಳಿದಿರುವ ನಮಗೆ ಅದ್ಯ – ಈಗ ತೇ – ನಿನ್ನ ಭಯಂ – ಹೆದರಿಕೆಯು ನಾಸ್ತಿ – ಇರುವುದಿಲ್ಲ ಇತಿ – ಎಂದು ಆಹ – ಹೇಳಿದನು. ॥ ೧೧೦ ॥

ಸರ್ವಂಹಿಫೇನವದಿದಂ ಬಹುಲಂಬಲಂತೇ ನಾರ್ಥಪ್ರದಂ ಭವತಿಚಾಸ್ತ್ರವಿದಿಪ್ರಯುಕ್ತಂ ॥
ಇತ್ಯುಕ್ತವಂತಮಮುಮುತ್ತಮಯಾನ ಸಂಸ್ಥೋಬಾಣಾನ್ಕ್ಷಿಪನ್ನಭಿಸಸಾರ ಸುರೇಂದ್ರಭೃತ್ಯಃ ॥ ೧೧೧ ॥

ತೇ – ನಿನ್ನ ಬಹುಲಂ – ಬಹಳವಾಗಿ ಇದಂಸರ್ವಂ ಬಲಂ – ಈ ಎಲ್ಲಾ ಸಾಮರ್ಥ್ಯವು ಅಸ್ತ್ರವಿದಿ – ಅಸ್ತ್ರವನ್ನು ತಿಳಿದವನಲ್ಲಿ ಪ್ರಯುಕ್ತಂ – ಪ್ರಯೋಗಿಸಲ್ಪಟ್ಟದ್ದು ಫೇನವತ್ – ನೀರಿನ ಬುರುಗಿನಂತೆ ಅರ್ಥಪ್ರದಂ–ಪ್ರಯೋಜನವನ್ನುಂಟು ಮಾಡತಕ್ಕದ್ದು ನಭವತಿ – ಆಗುವುದಿಲ್ಲ ವ್ಯರ್ಥವೇ ಆಗುತ್ತದೆ ಇತಿ – ಈ ರೀತಿಯಾಗಿ ಉಕ್ತವಂತಂ – ಹೇಳತಕ್ಕ ಅಮುಂ – ಈ ಅರ್ಜುನನನ್ನು ಕುರಿತು ಉತ್ತಮಯಾನಸಂಸ್ಥಃ ಶ್ರೇಷ್ಠರಥದಲ್ಲಿ ಇರತಕ್ಕ ಸುರೇಂದ್ರಭೃತ್ಯಃ – ದೇವೇಂದ್ರನ ಸೇವಕನಾದ ಚಿತ್ರರಥನು ಬಾಣಾನ್ – ಶರಗಳನ್ನು ಕ್ಷಿಪನ್‌ಸನ್ – ಬಿಡತಕ್ಕವನಾಗಿ ಅಭಿಸಸಾರ – ಎದುರಾಗಿ ಬಂದನು. ॥ ೧೧೧ ॥

ಆಗ್ನೇಯಮುಸ್ತ್ರಮಭಿಮಂತ್ರ್ಯ ತದೋಲ್ಮುಕೇಸ ಚಿಕ್ಷೇಪಶಕ್ರತನಯೋಽಸ್ಯ ರಥಶ್ಚದಗ್ಧಃ ॥
ತಂಚಾಂಗ್ನಿನಾಪರಿಗೃಹೀತ ಮಭಿಪ್ರಗೃಹ್ಯಕೇಶೇಷು ಸಂಚಕರ್ಷಾಶು ಸುರೇಂದ್ರಸೂನುಃ ॥ ೧೧೨ ॥

ತದಾ – ಚಿತ್ರರಥನು ಯುದ್ಧಕ್ಕಾಗಿ ಬಂದಾಗ ಸಶಕ್ರ ತನಯಃ – ಇಂದ್ರನ ಮಗನಾದ ಅರ್ಜುನನು ಉಲ್ಮುಕೇ – ಉರಿಯುವ ಕೊಳ್ಳಿಯಲ್ಲಿ ಆಗ್ನೇಯಂ – ಅಗ್ನಿದೇವತಾಕವಾದ ಅಸ್ತ್ರಂ—ಮಂತ್ರವನ್ನು ಅಭಿಮಂತ್ರ್ಯ —ಅಭಿಮಂತ್ರಿಸಿ ಚಿಕ್ಷೇಪ—ಬೀಸಾಡಿದನು ಅಸ್ಯ—ಈ ಚಿತ್ರರಥನ ರಥಶ್ಚ—ರಥವೂ ಕೂಡ ದಗ್ಧಃ—ಸುಡಲ್ಪಟ್ಟಿತು ಸುರೇಂದ್ರಸೂನುಃ—ಇಂದ್ರನ ಮಗನಾದ ಅರ್ಜುನನು ಅಗ್ನಿನಾ—ಬೆಂಕಿಯಿಂದ ಪರಿಗೃಹೀತಂ—ಸುತ್ತುಹಾಕಲ್ಪಟ್ಟ ತಂ—ಆ ಚಿತ್ರರಥನನ್ನು ಕೇಶೇಷು—ಕೂದಲುಗಳಲ್ಲಿ ಅಭಿಪ್ರಗೃಹ್ಯ—ಹಿಡಿದು ಆಶು—ಕೂಡಲೇ ಸಂಚಕರ್ಷ—ಎಳೆದನು. ॥ ೧೧೨ ॥

ಪಾರ್ಥೇನ ಸಂಧರ್ಷಿತಃಶರಣಂ ಜಗಾಮಧರ್ಮಾತ್ಮ ಜಂ ತಮುಪಿಸೋಽಥನಿಜಾಸ್ತ್ರಮುಗ್ರಂ ॥
ಸಂಜಹ್ರುವಿವತತಆಸಚ ನಾಮತೋಽಸಾವಂಗಾರ ವರ್ಣಇತಿವರ್ಣವಿಪರ್ಯಯೇಣ ॥ ೧೧೩ ॥

ಪಾರ್ಥೇನ—ಅರ್ಜುನನಿಂದ ಸಂಧರ್ಷಿತಃ — ಬೆದರಿಸಲ್ಪಟ್ಟ ಸಃ—ಆ ಚಿತ್ರರಥನು ಧರ್ಮಾತ್ಮಜಂ—ಯಮನ ಮಗನಾದ ಯುಧಿಷ್ಠಿರನನ್ನು ತಮಪಿ—ಅರ್ಜುನನನ್ನೂಕೂಡ ಶರಣಂ—ಮೊರೆಯನ್ನು ಜಗಾಮ—ಹೊಂದಿದನು ಅಥ—ಅನಂತರ ಸಃ—ಆ ಅರ್ಜುನನು ಉಗ್ರಂ—ಕ್ರೂರವಾದ ನಿಜಾಸ್ತ್ರಂ—ತನ್ನ ಆಗ್ನೇಯಾಸ್ತ್ರವನ್ನು ಸಂಜಹ್ರೇ—ಸೆಳೆದುಕೊಂಡನು.

ಅಸೌ – ಈ ಗಂಧರ್ವನು ತತಃ – ಅಗ್ನ್ಯಸ್ತ್ರದ ಪ್ರತಾಪದಿಂದ ಉಂಟಾದ ವರ್ಣವಿಪರ್ಯಯೇಣ – ಮೊದಲಿನ ವರ್ಣಕ್ಕಿಂತ ವಿಪರೀತವಾದ ವರ್ಣದಿಂದ ನಾಮತಃ – ಹೆಸರಿನಿಂದ ಅಂಗಾರವರ್ಣ ಇತಿ – ಅಂಗಾರಪರ್ಣನೆಂದು ಆಸ – ಆದನು. ॥೧೧೩॥

ಅವ — ಪೂರ್ವವರ್ಣವೈಪರೀತ್ಯವನ್ನು ಉಪಪಾದಿಸುತ್ತಾರೆ.

ಗಂಧರ್ವ ಉಲ್ಬಣಸುರಕ್ತತನುಃ ಸಭೂತ್ವಾ ಸ್ವರ್ಣಾವದಾತ ಉತಪೂರ್ವಮುಪೇತ್ಯ ಸಖ್ಯಂ ॥
ಪಾರ್ಥೇನ ದುರ್ಲಭಮಹಾಸ್ತ್ರಮಿದಂ ಯಯಾಚೇಜಾನನ್ನಪಿಸ್ಮ ನಹಿತಾದೃಶಮೇಷವೇದ ॥ ೧೧೪ ॥

ಸ ಗಂಧರ್ವಃ – ಆ ಗಂಧರ್ವನು ಪೂರ್ವಂ–ಮೊದಲು ಸ್ವರ್ಣಾವದಾತಃ – ಭಂಗಾರದಂತೆ ಶುಭ್ರನಾದಾಗ್ಯೂ ಅಧುನಾ–ಈಗ ಉಲ್ಬಣ ಸುರಕ್ತತನುಃ – ಕ್ರೂರವಾದ ಚೆನ್ನಾಗಿ ಕೆಂಪಾದ ಶರೀರವುಳ್ಳವನು ಭೂತ್ವಾ – ಆಗಿ ಉತ – ಮತ್ತು ಪಾರ್ಥೇನ–ಅರ್ಜುನನಿಂದ ಸಖ್ಯಂ - ಮೈತ್ರ್ಯವನ್ನು ಉಪೇತ್ಯ – ಹೊಂದಿ ಏಷಃ – ಈ ಚಿತ್ರರಥನು ಜಾನನ್ನಪಿ – ಆಗ್ನೇಯಾಸ್ತ್ರವನ್ನು ತಿಳಿದವನಾದರೂ ಕೂಡ ಹಿ ಯಾವ ಕಾರಣದಿಂದ ತಾದೃಶಂ ನವೇದ – ಅರ್ಜುನನು ಯಾವರೀತಿಯಿಂದ ತಿಳಿದಿದ್ದನೋ ಹಾಗೆ ತಿಳಿಯಲಿಲ್ಲವೋ ಅತಃ ಆದ್ದರಿಂದ ಇದಂ – ಈದಾವ ದುಲರ್ಭಮಹಾಸ್ತ್ರಂ – ಇನ್ನೊಬ್ಬರಿಂದ ಹೊಂದಲು ಅಶಕ್ಯವಾದ ಅಗ್ನ್ಯಸ್ತ್ರವನ್ನು ಯಯಾಚೇ – ಬೇಡಿದನು. ॥ ೧೧೪ ॥

ವಿದ್ಯಾ ಸುಶಿಕ್ಷಿತತಮಾ ಹಿಸುರೇಂದ್ರಸೂನೌ ತಾಮಸ್ಯ ಚಾವದದಸಾವಪಿ ಕಾಲತೋಽಸ್ಮೈ ॥
ಗಂಧರ್ವಗಾಮವದದನ್ಯಗದೃಶ್ಯವಿದ್ಯಾಂ ಪಶ್ಚಾದಿತಿ ಸ್ಮ ಪುರುಹೂತಸುತಸ್ಯ ವಾಕ್ಯಾತ್ ॥ ೧೧೫ ॥

ಹಿ – ಯಾವ ಕಾರಣದಿಂದ ಸುರೇಂದ್ರಸೂನೌ – ಇಂದ್ರನ ಮಗನಾದ ಅರ್ಜುನನಲ್ಲಿ ವಿದ್ಯಾ – ಆಗ್ನೇಯಾಸ್ತ್ರ ವಿದ್ಯೆಯು ಸುಶಿಕ್ಷಿತತಮಾ – ಚೆನ್ನಾಗಿ ಅತಿಶಯವಾಗಿ, ಅಭ್ಯಾಸ ಮಾಡಲ್ಪಟ್ಟಿದೆಯೋ ತತಃ – ಆ ಕಾರಣದಿಂದ ಅಸ್ಯ – ಈ ಗಂಧರ್ವನಿಗೆ ತಾಂ – ಆ ಅಸ್ತ್ರವಿದ್ಯೆಯನ್ನು ಅವದತ್ – ಹೇಳಿದನು ಅಸಾವಪಿ – ಈ ಗಂಧರ್ವನೂ ಕೂಡ ಗಂಧರ್ವಗಾಂ – ಗಂಧರ್ವರಲ್ಲಿರತಕ್ಕ ಅದೃಶ್ಯವಿದ್ಯಾಂ - ಇನ್ನೊಬ್ಬರಿಗೆ ಕಾಣಿಸಿಕೊಳ್ಳಲ್ಪಡದೇ ಇರತಕ್ಕ ವಿದ್ಯೆಯನ್ನು ಅಸ್ಮೈ – ಈ ಅರ್ಜುನನಿಗೋಸ್ಕರ ಪಶ್ಚಾದಿತಿ - ಕಾಲಾಂತರದಲ್ಲಿ ಪಡೆಯುವೆನು ಎಂಬ ಪುರುಹೂತಸುತಸ್ಯ – ಇಂದ್ರನ ಮಗನಾದ ಅರ್ಜುನನ ವಾಕ್ಯಾತ್ – ಮಾತಿನಿಂದ ಕಾಲತಃ ಅವ್ಯಕ್ – ಸ್ವಲ್ಪಕಾಲದ ಅನಂತರದಲ್ಲಿ ಅವದತ್ – ಹೇಳಿದನು. ॥ ೧೧೫ ॥

ಅವ–ಅರ್ಜುನನು ಕಾಲಾಂತರದಲ್ಲಿ ನಿನ್ನವಿದ್ಯೆಯನ್ನು ಪಡೆಯುತ್ತೇನೆಂದು ಹೇಳಲು ಕಾರಣವನ್ನು ಹೇಳುತ್ತಾರೆ.

ಆಧಿಕ್ಯತಃ ಸ್ವಗತಸಂವಿದಏವ ಸಾಮ್ಯೇನೈವೇಚ್ಛತಿಸ್ಮ ನಿಮಯಂ ಸಧನಂಜಯೋಽತ್ರ ॥
ಧರ್ಮಾರ್ಥಮೇವಸತುತಾಂ ಪರಿದಾಯತಸ್ಮೈ ಕಾಲೇನ ಸಂವಿದಮಮುಷ್ಮಚಧರ್ಮತೋಽಯಾತ್ ॥೧೧೬॥

ಸ ಧನಂಜಯಃ – ಆ ಅರ್ಜುನನು ಸ್ವಗತಸಂವಿದಃ – ತನ್ನಲ್ಲಿರುವ ವಿದ್ಯೆಗೆ ಆಧಿಕ್ಯತಃ – ಉತ್ತಮತ್ವವಿರುವ ಕಾರಣದಿಂದ, ವಿನಿಮಯವೆಂದರೆ ತನ್ನ ವಿದ್ಯೆಯನ್ನು ಕೊಟ್ಟು ಪರಕೀಯ ವಿದ್ಯೆಯನ್ನು ಸ್ವೀಕರಿಸುವುದು. ಎರಡು ವಿದ್ಯೆಗಳಿಗೆ ಸಾಮ್ಯ ಏವ – ಸಾಮ್ಯವಿದ್ದಲ್ಲಿಯೇ ಮಾಡಲು ಯೋಗ್ಯವಾದ ನಿಮಯಂ – ವಿನಿಮಯವನ್ನು ನೈವೇಚ್ಛತಿಸ್ಮ – ಇಚ್ಛಿಸಲಿಲ್ಲ ಸಃ – ಆ ಅರ್ಜುನನು ಅತ್ರ – ಈ ಸಮಯದಲ್ಲಿ ಧರ್ಮಾರ್ಥಮೇವ – ಪ್ರತ್ಯುಪಕಾರವನ್ನು ಹೊರತೇ ವಿದ್ಯಾದಾನದಿಂದ ತನಗೆ ಪುಣ್ಯ ಉಂಟಾಗುವುದಕ್ಕೋಸ್ಕರವೇ ತಾಂ – ಆ ಆಗ್ನಿವಿದ್ಯೆಯನ್ನು ತಸ್ಮೈ – ಆ ಗಂಧರ್ವನಿಗೋಸ್ಕರ ಪರಿದಾಯ – ಕೊಟ್ಟು ಅಮುಷ್ಯ - ಈ ಗಂಧರ್ವನಿಗೆ ಧರ್ಮತಃ – ಪುಣ್ಯಬರುವುದಕ್ಕೋಸ್ಕರ ಯತಿಗೆ ಭಿಕ್ಷೆಕೊಟ್ಟ ಗೃಹಸ್ಥನಿಗೆ ಪುಣ್ಯ ಬರುವಂತೆ ಕಾಲೇನ – ಕಾಲಾಂತರದಿಂದ ಸಂವಿದಂ – ವಿದ್ಯೆಯನ್ನು ಕೊಡುತ್ತೇನೆಂಬ ಗಂಧರ್ವನಮಾತನ್ನು ಅಯಾತ್ – ಹೊಂದಿದನು (ನಡೆಸಿದನು). ವಿದ್ಯೆಗಳಿಗೆ ಸಾಮ್ಯವಿದ್ದರೇನೇ ವಿನಿಮಯವು. ತನ್ನ ವಿದ್ಯೆಗೆ ಆಧಿಕ್ಯವಿರುವುದರಿಂದಲೂ ಒಂದು ವಿದ್ಯೆಯನ್ನು ಕೊಟ್ಟು ಇನ್ನೊಂದು ವಿದ್ಯೆಯನ್ನು ಸ್ವೀಕರಿಸಿದರೆ ವ್ಯಾಪಾರಿಯಂತೆ ಪುಣ್ಯವೂ ಕೂಡ ಇರುವುದಿಲ್ಲ. ಈ ನಿಮಿತ್ತದ್ವಯದಿಂದ ವಿನಿಮಯವನ್ನು ಅರ್ಜುನನು ಇಚ್ಛಿಸಲಿಲ್ಲ. ॥ ೧೧೬ ॥

ಪಾರ್ಥೇನಸೋಽಪಿ ಬಹುಲಾಶ್ಚ ಕಥಾಃ ಕಥಿತ್ವಾಧೌ ಮ್ಯಸ್ಯ ಸಂಗ್ರಹಣ ಮಾಹಪುರೋಹಿತತ್ವೇ ॥
ದಾಸ್ಯಾಮಿದಿವ್ಯತುರಗಾನಿತಿ ಸೋಽರ್ಜುನಾಯು ವಾಚಂನಿಗದ್ಯದಿವಮಾರುಹದಶ್ವಗುಸ್ತೇ ॥ ೧೧೭ ॥

ಸೋsಪಿ – ಆ ಚಿತ್ರರಥನಾದರೂ ಪಾರ್ಥೇನ – ಅರ್ಜುನನಿಂದ ಬಹುಲಾಃ – ಬಹಳಗಳಾದ ಕಥಾಃ – ಕಥೆಗಳನ್ನು ಕಥಿತ್ವಾ – ಹೇಳಿಸಿ ಪುರೋಹಿತತ್ವೇ–ಪೌರೋಹಿತ್ಯಕ್ಕೋಸ್ಕರ ಧೌಮ್ಯಸ್ಯ–ಧೌಮ್ಯಾಚಾರ್ಯರ ಸಂಗ್ರಹಣಂ – ಸ್ವೀಕಾರವನ್ನು ಆಹ – ಹೇಳಿದನು. ಸಃ – ಆ ಚಿತ್ರರಥನು ಅರ್ಜುನಾಯ – ಅರ್ಜುನನಿಗೋಸ್ಕರ ದಿವ್ಯತುರಗಾನ್ – ಉತ್ತಮ ಕುದುರೆಗಳನ್ನು ದಾಸ್ಯಾಮಿ – ಕೊಡುವೆನು ಇತಿ – ಎಂಬ ವಾಚಂ – ಮಾತನ್ನು ನಿಗದ್ಯ – ಹೇಳಿ ದಿವಂ ಸ್ವರ್ಗವನ್ನು ಆರುಹತ್—ಏರಿದನು ತೇsಪಿ—ಆ ಪಾಂಡವರೂ ಕೂಡ ಅಗುಃ—ಮುಂದಕ್ಕೆ ಪ್ರಯಾಣ ಮಾಡಿದರು. ॥ ೧೧೭ ॥

ತೇಧೌಮ್ಯಮಾಪ್ಯ ಚ ಪುರೋಧಸಮುತ್ತಮುಜ್ಞಂ ವಿಪ್ರಾತ್ಮಜೋಪಮತಯಾವಿವಿಶುಃಪುರಂಚ ॥
ಪಾಂಚಾಲಕಸ್ಯ ನಿಖಿಲಾಂದದೃಶುಶ್ಚ ತತ್ರಮೂರ್ಧಾಭಿಷಿಕ್ತಸಮಿತಿಂ ಸಮಲಂಕೃತಾಂಚ ॥ ೧೧೮ ॥

ತೇ – ಆ ಪಾಂಡವರು ಉತ್ತಮುಜ್ಞಂ – ಉತ್ತಮ ಜ್ಞಾನಿಯಾದ ಧೌಮ್ಯಂ – ಧೌಮ್ಯನನ್ನು ಪುರೋಧಸಂ—ಪುರೋಹಿತನನ್ನಾಗಿ ಆಪ್ಯ—ಹೊಂದಿ ವಿಪ್ರಾತ್ಮಜೋಪಮತಯಾ—ಬ್ರಾಹ್ಮಣಕುಮಾರರ ಸಾದೃಶ್ಯದಿಂದ ಅಂದರೆ ಬ್ರಾಹ್ಮಣ ವೇಷದಿಂದ ಪಾಂಚಾಲಕಸ್ಯಪುರಂ – ಪಾಂಚಾಲ ನಗರವನ್ನು ವಿವಿಶುಃ—ಪ್ರವೇಶಿಸಿದರು ತತ್ರ-ಅಲ್ಲಿ ಸಮಲಂಕೃತಾಂ—ಚೆನ್ನಾಗಿ ಅಲಂಕರಿಸಲ್ಪಟ್ಟ ನಿಖಿಲಾಂ ಮೂರ್ಧಾಭಿಷಿಕ್ತಸಮಿತಿಂ – ಎಲ್ಲ ರಾಜಸಭೆಯನ್ನು ದದೃಶುಃ—ನೋಡಿದರು. ॥ ೧೧೮ ॥

ಭಾ.ಅ. ೧೦೭–೧೧೮ ದಾರಿಯಲ್ಲಿ ಹೋಗುತ್ತಿರುವ ಈ ಆರುಜನರಲ್ಲಿ ಮಧ್ಯದಲ್ಲಿರುವ, ವಿಶಾಲ ಎದೆಯುಳ್ಳ, ಎತ್ತರ ಭುಜಗಳುಳ್ಳ ಸರ್ವಶರೀರ ಲಕ್ಷಣಗಳುಳ್ಳ ಶ್ರೀಭೀಮಸೇನದೇವರನ್ನು ನೋಡಿ, ಬ್ರಾಹ್ಮಣರು ಇವನು ದ್ರೌಪದಿಯನ್ನು ಹೊಂದುತ್ತಾನೆ ಎಂದು ಅಂದುಕೊಳ್ಳುತ್ತಿದ್ದರು. ಹಗಲು ರಾತ್ರಿಗಳಲ್ಲಿ ಪೂರ್ಣವಾಗಿ ಮಾರ್ಗವನ್ನು ಕ್ರಮಿಸುತ್ತಲೇ ಇರುವಾಗ ರಾತ್ರಿ ಸಮಯದಲ್ಲಿ ಗಂಗಾ ಸಮೀಪಕ್ಕೆ ಬಂದಿದ್ದಾರೆ. ಎಲ್ಲರನ್ನು ರಕ್ಷಿಸುವದಕ್ಕಾಗಿ ಎಲ್ಲರ ಮುಂದೆ ಅರ್ಜುನನು ಇದ್ದರೆ, ಎಲ್ಲರ ಹಿಂಬದಿಯಲ್ಲಿ ಶ್ರೀಭೀಮಸೇನರಿದ್ದಾರೆ. ಕೈಯಲ್ಲಿ ಹಿಲಾಲನ್ನು ಹಿಡಿದುಕೊಂಡು ಅರ್ಜುನನು ಗಂಗಾತೀರಕ್ಕೆ ಬಂದಾಗ ಅರ್ಧರಾತ್ರಿಯ ಸಮಯ. ಆಗ ಅಲ್ಲಿದ್ದ ಚಿತ್ರರಥನೆಂಬ ಗಂಧರ್ವರಾಜನು ಯಾವದೇ ಬ್ರಾಹ್ಮಣರಿಂದ ರಹಿತರಾಗಿರುವ ಇವರನ್ನು ನೋಡಿ (ರಾತ್ರಿ ಕತ್ತಲಾದ್ದರಿಂದ ಜೊತೆಗೆ ಬಂದಿದ್ದ ಕೆಲ ಬ್ರಾಹ್ಮಣರು ಹಿಂದೆ ~~ಉಳಿದಿದ್ದಾರೆ, ಕೆಲವರು ನಿದ್ರಿಸುತ್ತಾ ಇದ್ದಾರೆ ಹೀಗಾಗಿ ಬ್ರಾಹ್ಮಣ ರಹಿತರಾಗಿರುವವರು)~~ ಇವರು ಕ್ಷತ್ರಿಯರು ಇವರನ್ನು ಸಂಹರಿಸಬೇಕು ಎಂದು ಭಾವಿಸಿ ನೀರಿನಲ್ಲಿ ನಿಂತವನಾಗಿಯೇ ಮುಂದೆ ಬಂದು ಮನುಷ್ಯ ಸಂಚಾರಕ್ಕೆ ನಿಷಿದ್ಧವಾದ ಈ ಸಮಯದಲ್ಲಿ ನೀರಿನ ಸಮೀಪಕ್ಕೆ ಬಂದರೆ ನಿಮ್ಮನ್ನೆಲ್ಲ ಕೊಲ್ಲುತ್ತೇನೆ ಎಂದು ಹೇಳಿದಾಗ ಅರ್ಜುನನು ಅಸ್ತ್ರಜ್ಞರಿಗೆ ನಿನ್ನ ಭಯವಿರಲಾರದು; ನಿನ್ನ ಶಕ್ತಿ, ಮಾತೆಲ್ಲವೂ ವ್ಯರ್ಥವಾದದ್ದು ಎಂದು ಹೇಳಿದನು. ಆಗ ಆ ಗಂಧರ್ವನು ರಥವನ್ನು ಏರಿಕೊಂಡು ಬಾಣಗಳನ್ನು ಬಿಡುತ್ತಾ ಯುದ್ಧಕ್ಕೇ ಬಂದನು. ಆಗ ಅರ್ಜುನನು ಆ ಹಿಲಾಲಿನಲ್ಲಿಯೇ ಆಗ್ನೇಯ ಅಸ್ತ್ರವನ್ನು ಅಭಿಮಂತ್ರಿಸಿ ಆ ಗಂಧರ್ವನ ಮೇಲೆ-ಒಗೆದಾಗ ಅವನ ರಥವು ಸುಟ್ಟು ಹೋದದ್ದಲ್ಲದೇ ಅವನ ಮೇಲೆ ಕೂಡ ಅಗ್ನಿಯು ಆವರಿಸಿ ನಿಂತಿತು. ಆಗ ಅರ್ಜುನನು ಅವನನ್ನು ತಲೆದೂಗಲಿನಲ್ಲಿ ಹಿಡಿದು ಎಳೆದು ತಂದನು. ಅವನು ಧರ್ಮರಾಜನಿಗೆ ಬಿಡಿಸಲು ಪ್ರಾರ್ಥಿಸಿದನು. ಅರ್ಜುನನು ತನ್ನ ಅಸ್ತ್ರವನ್ನು ಹಿಂದೆಗೆದುಕೊಂಡನು. ಅಷ್ಟು ಹೊತ್ತಿಗೆ ಅಗ್ನಿ ದಾಹದಿಂದ ಇವನ ಬಣ್ಣ ಬದಲಾಗಿ (ಮೊದಲು ಭಂಗಾರದಂತೆ ಸ್ವಚ್ಛವರ್ಣವುಳ್ಳವನು ಈಗ ಕಡುಗೆಂಪು ಅಂಗಾರದಂತೆ ಬಣ್ಣವನ್ನು ಹೊಂದಿ) ಅಂಗಾರ ವರ್ಣ ಎಂದು ಹೆಸರುಳ್ಳವನಾದನು. ಆ ಅರ್ಜುನನ ಆಗ್ನಸ್ತ್ರದ ಪ್ರಭಾವವನ್ನು ನೋಡಿ ತಾನು ಆಗ್ನಸ್ತ್ರವನ್ನು ತಿಳಿದಿದ್ದರೂ ಅಂಥದ್ದನ್ನು ತಿಳಿದಿಲ್ಲವಾದ್ದರಿಂದ ಅದನ್ನು ಅಪೇಕ್ಷಿಸಿ ಅರ್ಜುನನನ್ನು ಪ್ರಾರ್ಥಿಸಿದನು. ಅರ್ಜುನನು ಅವನಿಗೆ ಕೊಟ್ಟನು. ಗಂಧರ್ವನು ಅದಕ್ಕೆ ಪ್ರತಿಯಾಗಿ ಅದೃಶ್ಯ ವಿದ್ಯೆಯನ್ನು ಕೊಡುವದಾಗಿ ಹೇಳಿದಾಗ ಅರ್ಜುನನು ಬೇಡ ಎಂದನು; ತಾನು ಧರ್ಮಾರ್ಥವಾಗಿ ಕೊಟ್ಟನು. ಸಮಾನ ವಿದ್ಯೆಗಳಲ್ಲಿಯೇ ವಿನಿಮಯವು ಯೋಗ್ಯವು; ತನ್ನ ವಿದ್ಯೆಯು ಅವನ ವಿದ್ಯೆಗಿಂತ ಶ್ರೇಷ್ಠವಾದ್ದರಿಂದ ವಿನಿಮಯವನ್ನು ಒಪ್ಪಿಕೊಳ್ಳಲಿಲ್ಲ. ಕಾಲಾಂತರದಲ್ಲಿ ಅದೃಶ್ಯ ವಿದ್ಯೆಯನ್ನು ಆ ಗಂಧರ್ವನಿಂದ ಧರ್ಮಾರ್ಥವಾಗಿಯೇ ಪಡೆದನು. ಗಂಧರ್ವನು ಅನೇಕ ವಿಷಯಗಳ ಬಗ್ಗೆ ಮಾತನಾಡಿ ಧೌಮ್ಯಾಚಾರ್ಯರನ್ನು ಪುರೋಹಿತರನ್ನಾಗಿ ಮಾಡಿಕೊಳ್ಳಲು ತಿಳಿಸಿ, ದಿವ್ಯ ಕುದುರೆಗಳನ್ನು ಕೊಡುವೆನೆಂದು ಅರ್ಜುನನಿಗೆ ವಚನಕೊಟ್ಟು ತನ್ನ ಸ್ವರ್ಗಲೋಕಕ್ಕೆ ಹೋದನು. ಪಾಂಡವರಾದರೂ ಅವನ ಮಾತಿನಂತೆ ಧೌಮ್ಯಾಚಾರ್ಯರನ್ನು ಪುರೋಹಿತರನ್ನಾಗಿ ಮಾಡಿಕೊಂಡು ಬ್ರಾಹ್ಮಣ ವೇಷದಲ್ಲಿಯೇ ಪಾಂಚಾಲ ನಗರಕ್ಕೆ ಬಂದು, ಸ್ವಯಂವರ ಸಭೆಗೂ ಬಂದು ರಾಜರ ಸಭೆಯನ್ನು ನೋಡಿದರು.

ರಾಜನ್ಯಮಂಡಲ ಮುದೀಕ್ಷ್ಯ ಸುಪೂರ್ಣಮತ್ರ ಕೃಷ್ಣಾಂ ಪ್ರಗೃಹ್ಯ ಸಹಜಃ ಪ್ರಗೃಹೀತಮಾಲಾಂ ॥
ತೇಷಾಂಚ ಮಧ್ಯಮಗಮತ್ಕುಲವೀರ್ಯಸಂಪದ್ಯುಕ್ತಾಂವಿಭೂತಿ ಮಥಚಾಹಸಮಸ್ತರಾಜ್ಞಾಂ ॥ ೧೧೯ ॥

ಅತ್ರ – ಇಲ್ಲಿ ಸಹಜಃ – ಸಹೋದರನಾದ ಧೃಷ್ಟದ್ಯುಮ್ನನು ಸುಪೂರ್ಣಂ—ಸಂಪೂರ್ಣವಾದ ರಾಜನ್ಯಮಂಡಲಂ – ರಾಜರ ಸಮೂಹವನ್ನು ಉದೀಕ್ಷ್ಯ – ನೋಡಿ ಪ್ರಗೃಹೀತಮಾಲಾಂ – ಸ್ವೀಕರಿಸಲ್ಪಟ್ಟ ರುದ್ರದೇವರಿಂದ ಅಂಬೆಗೆ ಕೊಡಲ್ಪಟ್ಟ, ಬಾಡದಿರುವ, ನೂತನವಾದ ಪದ್ಮಮಾಲೆಯುಳ್ಳ ಕೃಷ್ಣಾಂ – ದ್ರೌಪದಿಯನ್ನು ಪ್ರಗೃಹ್ಯ – ಕರೆದುಕೊಂಡು ತೇಷಾಂ – ಆ ರಾಜರ ಮಧ್ಯಂ—ಮಧ್ಯವನ್ನು ಅಗಮತ್ – ಹೊಂದಿದನು ಅಥ – ಅನಂತರ ಸಮಸ್ತರಾಜ್ಞಾಂ – ಎಲ್ಲಾ ರಾಜರ ಕುಲ ವೀರ್ಯಸಂಪದ್ಯುಕ್ತಾಂ — ವಂಶ, ಪರಾಕ್ರಮ, ಧನಾದಿಸಂಪತ್ತು ಇವುಗಳಿಂದ ಕೂಡಿದ ವಿಭೂತಿಂ — ಗಜತುರಗಾದಿ ಐಶ್ವರ್ಯವನ್ನು ಆಹ – ದ್ರೌಪದಿಗೋಸ್ಕರ ಹೇಳಿದನು. ॥ ೧೧೯ ॥

ತಾಂಶ್ಚ ಪ್ರದರ್ಶ್ಯ ಸಕಲಾನ್ಸಹುತಾಶನಾಂಶಶ್ಚಾಪಂಚತತ್ಪ್ರತಿನಿಧಾಯ ಸಪಂಚಬಾಣಂ ॥
ಆಹಾಭಿಭಾಷ್ಯ ಸಕಲಾನ್ನೃಪತೀನಥೋಚ್ಚೈರ್ದೀಪ್ಯದ್ಧುತಾಶನವಪುರ್ಘನತುಲ್ಯಘೋಷಃ ॥ ೧೨೦ ॥

ದೀಪ್ಯದ್ಧುತಾಶನವಪುಃ – ಪ್ರಕಾಶಮಾನವಾದ ಅಗ್ನಿಯಂತೆ ಶರೀರವುಳ್ಳ ಘನತುಲ್ಯಘೋಷಃ – ಮೇಘಕ್ಕೆ ಸಮಾನವಾದ ಗಂಭೀರ ಧ್ವನಿಯುಳ್ಳ ಹುತಾಶನಾಂಶಃ - ಅಗ್ನಿಯ ಅವತಾರನಾದ ಸಃ – ಆ ಧೃಷ್ಟದ್ಯುಮ್ನನು ಸರ್ವಾನ್ತಾನ್ – ಎಲ್ಲಾ ಅರಸರನ್ನು ಪ್ರದರ್ಶ್ಯ – ದ್ರೌಪದಿಗೆ ತೋರಿಸಿ ಸಪಂಚಬಾಣಂ – ಐದು ಬಾಣಗಳಿಂದ ಕೂಡಿದ ಚಾಪಂ – ಧನುಸ್ಸನ್ನು ಪ್ರತಿನಿಧಾಯ – ಸಭೆಯಲ್ಲಿಟ್ಟು ಸಕಲಾನ್ - ಎಲ್ಲಾ ನೃಪತೀನ್ – ರಾಜರನ್ನು ಅಭಿಭಾಷ್ಯ – ಸುತ್ತಮುತ್ತಲೂ ತನ್ನ ಭಾಷಣವನ್ನು ಕೇಳಲು ಅನುಕೂಲರನ್ನಾಗಿ ಮಾಡಿ ಉಚ್ಚೈಃ – ಗಟ್ಟಿಯಾಗಿ ಆಹ – ಹೇಳಿದನು. ॥ ೧೨೦ ॥

ಏತೇನ ಕಾರ್ಮುಕವರೇಣತರೂಪರಿಸ್ಥ ಮತ್ಸ್ಯಾವಭಾಸಮುದಕೇಪ್ರತಿವೀಕ್ಷ್ಯಯೇನ ॥
ಏತೈಃ ಶರೈಃ ಪ್ರತಿಹತೋಭವತೀಹಮತ್ಸ್ಯಃ ಕೃಷ್ಣಾನುಯಾಸ್ಯತಿ ತಮುದ್ಯನರೇಂದ್ರವೀರಾಃ ॥ ೧೨೧ ॥

ಹೇ ನರೇಂದ್ರವೀರಾಃ – ಎಲೋ ರಾಜಶ್ರೇಷ್ಠರೇ, ಯೇನ – ಯಾವಪುರುಷನಿಂದ ಏತೇನ ಕಾರ್ಮುಕವರೇಣ – ಈ ಶ್ರೇಷ್ಠಧನುಸ್ಸಿನಿಂದ ತರೂಪರಿಸ್ಥಮತ್ಸ್ಯಾವಭಾಸಂ ಮರದ ಮೇಲಿರುವ ಮೀನಿನ ಪ್ರತಿಬಿಂಬವನ್ನು ಉದಕೇ – ನೀರಿನಲ್ಲಿ ಪ್ರತಿವೀಕ್ಷ್ಯ – ನೋಡಿ ಇಹ – ಈ ರಾಜಸಭೆಯಲ್ಲಿ ಏತೈಃ ಶರೈಃ – ಈ ಬಾಣಗಳಿಂದ ಮತ್ಸ್ಯಃ – ಮೀನವು ಪ್ರತಿಹತೋ ಭವತಿ – ಹೊಡೆಯಲ್ಪಡುತ್ತದೋ ತಂ – ಅವನನ್ನು ಅದ್ಯ – ಈಗ ಕೃಷ್ಣಾ – ದ್ರೌಪದಿಯು ಅನುಯಾಸ್ಯತಿ - ಹೊಂದುವಳು. ॥ ೧೨೧ ॥

ಇತ್ಯಸ್ಯವಾಕ್ಯ ಮನುಸರ್ವನರೇಂದ್ರಪುತ್ರಾ ಉತ್ತಸ್ಥುರುದ್ಧತಮುದಾಶ್ಚಲಕುಂಡಲಾಸ್ಯಾಃ ॥
ಅಸ್ತ್ರಂಬಲಂಚ ಬಹುನೈಜಮಭೀಕ್ಷಮಾಣಾಃ ಸ್ಪರ್ಧಂತಏವಚಮಿಥಃ ಸಮಲಂಕೃತಾಂಗಾಃ ॥ ೧೨೨ ॥

ಇತಿ ಈ ರೀತಿಯಾಗಿ ಅಸ್ಯ—ಈ ಧೃಷ್ಟದ್ಯುಮ್ನನ ವಾಕ್ಯಂ – ಮಾತನ್ನು ಅನು – ಅನುಸರಿಸಿ ಉದ್ಧತಮುದಾಃ – ಉತ್ಕೃಷ್ಟ ಅಹಂಕಾರವುಳ್ಳ ಚಲಕುಂಡಲಾಸ್ಯಾಃ ಚಂಚಲಗಳಾದ ಕರ್ಣಾಭರಣಗಳೂ, ಮುಖಗಳೂ ಇವುಗಳುಳ್ಳ ನೈಜಂ – ಸ್ವಾಭಾವಿಕವಾದ ತಮ್ಮ ಅಸ್ತ್ರಂ – ಅಸ್ತ್ರವನ್ನೂ ಬಲಂಚ – ಸಾಮರ್ಥ್ಯವನ್ನೂ ಕೂಡ ಬಹು – ಉತ್ಕೃಷ್ಟವಾದದ್ದೆಂದು ಅಭೀಕ್ಷಮಾಣಾಃ – ತಿಳಿದಿರುವ ಮಿಥಃ – ಪರಸ್ಪರವಾಗಿ ಸ್ಪರ್ಧಂತಏವ - ನಾನು ಮೊದಲು ನಾನು ಮೊದಲು ಎಂದು ಸ್ಪರ್ಧೆಯನ್ನು ಮಾಡತಕ್ಕ ಸಮಲಂಕೃತಾಂಗಾಃ – ಚೆನ್ನಾಗಿ ಅಲಂಕೃತಗಳಾದ ಅವಯವಗಳುಳ್ಳ ಸರ್ವನರೇಂದ್ರಪುತ್ರಾಃ – ಎಲ್ಲಾ ರಾಜಕುಮಾರರು ಉತ್ತಸ್ಥುಃ – ಎದ್ದರು. ॥ ೧೨೨ ॥

ಕೇಚಿನ್ನಿರೀಕ್ಷ್ಯ ಧನುರೇತ್ಯನಮೇಸುಶಕ್ಯಮಿತ್ಯೇವಚಾಪಯಯುರನ್ಯ ಉತಪ್ರಚಾಲ್ಯ ॥
ತತ್ರಾಸಸಾದ ಶಿಶುಪಾಲ ಉರುಪ್ರತಾಪಃ ಸಂಗೃಹ್ಯತತ್ಸ್ವಮಧಿರೋಪಣಯತ್ನ ಆಸೀತ್ ॥ ೧೨೩ ॥

ಕೇಚಿತ್ – ಕೆಲವರು ಧನುಃ – ಬಿಲ್ಲನ್ನು ನಿರೀಕ್ಷ್ಯ – ನೋಡಿ ಏತ್ಯ – ಧನುಸ್ಸಿನ ಹತ್ತಿರ ಬಂದು ಮೇ – ನನಗೆ ಸುಽಕ್ಯಂ ನ – ಸುಲಭಸಾಧ್ಯವಲ್ಲ ಇತ್ಯೇವ ಈ ರೀತಿಯಾಗಿ ತಿಳಿದೇ ಅಪಯಯುಃ – ಹಿಂತಿರುಗಿ ಹೋದರು ಕೇಚಿತ್ – ಕೆಲವರು ಪ್ರಚಾಲ್ಯ - ಅಲುಗಾಡಿಸಿ ಉತ – ಹಾಗೆಯೇ ಅಪಯಯುಃ – ಹಿಂತಿರುಗಿ ಹೋದರು ತತ್ರ – ಆ ರಾಜರ ಮಧ್ಯದಲ್ಲಿ ಉರುಪ್ರತಾಪಃ – ಬಹಳ ಪರಾಕ್ರಮಉಳ್ಳ ಶಿಶುಪಾಲಃ – ಶಿಶುಪಾಲನು ಆಸಸಾದ – ಬಂದನು ತತ್ – ಆ ಧನುಸ್ಸನ್ನು ಸಂಗೃಹ್ಯ – ಹಿಡಿದು ಸಮಧಿರೋಪಣಯತ್ನಃಆಸೀತ್ – ಏರಿಸುವ ಪ್ರಯತ್ನ ಉಳ್ಳವನಾದನು. ॥ ೧೨೩ ॥

ಮಾಷಾಂತರಾಯು ಸಚಕರ್ಷಯುದ್ಯೈನಕೋಟ್ಯಾ ಉನ್ನಮ್ಯ ತತ್ಪ್ರತಿಜಘಾನ ತಮೇವಚಾಶು ॥
ಅನ್ಯತ್ರಫಲ್ಗುನತ ಏತದಶಕ್ಯಮೇವೇತ್ಯಂಜೋಗಿರೀಶವರತಃ ಸಯಯೌ ಚಭಗ್ನಃ ॥ ೧೨೪ ॥

ಸಃ – ಆ ಶಿಶುಪಾಲನು ಕೋಟ್ಯಾಃ – ಧನುಸ್ಸಿನ ತುದಿಯನ್ನು ಮಾಷಾಂತರಾಯ – ಉದ್ದಿನ ಪರಿಮಾಣದಷ್ಟು ವ್ಯವಧಾನವುಳ್ಳ ಪ್ರದೇಶದವರೆಗೆ ಯದಾ ಯಾವಾಗ ಚಕರ್ಷ – ಎಳೆದನೋ ತದಾ – ಆಗ ತತ್ – ಆ ಧನುಸ್ಸು ಉನ್ನಮ್ಯ– ದೀರ್ಘವಾಗಿ ತಮೇವ – ಆ ಶಿಶುಪಾಲನನ್ನೇ ಆಶು – ಕೂಡಲೇ ಪ್ರತಿಜಘಾನ – ಹೊಡೆಯಿತು ಏತತ್ – ಈ ಧನುಸ್ಸು ಗಿರೀಶವರತಃ–ರುದ್ರದೇವರ ವರದಿಂದ ಫಲ್ಗುನತಃ – ಅರ್ಜುನನ ದೆಸೆಯಿಂದ ಅನ್ಯತ್ರ – ಇತರರಲ್ಲಿ ಅಶಕ್ಯಮೇವ – ಅಸಾಧ್ಯವಾದದ್ದೇ ಇತಿ – ಎಂದು ತಿಳಿದು ಸಃ – ಆ ಶಿಶುಪಾಲನು ಅಂಜಃ – ಚೆನ್ನಾಗಿ ಭಗ್ನಃಸನ್ – ಸೋತವನಾಗಿ ಯಯೌ – ಹೋದನು. ॥ ೧೨೪ ॥

ಮದ್ರೇಶಏತ್ಯಚಕೃಷೇ ಸ್ಥವಿರೋಽಪಿ ವೀರ್ಯಾಚ್ಚೇದೀಶತೋಽಪ್ಯಧಿಕಮೇವ ಸಮುದ್ಗಮಾತ್ರೇ ॥
ಶಿಷ್ಟೇಽಮುನಾ ಪ್ರತಿಹತಃ ಸಯಯಾವಶಕ್ಯಂ ಮತ್ವಾತ್ಮನಸ್ತದನು ಭೂಪತಯೋ ವಿಷಣ್ಣಾಃ ॥ ೧೨೫ ॥

ಮದ್ರೇಶಃ – ಮದ್ರದೇಶದ ರಾಜನಾದ ಶಲ್ಯನು ಸ್ಥವಿರೋಽಪಿ – ಮುದುಕನಾದರೂ ಕೂಡ ಏತ್ಯ – ಬಂದು ಚೇದೀಶತಃ – ಚೇದಿ ದೇಶದ ರಾಜನಾದ ಶಿಶುಪಾಲನಿಂದ ಅಧಿಕಮೇವ - ಹೆಚ್ಚಾಗಿಯೇ ವೀರ್ಯಾತ್ – ಸಾಮರ್ಥ್ಯದಿಂದ ಚಕೃಷೇ– ಎಳೆದನು ಮದ್ಗಮಾತ್ರೇ – ಹೆಸರುಕಾಳಿನಪರಿಮಾಣದಷ್ಟು ಶಿಷ್ಟೇಸತಿ – ಉಳಿಯುತ್ತಿರಲು ಸಃ – ಆ ಶಿಶುಪಾಲನು ಅಮುನಾ – ಈ ಧನುಸ್ಸಿನಿಂದ ಪ್ರತಿಹತಸ್ಸನ್ – ಹೊಡೆಯಲ್ಪಟ್ಟವನಾಗಿ ಆತ್ಮನಃ – ತನಗೆ ಅಶಕ್ಯಂ – ಅಸಾಧ್ಯವಾದದ್ದೆಂದು ಮತ್ವಾ – ತಿಳಿದು ಯಯೌ – ಹೋದನು ತದನು – ಶಿಶುಪಾಲ, ಶಲ್ಯರು ಹೋದನಂತರ ಭೂಪತಯಃ – ರಾಜರುಗಳು ವಿಷಣ್ಣಾಃ - ದುಃಖಿತರಾದರು. ॥ ೧೨೫ ॥

ಭಾ.ಅ. ೧೧೯–೧೨೫ ದ್ರೌಪದೀದೇವಿಯರ ಅಣ್ಣನಾದ ಧೃಷ್ಟದ್ಯುಮ್ನನು ಸ್ವಯಂವರ ಸಭೆಯಲ್ಲಿ ಎಲ್ಲ ರಾಜರು ಉಪಸ್ಥಿತರಿರುವದನ್ನು ನೋಡಿ ತಂಗಿಯನ್ನು ಕರೆದುಕೊಂಡು ಸಭೆಗೆ ಬಂದು ಅವಳಿಗೆ ಎಲ್ಲ ರಾಜರನ್ನು ತೋರಿಸಿ ಅವರ ಕುಲ, ಗೋತ್ರ, ರಾಜ್ಯ, ಸಂಪತ್ತು ಇತ್ಯಾದಿ ವಿವರಗಳನ್ನು ಹೇಳಿ, ಧನುಸ್ಸನ್ನು, ಹೂಡುವದಕ್ಕಾಗಿ ಇಟ್ಟಿರುವ ಐದು ಬಾಣಗಳನ್ನು ಎಲ್ಲ ರಾಜರಿಗೂ ತೋರಿಸುತ್ತಾ ಸಂಬೋಧಿಸಿ 'ಏಲೋ ವೀರ ರಾಜರೇ ! ಈ ಧನುಸ್ಸಿನಲ್ಲಿ ಈ ಬಾಣಗಳನ್ನು ಹೂಡಿ ಇಲ್ಲಿ ಗಿಡದ ಮೇಲಿರುವ ಮತ್ಸ್ಯಪ್ರತೀಕವನ್ನು ಅದರ ಪ್ರತಿಬಿಂಬವನ್ನು ಕೆಳಗಿರುವ ಉದಕದಲ್ಲಿ ನೋಡುತ್ತಾ ಹೊಡೆಯುವವನ ಕೊರಳಲ್ಲಿ ನನ್ನ ತಂಗಿಯು ಮಾಲೆ ಹಾಕಿ ವರಿಸುತ್ತಾಳೆ' ಎಂದು ಗಂಭಿರವಾಗಿ ಹೇಳಿದನು. ಆಗ ಒಬ್ಬೊಬ್ಬರೇ ರಾಜರು ಎದ್ದು ಬರಲು ಪ್ರಾರಂಭಿಸಿದರು. ಕೆಲವರು ಧನುಸ್ಸಿನ ಸಮೀಪಕ್ಕೆ ಬಂದು ಅದನ್ನು ನೋಡಿಯೇ ತಮಗೆ ಅಶಕ್ಯ ಎಂದುಕೊಂಡು ಹೋದರೆ, ಕೆಲವರು ಅಲುಗಾಡಿಸಿ ನೋಡಿ ತಿರುಗಿ ಹೋದರು. ಆಗ ಶಿಶುಪಾಲನು ಬಂದು ಧನುಸ್ಸನ್ನು ಎತ್ತಿಹಿಡಿದು ಅದರ ಜ್ಯಾವನ್ನು ಕಟ್ಟಲು ಎಳೆದನು. ಇನ್ನೊಂದು ತುದಿಯನ್ನು ಮುಟ್ಟಲು ಒಂದು ಉದ್ದಿನ ಕಾಳಿನಷ್ಟು ಅಂತರ ಮಾತ್ರ ಉಳಿಯುವಷ್ಟು ಜಗ್ಗಿದ್ದನು. ಆಗ ಆ ಧನುಸ್ಸಿನ ತುದಿಯು ಅವನ ಕೈಹಿಡಿತದಿಂದ ತಪ್ಪಿ ಅವನಿಗೆ ಬಡಿಯಿತು. ಹೀಗೆ ಪರಾಜಿತನಾಗಿ, ಅರ್ಜುನನನ್ನು ಬಿಟ್ಟು ಬೇರೆಯಾರಿಗೂ ಅಶಕ್ಯ ಎಂದು ಮನದಲ್ಲಿ ಅಂದುಕೊಂಡು ಹೋದನು. ಮದ್ರರಾಜನಾದ ಶಲ್ಯನು ಬಂದು, ವೃದ್ಧನಾದರೂ ಕೂಡ ಶಿಶುಪಾಲನಿಗಿಂತ ಹೆಚ್ಚು ಎಳೆದನು. ಹೆಸರಿನ ಕಾಳಿನಷ್ಟು ಅಂತರ ಉಳಿದಿರುವಾಗ ಅವನೂ ಬಡಿಸಿಕೊಂಡು, ಅಶಕ್ಯವೆಂದು ತಿಳಿದು ತಿರುಗಿ ಹೋದನು. ಆಗ ಎಲ್ಲ ರಾಜರೂ ವಿಷಣ್ಣ ವದನರಾಗಿ ಕುಳಿತಿದ್ದರು.

ಸನ್ನೇಷು ಭೂಪತಿಷ್ವಮಾಗಧ ಆಸಸಾದಸೋಽವಜ್ಞಯೈವ ಬಲವೀರ್ಯಮದೇನದೃಪ್ತಃ ॥
ಚಾಪಂಚಕರ್ಷಚಲಪಾದತಲೋ ಬಲೇನ ಶಿಷ್ಟೇಸಸರ್ಷಪಮಿತೇಽಭಿಹತೋಽಮುನೈವ ॥ ೧೨೬ ॥

ಭೂಪತಿಷು – ರಾಜರು ಸನ್ನೇಷುಸತ್ಸು – ಶ್ರಾಂತರಾಗುತ್ತಿರಲು ಬಲವೀರ್ಯಮದೇನ – ಸಾಮರ್ಥ್ಯಪರಾಕ್ರಮ ಇವುಗಳ ಅಹಂಕಾರದಿಂದ ದೃಪ್ತಃ – ಗರ್ವಿಷ್ಟನಾದ ಸ ಮಾಗಧಃ – ಆ ಜರಾಸಂಧನು ಅವಜ್ಞಯೈವ – ತಿರಸ್ಕಾರ ಬುದ್ಧಿಯಿಂದಲೇ ಚಲಪಾದತಲಸ್ಸನ್ – ಚಲಿಸುವ ಪಾದತಲವುಳ್ಳವನಾಗಿ ಬಲೇನ – ಸಾಮರ್ಥ್ಯದಿಂದ ಚಾಪಂ – ಧನುಸ್ಸನ್ನು ಚಕರ್ಷ – ಎಳೆದನು ಸಃ – ಆ ಧನುಸ್ಸು ಸರ್ಷಪಮಿತೇ – ಸಾಸಿವೆಕಾಳಿನ ಪರಿಮಾಣದಷ್ಟು ಶಿಷ್ಟೇಸತಿ – ಉಳಿಯುತ್ತಿರಲು ಅಮುನೈವ – ಈ ಧನುಸ್ಸಿನಿಂದಲೇ ಅಭಿಹತಃ – ತಾಡಿತನಾದನು. ॥ ೧೨೬ ॥

ಜಾನುನ್ಯಮುಷ್ಯ ಧರಣೀಂ ಯಯತುಸ್ತದೈವದರ್ಪೇಣಚಾಸ್ಥಿರಪದಸ್ಥಿತಿಮಾತ್ರಹೇತೋಃ ॥
ರೌದ್ರಾದ್ವರಾತ್ಸ ಜಡತಾಂ ಗಮಿತೋಽಥರಾಜಾ ರಾಜ್ಞಾಂಮುಖಾನ್ಯನಭಿವೀಕ್ಷ್ಯಯಯೌ ಸ್ವರಾಷ್ಟ್ರಂ॥೧೨೭॥

ತದೈವ - ಆಗಲೇ ದರ್ಪೇಣ – ಅಹಂಕಾರದಿಂದ ಅಸ್ಥಿರಪದಸ್ಥಿತಿಮಾತ್ರಹೇತೋಃ – ಸ್ಥಿರವಲ್ಲದ ಪಾದಗಳ ಅವಸ್ಥಾನದಿಂದಲೇ ಅಮುಷ್ಯ ಈ ಜರಾಸಂಧನ ಜಾನುನೀ – ಮೊಣಕಾಲುಗಳು ಧರಣೀಂ – ಭೂಮಿಯನ್ನು ಯಯತುಃ ಹೊಂದಿದವು ಅವನು ಬೀಳಲಿಲ್ಲ (ವಾದಿರಾಜರ ವಾಖ್ಯಾನ) ಯಾವಾಗ ಧನುಸ್ಸಿನಿಂದ ಜರಾಸಂಧನು ಹೊಡೆಯಲ್ಪಟನೋ ತದೈವ – ಆಗಲೇ ಅಸ್ಥಿರಪದಃ – ಸ್ಥಿರವಲ್ಲದ ಪಾದಗಳುಳ್ಳ ಅಮುಷ್ಯ – ಈ ಜರಾಸಂಧನ ಜಾನುನೀ – ಮೊಣಕಾಲುಗಳು ಸ್ಥಿತಿಮಾತ್ರ ಹೇತೋಃ – ಕೇವಲ ತಮ್ಮ ಅವಸ್ಥಾನಕೋಸ್ಕರ ಧರಣೀಂ – ಭೂಮಿಯನ್ನು ಯಯತುಃ – ಹೊಂದಿದವು ಕಾಲುಗಳಿಂದ ನಿಲ್ಲಲು ಅಶಕ್ತನಾಗಿ ಮೊಣಕಾಲುಗಳಿಂದ ಭೂಮಿಯನ್ನು ಹೊಂದಿದನು ರೌದ್ರಾತ್ವರಾತ್ – ಇವಳಿಗೆ ಗಂಡನಾಗುತ್ತಿ, ಇವಳು ನಿನ್ನನ್ನು ವರಿಸುವಳು ಎಂದು ವಟುರೂಪಿಯಾದ ರುದ್ರನಿಂದ ಕೊಡಲ್ಪಟ್ಟವರದಿಂದ ಜಡತಾಂ – ಜಾಡ್ಯವನ್ನು (ಭ್ರಾಂತತ್ವವನ್ನು) ಗಮಿತಃ – ಹೊಂದಿದ ರಾಜಾ – ಜರಾಸಂಧನು ಅಥ – ಅನಂತರ ರಾಜ್ಞಾಂ – ರಾಜರ ಮುಖಾನಿ – ಮುಖಿಗಳನ್ನು ಅನಭಿವೀಕ್ಷ್ಯ – ನೋಡದೇನೇ ಸ್ವರಾಷ್ಟ್ರಂ – ತನ್ನ ರಾಜ್ಯವನ್ನು ಕುರಿತು ಯಯೌ – ಹೋದನು. ॥೧೨೭॥

ಪ್ರಾಯೋಗತಾಸ್ತಮನು ಭೂಪತಯೋಽಥಕರ್ಣೋ ದುರ್ಯೋಧನಾರ್ಥಮನುಗೃಹ್ಯ ಧನುಶ್ಚಕರ್ಷ ॥
ರಾಮಾದುಪಾತ್ತಶುಭಶಿಕ್ಷಿತಮಾತ್ರತೋಽಸೌ ರೋಮಾವಶಿಷ್ಟನುಕರೋದ್ಧನುಷೋಽಂತಮಾಶು॥೧೨೮॥

ಅಥ – ಅನಂತರ ಪ್ರಾಯಃ - ಹೆಚ್ಚಾಗಿ ಭೂಪತಯಃ – ರಾಜರುಗಳು ತಮನು – ಆ ಜರಾಸಂಧನನ್ನು ಅನುಸರಿಸಿ ಗತಾಃ – ಹೋದರು ಕರ್ಣಃ – ಕರ್ಣನು ದುರ್ಯೋಧನಾರ್ಥಂ – ದುರ್ಯೋಧನಿಗೋಸ್ಕರ ಅನುಗೃಹ್ಯ – ಅನುಗ್ರಹಿಸಿ ಧನುಃ – ಬಿಲ್ಲನ್ನು ಚಕರ್ಷ – ಎಳೆದನು ರಾಮಾತ್ – ಪರಶುರಾಮದೇವರಿಂದ ಉಪಾತ್ತಶುಭಶಿಕ್ಷಿತಮಾತ್ರತಃ – ಸ್ವೀಕರಿಸಲ್ಪಟ್ಟ ಶೋಭನವಾದ ಶಿಕ್ಷಣ ಮಾತ್ರದಿಂದಲೇ ಧನುಷಃ - ಬಿಲ್ಲಿನ ಅಂತಂ ಕೊನೆಯನ್ನು ರೋಮಾವಶಿಷ್ಟಂ – ರೋಮಪರಿಮಾಣದಷ್ಟು ಉಳಿದದ್ದನ್ನಾಗಿ ಆಶು - ಕೂಡಲೇ ಅಕರೋತ್ – ಮಾಡಿದನು. ॥ ೧೨೮ ॥

ತಸ್ಮಿಂಶ್ಚತೇನ ವೀಹತೇಪ್ರತಿಸನ್ನಿವೃತ್ತೇ ಭೀಮಾರ್ಜುನೌ ದ್ವಿಜಸದಸ್ಯುಪಸನ್ನಿವಿಷ್ಟೌ ॥
ಉತ್ತಸ್ಥತೂರವಿಶಶಿಪ್ರತಿಮಾನರೂಪೌ ವಿಪ್ರೇಷು ತತ್ರಚಭಿಯಾವಿನಿವಾರಯತ್ಸು ॥ ೧೨೯ ॥

ತೇನ – ಆ ಧನುಸ್ಸಿನಿಂದ ವಿಹತೇ – ತಾಡಿತನಾದ ತಸ್ಮಿನ್ – ಆ ಕರ್ಣನು ಪ್ರತಿಸನ್ನಿವೃತ್ತೇಸತಿ – ಹಿಂತಿರುಗಿ ಹೋಗುತ್ತಿರಲು ದ್ವಿಜಸದಸಿ - ಬ್ರಾಹ್ಮಣರ ಸಭೆಯಲ್ಲಿ ಉಪಸನ್ನಿವಿಷ್ಟೌ – ಕುಳಿತಿರುವ ರವಿಶಶಿಪ್ರತಿಮಾನರೂಪೌ – ಸೂರ್ಯ ಚಂದ್ರರಿಗೆ ಸಮಾನವಾದ ಸ್ವರೂಪಕಾಂತಿಯುಳ್ಳ ಭೀಮಾರ್ಜುನೌ – ಭೀಮಾರ್ಜುನರು ತತ್ರ – ಆ ಸಭೆಯಲ್ಲಿ ವಿಪ್ರೇಷು – ಬ್ರಾಹ್ಮಣರು ಭಿಯಾ – ಧನುಸ್ಸಿನ ಆರೋಪಣೆಯಲ್ಲಿ ಅಶಕ್ತರಾದಲ್ಲಿ ಮಾನಹಾನಿ ಭಯದಿಂದ ವಿನಿವಾರಯತ್ಸುಸತ್ಸು – ತಡೆಯುತ್ತಿರಲು ಉತ್ತಸ್ಥತುಃ – ಎದ್ದುನಿಂತರು. ॥ ೧೨೯ ॥

ವಿಪ್ರಾಶ್ಚ ಕೇಚಿದತಿಯುಕ್ತ ಮಿಮೌ ಚವೀರೌ ದೇವೋಪಮಾವಿತಿವಚೋಜಗದುಸ್ತತಸ್ತೌ ॥
ದೃಷ್ಟೈವಕೃಷ್ಣಮುಖಪಂಕಜ ಮಾಶುಚಾಪಸಾನಿಧ್ಯಮಾಯಯತುರುತ್ತಮವೀರ್ಯಸಾರೌ ॥ ೧೩೦ ॥

ಕೇಚಿತ್ ಕೆಲವು ವಿಪ್ರಾಃ – ಬ್ರಾಹ್ಮಣರು ಹಿ – ಯಾವ ಕಾರಣದಿಂದ ಇಮೌ – ಈ ಭೀಮಾರ್ಜುನರು ವೀರೌ – ಪರಾಕ್ರಮಿಗಳೋ ದೇವೋಪಮೌ – ದೇವತೆಗಳಿಗೆ ಸಮಾನರಾದವರೋ ಅತಃ – ಆದ್ದರಿಂದ ಅತಿಯುಕ್ತಂ – ಇವರ ಉತ್ಥಾನವು ಅತ್ಯಂತ ಯೋಗ್ಯವಾದದ್ದು ಇತಿ – ಎಂದು ವಚಃ – ಮಾತನ್ನು ಜಗದುಃ – ಹೇಳಿದರು ತತಃ – ಬ್ರಾಹ್ಮಣರು ಹೇಳಿದ ನಂತರ ಉತ್ತಮವೀರ್ಯಸಾರೌ – ಉತ್ತಮ ಪರಾಕ್ರಮದಿಂದ ಶ್ರೇಷ್ಠರಾದ ತೌ – ಆ ಭೀಮಾರ್ಜುನರು ಕೃಷ್ಣ ಮುಖಪಂಕಜಂ – ಶ್ರೀಕೃಷ್ಣನಮುಖಕಮಲವನ್ನು ದೃಷ್ಟೈವ—ನೋಡಿಯೇ ಆಶು—ಕೂಡಲೇ ಚಾಪಸಾನ್ನಿಧ್ಯಂ—ಧನುಸ್ಸಿನ ಸಮೀಪಕ್ಕೆ ಆಯಯತುಃ—ಬಂದರು. ॥ ೧೩೦ ॥

ತತಾರ್ಜುನಃ ಪವನಜಾತ್ಪ್ರಿಯತೋಽಪ್ಯನುಜ್ಞಾ ಮಾದಾಯ ಕೇಶವಮಜಂ ಮನಸಾಪ್ರಣಮ್ಯ ॥
ಕೃತ್ವಾಗುಣಾನ್ವಿತ ಮದೋಧನುರಶ್ರಮೇಣ ಯಂತ್ರಾಂತರೇಣ ಸಶರೈರಧುನೋಚ್ಚಲಕ್ಷ್ಯಂ ॥ ೧೩೧ ॥

ಅರ್ಜುನಃ—ಅರ್ಜುನನು ತತ್ರ–ಲಕ್ಷ್ಯವೇಧ ವಿಷಯದಲ್ಲಿ ಪ್ರಿಯತಃ–ಪ್ರಿಯನಾದ ಪವನಜಾತ್–ವಾಯುಪುತ್ರ ಭೀಮನಿಂದ ಅನುಜ್ಞಾಂ—ಅಪ್ಪಣೆಯನ್ನು ಆದಾಯ—ಸ್ವೀಕರಿಸಿ ಅಜಂ—ಹುಟ್ಟುಇಲ್ಲದ ಕೇಶವಂ—ಬ್ರಹ್ಮರುದ್ರ ಪ್ರೇರಕನಾದ ಶ್ರೀಕೃಷ್ಣನನ್ನು ಮನಸಾ—ಮನಸ್ಸಿನಿಂದ ಪ್ರಣಮ್ಯ—ನಮಸ್ಕರಿಸಿ ಅದಃ ಧನುಃ—ಈ ಧನುಸ್ಸನ್ನು ಗುಣಾನ್ವಿತಂ—ಜ್ಯಾ ಸಹಿತವಾದದ್ದನ್ನಾಗಿ ಕೃತ್ವಾ—ಮಾಡಿ ಅಶ್ರಮೇಣ—ಆಯಾಸವಿಲ್ಲದೇನೇ ಯಂತ್ರಾಂತರೇಣ—ಮತ್ಸ್ಯದ ಕೆಳಭಾಗದಲ್ಲಿರತಕ್ಕ ದಾರುಯಂತ್ರದ ಛಿದ್ರದಿಂದ ಮರದ ಮೇಲಿರುವ ಮತ್ಸ್ಯದ ನೆರಳನ್ನು ನೀರಿನಲ್ಲಿ ನೋಡಿ ಲಕ್ಷ್ಯಂ–ಮೀನನ್ನು ಅಧುನೋತ್–ಹೊಡೆದನು. ॥ ೧೩೧ ॥

ಭಾ.ಅ. ೧೨೬–೧೩೧ ಈ ಸಮಯದಲ್ಲಿ ಮಹಾ ಅಹಂಕಾರಿ, ಪರಾಕ್ರಮಿಯಾದ ಜರಾಸಂಧನು ಬಂದು ಸೊಕ್ಕಿನಿಂದ (ಇದೇನು ನನಗೆ ಮಹಾ ಕಾರ್ಯ ಎಂಬ) ಅಲಕ್ಷ್ಯ, ಅವಜ್ಞಾವನ್ನು ತೋರಿಸುತ್ತ ಸರಿಯಾಗಿ ಭೂಮಿಯ ಮೇಲೆ ಗಟ್ಟಿಯಾಗಿ ನಿಲ್ಲದೇ ಧನುಸ್ಸನ್ನು ಎತ್ತಿ ಎಳೆದನು. ಸಾಸಿವೆಕಾಳಿನಷ್ಟು ಅಂತರ ಉಳಿದಿರುವಾಗ ಅವನೂ ಮೊದಲಿನಂತೆ ಬಡಿಸಿಕೊಂಡು ಬೀಳುವ ಸ್ಥಿತಿಯಲ್ಲಿರುವಾಗ ಮೊಂಡೆಗಳನ್ನು ಭೂಮಿಗೆ ಊರಿ ಕೂತನು. ಹೀಗೆ ಇವರೆಲ್ಲರೂ ಪರಾಜಿತರಾದದ್ದು ಹಿಂದೆ ಹೇಳಿದಂತೆ 'ಇವಳು ನಿನ್ನನ್ನೇ ವರಿಸುತ್ತಾಳೆ' ಎಂದು ರುದ್ರವರವಿದ್ದ ಕಾರಣದಿಂದಾಗಿ. ಆಗ ಜರಾಸಂಧನು ತನ್ನ ದೇಶಕ್ಕೆ ವಾಪಸಾದನು. ಹಾಗೆ ಅನೇಕ ರಾಜರೂ ಹೋದರು. ಆಗ ಕರ್ಣನು ದುರ್ಯೋಧನನ ಸಲುವಾಗಿ ಬಂದು ಶ್ರೀಪರಶುರಾಮದೇವರ ಹತ್ತಿರ ಪಡೆದ ವಿದ್ಯಾ ಸಾಮರ್ಥ್ಯದಿಂದ ಧನುಸ್ಸನ್ನು ಎತ್ತಿ ಜ್ಯಾ ಎಳೆದನು. ಕೂದಲಿನೆಳೆಯಷ್ಟು ಅಂತರ ಮಾತ್ರ ಉಳಿಯುವಂತೆ ಎಳೆದಿರುವಾಗ ಬಿಲ್ಲಿನ ತುದಿಯು ಅವನನ್ನೂ ಕೂಡ ಬಡಿಯಿತು. ಆಗ ಬ್ರಾಹ್ಮಣ ಗುಂಪಿನಿಂದ ಶ್ರೀಭೀಮಾರ್ಜುನರು ಎದ್ದು ನಿಂತಾಗ ಕೆಲ ಬ್ರಾಹ್ಮಣರು ತಡೆಯುತ್ತಿದ್ದರು. ಕೆಲವರು 'ಇವರು ದೇವತಾ ಸದೃಶರಾಗಿದ್ದು, ಈ ಕಾರ್ಯ ಮಾಡಲು ಎದ್ದದ್ದು ಬಹಳ ಯುಕ್ತವಾಗಿದೆ' ಎಂದರು. ಆ ಪಾರ್ಥರಿಬ್ಬರೂ ಶ್ರೀಕೃಷ್ಣ ಮುಖವನ್ನು ದರ್ಶನ ಮಾಡಿ (ಸೂಚನಾರೂಪವಾದ ಅಪ್ಪಣೆ ಪಡೆದು) ಧನುಸ್ಸಿನ ಸಮೀಪಕ್ಕೆ ಬಂದರು. ಅರ್ಜುನನು ಪ್ರಿಯ ಅಣ್ಣನಾದ ಶ್ರೀಭೀಮಸೇನರಿಂದ ಅಪ್ಪಣೆ ಪಡೆದು ಶ್ರೀಕೃಷ್ಣಪರಮಾತ್ಮನಿಗೆ ಮನಸ್ಸಿನಿಂದಲೇ ನಮಸ್ಕರಿಸಿ ಅನಾಯಾಸವಾಗಿಯೇ ಬಿಲ್ಲನ್ನು ಎತ್ತಿ, ಜ್ಯಾಕಟ್ಟಿ, ಬಾಣ ಹೂಡಿ ಮತ್ಸ್ಯ ಪ್ರತಿಬಿಂಬವನ್ನು ನೋಡುತ್ತಾ ಆ ಪ್ರತೀಕವನ್ನು ಕತ್ತರಿಸಿದನು.

ಕೃಷ್ಣಾತದಾಸ್ಯವಿದಧೇ ನವಕಂಜಮಾಲಾಂ ಮಧ್ಯೇಚ ತಾಂ ಪ್ರತಿನಿಧಾಯ ನರೇಂದ್ರಪುತ್ರೌ ॥
ಭೀಮಾರ್ಜುನೌ ಯಯತುರಚ್ಯುತಮಾಭಿನಮ್ಯಕ್ಷ್ವೇಡ್ಯ ತದಾನೃಪವರಾಬ್ಧಿರಿವಾವಧಾವತ್ ॥ ೧೩೨ ॥

ತದಾ—ಮತ್ಸ್ಯವೇಧ ಮಾಡಿದಾಗ ಕೃಷ್ಣಾ—ದ್ರೌಪದಿಯು ಅಸ್ಯ—ಈ ಅರ್ಜುನನಿಗೆ ನವಕಂಜಮಾಲಾಂ—ನೂತನವಾದ ಕಮಲದ ಮಾಲಿಕೆಯನ್ನು ವಿದಧೇ—ಹಾಕಿದಳು ನರೇಂದ್ರಪುತ್ರೌ—ಪಾಂಡುರಾಜನ ಮಕ್ಕಳಾದ ಭೀಮಾರ್ಜುನರು

ತಾಂ—ಆ ಕೃಷ್ಣೆಯನ್ನು ಮಧ್ಯೇ ಮಧ್ಯದಲ್ಲಿ ಪ್ರತಿನಿಧಾಯ—ಇಟ್ಟುಕೊಂಡು ಅಚ್ಯುತಂ—ನಾಶರಹಿತನಾದ ಶ್ರೀಕೃಷ್ಣನನ್ನು ಅಭಿನಮ್ಯ—ಭಕ್ತಿಪೂರ್ವಕವಾಗಿ ನಮಸ್ಕರಿಸಿ ಯಯತುಃ—ಹೋದರು ತದಾ—ಅವರು ಹೋಗುವಾಗ ಕ್ಷುಬ್ಧಃ—ಕಳವಳಗೊಂಡ ನೃಪವರಾಬ್ಧಿಃ—ಸಮುದ್ರದಂತಿರುವ ರಾಜರಗುಂಪು ಇಮೌ—ಈ ಭಿಮಾರ್ಜುನರನ್ನು ಕುರಿತು ಅಧಾವತ್—ಓಡಿ ಬಂದಿತು. ॥ ೧೩೨ ॥

ದೃಷ್ಟ್ವಂಹಿ ಕೇವಲಗತಿರ್ನತುಕನ್ಯಕಾಯಾಅರ್ಥೇನಚಾಪಮಿಹ ವೃಷ್ಣಿವರಾಃಸ್ಪೃಶಂತು ॥
ಇತ್ಯಾಜ್ಞಯೈವ ವರಚಕ್ರಧರಸ್ಯಲಿಪ್ಸಾಮುಷ್ಯತ್ರಚಕ್ರುರಿಹನೈವಯದುಪ್ರವೀರಾಃ ॥ ೧೩೩ ॥

ಹೇ ವೃಷ್ಣಿವರಾಃ – ಎಲೋ ವೃಷ್ಣಿಶ್ರೇಷ್ಠರೇ ಹಿ – ಯಾವ ಕಾರಣದಿಂದ ದೃಷ್ಟ್ವಂಕೇವಲಗತಿಃ – ಸ್ವಯಂವರವನ್ನು ನೋಡುವುದಕ್ಕಾಗಿಯೇ ನಮ್ಮ ಗಮನವೋ ಕನ್ಯಕಾಯಾ ಅರ್ಥೇನ – ಕನ್ಯೆಯ ಪ್ರಯೋಜನಕ್ಕಾಗಿ ಅಲ್ಲವೋ ಅತಃ – ಆದ್ದರಿಂದ ಇಹ – ಈ ಸ್ವಯಂಪರದಲ್ಲಿ ಚಾಪಂ – ಬಿಲ್ಲನ್ನು ನಸ್ಪೃಶಂತು – ಮುಟ್ಟಬಾರದು ಇತಿ – ಎಂದು ವರಚಕ್ರಧರಸ್ಯ – ಉತ್ತಮ ಚಕ್ರವನ್ನು ಧರಿಸಿರುವ ಶ್ರೀಕೃಷ್ಣನ ಆಜ್ಞಯೈವ ಅಪ್ಪಣೆಯಿಂದಲೇ ಅತ್ರ – ಈ ಧನುಸ್ಸಿನ ಆರೋಪಣ ವಿಷಯದಲ್ಲಿ ಲಿಪ್ಸಾಮಪಿ – ಇಚ್ಛೆಯನ್ನೂ ಕೂಡ ಯದುಪ್ರವೀರಾಃ – ಯಾದವ ಶ್ರೇಷ್ಠರು ನೈವಚಕ್ರುಃ – ಮಾಡಲೇ ಇಲ್ಲ. ॥೧೩೩॥

ಭೀಮಸ್ತುರಾಜಸಮಿತಿಂ ಪ್ರತಿಸಂಪ್ರಯಾತಾಂ ದೃಷ್ಟ್ವೈವಯೋಜನದಶೋಚ್ಛ್ರಯಮಾಶುವೃಕ್ಷಂ ॥
ಆರುಜ್ಯಸರ್ವ ನೃಪತೀನಭಿತೋಽತಿಷ್ಠದ್ದೃಷ್ಟ್ವೈವ ಪಲಾಯನ ಪರಾಶ್ಚಬಭೂವುರೇತೇ ॥ ೧೩೪ ॥

ಭೀಮಸ್ತು – ಭೀಮನಾದರೂ ಪ್ರತಿಸಂಪ್ರಯಾತಾಂ – ಎದುರಾಗಿ ಬರತಕ್ಕ ರಾಜಸಮಿತಿಂ – ರಾಜರ ಸಮೂಹವನ್ನು ದೃಷ್ಟ್ವೈವ – ನೋಡಿಯೇ ಯೋಜನದಶೋಚ್ಛ್ರಯಂ – ಹತ್ತುಯೋಜನ ಎತ್ತರವಾದ ವೃಕ್ಷಂ – ಮರವನ್ನು ಆರುಜ್ಯ – ಕಿತ್ತು ಸರ್ವನೃಪತೀನ್ ಅಭಿತಃ – ಎಲ್ಲಾ ರಾಜರ ಎದುರಾಗಿ ಅತಿಷ್ಠತ್ – ನಿಂತನು ಏತೇ – ಈ ರಾಜರು ದೃಷ್ಟ್ವಾವ – ಭೀಮನನ್ನು ನೋಡಿ ಪಲಾಯನಪರಾಃ – ಓಡಿಹೋಗುವುದರಲ್ಲಿ ಆಸಕ್ತರು ಬಭೂವುಃ – ಆದರು. ॥ ೧೩೪ ॥

ಭೀಮೋಯಮೇಷ ಪುರುಹೂತಸುತೋಽನ್ಯಏತೇ ಪಾರ್ಥಾಇತಿಸ್ಮ ಹಲಿನೇ ಹರಿರಭ್ಯವೋಚತ್ ॥
ದೃಷ್ಟ್ವೈವಸೋಪಿ ಮುದಮಾಪಶಿನೇಶ್ಚಪೌತ್ರಃ ಖಡ್ಗಂಪ್ರಗೃಹ್ಯ ಹರ್ಷಾತ್ಪರಿಪುಪ್ಲುವೇಽತ್ರ ॥ ೧೩೫ ॥

ಅಯಂ – ಇವನು ಭೀಮಃ – ಭೀಮನು ಏಷಃ – ಇವನು ಪುರುಹೂತಸುತಃ – ಇಂದ್ರನ ಮಗನಾದ ಅರ್ಜುನನು ಅನ್ಯೇ – ಇತರರಾದ ಏತೇ – ಈ ಮೂವರು ಪಾರ್ಥಾಃ – ಧರ್ಮರಾಜಾದಿಗಳು ಇತಿ – ಎಂದು ಹರಿಃ – ಶ್ರೀಕೃಷ್ಣನು ಹಲಿನೇ – ಬಲರಾಮನಿಗೋಸ್ಕರ ಅಭ್ಯವೋಚತ್ – ಹೇಳಿದನು ಸೋಽಪಿ – ಆ ಬಲರಾಮನಾದರೂ ದೃಷ್ಟ್ವೈವ–ನೋಡಿಯೇ ಮುದಂ – ಸಂತೋಷವನ್ನು ಆಪ ಹೊಂದಿದನು ಶಿನೇಃ – ಶಿನಿಯ ಪೌತ್ರಶ್ಚ – ಮೊಮ್ಮಗನಾದ ಸಾತ್ಯಕಿಯೂ ಕೂಡ ನೋಡಿ ಸಂತೋಷಪಟ್ಟನು ಖಡ್ಗಂ – ಖಡ್ಗವನ್ನು ಪ್ರಗೃಹ್ಯ – ಹಿಡಿದುಕೊಂಡು ಹರ್ಷಾತ್ – ಸಂತೋಷೋದ್ರೇಕದಿಂದ ಅತ್ರ – ಈ ಶ್ರೀಕೃಷ್ಣನ ಸನ್ನಿಧಿಯಲ್ಲಿ ಪರಿಪುಪ್ಲುವೇ – ಹಾರಿ ಕುಣಿದನು. ॥ ೧೩೫ ॥

ಭಾ.ಅ. ೧೩೨–೧೩೫ ಆಗ ದ್ರೌಪದೀದೇವಿಯು ಆ ಸುಂದರ ಕಮಲದ ಮಾಲೆಯನ್ನು ಅರ್ಜುನನ ಕೊರಳಲ್ಲಿ ಹಾಕಿ ನಿಂತಳು. ಭೀಮಾರ್ಜುನರಿಬ್ಬರೂ ಶ್ರೀಕೃಷ್ಣನಿಗೆ ನಮಸ್ಕರಿಸಿ ಅಲ್ಲಿಂದ ಹೊರಟರು. ಆಗ ರಾಜಸಮೂಹವು ಕೋಪದಿಂದ ಇವರಿಬ್ಬರ ಮೇಲೆ ಏರಿ ಬಂದಿತು. ಆಗ ಶ್ರೀಭೀಮಸೇನರು ದೊಡ್ಡ ಒಂದು ವೃಕ್ಷವನ್ನೇ ಕಿತ್ತಿ, ಎತ್ತಿ ಎಲ್ಲ ರಾಜರ ಎದುರಿಗೆ ಬಂದು ನಿಂತರು. ಇವರನ್ನು ನೋಡಿಯೇ ರಾಜರು ಓಡಿಹೋದರು. ಶ್ರೀಕೃಷ್ಣನು ಸ್ವಯಂವರಕ್ಕೆ ಬರುವಾಗ ಎಲ್ಲ ಯಾದವರಿಗೆ 'ಕೇವಲ ಉತ್ಸವ ನೋಡುವದಕ್ಕಾಗಿ ಅಲ್ಲಿಗೆ ಹೋಗುವದು ವಿನಃ, ಕನ್ಯೆಯ ಸಲುವಾಗಿ ಅಲ್ಲ, ಆದ್ದರಿಂದ ಯಾರೂ ಧನುಸ್ಸನ್ನು ಮುಟ್ಟಬಾರದು' ಎಂದು ಹೇಳಿಯೇ ಕರೆದುಕೊಂಡು ಬಂದಿದ್ದನು. ಹೀಗಾಗಿ ಯಾವ ಯಾದವರೂ ಕೂಡ ದ್ರೌಪದಿಯನ್ನು ಹೊಂದುವ ಇಚ್ಛೆಯನ್ನೇ ಮಾಡಲಿಲ್ಲ. ಶ್ರೀಕೃಷ್ಣನು ಶ್ರೀಬಲರಾಮ ದೇವರಿಗೆ ಭೀಮಾರ್ಜುನರನ್ನು ತೋರಿಸುತ್ತಾ ಇವನು ಭೀಮನು ಇವನು ಅರ್ಜುನನು ಎಂದು ಉಳಿದ ಪಾರ್ಥರಿವರು ಎಂದು ತೋರಿಸಿದನು.

ಆಗ ಶ್ರೀಬಲರಾಮರೂ ಬಹಳ ಸಂತೋಷಪಟ್ಟರು. ಸಾತ್ಯಕಿಯೂ ಖಡ್ಗವನ್ನು ಕೈಯಲ್ಲಿ ಹಿಡಿದು ಸಂತೋಷದಿಂದ ಕುಣಿದಾಡಿದನು.

ಪ್ರೀತೇಷು ಸರ್ವಯದುಷು ಪ್ರಪಲಾಯಿತೇಷು ದುರ್ಯೋಧನಾದಿನೃಪತಿಷ್ವಖಿಲೇಷು ಭೀಮಾತ್ ॥
ಕರ್ಣೋ ಽಭ್ಯಯಾದ್ಧರಿಹಯಾತ್ಮಜಮಾಶು ಮದ್ರರಾಜೋಜಗಾಮ ಪವನಾತ್ಮಜಮೇವವೀರಃ ॥ ೧೩೬ ॥

ಸರ್ವಯದುಷು - ಎಲ್ಲಾ ಯಾದವರು ಪ್ರೀತೇಷುಸತ್ಸು – ಸಂತುಷ್ಟರಾಗುತ್ತಿರಲು ಭೀಮೇನ – ಭೀಮನಿಂದ ಅಖಿಲೇಷು – ಎಲ್ಲಾ ದುರ್ಯೋಧನಾದಿನೃಪತಿಷು – ದುರ್ಯೋಧನನೇ ಮೊದಲಾಗಿ ಉಳ್ಳ ರಾಜರುಗಳು ಪ್ರಪಲಾಯಿತೇಷ.ಸತ್ಸು – ಓಡಿ ಹೋಗುತ್ತಿರಲು ಕರ್ಣಃ – ಕರ್ಣನು ಹರಿಹಯಾತ್ಮಜಂ – ಇಂದ್ರನ ಮಗನಾದ ಅರ್ಜುನನನ್ನು ಅಭ್ಯಗಾತ್ – ಎದುರಾಗಿ ಬಂದನು ವೀರಃ – ಪರಾಕ್ರಮಿಯಾದ ಮದ್ರರಾಜಃ ಮದ್ರದೇಶದ ರಾಜನಾದ ಶಲ್ಯನು ಪವನಾತ್ಮಜಮೇವ – ವಾಯು ಪುತ್ರನಾದ ಭೀಮನನ್ನೇ ಜಗಾಮ – ಹೊಂದಿದನು. ॥ ೧೩೬ ॥

ವಿಪ್ರೇಷು ದಂಡಪಟದರ್ಭಮಹಾಜಿನಾನಿ ಕೋಪಾತ್ಕ್ಷಿಪತ್ಸ್ವನವಿನಾಶನ ಮತ್ರಭೂಯಾತ್ ॥
ಕ್ಷತ್ರಸ್ಯವೈರತಇತಿ ದ್ರುಪದೇಚಕೃಷ್ಣಂ ವಿಪ್ರಾಂಶ್ಚಯಾಚತಿ ಸಮಾರುತಿರಾರಶಲ್ಯಂ ॥ ೧೩೭ ॥

ವಿಪ್ರೇಷು – ಬ್ರಾಹ್ಮಣರು ಕೋಪಾತ್ – ಕ್ರೋಧದಿಂದ ದಂಡಪಟದರ್ಭಮಹಾಜಿನಾನಿ – ದಂಡಗಳು, ವಸ್ತ್ರಗಳು, ದರ್ಭೆಗಳು, ಶ್ರೇಷ್ಠ ಚರ್ಮವೂ ಇವುಗಳನ್ನು ಕ್ಷಿಪತ್ಸುಸತ್ಸು – ಬೀಸಾಡುತ್ತಿರಲು ಅತ್ರ – ಈ ವಿವಾಹ ಮಹೋತ್ಸವದಲ್ಲಿ ವೈರತಃ – ಬ್ರಾಹ್ಮಣರ ವಿರೋಧದಿಂದ ಕ್ಷತ್ರಸ್ಯ – ಕ್ಷತ್ರಿಯರಿಗೆ ವಿನಾಶನಂ – ನಾಶವು ನ ಭೂಯಾತ್– ಆಗಬಾರದು ಇತಿ–ಎಂದು ದ್ರುಪದೇ–ದ್ರುಪದರಾಜನು ಕೃಷ್ಣಂ–ಶ್ರೀಕೃಷ್ಣನನ್ನು ವಿಪ್ರಾಂಶ್ಚ–ಬ್ರಾಹ್ಮಣರನ್ನೂ ಕೂಡ ಯಾಚತಿಸತಿ – ಬೇಡುತ್ತಿರಲು ಸ ಮಾರುತಿಃ–ಆ ವಾಯುಪುತ್ರನಾದ ಭೀಮನು ಶಲ್ಯಂ–ಶಲ್ಯನನ್ನು ಆರ–ಹೊಂದಿದನು. ॥ ೧೩೭ ॥

ವೃಕ್ಷಂತ್ವಸೌ ಪ್ರತಿನಿಧಾಯಚ ಮದ್ರರಾಜಂ ದೋರ್ಭ್ಯಾಂಪ್ರಗೃಹ್ಯ ಜವತೋಗಗನೇ ನಿಧಾಯ ॥
ಬಂಧುತ್ವತೋ ಭುವಿಶನೈರದಧಾತ್ಸತಸ್ಯ ವಿಜ್ಞಾಯವೀರ್ಯಮಗಮನ್ನಿಜರಾಜಧಾನೀಂ ॥ ೧೩೮ ॥

ಅಸೌ – ಈ ಭೀಮಸೇನನು ವೃಕ್ಷಂ–ಮರವನ್ನು ಪ್ರತಿನಿಧಾಯ–ಭೂಮಿಯಲ್ಲಿ ಇಟ್ಟು ಮದ್ರರಾಜಂ–ಮದ್ರ ದೇಶದ ರಾಜನಾದ ಶಲ್ಯನನ್ನು ದೋರ್ಭ್ಯಾಂ – ಎರಡು ಕೈಗಳಿಂದ ಪ್ರಗೃಹ್ಯ–ಹಿಡಿದು ಜವತಃ–ವೇಗದಿಂದ ಗಗನೇ– ಆಕಾಶದಲ್ಲಿ ನಿಧಾಯ–ಹಾರಿಸಿ ಬಂಧುತ್ವತಃ–ಮಾವನಾದ್ದರಿಂದ ಭುವಿ–ಭೂಮಿಯಲ್ಲಿ ಶನೈಃ–ಮೆಲ್ಲನೇ ಅದಧಾತ್– ಇಟ್ಟನು ಸಃ–ಆ ಶಲ್ಯನು ತಸ್ಯ ಆ ಭೀಮನ ವೀರ್ಯಂ–ಸಾಮರ್ಥ್ಯವನ್ನು ವಿಜ್ಞಾಯ–ತಿಳಿದು ನಿಜರಾಜಧಾನೀಂ– ತನ್ನ ರಾಜ್ಯವನ್ನು ಕುರಿತು ಅಗಮತ್–ಹೋದನು. ॥ ೧೩೮ ॥

ಪಾರ್ಥೋಪಿತೇನ ಧನುಷಾಯುಯುಧೇಸ್ಯ ಕರ್ಣಂ ಸೋಽಪ್ಯತ್ರಬಾಹುಬಲಮಾವಿರಮುತ್ರಚಕ್ರೇ ॥
ತೌ ಧನ್ವಿನಾವ(ಮು)ನುಸಮೌ ಚಿರಮುಸ್ಯತಾಂಚ ಸೂರ್ಯಾತ್ಮಜೋಽತ್ರವಚನಂವ್ಯಥಿತೋಬಭಾಷೇ॥೧೩೯॥

ಪಾರ್ಥೋಪಿ–ಅರ್ಜುನನಾದರೂ ತೇನಧನುಷಾ–ಆ ಧನುಸ್ಸಿನಿಂದಲೇ ಕರ್ಣಂ–ಕರ್ಣನನ್ನು ಯುಯುಧೇ– ಯುದ್ಧ ಮಾಡಿದನು ಸೋಽಪಿ–ಆ ಕರ್ಣನಾದರೂ ಅತ್ರ – ಈ ಯುದ್ಧದಲ್ಲಿ ಅಮುತ್ರ–ಈ ಅರ್ಜುನನಲ್ಲಿ ಬಾಹುಬಲಂ– ಭುಜ ಸಾಮರ್ಥ್ಯವನ್ನು ಆವಿಶ್ಚಕ್ರೇ ಪ್ರಕಟಿಸಿದನು ಅನುಪಮೌ –ಅಸದೃಶರಾದ ಧನ್ವಿನೌ –ಧನುರ್ಧಾರಿಗಳಲ್ಲಿ ಶ್ರೇಷ್ಠರಾದ ತೌ –ಆ ಕರ್ಣಾರ್ಜುನರು ಚಿರಂ–ಬಹುಕಾಲತನಕ ಅಸ್ಯತಾಂ–ಪರಸ್ಪರವಾಗಿ ಬಾಣಗಳನ್ನು ಬೀಸಾಡಿದರು ಅತ್ರ–ಈ ಯುಂದ್ಧದಲ್ಲಿ ಸೂರ್ಯಾತ್ಮಜಃ–ಸೂರ್ಯನ ಮಗನಾದ ಕರ್ಣನು ವ್ಯಥಿತಃಸನ್ –ದುಃಖಿಪಟ್ಟವನಾಗಿ ವಚನಂ–ಮಾತನ್ನು ಬಭಾಷೇ–ಹೇಳಿದನು. ॥ ೧೩೯ ॥

ತ್ವಂಫಲ್ಗುನೋ ಹರಿಹಯೋ ದ್ವಿಜಸತ್ತಪೋವಾ ಮೂರ್ತಂನಮೇ ಪ್ರಮುಖತಃಸ್ಥಿತಿಮನ್ಯ ಈಷ್ಟೇ ॥
ಯೋವಾಸ್ಮಿ ಕೋಪಿಯದಿತೇಕ್ಷಮಮದ್ಯಬಾಣಾನ್ಮುಂಚಾನ್ಯಥೈಹಿರಣತಸ್ತ್ವಿತಿ ಪಾರ್ಥಆಹ ॥ ೧೪೦ ॥

ತ್ವಂ – ನೀನು ಫಲ್ಗುನೋವಾ – ಅರ್ಜುನನೋ ಹರಿಹಯೋವಾ – ಇಂದ್ರನೋ ಅಥವಾ ಮೂರ್ತಂ – ದೇಹವನ್ನು ಧರಿಸಿರುವ ದ್ವಿಜಸತ್ತಪೋವಾ – ಬ್ರಾಹ್ಮಣರ ಸಮೀಚೀನವಾದ ತಪಸ್ಸ್ನೋ ಅನ್ಯಃ – ಈ ಮೂವರಿಂದ ಬೇರೆಯವನು ಮೇ – ನನ್ನ ಪ್ರಮುಖತಃ – ಮುಂಭಾಗದಲ್ಲಿ ಸ್ಥಿತಿಂ – ಇರುವಿಕೆಯನ್ನು ನ ಈಷ್ಟೇ – ಹೊಂದಲು ಸಮರ್ಥನಾಗುವುದಿಲ್ಲ ಯೋವಾ ಕೋಪಿಅಸ್ಮಿ – ನೀನು ಹೇಳಿದವರ ಮಧ್ಯದಲ್ಲಿ ಯಾವನೋ ಒಬ್ಬನು ಆಗಿದ್ದೇನೆ ಯದಿ ತೇ ಕ್ಷಮಂ - ನಿನಗೆ ಯುದ್ಧಮಾಡಲು ಸಾಮರ್ಥ್ಯವಿದ್ದ ಪಕ್ಷದಲ್ಲಿ ಅದ್ಯ – ಈಗ ಬಾಣಾನ್ – ಶರಗಳನ್ನು ಮುಂಚ – ಬಿಡು ಅನ್ಯಥಾ–ಸಾಮರ್ಥ್ಯವಿಲ್ಲವಾದರೆ ರಣತಃ–ಯುದ್ಧದಿಂದ ಏಹಿ – ಹೋಗು ಇತಿ – ಈ ರೀತಿಯಾಗಿ ಪಾರ್ಥಃ – ಅರ್ಜುನನು ಆಹ – ಹೇಳಿದನು. ॥ ೧೪೦ ॥

ಕಾರ್ಯಂನಮೇದ್ವಿಜವರೈಃ ಪ್ರತಿಯೋಧನೇನೇತ್ಯುಕ್ತ್ವಾಯಯೌ ರವಿಸುತಃ ಸಸುಯೋಧನಾದ್ಯೈಃ ॥
ನಾಗಾಹ್ವಯಂ ಪುರಮುಥದ್ರುಪದಾತ್ಮಜಾಂತಾಮಾದಾಯುಚಾರ್ಜುನಯುತಃ ಪ್ರಯಯೌ ಸಭೀಮಃ।೧೪೧।

ಸಃ ರವಿಸುತಃ – ಆ ಕರ್ಣನು ಮೇ ನನಗೆ ದ್ವಿಜವರೈಃ – ಬ್ರಾಹ್ಮಣಶ್ರೇಷ್ಠರಿಂದ ಪ್ರತಿಯೋಧನೇನ – ಯುದ್ಧಮಾಡುವುದರಿಂದ ಕಾರ್ಯಂ – ಪ್ರಯೋಜನವು ನ – ಇಲ್ಲ ಇತಿ ಎಂದು ಉಕ್ತ್ವ – ಹೇಳಿ ಸುಯೋಧನಾದ್ಯೈಃ – ದುರ್ಯೋಧನನೇ ಮೊದಲಾಗಿ ಉಳ್ಳವರಿಂದ ಕೂಡಿಕೊಂಡು ನಾಗಾಹ್ವಯಂ ಪುರಂ – ಹಸ್ತಿನಾವತಿಯನ್ನು ಕುರಿತು ಯಯೌ – ಹೋದನು ಅಥ – ಅನಂತರ ಸ ಭೀಮಃ – ಆ ಭೀಮನು ಅರ್ಜುನಯುತಸ್ಸನ್ – ಅರ್ಜುನನಿಂದ ಕೂಡಿದವನಾಗಿ ದ್ರುಪದಾತ್ಮಜಾಂ – ದ್ರುಪದ ರಾಜನ ಮಗಳಾದ ತಾಂ – ಆ ದ್ರೌಪದಿಯನ್ನು ಆದಾಯ – ಕರೆದುಕೊಂಡು ಪ್ರಯಯೌ – ಹೊರಟು ಹೋದನು. ॥ ೧೪೧ ॥

ಅಗ್ರೇಽಶ್ವಿಪುತ್ರಸಹಿತಃ ಸತುಧರ್ಮಸೂನುಃ ಪ್ರಾಯಾತ್ಕುಲಾಲಗೃಹಮನ್ವಪಿ ಭೀಮಪಾರ್ಥೌ ॥
ಭಿಕ್ಷೇತಿತೈರಭಿಹಿತೇಪ್ರಜಗಾದಕುಂತೀ ಭುಙ್ಕ್ಷ್ವಂ ಸಮಸ್ತಶಇತಿ ಪ್ರದದರ್ಶಕನ್ಯಾಂ ॥ ೧೪೨ ॥

ಅಗ್ರೇ – ಮುಂಭಾಗದಲ್ಲಿ ಅಶ್ವಿಪುತ್ರಸಹಿತಃ – ನಕುಲಸಹದೇವರಿಂದಕೂಡಿದ ಸ ಧರ್ಮಸೂನುಃ – ಆ ಧರ್ಮರಾಜನು ಕುಲಾಲಗೃಹಂ–ಕುಂಬಾರನ ಮನೆಯನ್ನು ಕುರಿತು ಪ್ರಾಯಾತ್ – ಹೋದನು ಭೀಮಪಾರ್ಥಾಪಪಿ–ಭೀಮಾರ್ಜುನರೂ ಕೂಡ ಅನು – ಧರ್ಮರಾಜಾದಿಗಳನ್ನನುಸರಿಸಿ ಯಯತುಃ – ಹೋದರು ತೈಃ – ಆ ಪಾಂಡವರಿಂದ ಭಿಕ್ಷಾ – ಭಿಕ್ಷೆಯು ಪ್ರಾಪ್ತ ವಾಯಿತು ಇತಿ – ಎಂದು ಅಭಿಹಿತೇಸತಿ – ಹೇಳಲ್ಪಡುತ್ತಿರಲು ಕುಂತೀ – ಕುಂತಿಯು ಸಮಸ್ತಶಃ – ನೀವೆಲ್ಲರೂ ಭುಙ್ಕ್ಷ್ವಂ– ಊಟ ಮಾಡಿರಿ ಇತಿ – ಎಂದು ಪ್ರಜಗಾದ – ಹೇಳಿದಳು ಕನ್ಯಾಂ – ಕನ್ಯೆಯನ್ನು ಪ್ರದದರ್ಶ – ನೋಡಿದಳು. ॥ ೧೪೨ ॥

ಭಾ.ಅ. ೧೩೬–೧೪೨ ದುರ್ಯೋಧನಾದಿ ರಾಜರೆಲ್ಲರೂ ಶ್ರೀಭೀಮಸೇನರನ್ನು ನೋಡಿ ಓಡಿದಾಗ ಕರ್ಣನು ಅರ್ಜುನನ ಹತ್ತಿರ, ಶಲ್ಯನು ಶ್ರೀಭೀಮಸೇನರ ಹತ್ತಿರ ಯುದ್ಧಕ್ಕೆ ಬಂದರು. ಬ್ರಾಹ್ಮಣರು ತಮ್ಮ ಗುಂಪಿನಿಂದ ಈ ಶೌರ್ಯದ ಕಾರ್ಯವನ್ನು ಮಾಡಿದ ಇವರ ಮೇಲೆ ಅನ್ಯಾಯ ಮಾಡುತ್ತಿರುವ ರಾಜರ ಮೇಲೆ ಸಿಟ್ಟಿನಿಂದ ತಮ್ಮ ದಂಡ, ಉತ್ತರೀಯ ವಸ್ತ್ರ, ಕೃಷ್ಣಾಜಿನ, ದರ್ಭಾಸನ ಇತ್ಯಾದಿಗಳನ್ನು ಒಗೆಯುತ್ತಿದ್ದರು. ಆಗ ದ್ರುಪದನು ಕ್ಷತ್ರಿಯರ ಮೇಲೆ ಬ್ರಾಹ್ಮಣರ ಕ್ರೋಧದಿಂದ ದೊಡ್ಡ ಅನಾಹುತವೇ ಆದೀತೆಂದು ಶ್ರೀಕೃಷ್ಣನನ್ನು, ಬ್ರಾಹ್ಮಣರನ್ನು ಪ್ರಾರ್ಥಿಸುತ್ತಿದ್ದನು. ಆಗ ಶ್ರೀಭೀಮಸೇನರು ವೃಕ್ಷವನ್ನು ಕೆಳಗಿಟ್ಟು ಶಲ್ಯನನ್ನು ತಮ್ಮ ಎರಡೂ ಕೈಗಳಿಂದ ಎತ್ತಿ (ಮೇಲಕ್ಕೆ ಆಕಾಶದಲ್ಲಿ) ನಿನ್ನನ್ನು ಅಪ್ಪಳಿಸಬಲ್ಲೆ ಎಂಬುದನ್ನು ಮಾತ್ರ ತೋರಿಸಿ, ಬಂಧುವಾದ್ದರಿಂದ ಮೆಲ್ಲನೆ ಇಳಿಸಿದರು. ಮದ್ರರಾಜನಾದರೂ ಅವರ ಪರಾಕ್ರಮವನ್ನು ತಿಳಿದು ತನ್ನೂರಿಗೆ ಹೋದನು. ಅರ್ಜುನನು ಅದೇ ಸ್ವಯಂವರದ ಧನುಸ್ಸಿನಿಂದಲೇ ಕರ್ಣನ ಜೊತೆಗೆ ಬಹಳ ಸಮಯದವರೆಗೆ ಯುದ್ಧಮಾಡಿ, ತನ್ನ ಅಸ್ತ್ರನೈಪುಣ್ಯವನ್ನು ತೋರಿಸಿದನು. ಆಗ ಇವನನ್ನು ಸೋಲಿಸಲು ಅಶಕ್ತನಾದ ಕರ್ಣನು ವ್ಯಥೆಗೊಂಡು ಅರ್ಜುನನಿಗೆ ನೀನು ಸಾಕ್ಷಾತ್ ಇಂದ್ರನೋ, ಅರ್ಜುನನೋ ಅಥವಾ ಮೂರ್ತಿಮತ್ತಾಗಿ ಬಂದಿರುವ ಬ್ರಾಹ್ಮಣರ ತಪಸ್ಸೋ ಆಗಿರಬೇಕು. ಇಲ್ಲದಿದ್ದರೆ ನನ್ನೆದುರು ನಿಂತು ಯುದ್ಧ ಮಾಡುವ ಸಾಮರ್ಥ್ಯ ಬರಲಾರದು.

ಆದ್ದರಿಂದ ನೀನಾರು ? ಎಂದಾಗ ಅರ್ಜುನನು ಕರ್ಣನಿಗೆ ನಾನು ಯಾರೇ ಇರಲಿ; ನಿನಗೆ ಸಾಧ್ಯವಿದ್ದರೆ ಬಾಣಗಳನ್ನು ಬಿಡು, ಇಲ್ಲದಿದ್ದರೆ ಯುದ್ಧದಿಂದ ನಿವೃತ್ತನಾಗು ಎಂದನು. ಆಗ ಕರ್ಣನು ಬ್ರಾಹ್ಮಣರಿಂದ ಕೂಡಿ ಯುದ್ಧ ಮಾಡಿ ನನಗೇನೂ ಪ್ರಯೋಜನವಿಲ್ಲ ಎಂದು ಹೇಳಿ (ನೆಪಹೇಳಿ) ದುರ್ಯೋಧನಾದಿಗಳಿಂದ ಕೂಡಿಕೊಂಡು ಊರಿಗೆ ಹೋದನು. ಭೀಮಸೇನದೇವರಾದರೂ ಅರ್ಜುನನಿಂದ ಕೂಡಿಕೊಂಡು ದ್ರೌಪದೀ ಸಹಿತವಾಗಿ ಉಳಿದ ಮೂರು ಸೋದರರ ಹತ್ತಿರಕ್ಕೆ ಬಂದರು. ಅಲ್ಲಿಂದ ಧರ್ಮರಾಜನು ತನ್ನ ಮುಂದೆ ನಕುಲಸಹದೇವರನ್ನು ತನ್ನ ಹಿಂಬದಿಯಲ್ಲಿ ಭೀಮಾರ್ಜುನರನ್ನು ಇಟ್ಟುಕೊಂಡು ದ್ರೌಪದೀಸಮೇತನಾಗಿ ತಾವು ಇಳಿದು ಕೊಂಡಿದ್ದ ಕುಂಬಾರನ ಮನೆಗೆ ಬಂದನು. ಭಿಕ್ಷೆಯನ್ನು ತಂದಿದ್ದೇವೆ ಎಂದು ತಾಯಿಯಃ ಎದುರು ಅವರೆಲ್ಲ ಹೇಳಿದಾಗ ಎಲ್ಲರೂ ತಿನ್ನಿರಿ ಎಂದು ಕುಂತಿಯು ಹೇಳಿದ ನಂತರ ಇವರ ಕಡೆ ಮುಖ ಮಾಡಿದಾಗ ಕನ್ಯಾಳನ್ನು ನೋಡಿದಳು.

ಪ್ರಾಮಾದಿಕಂ ಚವಚನಂನಮೃಷಾತಯೋಕ್ತಂಪ್ರಾಯೋಹಿ ತೇನಕಥಮೇತದಿತಿಸ್ಮ ಚಿಂತಾ ॥
ತೇಷಾಂಬಭೂವ ವಸುದೇವಸುತೋಹರಿಶ್ಚ ತತ್ರಾಜಗಾಮ ಪರಮೇಣಹಿಸೌಹೃದೇನ ॥ ೧೪೩ ॥

ತಯಾ – ಆ ಕುಂತಿಯಿಂದ ಉಕ್ತಂ – ಹೇಳಲ್ಪಟ್ಟ ಪ್ರಾಮಾದಿಕಂ – ಅಜ್ಞಾನಪೂರ್ವಕವಾದ ವಚನಂಚ – ಮಾತೂಕೂಡ ಹಿ – ಯಾವ ಕಾರಣದಿಂದ ಮೃಷಾ – ಸುಳ್ಳು ನಭವತಿ - ಆಗುವುದಿಲ್ಲವೋ ತೇನ – ಆ ಕಾರಣದಿಂದ ಏತತ್ – ನಮ್ಮೆಲ್ಲರಿಂದ ಒಬ್ಬಾಕೆಯ ಸ್ವೀಕಾರವು ಕಥಂ ಭವೇತ್ – ಹೇಗಾದೀತು ಇತಿ – ಎಂದು ಚಿಂತಾ – ದುಃಖವು ತೇಷಾಂ – ಆ ಪಾಂಡವರಿಗೆ ಬಭೂವ – ಉಂಟಾಯಿತು ತತ್ರ – ಅಲ್ಲಿಗೆ ವಸುದೇವಸುತಃ – ವಸುದೇವನ ಮಗನಾದ ಹರಿಶ್ಚ – ಶ್ರೀಕೃಷ್ಣನೂ ಕೂಡ ಪರಮೇಣ ಸೌಹೃದೇನ – ಉತ್ತಮ ಪ್ರೀತಿಯಿಂದ ಆಜಗಾಮ – ಬಂದನು. ॥ ೧೪೩ ॥

ಸಂಭಾಷ್ಯತೈಃ ಸಭಗವಾನಮಿತಾತ್ಮಶಕ್ತಿಃ ಪ್ರಾಯಾನ್ನಿಜಾಂಪುರಮಮಾಯಮದುಭಿಃ ಸಮಸ್ತೈಃ ॥
ಜ್ಞಾತುಂಚತಾನ್ನಿಶಿ ಸತುದ್ರುಪದಃಸ್ವಪುತ್ರಂ ಪ್ರಾಸ್ಥಾಪಯತ್ಸಚನಿಲೀನ ಇಮಾನಪಶ್ಯತ್ ॥ ೧೪೪ ॥

~~ಅಮಿತಾತ್ಮಶಕ್ತಿಃ – ಅಪರಿಮಿತವಾದ ಸ್ವರೂಪಸಾಮರ್ಥ್ಯವುಳ್ಳ ಸ ಭಗವಾನ್ – ಆ ಪದ್ಮಣ್ಣೈಶ್ವರ್ಯ ಸಂಪನ್ನನಾದ~~
ಶ್ರೀಕೃಷ್ಣನು ತೈಃ – ಆ ಪಾಂಡವರಿಂದ ಸಂಭಾಷ್ಯ – ಸಂಭಾಷಣೆಯನ್ನು ಮಾಡಿ ಸಮಸ್ತೈಃ – ಎಲ್ಲಾ ಯದುಭಿಃ – ಯಾದವರಿಂದ ಅಮಾ – ಕೂಡಿಕೊಂಡು ನಿಜಾಂ ಪುರಂ – ತನ್ನ ಪಟ್ಟಣವಾದ ದ್ವಾರಕೆಯನ್ನು ಕುರಿತು ಪ್ರಾಯಾತ್ – ಹೋದನು ದ್ರುಪದಃ – ಸಾಮಾನ್ಯವಾಗಿ ಯಾಜೋಪಯಾಜರ ಮಾತಿನಿಂದ ತಿಳಿದಿರುವ ದ್ರುಪದನು ತು – ವಿಶೇಷಾಕಾರವಾಗಿ ತಿಳಿಯುವುದಕ್ಕೋಸ್ಕರ ಸ್ವಪುತ್ರಂ – ತನ್ನ ಮಗನಾದ ಧೃಷ್ಟದ್ಯುಮ್ನನನ್ನು ನಿಶಿ – ರಾತ್ರಿಯಲ್ಲಿ ತಾನ್ – ಆ ಪಾಂಡವರನ್ನು ಜ್ಞಾತುಂ – ಯಾರೆಂದು ತಿಳಿಯುವುದಕ್ಕೋಸ್ಕರ ಪ್ರಾಸ್ಥಾಪಯತ್ – ಕಳುಹಿಸಿದನು ಸಚ–ಆ ಧೃಷ್ಟದ್ಯುಮ್ನನು ನಿಲೀನಸ್ಸನ್– ಅಡಗಿಕೊಂಡವನಾಗಿ ಇಮಾನ್ – ಈ ಪಾಂಡವರನ್ನು ಅಪಶ್ಯತ್ – ಕಂಡನು. ॥ ೧೪೪ ॥

ಭಿಕ್ಷಾನ್ನಭೋಜಿನ ಉತೋಭಗಿನೀಂನಿಜಾಂಚ ತತ್ರಾತಿತೃಪ್ತಹೃದಯಾನುಥಯುದ್ಧವಾರ್ತಾಂ ॥
ತೇಷಾಂನಿಶಮ್ಯನದತಾಂ ಘನವದ್ಗಭೀರಂ ಕ್ಷತ್ರೋತ್ತಮಾ ಇತಿಮತಿಂಸಚಕಾರವೀರಃ ॥ ೧೪೫ ॥

ವೀರಃ – ಶೂರನಾದ ಸಃ – ಆ ಧೃಷ್ಟದ್ಯುಮ್ನನು ಭಿಕ್ಷಾನ್ನಭೋಜಿನಃ – ಭಿಕ್ಷೆಯ ಅನ್ನವನ್ನು ಊಟಮಾಡತಕ್ಕ ಪಾಂಡವರನ್ನೂ ಉತೋ - ಹಾಗೆಯೇ ತತ್ರ – ಅಲ್ಲಿ ಅತಿತೃಪ್ತಹೃದಯಾಂ – ಅತ್ಯಂತ ಸಂತುಷ್ಟವಾದ ಮನಸ್ಸುಳ್ಳ ನಿಜಾಂ ಭಗಿನೀಂಚ – ತನ್ನ ತಂಗಿಯನ್ನೂ ಕೂಡ ಅಪಶ್ಯತ್ – ಕಂಡನು ಅಥ – ಅನಂತರ ಘನವತ್–ಮೇಘದಂತೆ ಗಭೀರಂ– ಗಂಭೀರವಾಗಿ ನದತಾಂ – ಧ್ವನಿಗೈಯುವ ತೇಷಾಂ – ಆ ಪಾಂಡವರ ಯುದ್ಧವಾರ್ತಾಂ – ಯುದ್ಧದ ವೃತ್ತಾಂತವನ್ನು ನಿಶಮ್ಯ – ಕೇಳಿ ಕ್ಷತ್ರೋತ್ತಮಾ ಇತಿ – ಇವರು ಕ್ಷತ್ರಿಯ ಶ್ರೇಷ್ಠರೆಂದು ಮತಿಂ–ಬುದ್ಧಿಯನ್ನು ಚಕಾರ–ಮಾಡಿದನು. ॥೧೪೫॥

ಪ್ರಾತಸ್ತುತಸ್ಯಜನಿತುರ್ವಚಸಾ ಪುರೋಧಾಸ್ತ್ವಾಪ್ಯ ಮುಂತ್ರವಿಧಿನಾವರುದಾತ್ತಜೇನ ॥
ಸಂಪೂಜಿತೋಽತಿವಿದುಷಾ ಪ್ರತಿಗೃಹ್ಯತಾಂಶ್ಚ ಪ್ರಾವೇಶಯನ್ನೃಪತಿಗೇಹಮಮೈವಮಾತ್ರಾ ॥ ೧೪೬ ॥

ಪ್ರಾತಃ – ಬೆಳಿಗ್ಗೆ ತಸ್ಯ – ಆ ಧೃಷ್ಟದ್ಯುಮ್ನನ ಜನಿತುಃ – ತಂದೆಯಾದ ದ್ರುಪದನ ವಚಸಾ – ಮಾತಿನಿಂದ ಪುರೋಧಾಃ – ಪುರೋಹಿತರು ಮಂತ್ರವಿಧಿನಾ – ಮಂತ್ರ ವಿಧಾನದಿಂದ ತಾನ್ – ಆ ಪಾಂಡವರನ್ನು ಪ್ರಾಪ್ಯ – ಹೊಂದಿ ಅತಿವಿದುಷಾ – ಅತ್ಯಂತ ಜ್ಞಾನಿಯಾದ ಮರುದಾತ್ಮಜೇನ – ವಾಯುಪುತ್ರನಾದ ಭೀಮನಿಂದ, ಸಂಪೂಜಿತಸ್ಸನ್ – ಪೂಜಿಸಿ ಕೊಳ್ಳಲ್ಪಟ್ಟವನಾಗಿ ಮಾತ್ರಾ – ತಾಯಿಯಾದ ಕುಂತಿಯಿಂದ ಅಮೈವ – ಕೂಡಿಕೊಂಡೇ ತಾನ್ – ಆ ಪಾಂಡವರನ್ನು ಪ್ರತಿಗೃಹ್ಯ – ಕರೆದುಕೊಂಡು, ನೃಪತಿಗೇಹಂ – ರಾಜನ ಮನೆಯನ್ನು ಪ್ರಾವೇಶಯತ್ – ಪ್ರವೇಶ ಮಾಡಿಸಿದನು. ॥ ೧೪೬ ॥

ತಾನಾಗತಾನ್ಸಮಭಿ ಪೂಜ್ಯ ನಿಜಾತ್ಮಜಾಂಚ ವಿಪ್ರಾದಿಯೋಗ್ಯ ಪೃಥಗುಕ್ತಪದಾರ್ಥಜಾತೈಃ ॥
ಪೂರ್ಣಾನ್ ಗೃಹಾಂಶ್ಚತುರ ಏವದದೇಶರಾಜಾತಕ್ರಾಯುಧಾದಿ ಪರಿಪೂರ್ಣಗೃಹಂಚತೇ೭ಗುಃ ॥ ೧೪೭ ॥

ರಾಜಾ – ದ್ರುಪದನು ಆಗತಾನ್ – ಬಂದಿರುವ ತಾನ್ – ಆ ಪಾಂಡವರನ್ನು ನಿಜಾತ್ಮಜಾಂಚ – ತನ್ನ ಮಗಳನ್ನೂ ಕೂಡ ಸಮಭಿಪೂಜ್ಯ – ಚೆನ್ನಾಗಿ ಪೂಜಿಸಿ ವಿಪ್ರಾದಿಯೋಗ್ಯಪೃಥಗುಕ್ತ ಪದಾರ್ಥಜಾತೈಃ – ವಿಪ್ರ–ಬ್ರಾಹ್ಮಣರು ಆದಿಪದದಿಂದ ಕ್ಷತ್ರಿಯ, ವೈಶ್ಯ, ಶೂದ್ರ ಇವರಿಗೆ ಯೋಗ್ಯ – ಯೋಗ್ಯಗಳಾದ ಪೃಥಗುಕ್ತ ಪದಾರ್ಥಜಾತೈಃ – ಪ್ರತ್ಯೇಕವಾಗಿ ಹೇಳಲ್ಪಟ್ಟ ಪದಾರ್ಥಗಳ ಸಮೂಹಗಳಿಂದ ಅಂದರೆ ಅವರ ಸ್ವಭಾವವನ್ನು ಶೋಧಿಸುವುದಕ್ಕೋಸ್ಕರ ಒಂದರಲ್ಲಿ ಅನ್ನಭಕ್ಷ್ಯಾದಿ ಗಳಿಂದ ಮತ್ತೊಂದರಲ್ಲಿ ಆಯುಧಾದಿಗಳಿಂದ, ಇನ್ನೊಂದರಲ್ಲಿ ಧನ, ಫಲಾದಿಗಳಿಂದ ಮತ್ತೊಂದರಲ್ಲಿ ನೇಗಿಲು ಮೊದಲಾದವು ಗಳಿಂದ ಪೂರ್ಣಾನ್ – ತುಂಬಿರುವ ಚತುರಃ – ನಾಲ್ಕು ಸಂಖ್ಯಾಕಗಳಾದ ಗೃಹಾನ್ – ಮನೆಗಳನ್ನು ದಿದೇಶ – ಕೊಟ್ಟನು ತತ್ರ – ಅವುಗಳ ಮಧ್ಯದಲ್ಲಿ ತೇ – ಆ ಪಾಂಡವರು ಆಯುಧಾದಿಪರಿಪೂರ್ಣಗೃಹಂ – ಆಯುಧವೇ ಮೊದಲಾಗಿ ಉಳ್ಳವು ಗಳಿಂದ ಪರಿಪೂರ್ಣವಾದ ಮನೆಯನ್ನು ಅಗುಃ – ಪ್ರವೇಶಿಸಿದರು. ॥ ೧೪೭ ॥

ಚೇಷ್ಟಾಸ್ವರಾಕೃತಿವಿವಕ್ಷಿತ ವೀರ್ಯಶೌರ್ಯ ಪ್ರಾಗಲ್ಭ್ಯಪೂರ್ವಕಗುಣೈಃ ಕ್ಷಿತಿಭರ್ತೃಪುತ್ರಾನ್ ॥
ವಿಜ್ಞಾಯತಾನ್ ದ್ರುಪದವಿತ್ಕಚ ಧರ್ಮಸೂನುಂಪಪ್ರಚ್ಛಕೋ೭ಸಿನರವರ್ಯವದಸ್ವಸತ್ಯಂ ॥ ೧೪೮ ॥

~~ಚೇಷ್ಟಾಸ್ವರಾಕೃತಿವಿವಕ್ಷಿತವೀರ್ಯಶೌರ್ಯಪ್ರಾಗಲ್ಭ್ಯಪೂರ್ವಕಗುಣೈಃ~~ – ಚೇಷ್ಟೆಯು, ಧ್ವನಿಯು, ಆಕಾರವು, ಹೇಳಲಿಕ್ಕೆ ಇಷ್ಟವಾದ ಮಾತು, ವೀರ್ಯವು, ಶೌರ್ಯವು, ಚಾತುರ್ಯ ಇವುಗಳೇ ಮೊದಲಾಗಿ ಉಳ್ಳ ಗುಣಗಳಿಂದ ತಾನ್ – ಆ ಪಾಂಡವರನ್ನು ಕ್ಷಿತಿಭರ್ತೃಪುತ್ರಾನ್ – ರಾಜರ ಮಕ್ಕಳನ್ನಾಗಿ ವಿಜ್ಞಾಯ – ತಿಳಿದು ಧರ್ಮಸೂನುಂ – ಧರ್ಮರಾಜನನ್ನು ಏತ್ಯ – ಹೊಂದಿ ಹೇ ನರವರ್ಯ – ಎಲೋ ಮನುಷ್ಯ ಶ್ರೇಷ್ಠನೇ ತ್ವಂ – ನೀನು ಕೋ೭ಸಿ – ಯಾರಾಗಿದ್ದಿ ಸತ್ಯಂ – ಸತ್ಯವನ್ನು ವದಸ್ವ – ಹೇಳು ಇತಿ – ಎಂದು ಪಪ್ರಚ್ಛ – ಕೇಳಿದನು. ॥ ೧೪೮ ॥

ಭಾ.ಅ. ೧೪೩–೧೪೮ ಕುಂತಿಯು ಪ್ರಾಮಾದಿಕವಾಗಿ ಹೇಳಿದ ಮಾತೂ ಕೂಡ ಸುಳ್ಳಾಗಲಾರದು; ಆದ್ದರಿಂದ ಹೇಗೆ ? ಎಂಬ ಚಿಂತೆ ಅವರೆಲ್ಲರಿಗೂ ಉಂಟಾಯಿತು. ಶ್ರೀಕೃಷ್ಣಪರಮಾತ್ಮನೂ ಕೂಡ ಪ್ರೀತಿಯಿಂದ ಇವರ ಭೇಟಿಯಾಗಲು ಇವರಿರುವ ಸ್ಥಳಕ್ಕೆ ಬಂದು ಮಾತನಾಡಿ ಅಲ್ಲಿಂದ ಹೊರಟು ಸರ್ವ ಯಾದವರಿಂದ ಕೂಡಿಕೊಂಡು ತನ್ನ ದ್ವಾರಕೆಗೆ ಹೋದನು. ದ್ರುಪದನು ತನ್ನ ಮಗಳನ್ನು ಹೊಂದಿದ ಈ ಬ್ರಾಹ್ಮಣರು ಯಾರಿರಬಹುದು ಎಂದು ತಿಳಿಯಲು ಆ ರಾತ್ರಿಯಲ್ಲಿ ತನ್ನ ಮಗನನ್ನು ಕಳಿಸಿದನು. ಅವನು ಬಂದು ಪಾಂಡವರ ಸ್ಥಳದಲ್ಲಿ ಅಡಗಿಕೊಂಡೇ ನಿರೀಕ್ಷಿಸುತ್ತಿದ್ದನು. ಭಿಕ್ಷಾನ್ನವನ್ನು ಊಟಮಾಡಿಕೊಂಡಿರುವ, ಯುದ್ಧವಾರ್ತಾವನ್ನು ಕುಣಿದಾಡುತ್ತಾ, ಗಂಭೀರವಾದ ಗರ್ಜನ ಧ್ವನಿಯಿಂದ ಮಾತಾಡುತ್ತಿರುವ ಈ ಪಾಂಡವರನ್ನು, ಅಲ್ಲಿ ತೃಪ್ತಳಾಗಿರುವ ತಂಗಿ ದ್ರೌಪದಿಯನ್ನೂ ನೋಡಿ ಇವರು ಕ್ಷತ್ರಿಯರೇ ಆಗಿರಬೇಕೆಂದು ಊಹಿಸಿಕೊಂಡು ಹೋದನು. ಪ್ರಾತಃಕಾಲವಾಗುವಾಗ ದ್ರುಪದನು ಪುರೋಹಿತನನ್ನು ಕಳಿಸಿದನು. ಅವನು ಬಂದು ಅತ್ಯಂತ ಜ್ಞಾನಿಯಾದ ಶ್ರೀಭೀಮಸೇನರಿಂದ ಪೂಜಿತನಾಗಿ, ಕುಂತಿ ಸಮೇತವಾಗಿ ಎಲ್ಲರನ್ನು ಕರೆದುಕೊಂಡು ರಾಜಗೃಹವನ್ನು ಕುರಿತು ಹೋದನು, ಬಂದವರನ್ನು ತನ್ನ ಮಗಳನ್ನೂ ಚೆನ್ನಾಗಿ ಸತ್ಕರಿಸಿ ದ್ರುಪದನು ಅವರೆಲ್ಲರಿಗೆ ಇರುವದಕ್ಕಾಗಿ ನಾಲ್ಕು ಗೃಹಗಳನ್ನು ತೋರಿಸಿ ಇವುಗಳ ಪೈಕಿ ಯಾವದರಲ್ಲಿಯೂ ವಾಸ ಮಾಡಬಹುದೆಂದು ಹೇಳಿದನು. ನಾಲ್ಕು ಮನೆಗಳಲ್ಲಿ ಒಂದೊಂದು ಬ್ರಾಹ್ಮಣಾದಿ ನಾಲ್ಕು ವರ್ಣದವರಿಗೆ ಬೇಕಾಗುವ ಸಾಮಗ್ರಿಗಳಿಂದ ಕೂಡಿದ್ದವು.

ಇವರು ಯಾವದನ್ನು ಆರಿಸುತ್ತಾರೆ ನೋಡಿ ಅದರಿಂದ ಇವರ ವರ್ಣದ ಬಗ್ಗೆ ಇನ್ನೂ ಸ್ಪಷ್ಟ ತಿಳಿದುಕೊಳ್ಳಲು ರಾಜನ ಉಪಾಯವಾಗಿತ್ತು. ಆಗ ಪಾಂಡವರು ಕ್ಷತ್ರಿಯ ಯೋಗ್ಯ ಆಯುಧ ಪರಿಪೂರ್ಣ ಗೃಹವನ್ನು ಆರಿಸಿಕೊಂಡರು. ಆಗ ದ್ರುಪದನು ಅವರ ಈ ರೀತಿ ಕಾರ್ಯ, ಸ್ವರ, ಪರಾಕ್ರಮ ಶೌರ್ಯ, ದೇಹಾಕಾರ ಇತ್ಯಾದಿಗಳಿಂದ ಅವರು ಕ್ಷತ್ರಿಯರಾಜ ಪುತ್ರರೇ ಆಗಿರಬೇಕೆಂದು ತಿಳಿದು ಯುಧಿಷ್ಠಿರನ ಹತ್ತಿರ ಬಂದು ನೀವು ಯಾರು ಎಂಬುದನ್ನು ಸತ್ಯವಾಗಿ ಹೇಳು ಎಂದು ಪ್ರಶ್ನಿಸಿದನು.

ಸಪ್ರಾಹಮುಂದಹಸಿತಃ ಕಿಮಿಹಾದ್ಯರಾಜನ್ಪೂರ್ವಂ ಹಿವರ್ಣವಿಷಯೇನ ವಿಶೇಷಉಕ್ತಃ ॥
ಪುತ್ರೀಕೃತೇ ತವಸುತೇನತುಲಕ್ಷ್ಯವೇಧ ಉಕ್ತೋನರೇಂದ್ರಸಮಿತೌ ಸಕೃತೋಽಸ್ಯನೇನ ॥ ೧೪೯ ॥

ಸಃ – ಆ ಧರ್ಮರಾಜನು ಮುಂದಹಸಿತಃಸನ್ – ಸ್ವಲ್ಪ ನಗುವುಳ್ಳವನಾಗಿ ಹೇ ರಾಜನ್ – ಎಲೋ ರಾಜನೇ ಪುತ್ರೀಕೃತೇ – ನಿನ್ನ ಮಗಳಿಗೋಸ್ಕರ ವರ್ಣವಿಷಯೇ – ವಿಪ್ರಕ್ಷತಾದಿವರ್ಣ ವಿಷಯದಲ್ಲಿ ವಿಶೇಷಃ – ಇಂಥವರೇ ಆಗಬೇಕು ಎಂಬ ವಿಶೇಷವು ಪೂರ್ವಂ ನರೇಂದ್ರಸಮಿತೌ – ಹಿಂದೆ ರಾಜರ ಸಭೆಯಲ್ಲಿ ತವ – ನಿನ್ನ ಸುತೇನ – ಮಗನಿಂದ ನೋಕ್ತಃ – ಹೇಳಲ್ಪಟ್ಟಿಲ್ಲ, ಲಕ್ಷ್ಯವೇಧಃ – ಲಕ್ಷ್ಯವೇಧವು ಉಕ್ತಃ – ಹೇಳಲ್ಪಟ್ಟಿದೆ ಸಃ – ಆ ಲಕ್ಷ್ಯವೇಧವು ಅನೇನ – ತಮ್ಮನಿಂದ ಇಹ – ಇಲ್ಲಿ ಕೃತಃ – ಮಾಡಲ್ಪಟ್ಟಿದೆ ಅತಃ – ಆದ್ದರಿಂದ ಅದ್ಯ – ಈಗ ಇಹ – ವರ್ಣವಿಶೇಷವಿಷಯದಲ್ಲಿ ಕಿಂ – ಯಾಕೆ ಕೇಳುತ್ತೀ ಇತಿ – ಎಂದು ಪ್ರಾಹ – ಹೇಳಿದನು, ॥ ೧೪೯ ॥

ಏವಂಬ್ರುವಾಣಮುಥ ತಂಪೃಥಯಾಸಹೈವ ರಾಜಾವದೇತಿಪುನರೇವಯಯಾಚ ಏಷಃ ॥
ಸರ್ವಂ ಪೃಥಾಪ್ಯವದತಾಂ ಸಚತೇನತುಷ್ಟೋವಾಚಂ ಜಗಾದಕೃತಕೃತ್ಯ ಇಹಾಸಮದ್ಯ ॥ ೧೫೦ ॥

ಅಥ – ಅನಂತರ ಪೃಥಯಾ – ಕುಂತಿಯಿಂದ ಸಹೈವ – ಕೂಡಿಕೊಂಡೇ ಏವಂ – ಈ ರೀತಿಯಾಗಿ ಬ್ರುವಾಣಂ – ಹೇಳತಕ್ಕ ತಂ – ಆ ಧರ್ಮರಾಜನನ್ನು ರಾಜಾ – ರಾಜನಾದ ಏಷಃ – ಈ ದ್ರುಪದನು ಪುನಃ—ಮತ್ತೆ ವದ—ಹೇಳು ಇತಿ—ಎಂದು ಯಯಾಚೇ—ಪ್ರಾರ್ಥಿಸಿದನು. ಸಚ—ಆ ಧರ್ಮರಾಜನು ಪೃಥಾಪಿ — ಕುಂತಿಯೂ ಕೂಡ ಸರ್ವಂ—ಎಲ್ಲವನ್ನೂ ಅವದತಾಂ—ಹೇಳಿದರು ತೇನ—ಅದರಿಂದ ತುಷ್ಟಃ—ಸಂತುಷ್ಟನಾದ ದ್ರುಪದನು ಅದ್ಯ—ಈಗ ಅಹಂ—ನಾನು ಇಹ—ಈ ಸ್ವಯಂವರ ವಿಷಯದಲ್ಲಿ ಕೃತಕೃತ್ಯಃ—ಕೃತಾರ್ಥನು ಆಸಂ—ಆದೆನು ಇತಿ—ಎಂದು ವಾಚಂ—ಮಾತನ್ನು ಜಗಾದ—ಹೇಳಿದನು. ॥ ೧೫೦ ॥

ಪಾರ್ಥಾರ್ಥಮೇವಹಿ ಮಯೈಷಕೃತಃಪ್ರಯತ್ನಸ್ತ್ವಂ ಫಲ್ಗುನೋಽನ್ಯ ಉತವಾದ್ಯಕರಂಸುತಾಯಾಃ ॥
ಗೃಹ್ಣಾತ್ವಿತೀರಿತಇಮಂ ಸತುಧರ್ಮಸೂನುರಾಹಸ್ಮ ಸರ್ವಇತಿಮೇಮನಸಿ ಪ್ರರೂಢಂ ॥ ೧೫೧ ॥

ಪಾರ್ಥಾರ್ಥಮೇವ—ಅರ್ಜುನನಿಗೋಸ್ಕರವೇ ಮಯಾ—ನನ್ನಿಂದ ಏಷಃಪ್ರಯತ್ನಃ—ಈ ಪ್ರಯತ್ನವು ಕೃತಃ—ಮಾಡಲ್ಪಟ್ಟಿತು ತ್ವಂ ವಾ—ನೀನಾಗಲೀ ಫಲ್ಗುನೋ ವಾ—ಅರ್ಜುನನಾಗಲೀ ಉತ-ಹಾಗೆಯೇ ಅನ್ಯೋ ವಾ ಭೀಮಾದಿಗಳ ಮಧ್ಯದಲ್ಲಿ ಯಾರೇ ಆಗಲೀ ಅದ್ಯ—ಈಗ ಸುತಾಯಾಃ—ನನ್ನ ಮಗಳ ಕರಂ ಗೃಹ್ಣಾತು—ಪಾಣಿಗ್ರಹಣ ಮಾಡಲಿ ಇತಿ—ಈ ರೀತಿಯಾಗಿ ಈರಿತೇಸತಿ—ದ್ರುಪದನು ಹೇಳುತ್ತಿರಲು ಸತು ಧರ್ಮಸೂನುಃ—ಆ ಧರ್ಮರಾಜನಾದರೂ ಇಮಂ—ಈ ದ್ರುಪದನನ್ನು ಕುರಿತು ಮೇ—ನನ್ನ ಮನಸಿ—ಮನಸ್ಸಿನಲ್ಲಿ ಸರ್ವೇ—ಎಲ್ಲರೂ ಅಂದರೆ ನಾವು ಐದು ಮಂದಿಯೂ ಪಾಣಿಗ್ರಹಣವನ್ನು ಮಾಡಬೇಕು ಇತಿ—ಎಂದು ಪ್ರರೂಢಂ—ನಿಶ್ಚಯಿಸಲ್ಪಟ್ಟಿದೆ (ಅಂಕುರಿತವಾಗಿದೆ) ಇತಿ—ಎಂದು ಆಹ ಸ್ಮ—ಹೇಳಿದನು. ॥ ೧೫೧ ॥

ನಾತ್ರಪ್ರಮಾಣಮುಹೃದಿ ಪ್ರತಿಭಾತ್ಯಥಾಪಿ ಧರ್ಮಾಚಲಾವುಮುತಿರ್ಹಿತದೇವಮಾನಂ ॥
ಇತ್ಯುಕ್ತವತ್ಯಪಿ ಸಹೈವಸುತೇನರಾಜಾನೈವೇಚ್ಛದತ್ರ ಭಗವಾನಗಮುಚ್ಚಕೃಷ್ಣಃ ॥ ೧೫೨ ॥

ಅತ್ರ – ಐವರು ಒಬ್ಬಳ ಪಾಣಿಗ್ರಹಣ ಮಾಡುವುದರಲ್ಲಿ ಪ್ರಮಾ – ಪ್ರಮಾಣವು ಮಮ – ನನ್ನ ಹೃದಿ – ಮನಸ್ಸಿನಲ್ಲಿ ನ ಪ್ರತಿಭಾತಿ – ಹೊಳೆಯುವುದಿಲ್ಲ ಅಥಾಪಿ ಹಾಗಾದರೂ ಹಿ – ಯಾವ ಕಾರಣದಿಂದ ಮಮ – ನನ್ನ ಮತಿಃ – ಬುದ್ಧಿಯು ಧರ್ಮಾಚಲಾ – ಧರ್ಮದಲ್ಲಿ ಚಲಿಸುವುದಿಲ್ಲ ಅಂದರೆ ಧರ್ಮದಲ್ಲಿಯೇ ದೃಢವಾದದ್ದೋ ಅಧರ್ಮದಲ್ಲಿ ಪ್ರವರ್ತಿಸುವುದಿಲ್ಲವೋ ತಸ್ಮಾತ್ – ಆದ್ದರಿಂದ ತದೇವ – ಧರ್ಮಾಚಲತ್ವವೇ ಮಾನಂ – ಪ್ರಮಾಣವು ಇತಿ – ಈ ರೀತಿಯಾಗಿ ಉಕ್ತವತ್ಯಪಿ – ಧರ್ಮರಾಜನು ಹೇಳಿದರೂ ಕೂಡ ರಾಜಾ – ದ್ರುಪದನು ಸುತೇನ – ಮಗನಾದ ಧೃಷ್ಟದ್ಯುಮ್ನನಿಂದ ಸಹೈವ – ಕೂಡಿ ಕೊಂಡೇ ನೈವೇಚ್ಛತ್ – ಐವರು ಪಾಣಿಗ್ರಹಣ ಮಾಡಿಕೊಳ್ಳುವುದನ್ನು ಇಚ್ಛಿಸಲಿಲ್ಲ ಅತ್ರ – ಇಲ್ಲಿಗೆ ಭಗವಾನ್ – ಷಡ್ಗುಣೈಶ್ವರ್ಯ ಸಂಪನ್ನರಾದ ಕೃಷ್ಣಃ – ವೇದವ್ಯಾಸರು ಅಗಮತ್ ಬಂದರು. ॥ ೧೫೨ ॥

ವ್ಯಾಸಂತಮೀಕ್ಷ್ಯ ಭಗವಂತಮಗಣ್ಯಪೂರ್ಣನಿತ್ಯಾವ್ಯಯಾತ್ಮಗುಣಮಾಶು ಸಮಸ್ತ ಏವ ॥
ನತ್ವಾಭಿಪೂಜ್ಯವರಪೀಠಗತಸ್ಯ ಚಾಜ್ಞಾಮಾದಾಯ ಚೋಪವಿವಿಶುಃ ಸಹಿತಾಸ್ತದಂತೇ ॥ ೧೫೩ ॥

ಸಮಸ್ತೇ – ಎಲ್ಲರೂ ಅಗಣ್ಯಪೂರ್ಣನಿತ್ಯಾವ್ಯಯಾತ್ಮಗುಣಂ – ಅಪರಿಮಿತಗಳಾದ, ಪೂರ್ಣಗಳಾದ, ನಾಶವಿಲ್ಲದ, ಹ್ರಾಸವಿಲ್ಲದ, ಸ್ವರೂಪಭೂತಗಳಾದ ಜ್ಞಾನಾನಂದಾದಿಗುಣಗಳುಳ್ಳ ಭಗವಂತಂ – ಪೂಜ್ಯರಾದ ತಂ ವ್ಯಾಸಂ – ಆ ವೇದ ವ್ಯಾಸದೇವರನ್ನು ಈಕ್ಷ್ಯ – ನೋಡಿ ನತ್ವಾ – ನಮಸ್ಕರಿಸಿ ಅಭಿಪೂಜ್ಯ – ಪೂಜಿಸಿ ವರಪೀಠಗತಸ್ಯ – ಉತ್ತಮಾಸನದಲ್ಲಿ ಕುಳಿತಿರುವ ವ್ಯಾಸರ ಆಜ್ಞಾಂ – ಅಪ್ಪಣೆಯನ್ನು ಆದಾಯ – ಸ್ವೀಕರಿಸಿ ಸಹಿತಾಸ್ಸಂತಃ – ಮಿಲಿತರಾಗಿ ತದಂತೇ – ವೇದ ವ್ಯಾಸರ ಸಮೀಪದಲ್ಲಿ ಉಪವಿವಿಶುಃ – ಕುಳಿತರು. ॥ ೧೫೩ ॥

ಭಾ.ಅ. ೧೪೯–೧೫೩ ಧರ್ಮರಾಜನು 'ರಾಜನೇ, ಈ ಮೊದಲು ಸ್ವಯಂವರದ ಕರಾರು (ನಿಯಮ)ಗಳನ್ನು ಹೇಳುವಾಗ ನಿನ್ನ ಮಗ ವರ್ಣದ ಬಗ್ಗೆ ಯಾವ ಮಾತನ್ನೂ ಹೇಳಿಲ್ಲ; ಕೇವಲ ಮತ್ಸ್ಯ ಭೇದನದ ಬಗ್ಗೆ ಹೇಳಿದ್ದಾನೆ. ಅದನ್ನು ಇವನು (ಅರ್ಜುನನು) ಪೂರೈಸಿದ್ದಾನೆ. ಹೀಗಿರುವಾಗ ಈಗ್ಯಾಕೆ ವರ್ಣದ ಮಾತಾಡುತ್ತಿ' ? ಎಂದನು. ಆದರೂ ಸಹ ದ್ರುಪದನು ಪುನಃ ಪುನಃ ಪ್ರಾರ್ಥಿಸಲು ಕುಂತಿಯೂ, ಧರ್ಮರಾಜನೂ ತಾವು ಪಾಂಡವರು ಎಂಬ ವಿಷಯವನ್ನು ವಿವರವಾಗಿ ಹೇಳಿದರು. ಆಗ ಸಂತುಷ್ಟನಾದ ರಾಜನು ಇಂದಿಗೆ ನನ್ನ ಜನ್ಮ ಸಾರ್ಥಕವಾಯಿತು. ಉದ್ದೇಶ ಸಫಲವಾಯಿತು. ನಿಮ್ಮ ಐವರಲ್ಲಿ ಯಾರಾದರೂ ನನ್ನ ಮಗಳನ್ನು ಸ್ವೀಕರಿಸಬಹುದು ಎಂದನು. ಆಗ ಧರ್ಮರಾಜನು ನಾವೆಲ್ಲರೂ ಸ್ವೀಕರಿಸಬೇಕು ಎಂದು ನನ್ನ ಮನಸ್ಸಿನಲ್ಲಿ ವಿಚಾರ ಹುಟ್ಟಿದೆ. ಒಬ್ಬ ಕನ್ಯೆಯನ್ನು ಐವರು ಪುರುಷರು ಸ್ವೀಕರಿಸುವ ಬಗ್ಗೆ ಪ್ರಮಾಣ (ಶ್ರುತಿ, ಸ್ಮೃತಿ) ಆಧಾರವು ಹೊಳೆಯುತ್ತಿಲ್ಲವಾದರೂ, ನನ್ನ ಮನಸ್ಸಿನಲ್ಲಿ ಅಧರ್ಮದ ಇಚ್ಛೆ ಬರುವದೇ ಇಲ್ಲ; ಈ ಇಚ್ಛೆ ಬಂದಿದೆ ಎಂದ ಮೇಲೆ ಇದು ಅಧರ್ಮವಲ್ಲ; ಧರ್ಮವೇ ಆಗಿದೆ ಎಂದು ನನ್ನ ಅಭಿಪ್ರಾಯ ಎಂದು ಅಂದನು. ಆದರೂ ಐವರಿಗೆ ಕೊಡಲು ರಾಜನು ಸಮ್ಮತಿಸಲಿಲ್ಲ. ಆಗ ಶ್ರೀವೇದವ್ಯಾಸದೇವರು ಅಲ್ಲಿಗೆ ಬಂದರು. ಆಗ ಎಲ್ಲರೂ ಅವರನ್ನು ಭಕ್ತಿಪೂರ್ವಕ ಪೂಜಿಸಿ ಶ್ರೇಷ್ಠಪೀಠದಲ್ಲಿ ಕೂಡಿಸಿ, ಅವರ ಅಪ್ಪಣೆ ಪಡೆದು ಅವರ ಸಮೀಪದ ಆಸನಗಳಲ್ಲಿ ಕುಳಿತಿದ್ದಾರೆ.

ಅವ—ನಿನ್ನ ಮಗಳಾದ ದ್ರೌಪದಿಯು ಪಂಚದೇವಿಯರ ಸ್ವರೂಪಳಾದ್ದರಿಂದ ಪತಿಗಳಿಗೆ ದಾನಮಾಡುವುದು ಅಧರ್ಮವಾಗುವುದಿಲ್ಲವೆಂದು ತಿಳಿಸಲು ಯುಧಿಷ್ಠಿರಾದಿಗಳ ಸ್ವರೂಪವನ್ನು ಹೇಳುತ್ತಾರೆ.

ಕೃಷ್ಣಸ್ತದಾಹ ನೃಪತಿಂಪ್ರತಿದೇಹಿಕನ್ಯಾಂ ಸರ್ವೇಭ್ಯ ಏವ ವೃಷವಾಯುಪುರಂದರಾಹಿಂ ॥
ನಾಸತ್ಯದಸ್ರಸಹಿತಾ ಇಮ ಏವಇಂದ್ರಾಃ ಪೂರ್ವೇಚಸಂಪ್ರತಿತನಶ್ಚ ಹರೇರ್ಹಿಪಶ್ಚಾತ್ ॥ ೧೫೪ ॥

ಕೃಷ್ಣಃ – ವೇದವ್ಯಾಸರು ತದಾ – ಆಗ ನೃಪತಿಂ – ದ್ರುಪದನನ್ನು ಕುರಿತು ಸರ್ವೇಭ್ಯಃ – ಪಂಚಪಾಂಡವರಿಗೆ ಕನ್ಯಾಂ – ನಿನ್ನ ಮಗಳನ್ನು ಪ್ರತಿದೇಹಿ – ದಾನಮಾಡು ಇತಿ – ಎಂದು ಆಹ – ಹೇಳಿದರು. ಹರೇಃ – ಯಜ್ಞನಾಮಕ ಪ್ರಾಥಮಿಕ ಇಂದ್ರನ ದೆಸೆಯಿಂದ ಪಶ್ಚಾತ್ – ಅನಂತರದಲ್ಲಿ ನಾಸತ್ಯದಸ್ರಸಹಿತಾಃ – ಅಶ್ವಿನೀ ದೇವತೆಗಳಿಂದ ಕೂಡಿದ ವೃಷವಾಯು, ಪುರಂದರಾಃ – ಯಮ, ವಾಯು, ಪುರಂದರರೆಂಬ ಯೇ – ಯಾವ ಪೂರ್ವೇ ಇಂದ್ರಾಃ – ಮೊದಲಿನ ಇಂದ್ರರೋ ಯಃ –

ಸಂಪ್ರತಿತನಶ್ಚ – ಈಗಿನ ಇಂದ್ರನೋ ತೇ – ಅವರು ಇಮ ಏವಹಿ – ಈ ಪಂಚಪಾಂಡವರಷ್ಟೆ. ಇಲ್ಲಿ ಪುರಂದರ ಪದದಿಂದ ಹಿಂದಿನ ಕಲ್ಪದ ಇಂದ್ರನನ್ನು ಇಟ್ಟುಕೊಳ್ಳಬೇಕು. ಅವನಿಗೇನೆ ಈಗಿನ ವೈವಸ್ವತ ಮನ್ವಂತರದಲ್ಲಿ ಇಂದ್ರಪದವಿ ಪ್ರಾಪ್ತವಾದ್ದರಿಂದ ಸಂಪ್ರತಿತನಶ್ಚ ಎಂದು ಹೇಳಿದ್ದು ಹೀಗೆ ಸಂಖ್ಯೆಯಿಂದ ೬ ಇಂದ್ರರಾದಾಗ್ಯೂ ೬ನೆಯ ಮತ್ತು ೭ ನೆಯ ಇಂದ್ರನು ಒಬ್ಬನೇ ಆದ್ದರಿಂದ ಪಂಚೇಂದ್ರರೆಂದು ಹೇಳಿದ್ದು. ॥ ೧೫೪ ॥

ಏಷಾಂಸ್ತ್ರಿಯಶ್ಚನಿಖಿಲಾ ಅಪಿಚೈಕದೇಹಾಃ ಪುತ್ರೀತವೈವ ನತತೋಽತ್ರವಿರುದ್ಧತಾಹಿ ॥
ಇತ್ಯುಕ್ತವತ್ಯಪಿಯದಾ ದ್ರುಪದಶ್ಚ ಕಾರ ಸಂವಾದಿನೀಂನಧಿಯಮೇನಮುಹಾಹಕೃಷ್ಣಃ ॥ ೧೫೫ ॥

ಏಷಾಂ ಈ ಪಂಚಪಾಂಡವರ ನಿಖಿಲಾ ಅಪಿ ಸ್ತ್ರಿಯಃ – ಎಲ್ಲಾ ಸ್ತ್ರೀಯರೂ ಕೂಡ ಏಕದೇಹಾಃ – ಒಂದೇ ಶರೀರವುಳ್ಳವರಾಗಿ ತವ – ನಿನ್ನ ಪುತ್ರೀ – ಮಗಳಾಗಿ ಹುಟ್ಟಿದ್ದಾರೆ ತತಃ ಆದ್ದರಿಂದ ಅತ್ರ – ಐವರ ಪ್ರಾಣಿಗ್ರಹಣ ವಿಷಯದಲ್ಲಿ ವಿರುದ್ಧತಾ ಧರ್ಮವಿರೋಧವು ನ – ಇರುವುದಿಲ್ಲ ಇತಿ – ಈ ರೀತಿಯಾಗಿ ಉಕ್ತವತ್ಯಪಿ – ಹೇಳುತ್ತಿದ್ದರೂ ಕೂಡ ಯದಾ – ಯಾವಾಗ ದ್ರುಪದಃ – ದ್ರುಪದನು ಸಂವಾದಿನೀಂ ಧಿಯಂ – ನೀವು ಹೇಳಿದಂತೆ ಇವರಿಗೆ ನನ್ನ ಮಗಳನ್ನು ಕೊಡುವೆನೆಂಬ ಸಮ್ಮತಿಯುಕ್ತವಾದ ಬುದ್ಧಿಯನ್ನು ನಚಕಾರ – ಮಾಡಲಿಲ್ಲವೋ ತದಾ – ಆಗ ಕೃಷ್ಣಃ – ವೇದವ್ಯಾಸರು ಏನಂ – ಈ ದ್ರುಪದನನ್ನೂ ಕುರಿತು ಆಹ – ಹೇಳಿದರು. ॥ ೧೫೫ ॥

ದಿವ್ಯಂಹಿದರ್ಶನಮಿದಂ ತವದತ್ತಮದ್ಯಪಶ್ಯಾಶು ಪಾಂಡುತನಯಾನ್ದಿವಿಸಂಸ್ಥಿತಾಂಸ್ತ್ವಂ ॥
ಏತಾಂಚತೇದುಹಿತರಂ ಸಹತೈಃಪೃಥಕ್‌ಸ್ಥಾಂತಲ್ಲಕ್ಷಣೈಃ ಸಹ ತತಃಕುರುತೇಯಥೇಷ್ಟಂ ॥ ೧೫೬ ॥

ತವ – ನಿನಗೆ ಅದ್ಯ – ಈಗ ದಿವ್ಯಂದರ್ಶನಂ – ದಿವ್ಯದೃಷ್ಟಿಯು ದತ್ತಂ – ಕೊಡಲ್ಪಟ್ಟಿದೆ ದಿವಿ – ಸ್ವರ್ಗದಲ್ಲಿ ಸಂಸ್ಥಿತಾನ್ – ಮೂಲರೂಪದಿಂದಿರತಕ್ಕ ಪಾಂಡುತನಯಾನ್ – ಪಾಂಡುರಾಜನ ಮಕ್ಕಳನ್ನು ತ್ವಂ – ನೀನು ಆಶು ಬೇಗನೇ ಪಶ್ಯ – ನೋಡು ತೇ – ನಿನ್ನ ಏತಾಂ ದುಹಿತರಂ – ಈ ಮಗಳನ್ನು ತಲ್ಲಕ್ಷಣೈಃ – ಆ ಭಾರತೀ, ಶ್ಯಾಮಲಾ, ಶಚೀ, ಉಪಸ್ ಇವರ ಲಕ್ಷಣಗಳಿಂದ, ಸಹ – ಕೂಡಿಕೊಂಡು, ತೈಃ—ವಾಯು, ಇಂದ್ರಾದಿ ರೂಪಗಳಿಂದಸಹ–ಕೂಡಿಕೊಂಡು ಪೃಥಕ್‌ಸ್ಥಾಂ–ಪ್ರತ್ಯೇಕವಾಗಿ ಭಾರತ್ಯಾದಿ ಪಂಚರೂಪಗಳಿಂದ ಇರತಕ್ಕವಳನ್ನಾಗಿ ಪಶ್ಯ – ನೋಡು ತತಃ – ಅನಂತರ ತೇ – ನಿನಗೆ ಯಥೇಷ್ಟಂ – ಇಷ್ಟವಿದ್ದಂತೆ ಕುರು – ಮಾಡು (ಇತಿ – ಎಂದು ಕೃಷ್ಣಃ ವ್ಯಾಸರು ಆಹ – ಹೇಳಿದರು.) ॥ ೧೫೬ ॥

ಇತ್ಯುಕ್ತವಾಕ್ಯಮನುತಾನ್ಸ ದದರ್ಶರಾಜಾ ಕೃಷ್ಣಪ್ರಸಾದಬಲತೋ ದಿವಿತಾದೃಶಾಂಶ್ಚ ॥
ಏತಾನ್ನಿಶಾಮ್ಯಚರಣೌ ಜಗದೀಶಿತುಶ್ಚ ಭೀತೋಜಗಾಮಶರಣಂ ತದನಾದರೇಣ ॥ ೧೫೭ ॥

ಸ ರಾಜಾ – ಆ ದ್ರುಪದನು ಇತಿ – ಈ ರೀತಿಯಾಗಿ ಉಕ್ತವಾಕ್ಯಂ – ಹೇಳಲ್ಪಟ್ಟ ವ್ಯಾಸರ ಮಾತನ್ನು ಅನು – ಅನುಸರಿಸಿ ಕೃಷ್ಣಪ್ರಸಾದಬಲತಃ – ವೇದವ್ಯಾಸರ ಅನುಗ್ರಹದ ಸಾಮರ್ಥ್ಯದಿಂದ ದಿವಿ ಸ್ವರ್ಗದಲ್ಲಿ ತಾದೃಶಾನ್ – ವ್ಯಾಸರು ಹೇಳಿದ ಲಕ್ಷಣವುಳ್ಳ ಪಾಂಡವರನ್ನೂ ಭಾರತ್ಯಾದಿಗಳನ್ನೂ ದದರ್ಶ — ನೋಡಿದನು ಏತಾನ್ – ಇವರನ್ನು ನಿಶಾಮ್ಯ – ನೋಡಿ ತದನಾದರೇಣ ಹಿಂದೆ ವ್ಯಾಸರ ಮಾತಿನಲ್ಲಿ ವಿಶ್ವಾಸ ಮಾಡದಿರುವುದರಿಂದ ಭೀತಸ್ಸನ್ – ಹೆದರಿದವನಾಗಿ ಜಗದೀಶಿತುಃ – ಲೋಕಕ್ಕೆ ಸ್ವಾಮಿಯಾದ ವ್ಯಾಸರ ಚರಣೌ – ಪಾದಗಳೆರಡನ್ನು ಶರಣಂ ಜಗಾಮ – ಮೊರೆ ಹೊಂದಿದನು. ॥ ೧೫೭ ॥

ದತ್ತ್ವಾಽಭಯಂ ಸ ಭಗವಾನ್ದ್ರುಪದಸ್ಯ ಕಾರ್ಯೇತೇನೋಮಿತಿ ಸ್ಮಕಥಿತೇ ಸ್ವಯಮೇವಸರ್ವಾಂ ॥
ವೈವಾಹಿಕೀಂಕೃತಿ ಮಥವ್ಯದಧಾಚ್ಚಧೌಮ್ಯಯುಕ್ತಃ ಕ್ರಮೇಣ ಜಗೃಹುರ್ನಿಖಿಲಾಶ್ಚಪಾಣಿಂ ॥ ೧೫೮ ॥

ಭಗವಾನ್ - ಷಡ್ಗುಣೈಶ್ವರ್ಯ ಸಂಪನ್ನನಾದ ಸಃ – ಆ ವೇದವ್ಯಾಸರು ದ್ರುಪದಸ್ಯ – ದ್ರುಪದನಿಗೆ ಅಭಯಂ – ಅಭಯವನ್ನು ದತ್ವಾ – ಕೊಟ್ಟು ಕಾರ್ಯೇ – ವಿವಾಹ ಕಾರ್ಯದ ಬಗ್ಗೆ ಓಂ – ಹಾಗೆಯೇ ಹಾಗಲಿ ಇತಿ - ಎಂದು ತೇನ – ಆ ದ್ರುಪದನಿಂದ ಕಥಿತೇ ಸತಿ ಹೇಳಲ್ಪಡುತ್ತಿರಲು ಸ್ವಯಮೇವ – ವೇದವ್ಯಾಸರು ತಾನೇ ಸರ್ವಾಂ – ಎಲ್ಲಾ ವೈವಾ

ಹಿಕೇಂ – ವಿವಾಹ ಸಂಬಂಧಿಯಾದ ಕೃತಿಂ – ಕೆಲಸವನ್ನು ಧೌಮ್ಯಯುಕ್ತಸ್ಸನ್—ಧೌಮ್ಯಾಚಾರ್ಯರಿಂದ ಕೂಡಿದವರಾಗಿ ವ್ಯದಧಾತ್ – ಮಾಡಿದರು ಅಥ—ಅನಂತರ ಕ್ರಮೇಣ—ಧರ್ಮರಾಜಾದಿ ಕ್ರಮದಿಂದ ನಿಖಿಲಾಃ—ಎಲ್ಲಾ ಪಾಂಡವರೂ ಪಾಣಿಂ ಜಗೃಹುಃ—ದ್ರೌಪದಿಯ ಪಾಣಿಗ್ರಹಣ ಮಾಡಿದರು. ॥ ೧೫೮ ॥

ಪಾಂಚಾಲಕೇಷುಚ ಮಹೋತ್ಸವಆಸರಾಜಾ ತುಷ್ಟೋಽಭವತ್ಸಹ ಸುತೈಶ್ಚನಿಜೈಶ್ಚ ಸರ್ವೈಃ ॥
ಪೌರೈಶ್ಚ ಜಾನಪದಿಕೈಶ್ಚಯಥೈವ ರಾಮೇದತ್ವಾಸುತಾಂ ಜನಕಆಪಮುದಂತತೋಽನು ॥ ೧೫೯ ॥

ಪಾಂಚಾಲಕೇಷು – ಪಾಂಚಾಲ ದೇಶಗಳಲ್ಲಿ ಮಹೋತ್ಸವಃ – ದೊಡ್ಡ ಉತ್ಸವವು ಆಸ – ಆಯಿತು ರಾಜಾ – ದ್ರುಪದನು ನಿಜೈಃ – ತನ್ನ ಸರ್ವೈಃ – ಎಲ್ಲಾ ಸುತೈಶ್ಚ – ಮಕ್ಕಳಿಂದಲೂ ಪೌರೈಶ್ಚ – ಪಟ್ಟಣಿಗರಿಂದಲೂ ಜಾನಪದಿಕೈಶ್ಚ – ದೇಶದಲ್ಲಿರತಕ್ಕವರಿಂದಲೂ ಸಹ – ಕೂಡಿಕೊಂಡು ತುಷ್ಟಃ – ಸಂತುಷ್ಟನು ಅಭವತ್ – ಆದನು ಯಥಾ – ಹೇಗೆ ಜನಕಃ – ಜನಕರಾಜನು ರಾಮೇ – ಶ್ರೀರಾಮಚಂದ್ರನಲ್ಲಿ ಸುತಾಂ – ಮಗಳಾದ ಸೀತೆಯನ್ನು ದತ್ವಾ – ಕೊಟ್ಟು ಮುದಂ– ಸಂತೋಷವನ್ನು ಆಪ – ಹೊಂದಿದನೋ ತಥಾ – ಹಾಗೆಯೇ ತತಃ – ಆ ಜನಕನ ಆನಂದಕ್ಕಿಂತ ಅನು – ಅನಂತರದಲ್ಲಿ ಪಾಂಡವರಿಗೆ ಮಗಳನ್ನು ಕೊಟ್ಟು ಸಂತೋಷಗೊಂಡನು. ॥ ೧೫೯ ॥

ಉದ್ವಾಹ್ಯತತ್ರನಿವಸತ್ಸುಚ ಪಾಂಡವೇಷು ಶ್ರುತ್ಯೈವರಾಮಸಹಿತಃ ಸಹಯಾದವೈಶ್ಚ ॥
ಆದಾಯಪಾರಿಬರ್ಹಂ ಬಹುಲಂಸಕೃಷ್ಣ ಆಯಾನ್ಮುದೈವಪೃಥಯಾ ಸಹಿತಾಂಶ್ಚಪಾರ್ಥಾನ್ ॥ ೧೬೦ ॥

ತತ್ರ – ಆ ಪಾಂಚಾಲ ನಗರದಲ್ಲಿ ಪಾಂಡವೇಷು – ಪಾಂಡವರು ಉದ್ವಾಹ್ಯ – ಮದುವೆಮಾಡಿಕೊಂಡು ನಿವಸತ್ಸು ಸತ್ಸು – ವಾಸಮಾಡಿಕೊಂಡಿರುತ್ತಿರಲು ರಾಮಸಹಿತಃ – ಬಲರಾಮನಿಂದ ಕೂಡಿದ ಸಃ ಕೃಷ್ಣಃ – ಆ ಶ್ರೀಕೃಷ್ಣನು ಯಾದವೈಃ– ಯಾದವರಿಂದ ಸಹ – ಕೂಡಿಕೊಂಡು ಶ್ರುತ್ಯೈವ – ವಿವಾಹ ಮಹೋತ್ಸವವನ್ನು ಕೇಳಿಯೇ ಬಹುಲಂ – ಬಹಳವಾದ ಪಾರಿಬರ್ಹಂ – ವಿವಾಹ ಕಾಲದಲ್ಲಿ ತಮ್ಮವರಿಗೆ ಕೊಡಲು ಯೋಗ್ಯವಾದ ವಸ್ತುವನ್ನು ಆದಾಯ – ಹಿಡಿದುಕೊಂಡು ಪೃಥಯಾ – ಕುಂತಿಯಿಂದ ಸಹಿತಾನ್ – ಕೂಡಿದ ಪಾರ್ಥಾನ್ – ಪಾಂಡವರನ್ನು ಕುರಿತು ಮುದೈವ – ಸಂತೋಷದಿಂದಲೇ ಆಯಾತ್ – ಬಂದನು. ॥ ೧೬೦ ॥

ಭಾ.ಅ. ೧೫೪–೧೬೦ ದ್ರುಪದನೇ, ಈ ಪಂಚ ಪಾಂಡವರೆಂದರೆ ಹಿಂದೆ ಒಂದೊಂದು ಮನ್ವಂತರದಲ್ಲಿ ಇಂದ್ರ ಪದವಿಯನ್ನು ಆಳಿದ ಯಮಧರ್ಮ, ವಾಯುದೇವರು, ಪುರಂದರ, ಅಶ್ವಿನೀದೇವತೆಗಳೇ ಆಗಿದ್ದಾರೆ. ಮೊದಲ ಮನ್ವಂತರದಲ್ಲಿ ಯಜ್ಞರೂಪಿ ಪರಮಾತ್ಮನಾಳಿದರೆ ನಂತರ ಇವರೊಬ್ಬೊಬ್ಬರಂತೆ ಆಳಿದ್ದಾರೆ. ಪುರಂದರನೆಂಬವನು ೭ನೆಯ ಮನ್ವಂತರದಲ್ಲಿ ಇಂದ್ರ ಪದವಿಯನ್ನು ಆಳಿ ಈ ೭ನೆಯದರಲ್ಲಿಯೂ ಆಳುತ್ತಿದ್ದಾನೆ, ಅವನೇ ಅರ್ಜುನ. ಇವರೆಲ್ಲರ ಪತ್ನಿಯರಾದ ಶ್ಯಾಮಲಾ, ಭಾರತೀ, ಶಚೀ, ಉಷಸ್ ಎಂಬವರು ಒಂದು ದೇಹದಲ್ಲಿ ಸೇರಿಕೊಂಡು ನಿನ್ನ ಮಗಳಾಗಿ ದ್ರೌಪದೀ ರೂಪದಲ್ಲಿದ್ದಾರೆ. ಆದ್ದರಿಂದ ದ್ರೌಪದಿಯನ್ನು ಈ ಐವರಿಗೆ ಕೊಡುವದರಿಂದ ಅವರವರ ಹೆಂಡತಿಯನ್ನು ಅವರವರಿಗೆ ಲಗ್ನಮಾಡಿ ಕೊಟ್ಟಂತೆಯೇ ಆದ್ದರಿಂದ ಯಾವ ದೋಷವೂ ಇಲ್ಲ; ಲಗ್ನಮಾಡಿಕೊಡು ಎಂದು ಶ್ರೀವೇದವ್ಯಾಸದೇವರು ಅಂದರೂ ಕೂಡ ದ್ರುಪದನು ವಿವಾಹ ಮಾಡಿಕೊಡಲು ಮನಸ್ಸು ಮಾಡಲಿಲ್ಲ. ಆಗ ಶ್ರೀವೇದವ್ಯಾಸರು 'ನೋಡು, ನೀನು ಪಾಂಡವರು ಸ್ವರ್ಗಲೋಕದಲ್ಲಿರುವದನ್ನು ನಿನ್ನ ಮಗಳು ಅವರವರ ಜೊತೆಗೆ ಅವರ ಪತ್ನಿಯರಾದ ಶ್ಯಾಮಲಾ, ಭಾರತೀ, ಶಚೀ, ಉಷಸ್ ಇವರ ಲಕ್ಷಣಗಳಿಂದ ಕೂಡಿರುವದನ್ನು ನೋಡು' ಎಂದು ತೋರಿಸಿದರು. ದ್ರುಪದರಾಜನು ಶ್ರೀವೇದವ್ಯಾಸರ ಅನುಗ್ರಹದಿಂದ ಆ ಪ್ರಕಾರನೋಡಿ ತಾನು ಶ್ರೀವೇದವ್ಯಾಸದೇವರು ಹೇಳಿದಾಗ ಅನಾದರ ಮಾಡಿದ್ದು ಅಪರಾಧವಾಯಿತು ಎಂದು ಕೊಂಡು ಭೀತನಾಗಿ ಅವರ ಪಾದಗಳಿಗೆ ಸಾಷ್ಟಾಂಗ ಪ್ರಣಾಮಮಾಡಿ ಮೊರೆಹೊಕ್ಕನು. ಆಗ ಶ್ರೀವೇದವ್ಯಾಸದೇವರು ಅವನಿಗೆ ಅಭಯಕೊಟ್ಟು, ಅವನು ವಿವಾಹ ಮಾಡಿಕೊಡಲು ಒಪ್ಪಿದಾಗ ತಾನೇ ಸ್ವತಃ ಶ್ರೀಧೌಮ್ಯಾಚಾರ್ಯರಿಂದ ಕೂಡಿಕೊಂಡು ವೈವಾಹಿಕ ವಿಧಿಗಳನ್ನು ಮಾಡಿಸಿದರು. ಪಾಂಡವರು ಕ್ರಮವಾಗಿ (ಜ್ಯೇಷ್ಠತೆಯ) ಶ್ರೀದ್ರೌಪದೀದೇವಿಯರ ಪಾಣಿಗ್ರಹಣ ಮಾಡಿದರು. ಆಗ ಪಾಂಚಾಲದೇಶದಲ್ಲಿ ದೊಡ್ಡ ಉತ್ಸವವೇ ಆಯಿತು. ಎಲ್ಲರೂ ಬಹಳ ಸಂತೋಷಪಟ್ಟಿದ್ದಾರೆ. ರಾಜನು ತನ್ನ ಎಲ್ಲ ಪ್ರಜೆಗಳು, ಬಾಂಧವರು, ಪುತ್ರರು ಎಲ್ಲರಿಂದ ಸಮೇತವಾಗಿ ಇಷ್ಟ

ಸಂತೋಷಪಟ್ಟಿದ್ದಾನೆ ಅಂದರೆ ಅವನ ಸಂತೋಷವೇ ಜನಕರಾಜನು ಶ್ರೀಸೀತಾದೇವಿಯನ್ನು ಶ್ರೀರಾಮದೇವರಿಗೆ ದಾನ ಮಾಡಿಕೊಟ್ಟಾಗ ಪಟ್ಟ ಸಂತೋಷದ ನಂತರ ಸ್ಥಾನವನ್ನು ಹೊಂದುತ್ತದೆ. ಪಾಂಡವರು ದ್ರೌಪದೀಯನ್ನು ಹೊಂದಿ ಪಾಂಚಾಲ ನಗರದಲ್ಲಿದ್ದಾರೆಂಬ ವಾರ್ತಾವನ್ನು ಕೇಳಿದ ಶ್ರೀಕೃಷ್ಣಪರಮಾತ್ಮನು ಅವರಿಗೆಲ್ಲ ಕೊಡುವದಕ್ಕಾಗಿ ಉಡುಗೊರೆಯನ್ನು ಹಿಡಿದುಕೊಂಡು ಅಲ್ಲಿಗೆ ಅಣ್ಣನಿಂದ ಸಮೇತವಾಗಿ ಬಂದನು.

ದೃಷ್ಟ್ವೈವತಂ ಮುನುಮುದುರಾಶು ಕುರುಪ್ರವೀರಾ ಆಶ್ಲಿಷ್ಯಕೃಷ್ಣಮಥನೇಮುರಸೌ ಚಕೃಷ್ಣಾಂ ॥
ದೃಷ್ಟ್ವಾಪ್ಯದಾಯು ಗೃಹಯೋಗ್ಯ ಸಮಸ್ತಭಾಂಡಂ ಸೌವರ್ಣಮೇಭ್ಯಉರುಭೂಷಣ ಮಚ್ಯುತೋ ದಾತ್ ॥ ೧೬೧ ॥

ಕುರುಪ್ರವೀರಾಃ – ಕುರುಶ್ರೇಷ್ಠರಾದ ಪಾಂಡವರು ಆಶು – ಕೂಡಲೇ ತಂ – ಆ ಕೃಷ್ಣನನ್ನು ದೃಷ್ಟ್ವೈವ – ನೋಡಿಯೇ ಮುಮುದುಃ – ಸಂತೋಷಪಟ್ಟರು ಅಥ – ಅನಂತರ ಕೃಷ್ಣಂ – ಶ್ರೀಕೃಷ್ಣನನ್ನು ಆಶ್ಲಿಷ್ಯ – ಆಲಿಂಗಿಸಿ ನೇಮುಃ – ನಮಸ್ಕರಿಸಿದರು ಅಚ್ಯುತಃ ನಾಶವಿಲ್ಲದ ಶ್ರೀಕೃಷ್ಣನು ಕೃಷ್ಣಾಂ – ದ್ರೌಪದಿಯನ್ನು ದೃಷ್ಟ್ವಾ – ನೋಡಿ ಸೌವರ್ಣಂ – ಭಂಗಾರಮಯವಾದ ಗೃಹಯೋಗ್ಯಸಮಸ್ತಭಾಂಡಂ – ಮನೆಗೆ ಯೋಗ್ಯವಾದ ಎಲ್ಲಾ ಪಾತ್ರೆಗಳನ್ನು ಪ್ರದಾಯ ದ್ರೌಪದಿಗೆ ಕೊಟ್ಟು ಏಭ್ಯಃ – ಈ ಪಾಂಡವರೆಲ್ಲರಿಗೂ ಉರುಭೂಷಣಂ – ಬಹಳ ಆಭರಣಗಳನ್ನು ಅದಾತ್ – ಕೊಟ್ಟನು. ॥ ೧೬೧ ॥

ದೇವಾಂಗಯೋಗ್ಯ ಶುಭಕುಂಡಲಹಾರ ಮೌಲಿಕೇಯೂರವಸ್ತ್ರ ಸಹಿತಾನ್ಯುರುಭೂಷಣಾನಿ ॥
ಷಣ್ಣಾಂಪೃಥಕ್ ಪೃಥಗದಾತ್ಪೃಥಗೇವ ಯೋಗ್ಯಾನ್ಯನ್ಮದ್ದದಾವಥ ಪಿತೃಷ್ವಸುರಾತ್ಮಯೋಗ್ಯಂ ॥ ೧೬೨ ॥

ಶ್ರೀಕೃಷ್ಣನು ಷಣ್ಣಾಂ - ದ್ರೌಪದಿಯೇ ಮೊದಲಾದ ಆರು ಜನರಿಗೆ ಪೃಥಗೇವ ಯೋಗ್ಯಾನಿ – ಪ್ರತ್ಯೇಕವಾಗಿ ಯೋಗ್ಯಗಳಾದ ಅಂದರೆ ಅವರವರ ಅವಯವಗಳಿಗೆ ಸರಿಯಾಗುವ ದೇವಾಂಗ ಯೋಗ್ಯಶುಭಕುಂಡಲಹಾರಮೌಲಿಕೇಯೂರವಸ್ತ್ರ ಸಹಿತಾನ್ – ದೇವತೆಗಳ ಅವಯವಗಳಿಗೆ ಯೋಗ್ಯಗಳಾದ, ಶೋಭನಗಳಾದ ಕರ್ಣಾಭರಣಗಳು, ಸರಗಳು, ಕಿರೀಟಗಳು, ಬಾಹುಭೂಷಣಗಳಾದ ವಂಕಿಗಳು, ವಸ್ತ್ರಗಳೂ ಇವುಗಳಿಂದ ಸಹಿತಗಳಾದ ಉರುಭೂಷಣಾನಿ – ಉತ್ಕೃಷ್ಟಗಳಾದ ಆಭರಣಗಳನ್ನು ಪೃಥಕ್‌ಪೃಥಕ್ – ಪ್ರತ್ಯೇಕ ಪ್ರತ್ಯೇಕವಾಗಿ ಅದಾತ್ – ಕೊಟ್ಟನು ಅಥ – ಅನಂತರ ಪಿತೃಷ್ವಸುಃ – ಸೋದರತ್ತೆಯಾದ ಕುಂತಿಗೆ ಆತ್ಮಯೋಗ್ಯಂ – ವಿಧವೆಯಾದ್ದರಿಂದ ವಿಧವೆಯರಿಗೆ ಯೋಗ್ಯವಾದ ಅನ್ಯತ್ – ಬೇರೆ ಆಭರಣವನ್ನು ಅದಾತ್ – ಕೊಟ್ಟನು. ॥ ೧೬೨ ॥

ರತ್ನಾನಿಗೋಗಜ ತುರಂಗರಥಾನ್ಸುವರ್ಣ ಭಾರಾನ್ಬಹೂನಪಿ ದದಾವಥಚಾಶಿಷೋಽಗ್ರ್ಯಾಃ ॥
ವ್ಯಾಸೋಽಪ್ಯದಾದಿಹಪರತ್ರಚ ಪಾರ್ಷತೋಽಪಿ ಭೂಷಾರಥಾಶ್ವಗಜರತ್ನ ಸುಕಾಂಚನಾನಿ ॥ ೧೬೩ ॥

ಶ್ರೀಕೃಷ್ಣನು ರತ್ನಾನಿ – ರತ್ನಗಳನ್ನೂ ಗೋಗಜ ತುರಂಗರಥಾನ್ – ಗೋವುಗಳನ್ನೂ, ಆನೆಗಳನ್ನೂ, ಕುದುರೆಗಳನ್ನೂ ರಥಗಳನ್ನೂ ಬಹೂನ್ — ಬಹಳಗಳಾದ ಸುವರ್ಣಭಾರಾನ್ – ಇಪ್ಪತ್ತು ತೊಲೆಯಷ್ಟು ತೂಕದ ಭರಿಗಾರಗಳನ್ನೂ ದದೌ – ಕೊಟ್ಟನು ಅಥ - ಅನಂತರ ವ್ಯಾಸೋಽಪಿ – ವೇದವ್ಯಾಸರೂ ಕೂಡ ಇಹ—ಈ ಲೋಕದಲ್ಲಿಯೂ ಪರತ್ರಚ—ಪರಲೋಕದಲ್ಲಿಯೂ ಅಗ್ರ್ಯಾಃ—ಶ್ರೇಷ್ಠಗಳಾದ ಆಶಿಷಃ—ಆಶೀರ್ವಾದಗಳನ್ನು ಅದಾತ್—ಕೊಟ್ಟರು ಪಾರ್ಷತೋಽಪಿ—ದ್ರುಪದನೂ ಕೂಡ ಭೂಷಾರಥಾಶ್ವಗಜರತ್ನಸುಕಾಂಚನಾನಿ—ಆಭರಣಗಳನ್ನೂ ರಥಗಳನ್ನೂ, ಕುದುರೆಗಳನ್ನೂ, ಆನೆಗಳನ್ನೂ ರತ್ನಗಳನ್ನೂ ಒಳ್ಳೇ ಭಂಗಾರಗಳನ್ನೂ ಅದಾತ್—ಕೊಟ್ಟನು. ॥ ೧೬೩ ॥

ದಾಸೀಶ್ಚ ದಾಸಸಹಿತಾಃ ಶುಭರೂಪವೇಷಾಃ ಸಾಹಸ್ರಶೋದದತುರತ್ರಹರಿರ್ನೃಪಶ್ಚ ॥
ತಾಸಾಂವಿಚಿತ್ರವಸನಾನ್ಯುರುರತ್ನಮಾಲಾಃ ಪ್ರತ್ಯೇಕಶೋದದತುರಪ್ಯುರು ಭೂಷಣಾನಾಂ ॥ ೧೬೪ ॥

ಹರಿಃ—ಶ್ರೀಕೃಷ್ಣನು ನೃಪಶ್ಚ—ದ್ರುಪದರಾಜನೂ ಕೂಡ ಅತ್ರ—ಈ ವಿವಾಹೋತ್ಸವ ಕಾಲದಲ್ಲಿ ಶುಭರೂಪವೇಷಾಃ—ಶೋಭನಗಳಾದ ದೇಹಕಾಂತಿಯೂ, ವಸ್ತ್ರಾದ್ಯಲಂಕಾರಗಳೂ ಇವುಗಳುಳ್ಳ ಸಹಸ್ರಶಃ—ಸಹಸ್ರಸಂಖ್ಯಾಕರಾದ

ದಾಸಸಹಿತಾಃ – ಭೃತ್ಯರಿಂದ ಕೂಡಿದ ದಾಶೀಶ್ಚ – ಸೇವಕಿಯರನ್ನೂ ಕೂಡ ದದತುಃ – ಕೊಟ್ಟರು ಉರುಭೂಷಣಾನಾಂ – ಉತ್ಕೃಷ್ಟವಾದ ಆಭರಣಗಳುಳ್ಳ ತಾಸಾಂ – ಆ ದಾಸಿಯರಿಗೆ ವಿಚಿತ್ರವಸನಾನಿ – ಆಶ್ಚರ್ಯಕರಗವಾದ ವಸ್ತ್ರಗಳನ್ನು ಉರುರತ್ನ ಮಾಲಾಃ – ಉತ್ತಮ ರತ್ನಗಳ ಮಾಲಿಕೆಗಳನ್ನೂ ಪ್ರತ್ಯೇಕಶಃ – ಪ್ರತ್ಯೇಕವಾಗಿ ದದತುಃ – ಕೊಟ್ಟರು. ॥ ೧೬೪ ॥

ಮಾಸಾನ್ಬಹೂನಪಿ ವಿಹೃತ್ಯ ಸಹೈವಪಾರ್ಥೈಃ ಕೃಷ್ಣೋಯಯೌ ಯದುಪುರೀಂ ಸಹಿತೋಽಗ್ರಜೇನ ॥
ಅಂತರ್ಹಿತೇ ಭಗವತಿಪ್ರತತೋರುಶಕ್ತೌ ವ್ಯಾಸೇಚ ವತ್ಸರಮಿಹೋಷುರಿಮೇ ಚಪಾರ್ಥಾಃ ॥ ೧೬೫ ॥

ಕೃಷ್ಣಃ – ಶ್ರೀಕೃಷ್ಣನು ಪಾರ್ಥೈಃ – ಪಾಂಡವರಿಂದ ಸಹೈವ – ಕೂಡಿಕೊಂಡೇ ಬಹೂನ್ಮಾಸಾನಪಿ - ಅನೇಕ ತಿಂಗಳು ಗಳವರೆಗೆ ವಿಹೃತ್ಯ – ಕ್ರೀಡಿಸಿ ಅಗ್ರಜೇನ – ಅಣ್ಣನಾದ ಬಲರಾಮನಿಂದ ಸಹಿತಃಸನ್ – ಕೂಡಿದವನಾಗಿ ಯದುಪುರೀಂ – ದ್ವಾರಕಾಪಟ್ಟಣಕ್ಕೆ ಯಯೌ – ಹೋದನು ಪ್ರತತೋರುಶಕ್ತೌ – ಚೆನ್ನಾಗಿ ವ್ಯಾಪ್ತಗಳಾದ ಉತ್ಕೃಷ್ಟ ಸಾಮರ್ಥ್ಯವುಳ್ಳ ಭಗವತಿ – ಪೂಜ್ಯರಾದ ವ್ಯಾಸೇಚ - ವೇದವ್ಯಾಸರೂ ಕೂಡ ಅಂತರ್ಹಿತೇಸತಿ – ಕಣ್ಮರೆಯಾಗುತ್ತಿರಲು ಇಮೇಪಾರ್ಥಾಃ – ಈ ಪಾಂಡವರು ಇಹ – ಈ ಪಾಂಚಾಲ ನಗರದಲ್ಲಿ ವತ್ಸರಂ - ಒಂದು ವರ್ಷದ ಕಾಲದವರೆಗೆ ಊಷುಃ – ವಾಸ ಮಾಡಿ ದರು. ॥ ೧೬೫ ॥

ಭಾ.ಅ. ೧೬೧–೧೬೫ ಶ್ರೀಕೃಷ್ಣಪರಮಾತ್ಮನು ಬಂದಾಗ ಪಾಂಡವರೆಲ್ಲರೂ ಸಂತೋಷದಿಂದ ಆಲಿಂಗಿಸಿ ಕೊಂಡು, ಸಾಷ್ಟಾಂಗ ಪ್ರಣಾಮ ಮಾಡಿದರು. ಶ್ರೀಕೃಷ್ಣನು ದ್ರೌಪದೀದೇವಿಗೆ ಮನೆಗೆ ಬೇಕಾಗುವ ಎಲ್ಲ ಪಾತ್ರಗಳನ್ನು ಸುವರ್ಣದ್ದನ್ನೇ ಕೊಟ್ಟದ್ದಲ್ಲದೇ, ದೇವತೆಗಳಿಗೆ ಯೋಗ್ಯವಾದ ಕಿರೀಟ ಹಾರ, ಕುಂಡಲ ಬಾಹುಭೂಷಣ ಇತ್ಯಾದಿಗಳನ್ನು ದ್ರೌಪದಿಸಮೇತ ಎಲ್ಲರಿಗೂ ಕೊಟ್ಟನು. ಕುಂತೀದೇವಿಗೂ ಅವಳಿಗೆ ಯೋಗ್ಯವಾದ ವಸ್ತ್ರವನ್ನು ಕೊಟ್ಟಿದ್ದಾನೆ. ರತ್ನಗಳು, ಆನೆಗಳು, ಕುದುರೆಗಳು, ರಥಗಳು, ಆಕಳುಗಳು ಇವನ್ನೆಲ್ಲವನ್ನೂ ಶ್ರೀಕೃಷ್ಣನೂ, ಶ್ರೀವೇದವ್ಯಾಸರೂ ಕೊಟ್ಟರು. ಇಬ್ಬರೂ ಸರ್ವಾಭಿವೃದ್ಧಿಯ (ಐಹಿಕ, ಪಾರಲೌಕಿಕ) ಆಶೀರ್ವಾದಗಳನ್ನೂ ಮಾಡಿದ್ದಾರೆ. ದ್ರುಪದರಾಜನಾದರೂ ಅನೇಕ ಆಭರಣ ಗಳನ್ನೂ, ಆಭರಣ ಸಹಿತರಾದ ದಾಸ-ದಾಸಿಯರನ್ನು ಸಹಸ್ರ-ಸಹಸ್ರ ಸಂಖ್ಯೆಯಲ್ಲಿ ಕೊಟ್ಟಿದ್ದಾನೆ. ಶ್ರೀಕೃಷ್ಣನು ಪಾಂಡವರ ಜೊತೆಗೆ ಅನೇಕ ತಿಂಗಳುಗಳವರೆಗೆ ಆನಂದದಿಂದ ಇದ್ದು, ಶ್ರೀಬಲರಾಮನಿಂದ ಕೂಡಿಕೊಂಡು ದ್ವಾರಕೆಗೆ ಹೋದನು. ಶ್ರೀವ್ಯಾಸದೇವರೂ ಕೂಡ ಹೋಗಿದ್ದಾರೆ. ಪಾಂಡವರು ನಂತರವೂ ಒಂದು ವರ್ಷ ಅಲ್ಲಿಯೇ ಇದ್ದಾರೆ.

ಅವ — ಶ್ರೀಕೃಷ್ಣನು ಬರುವ ಮೊದಲು ನಡೆದ ಯುದ್ಧವನ್ನು ಹೇಳುತ್ತಾರೆ.

ವೈಚಿತ್ರವೀರ್ಯತನಯಾಃ ಸಹಸೌ ಬಲೇನ ಕರ್ಣೇನಸಿಂಧು ಪತಿನಾರಥಹಸ್ತಿಯೋಧೈಃ ॥
ಭೂರಿಶ್ರವಃಪ್ರಭೃತಿಭಿಶ್ಚ ಸಹೈವಹಂತುಂ ಪಾಂಚಾಲರಾಜಮುಗುರೇತ್ಯ ಪುರೀಂಪುನಸ್ತೇ ॥ ೧೬೬ ॥

ವೈಚಿತ್ರವೀರ್ಯತನಯಾಃ – ಧೃತರಾಷ್ಟ್ರನ ಪುತ್ರರಾದ ದುರ್ಯೋಧನಾದಿಗಳು ಸೌಬಲೇನ – ಸುಬಲದೇಶದ ರಾಜನಾದ ಶಕುನಿಯಿಂದಲೂ ಕರ್ಣೇನ – ಕರ್ಣನಿಂದಲೂ ಸಿಂಧುಪತಿನಾ – ಸಿಂಧುದೇಶದ ರಾಜನಾದ ಸೈಂಧವನಿಂದಲೂ, ರಥಹಸ್ತಿ ಯೋಧೈಃ – ರಥಗಳೂ, ಆನೆಗಳೂ, ಕಾಲಾಳುಗಳೂ ಇವರಿಂದಲೂ ಭೂರಿಶ್ರವಃ ಪ್ರಭೃತಿಭಿಶ್ಚ – ಭೂರಿಶ್ರವನೇ ಮೊದಲಾಗಿ ಉಳ್ಳವರಿಂದಲೂ ಸಹೈವ ಕೂಡಿಕೊಂಡೇ ಪುರೀಂ – ತಮ್ಮ ಪಟ್ಟಣವಾದ ಹಸ್ತಿನಾವತಿಯನ್ನು ಏತ್ಯ – ಸ್ವಯಂವರಾ ನಂತರ ಹೊಂದಿ ತೇ – ಆ ದುರ್ಯೋಧನಾದಿಗಳು ಪಾಂಚಾಲರಾಜಂ – ಪಾಂಚಾಲ ದೇಶದ ರಾಜನಾದ ದ್ರುಪದನನ್ನು ಹಂತುಂ – ಕೊಲ್ಲಲು ಪುನಃ – ಮತ್ತೊಮ್ಮೆ ಪುರೀಂ – ಪಾಂಚಾಲ ನಗರವನ್ನು ಅಗುಃ – ಹೊಂದಿದರು. ॥ ೧೬೬ ॥

ತೈರರ್ದಿತೇಸ್ವಪುರ ಆಶುಸಸೋಮಕಾನಾಂ ರಾಜಾಸುತೈಃಸಹ ಸಸೈನಿಕಉದ್ಗತೋಽಭೂತ್ ॥
ತೇಷಾಂಚತಸ್ಯಚ ಬಭೂವನುಹಾನ್ವಿನುರ್ದಃ ಪುತ್ರೌಚತಸ್ಯ ನಿಹತೌ ವಿಧುತಾಶ್ಚಸೇನಾಃ ॥ ೧೬೭ ॥

ತೈಃ - ಆ ದುರ್ಯೋಧನಾದಿಗಳಿಂದ ಆಶು – ಕೂಡಲೇ ಸ್ವಪುರೇ – ತನ್ನ ಪಟ್ಟಣವು ಅರ್ದಿತೇಸತಿ – ಪೀಡಿಸಲ್ಪಡು ತ್ತಿರಲು ಸೋಮಕಾನಾಂ – ಸೋಮಕರಿಗೆ ರಾಜಾ – ಅರಸನಾದ ಸಃ – ಆ ದ್ರುಪದನು ಸುತೈಃ – ತನ್ನ ಮಕ್ಕಳಿಂದ ಸಹ –

ಕೂಡಿಕೊಂಡು ಸಸೈನಿಕಸ್ಸನ್ — ಸೈನ್ಯದಿಂದಲೂ ಕೂಡಿದವನಾಗಿ ಉದ್ಗತೋಽಭೂತ್ — ಹೊರಟನು ತೇಷಾಂ — ಆ ದುರ್ಯೋಧನಾದಿಗಳಿಗೂ ತಸ್ಯಚ — ಆ ದ್ರುಪದನಿಗೂ ಕೂಡ ಮಹಾನ್ವಿಮರ್ದಃ — ದೊಡ್ಡಯುದ್ಧವು ಬಭೂವ — ಆಯಿತು ತಸ್ಯ — ಆ ದ್ರುಪದರಾಜನ ಪುತ್ರೌ — ಚಿತ್ರ, ಚಿತ್ರಕೇತು ಎಂಬ ಇಬ್ಬರು ಮಕ್ಕಳು ನಿಹತೌ — ಕೊಲ್ಲಲ್ಪಟ್ಟರು ಸೇನಾಶ್ಚ — ಸೈನ್ಯಗಳೂ ಕೂಡ ವಿದ್ರುತಾಃ — ಓಡಿಸಲ್ಪಟ್ಟವು. ॥ ೧೬೭ ॥

ಚಿತ್ರೋಹತೇಸಮರ ಆಶುಸಚಿತ್ರಕೇತೌ ಧಾವತ್ಸು ಸೈನಿಕವರೇಷುಚ ಪಾರ್ಷತಸ್ಯ ॥
ಪಾರ್ಥಾರಥೈರಭಿಯಯುಧೃತಚಾಪಬಾಣಾ ವೈಚಿತ್ರವೀರ್ಯ ತನಯಾನ್ರವಿಸೂನುಯುಕ್ತಾನ್ ॥೧೬೮॥

ಸಚಿತ್ರಕೇತೌ — ಚಿತ್ರಕೇತುವಿನಿಂದ ಕೂಡಿದ ಚಿತ್ರೇ — ಚಿತ್ರನೆಂಬವನು ಸಮರೇ — ಯುದ್ಧದಲ್ಲಿ ಆಶು — ಕೂಡಲೇ ಹತೇಸತಿ — ಕೊಲ್ಲಲ್ಪಡುತ್ತಿರಲು ಪಾರ್ಷತಸ್ಯ — ದ್ರುಪದನ ಸೈನಿಕವರೇಷು — ಸೈನ್ಯದ ಮುಖಂಡರು ಧಾವತ್ಸುಸತ್ಸು — ಓಡಿ ಹೊಗುತ್ತಿರಲು ಪಾರ್ಥಾಃ — ಪಾಂಡವರು ಧೃತಚಾಪಬಾಣಾಃಸಂತಃ — ಧರಿಸಲ್ಪಟ್ಟ ಬಿಲ್ಲುಬಾಣಗಳುಳ್ಳವರಾಗಿ ರಥೈಃ — ರಥಗಳಿಂದ ರವಿಸೂನುಯುಕ್ತಾನ್ — ಸೂರ್ಯಪುತ್ರನಾದ ಕರ್ಣನಿಂದ ಕೂಡಿದ ವೈಚಿತ್ರವೀರ್ಯತನಯಾನ್ — ಧೃತರಾಷ್ಟ್ರನ ಮಕ್ಕಳಾದ ದುರ್ಯೋಧನಾದಿಗಳನ್ನು ಕುರಿತು ಅಭಿಯಯುಃ — ಎದುರಾಗಿ ಬಂದರು. ॥ ೧೬೮ ॥

ತೈಸ್ತೇಷುಪಂಚಸು ಸಮುಂಪ್ರತಿಯೋಧಯತ್ಸು ಭೂರಿಶ್ರವಾಃ ಸರವಿಜೋವಿರಥಂಚಕಾರ ॥
ಶಕ್ರಾತ್ಮಜಂ ತದನುಪರ್ವತಸನ್ನಿಕಾಶಂ ದೋರ್ಭ್ಯಾಂತುಮಾರುತಿರುರುಂ ತರುಮುದ್ಬಬರ್ಹ ॥ ೧೬೯ ॥

ತೈಃ — ಆ ದುರ್ಯೋಧನಾದಿಗಳಿಂದ ಸಮುಂ — ಕೂಡಿಕೊಂಡು ತೇಷು ಪಂಚಸು — ಆ ಪಂಚಪಾಂಡವರು ಪ್ರತಿಯೋಧಯತ್ಸುಸತ್ಸು - ಯುದ್ಧಮಾಡುತ್ತಿರಲು ಸರವಿಜಃ — ಕರ್ಣನಿಂದ ಕೂಡಿದ ಭೂರಿಶ್ರವಾಃ — ಭೂರಿಶ್ರವನು ಶಕ್ರಾತ್ಮಜಂ — ಇಂದ್ರನ ಮಗನಾದ ಅರ್ಜುನನನ್ನು ವಿರಥಂ — ರಥರಹಿತನನ್ನಾಗಿ ಚಕಾರ — ಮಾಡಿದನು ತದನು — ಅನಂತರ ಮಾರುತಿಃ — ವಾಯುಪುತ್ರನಾದ ಭೀಮನು ದೋರ್ಭ್ಯಾಂ — ಎರಡು ಕೈಗಳಿಂದ ಪರ್ವತಸನ್ನಿಕಾಶಂ—ಪರ್ವತಕ್ಕೆ ಸದೃಶವಾದ ಉರುಂ ತರುಂ—ದೊಡ್ಡ ಮರವನ್ನು ಉದ್ಬಬರ್ಹ — ಕಿತ್ತನು. ॥ ೧೬೯ ॥

ಆಯಾಂತಮೀಕ್ಷ್ಯ ತರುಹಸ್ತಮಿಮಂ ಸವೀರಸೂನುಂ ಸುಯೋಧನಮುಖಾನಿಖಿಲಾಃ ಸಕರ್ಣಾಃ ॥
ಭೂರಿಶ್ರವಾಃ ಶಕುನಿಭೂರಿಜಯದ್ರಥಾಶ್ಚ ಸರ್ವೇಪಿದುದ್ರುವು ರಥೋವಿವಿಶುಃಪುರಂಸ್ವಂ ॥ ೧೭೦ ॥

ಸಕರ್ಣಾಃ — ಕರ್ಣನಿಂದ ಕೂಡಿದ ಸುಯೋಧನಮುಖಾಃ ನಿಖಿಲಾಃ — ದುರ್ಯೋಧನನೇ ಮೊದಲಾಗಿ ಉಳ್ಳವರೆಲ್ಲರೂ ಭೂರಿಶ್ರವಾಃ — ಭೂರಿಶ್ರವನು ಶಕುನಿ ಭೂರಿ ಜಯದ್ರಥಾಶ್ಚ — ಶಕುನಿಯು, ಭೂರಿಯು, ಸೈಂಧವನು ಇವರೂ ಕೂಡ ಸರ್ವೇಪಿ — ಎಲ್ಲರೂ ಕೂಡ ತರುಹಸ್ತಂ — ಕೈಯಲ್ಲಿ ಮರವುಳ್ಳ ಆಯಾಂತಂ — ಎದುರಾಗಿ ಬರತಕ್ಕ ಇಮಂ — ಈ ಸವೀರಸೂನುಂ—ವಾಯುಪುತ್ರನಾದ ಭೀಮನನ್ನು ಈಕ್ಷ್ಯ—ನೋಡಿ ದುದ್ರುವುಃ—ಓಡಿ ಹೋದರು ಅಥೋ—ಅನಂತರ ಸ್ವಂಪುರಂ—ತಮ್ಮ ಪಟ್ಟಣವನ್ನು ವಿವಿಶುಃ—ಪ್ರವೇಶಿಸಿದರು. ॥ ೧೭೦ ॥

ಭಾ.ಅ. ೧೬೬-೧೭೦ ದುರ್ಯೋಧನಾದಿ ಕೌರವರು ಪಾಂಚಾಲ ರಾಜನ ಮೇಲೆ ಸಿಟ್ಟಿನಿಂದಲೂ ಪಾಂಡವರ ಉತ್ಕರ್ಷವನ್ನು ಸಹಿಸಲಾಗದೆಯೂ ಪುನಃ ಕರ್ಣ, ಶಕುನಿ, ಜಯದ್ರಥ, ಭೂರಿಶ್ರವಸ್ ಮೊದಲಾದ ವೀರರಿಂದ ಕೂಡಿಕೊಂಡು, ಚತುರಂಗ ಸೈನ್ಯದಿಂದಲೂ ಕೂಡಿ ಪಾಂಚಾಲ ರಾಜನನ್ನು ಕೊಲ್ಲುವ ಇಚ್ಛೆಯಿಂದ ಯುದ್ಧಕ್ಕೆ ಬಂದರು. ಪಾಂಚಾಲ ನಗರವನ್ನು ಹಾಳು ಮಾಡಲು ಪ್ರಾರಂಭಿಸಿದಾಗ ದ್ರುಪದನು ಪುತ್ರಸಮೇತನಾಗಿ ಸೈನ್ಯಸಹಿತನಾಗಿ ಯುದ್ಧಕ್ಕೆ ಬಂದನು. ದೊಡ್ಡ ಯುದ್ಧವಾಗಿದೆ. ಈ ಯುದ್ಧದಲ್ಲಿ ಅವನ ಮಕ್ಕಳಾದ ಚಿತ್ರ ಮತ್ತು ಚಿತ್ರಕೇತು ಇಬ್ಬರು ಸತ್ತರು. ಸೈನಿಕರು ಓಡುತ್ತಿದ್ದಾರೆ. ಆಗ ಪಾಂಡವರು ಸನ್ನದ್ಧರಾಗಿ ಯುದ್ಧಕೆ ಬಂದರು. ಯುದ್ಧ ನಡೆದಾಗ ಭೂರಿಶ್ರವಸ್‌ನು ಕರ್ಣನಿಂದ ಕೂಡಿಕೊಂಡು ಅರ್ಜುನನ ರಥವನ್ನು ನಾಶಪಡಿಸಿದನು. ಆಗ ಶ್ರೀಭೀಮಸೇನ ದೇವರು ಪರ್ವತದಂತಿರುವ ದೊಡ್ಡ ಗಿಡವನ್ನು ಎರಡು ಕೈಗಳಿಂದ ಕಿತ್ತಿ ಹಿಡಿದುಕೊಂಡು ಬರುವದನ್ನು ನೋಡಿದ ದುರ್ಯೋಧನ, ಕರ್ಣ ಭೂರಿಶ್ರವಸ್, ಶಕುನಿ,

ಭೂರಿ, ಜಯದ್ರಥ ಎಲ್ಲರೂ ತಮ್ಮ ಹಸ್ತಿನಾವತಿಗೇ ಓಡಿ ಹೋಗಿದ್ದಾರೆ (ಇದೊಂದು ಮಹತ್ವದ ಪ್ರಸಂಗ ಶ್ರೀಭೀಮಸೇನ ದೇವರ ಪರಾಕ್ರಮದ ಬಗ್ಗೆ ತಿಳಿಯಲು) ಒಬ್ಬ ಭೀಮರ ಎದುರೂ ಎಲ್ಲರೂ ಓಡಿ ಹೋಗಿದ್ದಾರೆ; ಅರ್ಜುನನನ್ನು ವಿರಥನನ್ನಾಗಿ ಮಾಡಲು ಸಮರ್ಥರಾಗಿದ್ದರೂ ಕೂಡ.

ಅವ — ದುರ್ಯೋಧನಾದಿಗಳು ಸೋತು ತಮ್ಮ ಪಟ್ಟಣವನ್ನು ಹೊಂದುವ ಮೊದಲು ನಡೆದ ಕಥೆಯನ್ನು ಹೇಳುತ್ತಾರೆ.

ಜ್ಞಾತ್ವಾ ಸಮಸ್ತಮುಪಿತದ್ವಿದುರೋಽಗ್ರಜಂಸ್ವಂ ವರ್ಧಂತಪಿವ ತನಯಾಭವತೋನರೇಂದ್ರ ॥
ಇತ್ಯಾಹಸೋಽಪಿಮುದಿತಃ ಸ್ವಸುತೇನಕೃಷ್ಣಾಪ್ರಾಪ್ತೇತಿ ಭೂಷಣವರಾಣ್ಯದಿಶಚ್ಚವಾಸಃ ॥ ೧೭೧ ॥

ವಿದುರಃ – ವಿದುರನು ತತ್ಸಮಸ್ತಂ – ಲಕ್ಷ್ಯವೇಧಾದಿಗಳನ್ನೂ, ದುರ್ಯೋಧನಾದಿಗಳ ಪರಾಜಯವನ್ನೂ ಜ್ಞಾತ್ವಾ – ತನ್ನ ಚಾರರ ಮುಖದಿಂದಲೂ, ತನ್ನ ಪ್ರತಿಭಾ ಬಲದಿಂದಲೂ ತಿಳಿದು ಹೇ ನರೇಂದ್ರ – ಎಲೋ ರಾಜನೇ ಭವತಃ – ನಿನ್ನ ತನಯಾಃ – ಮಕ್ಕಳು ವರ್ಧಂತಪಿವ – ಅಭಿವೃದ್ಧಿಯನ್ನು ಹೊಂದುತ್ತಿದ್ದಾರೆ ಇತಿ – ಎಂದು ಸ್ವಂ ಅಗ್ರಜಂ – ತನ್ನ ಅಣ್ಣನಾದ ಧೃತರಾಷ್ಟ್ರನನ್ನು ಕುರಿತು ಆಹ – ಹೇಳಿದನು ಸೋಽಪಿ – ಆ ಧೃತರಾಷ್ಟ್ರನಾದರೂ ಸ್ವಸುತೇನ – ತನ್ನ ಮಗನಾದ ದುರ್ಯೋಧನನಿಂದ ಕೃಷ್ಣಾ ದ್ರೌಪದಿಯು ಪ್ರಾಪ್ತಾ – ಹೊಂದಲ್ಪಟ್ಟಳು ಇತಿ – ಎಂದು ಮುದಿತಃಸನ್ – ಸಂತುಷ್ಟನಾಗಿ ಭೂಷಣವರಾಣಿ - ಶ್ರೇಷ್ಠ ಆಭರಣಗಳನ್ನು ವಾಸಶ್ಚ – ವಸ್ತ್ರವನ್ನೂ ಕೂಡ ಅದಿಶತ್ – ವಿದುರನಿಗೆ ಕೊಟ್ಟನು. ॥೧೭೧॥

ಪಾರ್ಥಾಇತಿಸ್ಮವಿದುರೋಽವದದಾಶು ಸೋಽಪಿ ಸ್ವಾಕಾರಗೂಹನಪರೋ ಯದಿತರ್ಹ್ಯತೀವ ॥
ಭದ್ರಂ ಮೃತಾನಹಿ ಪೃಥಾಸಹಿತಾಃ ಸ್ಮಪಾರ್ಥಾಃ ತೇಷಾಂಪ್ರವೃತ್ತಿಮಪಿಮೇವದಸರ್ವಶಸ್ತ್ವಂ ॥ ೧೭೨ ॥

ವಿದುರಃ – ವಿದುರನು ಸಂತುಷ್ಟನಾದ ಅಣ್ಣನನ್ನು ಕುರಿತು ಆಶು–ಕೂಡಲೇ ಪಾರ್ಥಾ ಇತಿ–ಪಾಂಡವರೆಂದು ಅವದತ್–ಹೇಳಿದನು ಸ್ವಾಕಾರಗೂಹನಪರಃ ತನ್ನ ಮನಸ್ಸಿನಲ್ಲಿ ಆದ ಅಸಂತೋಷದ ಚಿಹ್ನವನ್ನು ಅಡಗಿಸುವುದರಲ್ಲಿ ತೊಡಗಿದ ಸೋಽಪಿ – ಆ ಧೃತರಾಷ್ಟ್ರನಾದರೂ ಪೃಥಾಸಹಿತಾಃ – ಕುಂತಿಯಿಂದ ಕೂಡಿದ ಪಾರ್ಥಾಃ – ಪಾಂಡವರು ಯದಿ ನ ಮೃತಾಃ– ಸತ್ತಿಲ್ಲವಾದರೆ ತರ್ಹಿ – ಆ ಪಕ್ಷದಲ್ಲಿ ಅತೀವಭದ್ರಂ – ಅತ್ಯಂತ ಮಂಗಳವು ತ್ವಂ – ನೀನು ತೇಷಾಂ – ಆ ಪಾಂಡವರ ಸರ್ವಶಃ– ಎಲ್ಲಾ ಪ್ರವೃತ್ತಿಮಪಿ – ವೃತ್ತಾಂತವನ್ನೂ ಕೂಡ ಮೇ – ನನಗೆ ವದ – ಹೇಳು ಇತಿ – ಎಂದು ಆಹ – ಹೇಳಿದನು. ॥ ೧೭೨ ॥

ಇತ್ಯುಕ್ತ ಆಹವಿದುರಃ ಸ ಹಿಡಿಂಬವಧ್ಯಾಪೂರ್ವಾಂ ಪ್ರವೃತ್ತಿಮಖಿಲಾಮಪಿ ಲಕ್ಷ್ಯವೇಧಂ ॥
ಉದ್ವಾಹಮುಕ್ಥ ನದೀಜಮುಖಾಶ್ಚ ಸರ್ವೇತುಷ್ಟಾ ಬಭೂವುರಪಿವತ್ಸರಮೂಷುರೇವಂ ॥ ೧೭೩ ॥

ಇತ್ಯುಕ್ತಃ – ಈ ರೀತಿಯಾಗಿ ಹೇಳಿಸಿಕೊಳ್ಳಲ್ಪಟ್ಟ ಸ ವಿದುರಃ – ಆ ವಿದುರನು ಹಿಡಿಂಬ ವಧ್ಯಾಪೂರ್ವಾಂ – ಹಿಡಿಂಬಾಸುರನವಧವೇ ಮೊದಲಾಗಿ ಉಳ್ಳ ಅಖಿಲಾಂ ಪ್ರವೃತ್ತಿಂ - ಎಲ್ಲ ವೃತ್ತಾಂತವನ್ನು ಉದ್ವಾಹಮಪಿ – ವಿವಾಹವನ್ನೂ ಕೂಡ ಆಹ – ಹೇಳಿದನು ಅಥ – ಅನಂತರ ನದೀಜಮುಖಾಶ್ಚ ಸರ್ವೇ – ಭೀಷ್ಮಾಚಾರ್ಯರೇ ಮೊದಲಾದವರೆಲ್ಲರೂ ತುಷ್ಟಾಃ – ಸಂತುಷ್ಟರು ಬಭೂವುಃ – ಆದರು ಏವಂ – ಪಾಂಡವರು ಇದ್ದಾರೆಂದು ಕೌರವರಿಗೆ ತಿಳಿದ ನಂತರ ವತ್ಸರಂ – ಒಂದು ವರ್ಷಕಾಲ ಊಷುಃ – ಪಾಂಚಾಲ ನಗರದಲ್ಲಿಯೇ ವಾಸಮಾಡಿದರು. ॥ ೧೭೩ ॥

ಶ್ರುತ್ವಾಥಕೃಷ್ಣಮುಪಯಾಂತ ಮುರುಪ್ರದಾಯ ರತ್ನಂಚಪಾಂಡುತನಯೇಷು ಗತಂಪುನಶ್ಚ ॥
ತಾತಪ್ಯಮಾನಹೃದಯಾಸ್ತು ಸುಯೋಧನಾದ್ಯಾಮುಂತ್ರಂಪ್ರಚಕ್ರುರಥಕರ್ಣಮುಖಾಯಯುಶ್ಚ ॥೧೭೪॥

ಅಥ - ಅನಂತರ ಕೃಷ್ಣಂ – ಕೃಷ್ಣನನ್ನು ಉಪಯಾಂತಂ – ಪಾಂಡವರೆಲ್ಲಿಗೆ ಬಂದವನನ್ನಾಗಿಯೂ ಪಾಂಡುತನಯೇಷು – ಪಾಂಡವರಲ್ಲಿ ಉರುರತ್ನಂ – ಬಹಳ ರತ್ನಗಳನ್ನು ಪ್ರದಾಯ – ಕೊಟ್ಟು ಪುನಃ – ಮತ್ತೆ ಗತಂ – ಹೋದವನನ್ನಾಗಿಯೂ ಶ್ರುತ್ವಾ – ಕೇಳಿ ತಾತಪ್ಯಮಾನಹೃದಯಾಃ – ಅತ್ಯಂತ ಸಂತಾಪ ಹೊಂದಿದ ಮನಸ್ಸುಳ್ಳ ಸುಯೋಧನಾದ್ಯಾಃ – ಸುಯೋಧ

ನನೇ ಮೊದಲಾಗಿ ಉಳ್ಳವರು ಮಂತ್ರಂ – ಆಲೋಚನೆಯನ್ನು ಪ್ರಚಕ್ರುಃ – ಮಾಡಿದರು ಅಥ – ಅನಂತರ ಕರ್ಣಮುಖಾಃ – ಕರ್ಣನೇ ಮೊದಲಾಗಿ ಉಳ್ಳವರು ಯಯುಶ್ಚ – ಪಾಂಡವರ ಹತ್ತಿರ ಯುದ್ಧಕ್ಕಾಗಿ ಹೋದರು. ॥ ೧೭೪ ॥

ಯುದ್ಧಾಯ ತೇಷುಪುನರೇವರಥೈಃ ಪ್ರಯಾತೇಷ್ವಾಹಾಗ್ರಜಂ ಸವಿದುರೋಪಿ ನದೀಜಮುಖ್ಯಾನ್ ॥
ಏತೇಹಿಪಾಪತಮಚೇತಸ ಏತ್ಯಪಾರ್ಥಾನ್ ಯುದ್ಧಾಯಮೃತ್ಯುಮುಪಯಾಂತಿ ನಸಂಶಯೋತ್ರ ॥೧೭೫॥

ತೇಷು – ಆ ದುರ್ಯೋಧನಾದಿಗಳು ಪುನಃ – ಮತ್ತೊಮ್ಮೆ ಯುದ್ಧಾಯ – ಸಮರಕ್ಕೋಸ್ಕರ ರಥೈಃ – ರಥಗಳಿಂದ ಪ್ರಯಾತೇಷುಸತ್ಸು – ಹೋಗುತ್ತಿರಲು ಸಃ ವಿದುರಃ – ಆ ವಿದುರನು ಅಗ್ರಜಂ – ಅಣ್ಣನಾದ ಧೃತರಾಷ್ಟ್ರನನ್ನು ಕುರಿತು ನದೀಜಮುಖ್ಯಾನಪಿ – ಭೀಷ್ಮಾಚಾರ್ಯರೇ ಮೊದಲಾಗಿ ಉಳ್ಳವರನ್ನು ಕುರಿತೂ ಕೂಡ ಆಹ–ಹೇಳಿದನು ಪಾಪತಮಚೇತಸಃ– ಅತೀಪಾಪಯುಕ್ತವಾದ ಮನಸ್ಸುಳ್ಳ ಏತೇ – ಈ ದುರ್ಯೋಧನಾದಿಗಳು ಯುದ್ಧಾಯ – ಸಮರಕ್ಕೋಸ್ಕರ ಪಾರ್ಥಾನ್ – ಪಾಂಡವರನ್ನು ಏತ್ಯ – ಹೊಂದಿ ಮೃತ್ಯುಂ – ಮರಣವನ್ನು ಉಪಯಾಂತಿ – ಹೊಂದುತ್ತಾರೆ ಅತ್ರ – ಈ ಮರಣ ಹೊಂದುವ ವಿಷಯದಲ್ಲಿ ಸಂಶಯಃ – ಸಂದೇಹವು ನ – ಇಲ್ಲ. ॥ ೧೭೫ ॥

ಭೀಮಾರ್ಜುನೌ ವಿಷಹಿತುಂ ನಹಿಕಶ್ಚನಾಸ್ತಿ ಸಾಮರ್ಥ್ಯಯುಕ್ಸುರವರೇಷ್ವಪಿವರ್ಧಿತಾಸ್ತೇ ॥
ಜ್ಞಾತ್ವೈವ ವತ್ಸರತಪಿನಮಹಾನಧರ್ಮಸ್ತೇಷಾಮುಪೇಕ್ಷಣಕೃತಸ್ತದಲಂ ನಿಯುಂಕ್ಷ್ವ ॥ ೧೭೬ ॥

ಭೀಮಾರ್ಜುನೌ – ಭೀಮಾರ್ಜುನರನ್ನು ವಿಷಹಿತುಂ – ಸಹಿಸಲಿಕ್ಕೆ ಸುರವರೇಷ್ವಪಿ – ಶ್ರೇಷ್ಠ ದೇವತೆಗಳಲ್ಲಿಯೂ ಕೂಡ ಸಾಮರ್ಥ್ಯಯುಕ್ – ಶಕ್ತಿಯಿಂದ ಕೂಡಿದವನು ಕಶ್ಚನ – ಯಾವನೂ ನಾಸ್ತಿಹಿ – ಇಲ್ಲವಷ್ಟೆ ತೇ – ಆ ಪಾಂಡವರು ವರ್ಧಿತಾಃ – ಅಭಿವೃದ್ಧರಾಗಿರುವರು ಇತಿ – ಎಂದು ಜ್ಞಾತ್ವೈವ – ತಿಳಿದೇ ವತ್ಸರತಃ – ಒಂದು ವರ್ಷದಿಂದ ತೇಷಾಂ (ಆನೀತಯೇ) – ಅವರನ್ನು ಕರೆತರುವ ವಿಷಯದಲ್ಲಿ ಉಪೇಕ್ಷಣಕೃತಃ–ಔದಾಸೀನ್ಯವನ್ನು ಮಾಡಿದ ನಿನಗೆ ಮಹಾನ್ಅಧರ್ಮಃ– ದೊಡ್ಡ ಅಧರ್ಮವು ಜಾತಃ – ಉಂಟಾಗಿದೆ ತತ್ – ಆದ್ದರಿಂದ ಅಲಂ – ಔದಾಸೀನ್ಯವು ಸಾಕು ನಿಯುಂಕ್ಷ್ವ – ಪಾಂಡವರನ್ನು ಕರೆತರುವುದಕ್ಕಾಗಿ ದೂತನನ್ನು ಕಳುಹಿಸು. ॥ ೧೭೬ ॥

ಆನೀತಯೇಚ ವಿನಿಯುಜ್ಯಸುಸಾಂತ್ವಪೂರ್ವಮಾನೀಯ ಯೋಜಯನೃಪೈಷು ತಥಾರ್ಧರಾಜ್ಯಂ ॥
ಏವಂಕೃತೇತವಭವೇತ್ಕುಲವೃದ್ಧಯೇಹಿ ಧರ್ಮಾಯಚೋಭಯ ವಿನಾಶಕರೋನ್ಯಥಾಸ್ಯಾಃ ॥ ೧೭೭ ॥

ಹೇನೃಪ – ಎಲೋ ರಾಜನೇ ಸುಸಾಂತ್ವಪೂರ್ವಂ – ಸಮಾಧಾನಪೂರ್ವಕವಾಗಿ ಆನೀತಯೇ – ಪಾಂಡವರನ್ನು ಕರೆತರುವುದಕ್ಕೋಸ್ಕರ ದೂತಂ – ದೂತನನ್ನು ವಿನಿಯುಜ್ಯ – ಕಳುಹಿಸಿ ಆನೀಯ - ಕರೆತಂದು ಏಷು – ಈ ಪಾಂಡವರಲ್ಲಿ ತಥಾ – ನಿನ್ನ ಮಕ್ಕಳಂತೆ ಪ್ರೀತಿಪೂರ್ವಕವಾಗಿ ಅರ್ಧರಾಜ್ಯಂ – ರಾಜ್ಯದ ಅರ್ಧ ಭಾಗವನ್ನು ಯೋಜಯ - ಕೊಡು ಏವಂ ಕೃತೇ – ಹೀಗೆ ಮಾಡಿದರೆ ತವ – ನಿನ್ನ ಕುಲವೃದ್ಧಯೇ – ವಂಶದ ಅಭಿವೃದ್ಧಿಗೋಸ್ಕರವೂ ಧರ್ಮಾಯ – ಪುಣ್ಯಕ್ಕಾಗಿಯೂ ಭವೇತ್ – ಆಗುವುದು ಅನ್ಯಥಾ – ಹೀಗೆ ಮಾಡದಿದ್ದರೆ ಉಭಯ ವಿನಾಶಕರಃ—ಕುಲ ಮತ್ತು ಧರ್ಮ ಇವೆರಡರ ನಾಶವನ್ನು ಮಾಡತಕ್ಕವನು ಸ್ಯಾಃ—ಆಗುವಿ ಎಂದು ಹೇಳಿದನು. ॥ ೧೭೭ ॥

ಇತ್ಯುಕ್ತವತ್ಯನು ತಥೇತ್ಯವದನ್ನದೀಜೋದ್ರೋಣಃ ಕೃಪಶ್ಚವಿದುರಂ ಸನೃಪೋಪ್ಯುವಾಚ ॥
ಯಾಹ್ಯಾನಯೇತಿ ಸಚವೇಗವತಾರಥೇನ ತತ್ರಾಗಮತ್ತದನು ತೈರಭಿಪೂಜಿತಶ್ಚ ॥ ೧೭೮ ॥

ಇತಿ—ಈ ರೀತಿಯಾಗಿ ಉಕ್ತವತಿಸತಿ—ವಿದುರನು ಹೇಳುತ್ತಿರಲು ಅನು—ವಿದುರನ ಮಾತನ್ನು ಅನುಸರಿಸಿ ನದೀಜಃ–ಭೀಷ್ಮರು, ದ್ರೋಣಃ—ದ್ರೋಣಾಚಾರ್ಯರು ಕೃಪಶ್ಚ—ಕೃಪಾಚಾರ್ಯರೂ ಕೂಡ ತಥೇತಿ—ಹಾಗೆಯೇ ಆಗಲಿ ಎಂದು ಅವದನ್—ಹೇಳಿದರು ನೃಪೋಪಿ—ಆ ಧೃತರಾಷ್ಟ್ರನೂ ಕೂಡ ವಿದುರಂ—ವಿದುರನನ್ನು ಕುರಿತು ಯಾಹಿ—ಪಾಂಡವರನ್ನು ಕರೆತರುವದಕ್ಕಾಗಿ ಹೋಗು ಆನಯ—ಕರೆದುಕೊಂಡು ಬಾ ಇತಿ—ಎಂದು ಉವಾಚ—ಹೇಳಿದನು ಸಚ—ಆ ವಿದುರ

ನಾದರೂಕೂಡ ವೇಗವತಾ—ವೇಗವುಳ್ಳ ರಥೇನ-ಸ್ಯಂದನದಿಂದ ತತ್ರ—ಪಾಂಡವರಿದ್ದಲ್ಲಿಗೆ ಅಗಮತ್—ಹೋದನು ತದನು—ಅವನು ಬಂದ ನಂತರ ತೈಃ—ಆ ಪಾಂಡವರಿಂದ ಅಭಿಪೂಜಿತಶ್ಚ—ಪೂಜಿಸಿಕೊಳ್ಳಲ್ಪಟ್ಟನು. ॥ ೧೭೮ ॥

ಭಾ.ಅ. ೧೭೧-೧೭೮ ವಿದುರಮಹಾರಾಜರು ಈ ಪಾಂಡವರ ಜಯ, ದ್ರೌಪದಿಯಪ್ರಾಪ್ತಿ, ಕೌರವರ ಪರಾಜಯವೇ ಮೊದಲಾದ ಸರ್ವ ವಿಷಯವನ್ನು ತಿಳಿದು ಧೃತರಾಷ್ಟ್ರ ರಾಜನ ಹತ್ತಿರ ನಿನ್ನ ಮಕ್ಕಳು ಸರ್ವರೀತಿ ಅಭಿವೃದ್ಧಿಯಲ್ಲಿ ಇದ್ದಾರೆ ಎಂದು ಸಾಮಾನ್ಯವಾಗಿ ಹೇಳಿದರು. ಅದನ್ನು ಕೇಳಿದ ಧೃತರಾಷ್ಟ್ರನು ತನ್ನ ದುರ್ಯೋಧನಾದಿಗಳು ಎಂದು ತಿಳಿದು ಬಹಳ ಸಂತೋಷದಿಂದ ಮುಖವನ್ನು ಅಗಲಿಸಿ ಶ್ರೇಷ್ಠ ಆಭರಣ ವಸ್ತ್ರಗಳನ್ನು ಬಹುಮಾನವಾಗಿ ವಿದುರನಿಗೆ ಕೊಟ್ಟನು. ಇದನ್ನು ಅರ್ಥ ಮಾಡಿಕೊಂಡ ವಿದುರರು 'ಪಾಂಡವರು' ಎಂದು ಕೂಡಲೇ ಹೇಳಿದಾಗ ಮೊದಲಿನ ಸಂತೋಷವು ಹೋಗಿ, ಸ್ವಲ್ಪ ಅಸಮಾಧಾನವೇ ಆಗಿ ಮುಖ ಸಂಕೋಚ ಉಂಟಾಗಿದೆಯಾದರೂ ಪಾಂಡವರ ಸುದ್ದಿ ಕೇಳಿ ತನಗೆ ಮುಖ ಸಣ್ಣದಾಯಿತು; ದುಃಖವಾಗಿದೆ ಎಂದು ವಿದುರನಿಗೆ ತಿಳಿಯದಿರಲಿ ಎಂದು ಭಾವಿಸಿ ತನಗೆ ಆದ ಅಸಮಾಧಾನ, ಮುಖ ಸಂಕೋಚಗಳನ್ನು ಕೃತ್ರಿಮವಾಗಿ ಮುಚ್ಚಿಕೊಳ್ಳುತ್ತಾ 'ಓಹೊ ! ಪಾಂಡವರು ಮೃತರಾಗಿಲ್ಲವಾದರೆ, ಒಳ್ಳೆಯದಾಯಿತು. ನನಗೆ ಅವರ ವಾರ್ತೆಯನ್ನು ಎಲ್ಲ ಹೇಳು' ಎಂದು ಕೃತ್ರಿಮವಾದ ಪ್ರೀತಿಯ ತೋರಿಕೆಯ ಧ್ವನಿಯಲ್ಲಿ ಹೇಳಿದನು. ಆಗ ವಿದುರರು ಹಿಡಿಂಬವಧ, ಬಕವಧ, ಮತ್ಸ್ಯಭೇದನ, ದ್ರೌಪದೀಪ್ರಾಪ್ತಿ ಮೊದಲಾಗಿ ಎಲ್ಲ ವಿಷಯಗಳನ್ನು ಹೇಳಿದಾಗ ಭೀಷ್ಮರೇ ಮೊದಲಾಗಿ ಎಲ್ಲರೂ ಸಂತೋಷಪಟ್ಟಿದ್ದಾರೆ. ಹೀಗೆ ಒಂದು ವರ್ಷ ಕಳೆದಿದೆ. ಶ್ರೀಕೃಷ್ಣನು ಬಂದು ಪಾಂಡವರಿಗೆ ಬಹಳ ರತ್ನಾದಿಗಳನ್ನು ಕೊಟ್ಟು ಹೋಗಿದ್ದಾನೆ ಎಂಬ ವಾರ್ತೆ ಕೇಳಿ ಬಹಳ ತಾಪಗೊಂಡ, ಮತ್ಸರಿಗಳಾದ, ದುಷ್ಟ ದುರ್ಯೋಧನಾದಿಗಳು ಗುಪ್ತಾಲೋಚನೆ ಮಾಡಿ ಕರ್ಣಸಹಿತವಾಗಿ ಪುನಃ ಯುದ್ಧಕ್ಕಾಗಿ ಪಾಂಚಾಲ ನಗರಕ್ಕೆ ಹೋಗಿದ್ದಾರೆ. ಆಗ ವಿದುರರು ಭೀಷ್ಮದ್ರೋಣಾದಿಗಳ ಸಮಕ್ಷದಲ್ಲಿ ಧೃತರಾಷ್ಟ್ರನನ್ನು ಕುರಿತು "ಈ ಪಾಪಿಷ್ಠರಾದ ದುರ್ಯೋಧನಾದಿಗಳು ಪಾಂಡವರ ಹತ್ತಿರ ಯುದ್ಧಕ್ಕಾಗಿ ಹೋಗಿ ಮರಣವನ್ನೇ ಹೊಂದುತ್ತಾರೆ ಸಂಶಯವೇ ಇಲ್ಲ. ಭೀಮಾರ್ಜುನರನ್ನು ಎದುರಿಸಬಲ್ಲ ಶಕ್ತನು ಇಲ್ಲವೇ ಇಲ್ಲ. ದೇವತೆಗಳಲ್ಲಿಯೂ ಕೂಡ ಇಲ್ಲ. ಅವರು ಬಂದು ಪಾಂಚಾಲ ನಗರದಲ್ಲಿದ್ದದ್ದನ್ನು ತಿಳಿದು ವರ್ಷವಾದರೂ ಕೂಡ ಅವರನ್ನು ಊರಿಗೆ ಕರೆತರುವ ವಿಚಾರ ಮಾಡದಿರುವ, ಆ ಬಗ್ಗೆ ಉಪೇಕ್ಷೆಯನ್ನೇ ಮಾಡಿದ ನೀನು ಬಹಳ ಅಧರ್ಮವನ್ನೇ ಎಸಗಿರುವಿ. ಇದನ್ನು ಸಾಕು ಮಾಡು, ಅವರನ್ನು ಇಲ್ಲಿಗೆ ಕರೆತರುವ, ಹಿಂದಾಗಿರುವ ಅವರ ಬಗೆಗಿನ ಅಪಚಾರಾದಿಗಳಿಂದ ಉಂಟಾದ ಅಸಮಾಧಾನವನ್ನು ಹೋಗಿಸುವ ಪ್ರಯತ್ನ ಮಾಡು; ಅವರಿಗೆ ಅರ್ಧರಾಜ್ಯವನ್ನು ಕೊಡು ಹೀಗೆ ಮಾಡಿದರೆ ನೀನು ಕುಲವೃದ್ಧಿಯೂ, ಪುಣ್ಯಾಭಿವೃದ್ಧಿಯೂ ಆಗುವದು. ಇಲ್ಲದಿದ್ದರೆ ಎರಡರ ನಾಶಕ್ಕೂ ಕಾರಣನಾಗುವಿ" ಎಂದು ಹೇಳಿದರು. ಆಗ ಭೀಷ್ಮದ್ರೋಣ ಕೃಪಾಚಾರ್ಯರು 'ಅಹುದು' ಎಂದು ಹೇಳಿದರು, ಆಗ ಧೃತರಾಷ್ಟ್ರನೂ, ರಥದಿಂದ ವೇಗವಾಗಿ ಹೋಗಿ ಅವರನ್ನು ಕರೆದುಕೊಂಡು ಬಾ' ಎಂದು ಹೇಳಿದನು. ಆಗ ವಿದುರರು ಪಾಂಚಾಲ ರಾಜ್ಯಕ್ಕೆ ಬಂದರು. ಪಾಂಡವರಿಂದ ಪೂಜಿತರೂ ಆದರು.

ತತ್ಕಾಲಏವ ವಸುದೇವಸುತಶ್ಚಕೃಷ್ಣೋ ವ್ಯಾಸಶ್ಚತಾನುಪಸಮೇತ್ಯದುರಂತಶಕ್ತೀ ॥
ಆದಾಯ ಕುಂತಿಸಹಿತಾನ್ವಿದುರೇಣಯುಕ್ತಾ ನಾಗಾಹ್ವಯಂ ಪುರಮಿತಾಂ ಸಹಭಾರ್ಯಯೈವ ॥ ೧೭೯ ॥

ತತ್ಕಾಲಏವ – ಆ ಸಮಯದಲ್ಲಿಯೇ ದುರಂತಶಕ್ತೀ – ಅಪರಿಮಿತಸಾಮರ್ಥ್ಯವುಳ್ಳ ವಸುದೇವಸುತಃ ಕೃಷ್ಣಶ್ಚ – ವಸುದೇವನ ಮಗನಾದ ಶ್ರೀ ಕೃಷ್ಣನೂ ವ್ಯಾಸಶ್ಚ – ವೇದವ್ಯಾಸರೂ ಕೂಡ ತಾನ್ – ಆ ಪಾಂಡವರನ್ನು ಉಪಸಮೇತ್ಯ – ಹೊಂದಿ ಭಾರ್ಯಯಾ – ಹೆಂಡತಿಯಾದ ದ್ರೌಪದಿಯಿಂದ ಸಹ – ಕೂಡಿಕೊಂಡು ಕುಂತಿ ಸಹಿತಾನ್ – ಕುಂತಿಯಿಂದ ಕೂಡಿದ ಪಾಂಡವರನ್ನು ಆದಾಯ – ಕರೆದುಕೊಂಡು ವಿದುರೇಣ – ವಿದುರನಿಂದ ಯುಕ್ತೌಸಂತೌ – ಕೂಡಿದವರಾಗಿ ನಾಗಾಹ್ವಯಂಪುರಂ – ಹಸ್ತಿನಾವತಿ ಪಟ್ಟಣವನ್ನು ಇತಾಂ – ಹೊಂದಿದರು. ॥ ೧೭೯ ॥

ತೇಷ್ವಾಗತೇಷು ಸುಮಹಾನಭವತ್ಪ್ರಹರ್ಷಃ ಪೌರಸ್ಯಜಾನಪದಿಕಸ್ಯ ಜನಸ್ಯಚೋಚ್ಚೈಃ ॥
ಭೀಷ್ಮಾದಿಕಾಶ್ಚಮುದಿತಾಃ ಪ್ರತಿಪೂಜ್ಯಗೇಹಮಾವೇಶಯನ್ನಹ ನೃಪೇಣಮುಹೋತ್ಸವೇನ ॥ ೧೮೦ ॥

ತೇಷು ಕೃಷ್ಣವ್ಯಾಸಾದಿಗಳಿಲ್ಲರೂ ಆಗತೇಷುಸತ್ಸು – ಬರುತ್ತಿರಲು ಪೌರಸ್ಯ – ಪಟ್ಟಣದಲ್ಲಿರುವ ಜಾನಪದಿಕಸ್ಯ – ಗ್ರಾಮದಲ್ಲಿರುವ ಜನಸ್ಯ – ಜನಸಮೂಹಕ್ಕೆ ಸುಮಹಾನ್ – ಅತ್ಯಧಿಕವಾದ ಪ್ರಹರ್ಷಃ - ಸಂತೋಷವು ಅಭವತ್ – ಆಯಿತು ಭೀಷ್ಮಾದಿಕಾಃ - ಭೀಷ್ಮನೇ ಮೊದಲಾಗಿ ಉಳ್ಳವರು ಉಚ್ಚೈಃ – ಚೆನ್ನಾಗಿ ಮುದಿತಾಃಸಂತಃ – ಸಂತುಷ್ಟರಾಗಿ ಪ್ರತಿಪೂಜ್ಯ – ಅವರೆಲ್ಲರನ್ನು ಪೂಜಿಸಿ ನೃಪೇಣ – ಧೃತರಾಷ್ಟ್ರನಿಂದ ಸಹ – ಕೂಡಿಕೊಂಡು ಮಹೋತ್ಸವೇನ – ಮಹಾಸಂಭ್ರಮದಿಂದ ಗೇಹಂ – ಧೃತರಾಷ್ಟ್ರನ ಮನೆಯನ್ನು ಅವೇಶಯನ್ – ಪ್ರವೇಶ ಮಾಡಿಸಿದರು. ॥ ೧೮೦ ॥

ಕೃಷ್ಣಾಮಪೂಜಯದತೀವಚ ಸೌಬಲೀಸಾ ದುರ್ಯೋಧನಸ್ಯದಯಿತಾಸಹಿತಾತ್ರತೇಽಪಿ ॥
ಊಷುಸ್ತತಶ್ಚ ನಿಜಪುತ್ರಕದುರ್ವಿನೀತ್ಯಾ ಕೃಷ್ಣಾನಿಮಿತ್ತ ಮುರುಭೀತಿತ ಆಹಭೀಮಾತ್ ॥ ೧೮೧ ॥

ದುರ್ಯೋಧನಸ್ಯ - ದುರ್ಯೋಧನನ ದಯಿತಾಸಹಿತಾ – ಹೆಂಡಂದಿರಿಂದ ಕೂಡಿವ ಸಾ ಸೌಬಲೀ – ಆ ಗಾಂಧಾರಿಯು ಕೃಷ್ಣಾಂ - ದ್ರೌಪದಿಯನ್ನು ಅತೀವ – ಅತ್ಯಂತವಾಗಿ ಅಪೂಜಯತ್ – ಪೂಜಿಸಿದಳು ತೇಽಪಿ – ಆ ಪಾಂಡವರೂ ಕೂಡ ಅತ್ರ - ಈ ಧೃತರಾಷ್ಟ್ರನ ಮನೆಯಲ್ಲಿ ಊಷುಃ – ವಾಸ ಮಾಡಿದರು ತತಃ – ಅನಂತರ ಕೃಷ್ಣಾನಿಮಿತ್ತಂ – ದ್ರೌಪದಿಯ ನಿಮಿತ್ತದಿಂದ ನಿಜಪುತ್ರಕದುರ್ವಿನೀತ್ಯಾ – ತನ್ನ ಮಗನ ಕೆಟ್ಟ ನಡತೆಯಿಂದ ಭೀಮಾತ್ – ಭೀಮನಿಂದುಂಟಾಗುವ ಉರು ಭೀತಿತಃ – ದ್ರೌಪದಿಯಸೌಂದರ್ಯಕ್ಕೆ ಮರುಳಾದರೆ ದುರ್ಯೋಧನನನ್ನು ಕೊಂದಾನು ಎಂಬ ಬಹಳ ಭಯದಿಂದ ಆಹ – ಕುಂತಿಯನ್ನು ಕುರಿತು ಹೇಳಿದಳು. ॥ ೧೮೧ ॥

ಕುಂತಿಪ್ರಯಾಹಿ ಸಹಿತಾಸ್ನುಷಯಾಗೃಹಂ ಸ್ವಂಭೀಮಾದ್ಬಿಭೇಮಿ ನಿಜಪುತ್ರಕದುರ್ವಿನೀತ್ಯಾ ॥
ಕೃಷ್ಣಾತ್ರಿಲೋಕ ವನಿತಾಧಿಕರೂಪಸಾರಾಯಸ್ಮಾದಿತಿಸ್ಮ ಸಸುತಾ ಪ್ರಯಯೌಗೃಹಂ ಸಾ ॥ ೧೮೨ ॥

ಹೇಕುಂತಿ – ಎಲೋ ಕುಂತಿಯೇ ಸ್ನುಷಯಾ – ಸೊಸೆಯಿಂದ ಸಹಿತಾಸತೀ – ಕೂಡಿದವಳಾಗಿ ಸ್ವಂಗೃಹಂ – ನಿನ್ನ ಮನೆಯನ್ನು ಕುರಿತು ಪ್ರಯಾಹಿ – ಹೋಗು ಯಸ್ಮಾತ್ – ಯಾವ ಕಾರಣದಿಂದ ಕೃಷ್ಣಾ – ದ್ರೌಪದಿಯು ತ್ರಿಲೋಕವನಿತಾಧಿಕ ರೂಪಸಾರಾ – ಮೂರು ಲೋಕಗಳಲ್ಲಿರುವ ಸ್ತ್ರೀಯರ ದೆಸೆಯಿಂದ ಅಧಿಕವಾದ ಸೌಂದರ್ಯದಿಂದ ಶ್ರೇಷ್ಠಳೋ ತಸ್ಮಾತ್ – ಆ ಕಾರಣದಿಂದ ನಿಜಪುತ್ರಕ ದುರ್ವಿನೀತ್ಯಾ – ನನ್ನ ಮಗನ ಕೆಟ್ಟ ನಡತೆಯಿಂದ ಭೀಮಾತ್ – ಭೀಮನಿಂದ ಬಿಭೇಮಿ – ಹೆದರುತ್ತೇನೆ ಇತಿ – ಎಂದು ಹೇಳಿದಳು ಸಸುತಾ – ಮಕ್ಕಳಿಂದ ಕೂಡಿದ ಸಾ – ಆ ಕುಂತಿಯು ಗೃಹಂ – ತನ್ನ ಮನೆಯನ್ನು ಕುರಿತು ಪ್ರಯಯೌ – ಹೋದಳು. ॥ ೧೮೨ ॥

ಊಷುಸ್ತಥೈವ ಪರಿವತ್ಸರಪಂಚಕಂತೇ ಪಾಂಡೋರ್ಗೃಹೇಸುಸುಖಿನೋಽಖಿಲಭೋಗಯುಕ್ತಾಃ ॥
ಕೃಷ್ಣಾಚತೇಷು ಪೃಥಗೇವ ಚತುಃಸ್ವರೂಪಾರೇಮೇ ತಥೈಕತನುರಪ್ಯಭಿಮಾನಿಭೇದಾತ್ ॥ ೧೮೩ ॥

ತೇ – ಆ ಪಾಂಡವರು ಪಾಂಡೋಃ–ಪಾಂಡುರಾಜನ ಗೃಹೇ–ಮನೆಯಲ್ಲಿ ಸುಸುಖಿನಃಸಂತಃ – ಅತ್ಯಂತ ಆನಂದವುಳ್ಳವರಾಗಿ ಅಖಿಲಭೋಗಯುಕ್ತಾಃ ಸಂತಃ – ಎಲ್ಲಾ ವಿಷಯ ಭೋಗಗಳಿಂದ ಕೂಡಿದವರಾಗಿ ಪರಿವತ್ಸರಪಂಚಕಂ ಐದು ಪರಿವತ್ಸರಗಳಲ್ಲಿ ತಥೈವ – ಹಾಗೆಯೇ ಸುಖವಾಗಿಯೇ ಊಷುಃ – ವಾಸ ಮಾಡಿದರು ಬೃಹಸ್ಪತ್ಯಾಚಾರ್ಯರ ಒಂದೊಂದು ಮೇಷಾದಿ ರಾಶಿಯಲ್ಲಿ ಸಂಚಾರದಿಂದ ಯಾವ ವತ್ಸರ ಪರಿಮಿತವಾದ ಕಾಲವೋ ಅದಕ್ಕೆ ಪರಿವತ್ಸರವೆಂದು ಹೆಸರು. ಕೃಷ್ಣಾ ಚ – ದ್ರೌಪದಿಯೂ ಕೂಡ ಏಕತನುಃ – ಯದ್ಯಪಿ ಒಂದೇ ಶರೀರವುಳ್ಳವಳು ತಥಾಪಿ ಹಾಗಾದರೂ ಅಭಿಮಾನಿ ಭೇದಾತ್ – ಶ್ಯಾಮಲಾದಿ ಜೀವಭೆ ದದಿಂದ ಚತುಃಸ್ವರೂಪಾಸತೀ – ಶ್ಯಾಮಲಾದಿ ನಾಲ್ಕು ಸ್ವರೂಪವುಳ್ಳವಳಾಗಿ ತೇಷು – ಆ ಪಾಂಡವರ ಮಧ್ಯದಲ್ಲಿ ಪೃಥಕ್ – ಒಂದೊಂದು ದಿನದಲ್ಲಿ ಒಬ್ಬೊಬ್ಬರಿಂದ ರೇಮೇ – ಕ್ರೀಡಿಸಿದಳು. ॥ ೧೮೩ ॥

ಅವ – ದೇಹಾಭಿಮಾನಿಗಳಾದ ಶ್ಯಾಮಲಾದಿ ಸ್ತ್ರೀಯರಿಗೆ ಭೇಧವಿದ್ದರೂ ಅಭಿಮನ್ಯಮಾನವಾದ ಶರೀರವು ಒಂದೇಯಾದ್ದರಿಂದ ದೇಹಾಪೇಕ್ಷೆಯಿಂದ ವ್ಯಭಿಚಾರ ಬರುವುದೆಂಬ ಶಂಕೆಯನ್ನು ಪರಿಪರಿಸುತ್ತಾರೆ.

ಕನ್ಯೈವಸಾ ಽಭವದತಃ ಪ್ರತಿವಾಸರಂಚ ಜನ್ಮಾಭವದ್ಧ್ಯಭಿಮತೇಃ ಪೃಥಗೇವನಾಶಾತ್ ॥
ಪ್ರಾಯೋಹಿನಾಭಿಮತಿನಾಶ ಮವಾಪವಾಣೀ ತಸ್ಮಾನ್ನರುಚ್ಚ ಸಕಲೇಷ್ವಭವಿಷ್ಟ ಆಸೀತ್ ॥ ೧೮೪ ॥

ಹಿ—ಯಾವ ಕಾರಣದಿಂದ ಅಭಿಮತೇಃ – ದೇಹಾಭಿಮಾನಕ್ಕೆ ಪೃಥಗೇವ – ಪ್ರತ್ಯೇಕ ಪ್ರತ್ಯೇಕವಾಗಿ ತಮ್ಮ ತಮ್ಮ ಪತಿಗಳಿಂದ ಇತರರ ರಮಣ ದಿನದಲ್ಲಿ ಅಂದರೆ ಪೂರ್ವದಿನದಲ್ಲಿ ನಾಶಾತ್ – ನಾಶವಾಗುವುದರಿಂದ ನಾಶವೂ ತಮ್ಮ ತಮ್ಮ ಪತಿಗಳಿಂದ ರಮಣದಿನದಲ್ಲಿ ಅಭಿಮಾನಕ್ಕೆ ಉತ್ಪತ್ತಿಯಾಗುವುದರಿಂದಲೂ ಪ್ರತಿವಾಸರಂ – ಪ್ರತಿದಿನದಲ್ಲಿಯೂ ಜನ್ಮ – ಉತ್ಪತ್ತಿಯು ಅಭವತ್ – ಆಯಿತು ಲೋಕದಲ್ಲಿಯೂ ಕೂಡ ವಿದ್ಯಮಾನ ದೇಹಾಭಿಮಾನ ನಾಶವೇ ನಾಶವೆಂದೂ ಅಭಿಮಾನೋತ್ಪತ್ತಿಯೇ ಜನ್ಮವೆಂದು ಪ್ರಸಿದ್ಧವಾಗಿದೆ ಅತಃ – ಆದ್ದರಿಂದ ಸಾ – ಆ ದ್ರೌಪದಿಯು ಪ್ರತಿವಾಸರಂ – ಪ್ರತಿದಿನವೂ ಕನ್ಯೈವ ಅಭವತ್ – ತಮ್ಮ ತಮ್ಮ ರಮಣದಿನದಲ್ಲಿ ರಮಿಸುವ ಪತಿಯಿಂದ ಕೂಡಿಕೊಂಡು ಮಾನಸ ವಿವಾಹಕ್ಕೆ ಯೋಗ್ಯಳಾದ ಕನ್ನಿಕೆಯೇ ಆದಳು. ಈ ರೀತಿಯಾಗಿ ಎಲ್ಲಾ ಪಾಂಡವರಿಗೂ ತಮ್ಮ ತಮ್ಮ ರಮಣ ದಿನದಲ್ಲಿ ತಮ್ಮ ತಮ್ಮ ಸ್ತ್ರೀಯರಿಂದಲೇ ಸಂಗವು. ಆ ಶ್ಯಾಮಲಾದಿ ಸ್ತ್ರೀಯರಿಗಾದರೂ ತಮ್ಮ ತಮ್ಮ ಗಂಡಂದಿರಿಂದ ಬೇರೆಯವರ ರಮಣದಿನದಲ್ಲಿ ಆ ಸ್ತ್ರೀಯರಿಗೆ ದೇಹಾಭಿಮಾನವು ನಾಶವಾಗುವುದರಿಂದ ಪತಪುರುಷ ಸಂಗದೋಷವಿಲ್ಲ ತಮ್ಮ ತಮ್ಮ ಪತಿಯಿಂದ ಕೂಡಿಕೊಂಡು ರಮಣ ದಿನದಲ್ಲಿ ಹೊಸ ಜನ್ಮನದಿಂದ ಕನ್ಯಾತ್ವವನ್ನು ಹೊಂದಿ ಪತಿಯಾದವನು ಮಾನಸ ವಿವಾಹ ವಿಧಿಯಿಂದ ಪುನಃ ವಿವಾಹವನ್ನು ಮಾಡಿಕೊಂಡು ತನ್ನ ಹೆಂಡತಿಯಿಂದಲೇ ರಮಿಸುವ ಪ್ರಯುಕ್ತ ಪತಿಗೆ ಕನ್ಯಾಗಮನ ದೋಷವಿಲ್ಲ. ಕನ್ಯೆಗಾದರೂ ಮಾನಸ ವಿವಾಹ ವಿಧಿಯಿಂದ ತಮ್ಮ ಪತಿಯಿಂದ ಕೂಡಿಕೊಂಡೇ ರಮಿಸುವ ಕಾರಣದಿಂದ ಅಸಂಸ್ಕೃತ ಪುರುಷಗಮನ ದೋಷವೂ ಇಲ್ಲ. ವಾಣೀತು – ಭಾರತಿಯಾದರೂ ಭೀಮಸೇನನಿಂದ ರಮಿಸುವ ದಿನದಲ್ಲಿ ಸಂಪೂರ್ಣ ದೇಹಾಭಿಮಾನವನ್ನು ಮಾಡುತ್ತಾಳೆ ಹಿ – ಯಾವ ಕಾರಣದಿಂದ ವಾಣೀ – ಭಾರತಿಯು ಪ್ರಾಯಃ – ಸಂಪೂರ್ಣವಾಗಿ ಧರ್ಮರಾಜಾದಿಗಳ ರಮಣ ದಿನಗಳಲ್ಲಿಯೂ ಅಭಿಮತಿನಾಶಂ – ದೇಹಾಭಿಮಾನ ನಾಶವನ್ನು ನಾವಾಪ – ಹೊಂದಲಿಲ್ಲವೋ ಸ್ವಲ್ಪ ಅಭಿಮಾನವನ್ನು ಯಾವಾಗಲೂ ಮಾಡುತ್ತಿದ್ದಳೋ ತಸ್ಮಾತ್ – ಆ ಕಾರಣದಿಂದ ಈಷತ್‌ದೇಹಾಭಿಮಾನವುಳ್ಳ ಭಾರತಿಯಿಂದ ರಮಣ ಕ್ಕೋಸ್ಕರ ಮರುಚ್ಚ – ಭೀಮನೂ ಕೂಡ ಸಕಲೇಷು ಧರ್ಮರಾಜಾದಿ ನಾಲ್ವರಲ್ಲಿ ಅಭಿವಿಷ್ಟಃಆಸೀತ್ – ಒಂದೊಂದು ಕಲೆಯಿಂದ ಪ್ರವೇಶ ಮಾಡಿದವನಾದನು. ಈ ಕಾರಣದಿಂದ ಭೀಮನಿಗೂ ಪರಸ್ತ್ರೀಸಂಗದ ಶಂಕೆಯಿಲ್ಲ ಭಾರತಿಗೂ ಪರ ಪುರುಷ ಗಮನ ಶಂಕೆಯೂ ಇಲ್ಲ. ॥ ೧೮೪ ॥

ಭಾ.ಅ. ೧೭೯–೧೮೪ ಅದೇ ಸಮಯಕ್ಕೆ ಪಾಂಚಾಲ ನಗರಕ್ಕೆ ಶ್ರೀಕೃಷ್ಣವ್ಯಾಸರೂ ಬಂದಿದ್ದಾರೆ. ಅವರಿಬ್ಬರೂ ವಿದುರ ಸಮೇತರಾಗಿ ಕುಂತೀ ಸಹಿತವಾಗಿ ಪಾಂಡವರನ್ನು ಹಸ್ತಿನಾವತಿಗೆ ಕರೆದುಕೊಂಡು ಬಂದರು. ಆಗ ಊರಿನ, ರಾಜ್ಯದ, ರಾಷ್ಟ್ರದ ಎಲ್ಲ ಪ್ರಜೆಗಳೂ ಬಹಳ ಸಂತುಷ್ಟರಾಗಿದ್ದಾರೆ. ಭೀಷ್ಮಾದಿಗಳೂ ಕೂಡ ಸಂತೋಷದಿಂದ ಧೃತರಾಷ್ಟ್ರ ಸಹಿತವಾಗಿ ಬಂದು ಎದುರುಗೊಂಡು ಧೃತರಾಷ್ಟ್ರನ ಅರಮನೆಯ ಪ್ರವೇಶ ಮಾಡಿಸಿದ್ದಾರೆ. ಗಾಂಧಾರಿಯು ತನ್ನ ಸೊಸೆ ಭಾನುಮತಿ ಸಹಿತಳಾಗಿ ಬಂದು ದ್ರೌಪದೀ ದೇವಿಯನ್ನು ಆದರದಿಂದ ಸ್ವಾಗತಿಸಿ ಕರೆದುಕೊಂಡು ಹೋಗಿದ್ದಾಳೆ. ಹೀಗೆ ಒಟ್ಟಾಗಿ ವಾಸಮಾಡುತ್ತಾ ಕೆಲದಿನಗಳು ಕಳೆದಿರುವಾಗ, ಗಾಂಧಾರಿಯು ತನ್ನ ದುರ್ಯೋಧನನು ದುರ್ನೀತಿ ಕಾರ್ಯಗಳನ್ನು ಮಾಡಿಯಾನು; ದ್ರೌಪದಿಯು ಅಧಿಕ ಸುಂದರಿಯು: ಅವಳಷ್ಟು ಸುಂದರಿಯರು ಲೋಕತ್ರಯದಲ್ಲೇ ಇಲ್ಲ. ಹಾಗೆ ಮಾಡಿದಾಗ ಭೀಮಸೇನನು ತನ್ನ ಮಕ್ಕಳನ್ನು ಕೊಂದಾನು ಎಂದು ವಿಚಾರಿಸಿ ಕುಂತಿದೇವಿಗೆ ಹಾಗೇ ಹೇಳಿ, ನೀನು ನಿಮ್ಮ ಮನೆಗೇ (ಪಾಂಡುರಾಜನಿದ್ದ) ಮಕ್ಕಳು–ಸೊಸೆ ಸಹಿತವಾಗಿ ಹೋಗು ಎಂದು ಹೇಳಿದಳು. ಆಗ ಕುಂತಿಯು ಅಲ್ಲಿಗೆ ಬಂದಿದ್ದಾಳೆ. ಅಲ್ಲಿ ಅವರೆಲ್ಲರೂ ಸಕಲಭೋಗಯುಕ್ತರಾಗಿ ಸುಖದಿಂದ ಐದು ವರ್ಷ ವಾಸಮಾಡಿದ್ದಾರೆ. ಆಗ ದ್ರೌಪದೀ ದೇವಿಯು ಒಂದೇ ದೇಹವುಳ್ಳ ಸ್ತ್ರೀಚತುಷ್ಟಯ ರೂಪಳಾದರೂ ಕೂಡ ಧರ್ಮಾದಿಗಳ ಜೊತೆಗೆ ಆಯಾ ಶ್ಯಾಮಲಾದಿ ರೂಪದಿಂದಲೇ ವಿಹರಿಸಿದ್ದಾಳೆ. ಧರ್ಮರಾಜನ ವಿಹಾರ ದಿನದಂದು ಆ ದೇಹದ ಮೇಲೆ ಶ್ಯಾಮಲೆಗೆ ಅಭಿಮಾನವು ಹುಟ್ಟುತ್ತಿತ್ತು; ಮರುದಿನ ಶ್ರೀಭೀಮಸೇನರ ವಿಹಾರವಿರುವಾಗ ಶ್ಯಾಮಲೆಯ ಅಭಿಮಾನ ನಾಶವಾಗುತ್ತಿತ್ತು. ಹೀಗೆ ಪ್ರತಿದಿನ ಒಬ್ಬರ ಅಭಿಮಾನ ನಾಶ, ಮತ್ತೊಬ್ಬರಿಗೆ ಅಭಿಮಾನ ಉತ್ಪತ್ತಿ ಆಗುತ್ತಲೇ ಇರುತ್ತಿದ್ದದ್ದರಿಂದ ಪ್ರತಿದಿನವೂ ಜನ –ಮರಣಗಳಾಗುತ್ತಿದ್ದವು. ಅಭಿಮಾನ ಉತ್ಪತ್ತಿಯೇ ಉತ್ಪತ್ತಿಯು, ಅಭಿಮಾನ ನಾಶವೇ ನಾಶವು ಎಂದು ಲೋಕದಲ್ಲಿಯೂ ಪ್ರಸಿದ್ಧ

ವಾಗಿದೆ. ಆದ್ದರಿಂದ ಪ್ರತಿದಿನವೂ ಅವಳು ಕನ್ಯಾಳೇ ಆಗಿರುತ್ತಿದ್ದಳು. ಹೀಗಾಗಿ ಎಲ್ಲ ಪಾಂಡವರಿಗೂ ತಮ್ಮ ಪತ್ನಿಯರಿಂವಲೇ ಸಂಬಂಧವಾಗುವದರಿಂದ, ಇತರ ಸ್ತ್ರೀಯರಿಗೆ ಆ ದಿನ ದೇಹಾಭಿಮಾನವಿಲ್ಲದಿರುವದರಿಂದ ಪರಸ್ತ್ರೀ ಸಂಗವಿಲ್ಲವೇ ಇಲ್ಲ. ದಿನವೂ ಕನ್ಯಾ ಆದರೂ ಮಾನಸ ವಿವಾಹವಿಧಿ ನಡೆಯುತ್ತಿದ್ದದ್ದರಿಂದ ಕನ್ಯಾಗಮನವೂ ಇಲ್ಲ. ಕನ್ಯೆಯರಿಗೂ ಅಸಂಸ್ಕೃತ ಪುರುಷಸಂಗದೋಷವೂ ಇಲ್ಲ. ಭಾರತೀದೇವಿಗೆ ಶ್ರೀಭೀಮಸೇನ ರಮಣ ದಿನದಲ್ಲಿ ಆ ದೇಹದ ಮೇಲೆ ಪೂರ್ಣ ಅಭಿಮಾನವಿರುತ್ತಿತ್ತು. ಇತರರಿಗೆ ಅಭಿಮಾನ ಸ್ವಲ್ಪ ಕೂಡ ಇರುತ್ತಿರಲಿಲ್ಲ. ಆದರೆ ಇತರ ಪಾಂಡವರ ರಮಣ ದಿನದಂದು ಆ ಪತ್ನಿಯರಿಗೆ ಅಭಿಮಾನ ಬರುವದರ ಜೊತೆಗೆ ಭಾರತಿಯ ಸ್ವಲ್ಪ ಅಭಿಮಾನವೂ ಇರುತ್ತಿತ್ತು. ಏಕೆಂದರೆ ದ್ರೌಪದೀ ದೇಹವು 'ಕೃಷ್ಣಾ ತ್ರಿಲೋಕವನಿತಾsಧಿಕರೂಪಸಾರಾ' ಎಂದು ಹೇಳಿದಂತೆ ವಿಶಿಷ್ಟ ಸೌಂದರ್ಯವುಳ್ಳದ್ದರಿಂದ ಆ ಸೌಂದರ್ಯವು ಆ ದೇಹಕ್ಕೆ ಯಾವಾಗಲೂ ಇರಲು ಭಾರತಿಯ ಸನ್ನಿಧಾನವು ಯಾವಾಗಲೂ ಬೇಕೇ ಬೇಕು. ಆದ್ದರಿಂದ ಭಾರತೀ ದೇವಿಯು ಸ್ವಲ್ಪ ಅಭಿಮಾನ ಮಾಡುತ್ತಲೇ ಇದ್ದರು. ಆ ಭಾರತಿಯ ಜೊತೆಗೆ ವಿಹಾರಕ್ಕಾಗಿ ಭೀಮಸೇನ ದೇವರು ಧರ್ಮ, ಅರ್ಜುನ, ನಕುಲ, ಸಹದೇವರಲ್ಲಿಯೂ ಒಂದೊಂದು ಕಲಾದಿಂದ ಪ್ರವಿಷ್ಟರಾಗಿದ್ದರು. ಅವರು ಭಾರತಿಯ ಜೊತೆಗೆ, ಇತರ ಪಾಂಡವರು ತಮ್ಮ ಪತ್ನಿಯರ ಜೊತೆಗೆ ವಿಹರಿಸುತ್ತಿದ್ದರು. ಹೀಗೆ ಭೀಮಸೇನದೇವರಿಗೆ ಪ್ರತಿನಿತ್ಯ ತಮ್ಮ ಪತ್ನಿಯ ಜೊತೆ ವಿಹಾರವಿದೆ. ಉಳಿದವರಿಗೆ ಮಾತ್ರ ತಮ್ಮ ಪತ್ನಿಯರ ಜೊತೆಗೆ ವಿಹಾರವು ಅವರವರ ಒಂದು ದಿನದಲ್ಲಿ ಮಾತ್ರ. ಹೀಗಾಗಿ ಯಾವ ಯಾವ ದೋಷವೂ ಇಲ್ಲ. ಈ ಎಲ್ಲ ವಿಷಯವೂ 'ಇದಂಚ ತತ್ಸಾದ್ಭುತ ಮುತ್ತಮಂ ತದಾ ದಧಾತಿ ಕೃಷ್ಣಾ ವಪುಷಾತಿ ಮಾನುಷಂ, ಮಹಾನುಭಾವಾ ಕಿಲಸಾಧುಮಧ್ಯಮಾ ಬಭೂವ ಕನ್ಯೈವ ಗತೇಗತೇsಹನಿ' ಎಂಬ ಭಾರತ ಶ್ಲೋಕದಲ್ಲಿ ಹೇಳಲ್ಪಟ್ಟಿದೆ.

ಅವ — ಯುಧಿಷ್ಠಿರಾದಿಗಳಲ್ಲಿ ಪ್ರವಿಷ್ಟನಾದ ಭೀಮನ ರಮಣದ ಪ್ರಕಾರವನ್ನು ಹೇಳುತ್ತಾರೆ.

ಧರ್ಮಾತ್ಮಜಾದಿಷು ಮರುತ್ಪ್ರತಿವಿಷ್ಟಏಷಾಂ ಬುದ್ಧಿಂವಿಮೋಹ್ಯರಮತೇ ಸತತಂತಯಾಯತ್ ॥
ಶುದ್ಧೈವಸಾಹಿತತ ಏವದಿನೇದಿನೇಚ ಸಮ್ಮೋಹತೋ ಮರಣವದ್ಭವತೀಹ ಕನ್ಯಾ ॥ ೧೮೫ ॥

ಧರ್ಮಾತ್ಮಜಾದಿಷು – ಧರ್ಮರಾಜಾದಿಗಳಲ್ಲಿ ಪ್ರತಿವಿಷ್ಟಃ – ಪ್ರವಿಷ್ಟರಾದ ಮರುತ್ – ವಾಯುದೇವರು ಏಷಾಂ – ಈ ಧರ್ಮರಾಜಾದಿಗಳ ಬುದ್ಧಿಂ – ತಿಳಿವಳಿಕೆಯನ್ನು ವಿಮೋಹ್ಯ – ಭಾರತೀ ವಿಷಯದಲ್ಲಿ ಮೋಹಗೊಳಿಸಿ ತಯಾ – ಆ ಭಾರತಿಯಿಂದ ಸತತಂ—ಯಾವಾಗಲೂ ಯತ್ – ಯಾವ ಕಾರಣದಿಂದ ರಮತೇ – ಕ್ರೀಡಿಸುತ್ತಾರೋ ತತಏವ – ಧರ್ಮರಾಜಾದಿಗಳಿಂದ ಕೂಡಿಕೊಂಡಿರುವ ಸಮಯದಲ್ಲಿಯೂ ಕೂಡ ಧರ್ಮರಾಜಾದಿಗಳೊಳಗೆ ಇರತಕ್ಕ ಭೀಮನಿಂದಲೇ ರಮಣ ಮಾಡುವುದರಿಂದ ಸಾ – ಆ ಭಾರತೀಯು ಶುದ್ಧೈವ – ವಾಯು ದೇವರ ಸಂಗಹೊರತು ಅನ್ಯಸಂಗ ರಹಿತಳು ಮರಣವತ್ – ಜ್ಞಾನಿಗಳಿಗೆ ಮರಣ ಸಮಯದಲ್ಲಿ ದೇಹಾಭಿಮಾನವಿಲ್ಲದೆ ಹರಿಸ್ಮರಣೆ ಇರುವುದರಿಂದ ಅವರ ಮರಣದಂತೆ ಸಮ್ಮೋಹತಃ–ದೇಹಾಭಿಮಾನವಿಲ್ಲದಿರುವದರಿಂದಲೂ ಹರಿಸ್ಮರಣೆ ಇರುವದರಿಂದಲೂ ದಿನೇದಿನೇ – ಪ್ರತಿನಿತ್ಯವೂ ಇಹ - ಈ ದೇಹದಲ್ಲಿ ಕನ್ಯೈವಾಭವತ್ – ಪೂರ್ವದಿನವಲ್ಲಿ ಮರಣದಿಂದಲೂ ಮರುದಿನದಲ್ಲಿ ಜನನದಿಂದಲೂ ಕನ್ಯೆಯೇ ಆಗಿದ್ದಳು ಹಿ – ಇದಂ ಚತತ್ಸಾದ್ಭುತಂ" ಎಂದು ಭಾರತದಲ್ಲಿ ಈ ಕಥೆಯು ಪ್ರಸಿದ್ಧವು. ॥ ೧೮೫ ॥

ಅವ — ಇದನ್ನೇ ವಿವರಿಸುತ್ತಾರೆ.

ನೋಸುಪ್ತಿವತ್ತ್ವಿದವತೋsನ್ಯವಶತ್ವತೋಹಿ ದೇಹಸ್ಯಸಂಸ್ಮೃತಿತಏವ ಹರೇರ್ನಮೋಹಃ ॥
ನಾವೇಶವಚ್ಚತತಏವ ಮೃತೇಸ್ವರೂಪನೇತತ್ತ್ವತಃ ಪ್ರತಿದಿನಂ ಜನನಾದ್ಧಿಕನ್ಯಾ ॥ ೧೮೬ ॥

ಇದಂ – ಶ್ಯಾಮಲೆಗೆ ಯುಧಿಷ್ಠಿರನಿಂದ ರಮಣವಾಗುತ್ತಿರಲು ಶಚಿಗೆ ಉಂಟಾಗತಕ್ಕ ಅವಸ್ಥೆಯು ದೇಹಸ್ಯ – ಶರೀರಕ್ಕೆ ಅನ್ಯವಶತ್ವತಃ – ಅನ್ಯಾಧೀನತ್ವವಿರುವುದರಿಂದ ಅಂದರೆ ದೇಹವನ್ನು ಇನ್ನೊಬ್ಬಳ ಅಧೀನವನ್ನಾಗಿ ಮಾಡಿ ತಾನು ದೇಹಾಭಿಮಾನ ಬಿಟ್ಟಿರುವದರಿಂದ, ಹರೇಃ – ಪರಮಾತ್ಮನ, ಸಂಸ್ಮೃತಿತಃ – ದೇಹಾಭಿಮಾನ ಬಿಟ್ಟರೂ ಚೆನ್ನಾಗಿ ಸ್ಮರಣೆ ಇರುವುದರಿಂದ ಸುಪ್ತಿವತ್‌ನೋ – ನಿದ್ರೆಯಂತೆ ಅಲ್ಲ ಮೋಹಃನ – ಮೂರ್ಛೆಯಂತೆಯೂ ಅಲ್ಲ ನಾವೇಶವಚ್ಚ – ಭೂತಾವೇಶದಂತೆಯೂ ಅಲ್ಲ ಸುಪ್ತ್ಯಾದಿ ಮೂರು ಅವಸ್ಥೆಗಳಲ್ಲಿಯೂ ಪರಿಸ್ಮರಣೆ ಇರುವುದಿಲ್ಲ. ಶ್ಯಾಮಲಾದಿ ಸ್ತ್ರೀಯರಿಗಾದರೂ

ಇನ್ನೊಬ್ಬ ಪತಿರಮಣ ಕಾಲದಲ್ಲಿ ದೇಹವಿಸ್ಮರಣೆ ಇದ್ದರೂ ಹರಿಸ್ಮರಣೆಯು ಇರುವುದರಿಂದ ಮೂರು ಅವಸ್ಥೆಯಂತಲ್ಲ ಹಾಗಾದರೆ ಈ ಅವಸ್ಥೆಯು ಯಾವುದು ? ಎಂದರೆ ಹೇಳುತ್ತಾರೆ ಏತತ್ತು – ಈ ಅವಸ್ಥೆಯಾದರೂ ತತಃ – ದೇಹದ ವಿಸ್ಮರಣೆಯಿಂದಲೂ ಹರಿಯ ಸ್ಮರಣೆ ಇರುವುದರಿಂದಲೂ ಮೃತೇರೇವ ಸ್ವರೂಪಮ್ – ಜ್ಞಾನಿಗಳಿಗೆ ಮರಣ ಕಾಲದಲ್ಲಿ ದೇಹಾಭಿಮಾನವಿಲ್ಲದಿದ್ದರೂ ಹರಿಸ್ಮರಣೆ ಇರುವಂತೆ ಮರಣದ್ದೇ ಸ್ವರೂಪವು ಅತಃ – ಆದ್ದರಿಂದ ಪೂರ್ವದಿನದಲ್ಲಿ ಮರಣ ದಿಂದಲೂ ಜನನಾತ್–ಮರುದಿನದಲ್ಲಿ ಜನ್ಮದಿಂದಲೂ ಪ್ರತಿದಿನಂ-ಪ್ರತಿನಿತ್ಯವೂ ಕನ್ಯೈವಾಭವತ್–ಕನ್ಯೆಯೇ ಆದಳು. ॥೧೮೬॥

ಏವಂ ಸವಾಯುರನುವಿಷ್ಟಯುಧಿಷ್ಠಿರಾದಿ ಭೀಮಾತ್ಮನೈವರಮತೇ ಸತತಂ ತಯೈಕಃ ॥
ಅನ್ಯಾದೃಶಂಹಿ ಸುರಭುಕ್ತಿರತೋಽನ್ಯರೂಪಾ ಮಾನುಷ್ಯಭುಕ್ತಿರಿತಿ ನಾತ್ರವಿಚಾರ್ಯಮಸ್ತಿ ॥ ೧೮೭ ॥

ಏವಂ – ಈ ರೀತಿಯಾಗಿ ಅನುವಿಷ್ಟಯುಧಿಷ್ಠಿರಾದಿಭೀಮಾತ್ಮನಾ – ಧರ್ಮರಾಜಾದಿಗಳಲ್ಲಿ ಪ್ರವಿಷ್ಟವಾದ ವಾಯು ದೇವರ ನಾಲ್ಕು ಅಂಶಗಳಿಂದಲೂ ಭೀಮ ಸ್ವರೂಪದಿಂದಲೂ ಏಕೋವಾಯುಃ – ಒಬ್ಬ ವಾಯುದೇವರು ತಯೈವ – ಆ ಭಾರತಿಯಿಂದಲೇ ಸತತಂ – ಯಾವಾಗಲೂ ರಮತೇ – ಕ್ರೀಡಿಸುತ್ತಾರೆ ಒಂದು ಶರೀರದಲ್ಲಿರತಕ್ಕ ಇಬ್ಬರು ಸ್ತ್ರೀಯರಿಂದ ಒಬ್ಬ ಪುರುಷನಲ್ಲಿರತಕ್ಕ ಇಬ್ಬರಿಂದ ರಮಣವು ಹೇಗೆ ಯುಕ್ತವಾಗುತ್ತದೆ ಎಂಬುದಕ್ಕೆ ಸಮಾಧಾನವನ್ನು ಹೇಳುತ್ತಾರೆ. ಸುರಭುಕ್ತಿಃ – ದೇವತೆಗಳು ಭೋಗವು ಅನ್ಯಾದೃಶಾ – ಮನುಷ್ಯ ಭೋಗಕ್ಕಿಂತ ವಿಲಕ್ಷಣವಾದದ್ದು ಮಾನುಷ್ಯಭುಕ್ತಿಃ – ಮನುಷ್ಯರ ಭೋಗವು ಅತಃಅನ್ಯರೂಪಾ – ದೇವತೆಗಳ ಭೋಗಕ್ಕಿಂತ ವಿಲಕ್ಷಣವಾದದ್ದು ಇತಿ – ಈ ಕಾರಣದಿಂದ ಅತ್ರ – ಈ ಹಿಂದೆ ಹೇಳಿದ ವಿಷಯದಲ್ಲಿ ವಿಚಾರ್ಯಂ ನಾಸ್ತಿ – ವಿಚಾರ ಮಾಡುವ ವಿಷಯವಿಲ್ಲ; ನಿಶ್ಚಿತವೇ. ॥ ೧೮೭ ॥

ವಾಸಿಷ್ಠಯಾದವ ವೃಷಾನಪಿಕೇಶವೌ ತೌ ತತ್ರೋಷತುಃಪರಮಸೌಹೃದತೋ ಹಿತೇಷು ॥
ತಾಭ್ಯಾಮನಂತ ಗುಣಪೂರ್ಣಸುಖಾತ್ಮಕಾಭ್ಯಾಂ ಪಾರ್ಥಾಶ್ಚತೇಮುಮುದಿರೇಯುತಸತ್ಕಥಾಭಿಃ ॥೧೮೮॥

ವಾಸಿಷ್ಠಯಾದವವೃಷೌ – ವಸಿಷ್ಠ ಕುಲದಲ್ಲಿಯೂ ಯಾದವ ಕುಲದಲ್ಲಿಯೂ ಶ್ರೇಷ್ಠರಾದ ಕೇಶವೌ – ಬ್ರಹ್ಮ ರುದ್ರ ಪ್ರೇರಕರಾದ ತೌ – ಆ ಕೃಷ್ಣವ್ಯಾಸರು ತೇಷು – ಆ ಪಾಂಡವರಲ್ಲಿ ಪರಮಸೌಹೃದತಃ – ಉತ್ತಮವಾದ ಸ್ನೇಹದಿಂದ ತತ್ರ – ಆ ಪಾಂಡವರ ಮನೆಯಲ್ಲಿ ಊಷತುಃ – ವಾಸಮಾಡಿದರು ಅನಂತಗುಣಪೂರ್ಣಸುಖಾತ್ಮಕಾಭ್ಯಾಂ – ಅಪರಿಮಿತ ಗುಣಗಳಿಂದ ಪೂರ್ಣರಾದ ಆನಂದಸ್ವರೂಪರಾದ ತಾಭ್ಯಾಂ – ಆ ಕೃಷ್ಣವ್ಯಾಸರಿಂದ ಯುತಸತ್ಕಥಾಭಿಃ – ಪರಸ್ಪರ ಸಂಘಾಷಣದಿಂದ ಕೂಡಿದ ಯೋಗ್ಯ ಕಥೆಗಳಿಂದ ಅಥವಾ ವೇದಪುರಾಣಾದಿ ಕಥೆಗಳಿಂದ ತೇಪಾರ್ಥಾಃ – ಆ ಪಾಂಡವರು ಮುಮುದಿರೇ – ಸಂತೋಷಪಟ್ಟರು. ॥ ೧೮೮ ॥

ಅವ — ಪಾಂಡವರ ವಿವಾಹವನ್ನು ಹೇಳಿ ದುರ್ಯೋಧನಾದಿಗಳ ವಿವಾಹವನ್ನು ಹೇಳುವುದಕ್ಕೋಸ್ಕರ ಪೂರ್ವ ಕಥೆಯನ್ನು ಹೇಳುತ್ತಾರೆ.

ಪೂರ್ವಂಹಿತೇಷು ವನಗೇಷುಬಭೂವಕಾಶಿರಾಜ್ಞಃ ಸುತಾಕೃತ ಉರುಕ್ಷಿತಿಪಾಲಯೋಗಃ ॥
ತತ್ರಸ್ವಯಂವರಗತಾಂ ಧೃತರಾಷ್ಟ್ರಪುತ್ರಃ ಕನ್ಯಾಂಬಲಾಜ್ಜಗೃಹ ಆತ್ಮಬಲಾತಿದೃಪ್ತಃ ॥ ೧೮೯ ॥

ಪೂರ್ವಂ – ದ್ರೌಪದೀ ವಿವಾಹಕ್ಕಿಂತ ಮೊದಲು ತೇಷು – ಆ ಪಾಂಡವರು ವನಗೇಷುಸತ್ಸು – ಹಿಡಿಂಬನ ವನದಲ್ಲಿರುತ್ತಿರಲು ಕಾಶಿರಾಜ್ಞಃ – ಕಾಶಿರಾಜನ ಸುತಾಕೃತೇ – ಮಗಳ ನಿಮಿತ್ತವಾಗಿ ಉರುಕ್ಷಿತಿಪಾಲಯೋಗಃ – ಬಹಳ ರಾಜರ ಸಮ್ಮೇಲನವು ಬಭೂವ – ಆಯಿತು ತತ್ರ – ಅಲ್ಲಿ ಧೃತರಾಷ್ಟ್ರಪುತ್ರಃ – ಧೃತರಾಷ್ಟ್ರನ ಮಗನಾದ ದುರ್ಯೋಧನನು ಸ್ವಯಂವರಗತಾಂ – ಸ್ವಯಂವರದಲ್ಲಿರತಕ್ಕ ಕನ್ಯಾಂ – ಕನ್ನಿಕೆಯನ್ನು ಆತ್ಮಬಲಾತಿದೃಪ್ತಸ್ಸನ್ – ತನ್ನ ಸಾಮರ್ಥ್ಯದಿಂದ ಅತಿಮತ್ತನಾಗಿ ಬಲಾತ್ – ಬಲಾತ್ಕಾರದಿಂದ ಜಗೃಹೇ – ಹಿಡಿದುಕೊಂಡನು. ॥ ೧೮೯ ॥

ಪೂರ್ಹಿಂಹಿರಾಜಗಣನೇ ಮಗಧಾಧಿರಾಜಃ ಸಂಖ್ಯಾತಇತ್ಯತಿರುಷಾ ಪ್ರಗೃಹೀತಕನ್ಯೇ ॥
ದುರ್ಯೋಧನೇ ನೃಪತಯೋಯಯುಯುಧುಸ್ತತೇನ ಭಗ್ನಾಶ್ಚಕರ್ಣಸಹಿತೇನ ಸಹಾನುಜೇನ ॥ ೧೯೦ ॥

ರಾಜಗಣನೇ – ರಾಜರನ್ನು ಲೆಕ್ಕವಮಾಡುವಾಗ ಮಃಗಧಾಧಿರಾಜಃ – ಜರಾಸಂಧನು ಪೂರ್ವಂ – ಮೊದಲನೆಯವನಾಗಿ ಸಂಖ್ಯಾತಃ – ಪರಿಗಣಿಸಲ್ಪಟ್ಟನು ಇತಿ – ಈ ನಿಮಿತ್ತದಿಂದ ಅತಿರುಷಾ – ಅತ್ಯಂತ ಕೋಪದಿಂದ ದುರ್ಯೋಧನೇ – ದುರ್ಯೋಧನನು ಪ್ರಗೃಹೀತಕನ್ಯೇಸತಿ – ಸ್ವೀಕರಿಸಲ್ಪಟ್ಟ ಕನ್ಯೆಯುಳ್ಳವನಾಗುತ್ತಿರಲು ನೃಪತಯಃ ರಾಜರು ತೇನ – ಆ ದುರ್ಯೋಧನನಿಂದ ಯುಯುಧುಸ್ಮ – ಯುದ್ಧ ಮಾಡಿದರು ಕರ್ಣಸಹಿತೇನ – ಕರ್ಣನಿಂದ ಕೂಡಿದ ಸಹಾನುಜೇನ – ತಮ್ಮಂದಿರಿಂದ ಕೂಡಿದ ತೇನ – ಆ ದುರ್ಯೋಧನನಿಂದ ಭಗ್ನಾಶ್ಚ – ಪರಾಜಿತರಾದರು. ॥ ೧೯೦ ॥

ಭಗ್ನೇಷುತೇಷು ಪುನರಾತ್ತಶರಾಸನೇಷು ಕರ್ಣೋಜಗಾದಧೃತರಾಷ್ಟ್ರ ಸುತಂಪ್ರಯಾಹಿ ।।
ಯುಕ್ತಃಸಹೋದರ ಜನೈರ್ಗುರುಭೀಷ್ಮ ಮುಖ್ಯೈ ರ್ಯುಕ್ತಸ್ಯತೇನಪುರಮೇತ್ಯ ಹಿಧರ್ಷಣೇಶಾಃ ।।೧೯೧।।

ಭಗ್ನೇಷು – ಪರಾಜಿತರಾದ ತೇಷು – ಆ ಜರಾಸಂಧಾದಿಗಳು ಪುನಃ – ಮತ್ತೊಮ್ಮೆ ಆತ್ತಶರಾಸನೇಷುಸತ್ಸು – ಸ್ವೀಕರಿಸಲ್ಪಟ್ಟ ಧನುಸ್ಸುಳ್ಳವರಾಗುತ್ತಿರಲು ಕರ್ಣಃ – ಕರ್ಣನು ಧೃತರಾಷ್ಟ್ರಸುತಂ - ದುರ್ಯೋಧನನ್ನು ಕುರಿತು ತ್ವಂ – ನೀನು ಸಹೋದರಜನೈಃ – ತಮ್ಮಂದಿರಿಂದ ಯುಕ್ತಸ್ಸನ್ – ಕೂಡಿದವನಾಗಿ ಪ್ರಯಾಹಿ – ಹಸ್ತಿನಾವತಿಗೆ ಹೋಗು ತೇ – ಆ ಜರಾಸಂಧಾದಿಗಳು ಗುರುಭೀಷ್ಮಮುಖ್ಯೈಃ – ಗುರುಗಳಾದ ಭೀಷ್ಮರೇ ಪ್ರಧಾನರಾಗಿ ಉಳ್ಳವರಿಂದ ಯುಕ್ತಸ್ಯ – ಕೂಡಿದ ತೇ – ನಿನ್ನ ಪುರಂ – ಪಟ್ಟಣವನ್ನು ಏತ್ಯ – ಹೊಂದಿ ಧರ್ಷಣೇಶಾಃ – ಬಲಾತ್ಕರಿಸುವುದರಲ್ಲಿ ಸಮರ್ಥರು ನ – ಅಲ್ಲ ಇತಿ – ಎಂದು ಜಗಾದ – ಹೇಳಿದನು. ॥ ೧೯೧ ॥

ಏಕಾಂತತೋ ಜಯಮವೀಕ್ಷ್ಯಚ ನಾನುಯಾತಿ ಬಾರ್ಹದ್ರಥಃಪುರಗತಸ್ಯ ಜಯೇನನಿಷ್ಠಾ ॥
ದ್ರೌಣಿಂಹಿರುದ್ರತನು ಮೇಷಸದಾವಿಜಾನನ್ನೋತೇನಯುದ್ಧಮಭಿವಾಂಛತಿ ರುದ್ರಭಕ್ತಃ ॥ ೧೯೨ ॥

ಬಾರ್ಹದ್ರಥಃ – ಜರಾಸಂಧನು ಏಕಾಂತತಃ – ನಿಶ್ಚಯವಾಗಿ ಜಯಂ – ಜಯವನ್ನು ಅವೀಕ್ಷ್ಯ – ಆಗುವದೆಂದು ನಿಶ್ಚಯಿಸಿಕೊಳ್ಳದೇ ನಾನುಯಾತಿ – ಯುದ್ಧಕ್ಕೆ ಹೋಗುವದಿಲ್ಲ ಪುರಗತಸ್ಯ - ಪಟ್ಟಣದಲ್ಲಿರುವ ತೇ – ನಿನ್ನ ಜಯೇ – ಜಯದಲ್ಲಿ ನಿಷ್ಠಾ – ನಿಶ್ಚಯವು ನ – ಇಲ್ಲ ಅಂದರೆ ಪಟ್ಟಣದಲ್ಲಿರುವ ನಿನ್ನನ್ನು ಜಯಿಸುತ್ತೇನೆಂಬ ನಿಶ್ಚಯವು ಅವನಿಗಿಲ್ಲ. ನಿನ್ನನ್ನು ಜಯಿಸಲು ಅಲ್ಲಿಗೆ ಬರುವುದಿಲ್ಲವೆಂಬುದಕ್ಕೆ ಇನ್ನೊಂದು ಕಾರಣವನ್ನು ಹೇಳುತ್ತಾರೆ ರುದ್ರಭಕ್ತಃ – ರುದ್ರದೇವರ ಭಕ್ತನಾದ ಏಷಃ – ಈ ಜರಾಸಂಧನು ದ್ರೌಣಿಂ – ಅಶ್ವತ್ಥಾಮನನ್ನು ರುದ್ರತನುಂ – ರುದ್ರನ ಅವತಾರನನ್ನಾಗಿ ಸದಾ – ಯಾವಾಗಲೂ ವಿಜಾನನ್ ಸನ್ – ತಿಳಿಯುವವನಾಗಿ ತೇನ – ಆ ಅಶ್ವತ್ಥಾಮನಿಂದ ಯುದ್ಧಂ – ಸಮರವನ್ನು ನಾಭಿವಾಂಛತಿ– ಇಚ್ಛಿಸುವುದಿಲ್ಲ. ॥ ೧೯೨ ॥

ಏಕೋಽಹಮೇವ ನೃಪತೀನ್ಪ್ರತಿಯೋಧಯಿಷ್ಯಏತೈರ್ಮಯಿಪ್ರವಿಜಿತೇಽಪಿನತೇಽಸ್ತ್ಯಕೀರ್ತಿಃ ॥
ಏಕಂಚತೇಽನುಜ ಮಿಮೇಯದಿಪೌರುಷೇಣ ಗೃಹ್ಣೀಯುರತ್ರತವಕೀರ್ತಿರುಪೈತಿನಾಶಂ ॥ ೧೯೩ ॥

ಅಹಂ – ನಾನು ಏಕಏವ – ಒಬ್ಬನೇ ನೃಪತೀನ್ – ರಾಜರುಗಳನ್ನು ಪ್ರತಿ ಕುರಿತು ಯೋಧಯಿಷ್ಯೇ – ಯುದ್ಧ ಮಾಡುವೆನು ಏತೈಃ – ಈ ರಾಜರಿಂದ ಮಯಿ – ನಾನು ಪ್ರವಿಜಿತೇಽಪಿ – ಪರಾಜಿತನಾದರೂ ತೇ – ನಿನಗೆ ಅಕೀರ್ತಿಃ – ಅಪಯಶಸ್ಸು ನಾಸ್ತಿ – ಇಲ್ಲ ಇಮೇ – ಈ ರಾಜರು ತೇ – ನಿನ್ನ ಏಕಂ ಅನುಜಂ – ಒಬ್ಬ ತಮ್ಮನನ್ನಾದರೂ ಪೌರುಷೇಣ – ತಮ್ಮ ಪರಾಕ್ರಮದಿಂದ ಯದಿ ಗೃಹ್ಣೀಯುಃ – ಹಿಡಿದ ಪಕ್ಷದಲ್ಲಿ ಅತ್ರ – ಇಲ್ಲಿ ತವ – ನಿನ್ನ ಕೀರ್ತಿಃ – ಯಶಸ್ಸು ನಾಶಂ – ನಾಶವನ್ನು ಉಪೈತಿ – ಹೊಂದುತ್ತದೆ. ॥ ೧೯೩ ॥

ಭೀಷ್ಮಾದಯೋಽಪಿ ನಹಿಂಯೋಧಯಿತುಂ ಸಮರ್ಥಾಃರಾಜ್ಞಾಽನೇನ ತತಏವಚಬಾಹ್ಲಿಕೋಽಸ್ಯ ॥
ಭೃತ್ಯೋಬಭೂವ ಸಹಿಭೀಷ್ಮ ಮುಯಂ ಯುಧೇಽಗಾದ್ರಾಜಾನಹೀತಿ ನಚತೇನವಿರೋಧ ಆಸೀತ್ ॥ ೧೯೪ ॥

ಭೀಷ್ಮಾದಯೋಪಿ – ಭೀಷ್ಮಾದಿಗಳೂ ಕೂಡ ಅನೇನರಾಜ್ಞಾ – ಈ ರಾಜನಾದ ಜರಾಸಂಧನಿಂದ ಯೋಧಯಿತುಂ – ಯುದ್ಧಮಾಡಲು ನ ಸಮರ್ಥಾಃ – ಶಕ್ತರಲ್ಲ ತತಏವ – ಅಸಮರ್ಥನಾದ್ದರಿಂದಲೇ ಬಾಹ್ಲೀಕಃ – ಬಾಹ್ಲೀಕ ರಾಜನು ಅಸ್ಯ–

ಈ ಜರಾಸಂಧನ ಭೃತ್ಯಃ – ಸೇವಕನು ಬಭೂವ – ಆದನು ಭೀಷ್ಮಃ ರಾಜಾ ನಹಿ – ಭೀಷ್ಮನು ರಾಜನಲ್ಲ ಇತಿ – ಈ ಕಾರಣದಿಂದ ಅಯಂ – ಈ ಜರಾಸಂಧನು ಯುಧೇ – ಯುದ್ಧಕ್ಕೋಸ್ಕರ ಭೀಷ್ಮಂ – ಭೀಷ್ಮನನ್ನು ಕುರಿತು ನಾಗಾತ್ – ಹೋಗಲಿಲ್ಲ ತೇನ – ಆ ಕಾರಣದಿಂದ ಭೀಷ್ಮನಿಂದ ವಿರೋಧಃ – ಜರಾಸಂಧನಿಗೆ ಜಗಳವು ನಾಸೀತ್ – ಆಗಿಲ್ಲ. ॥ ೧೯ಳ ॥

ಭಾ.ಅ. ೧೮೫–೧೯೪ ಧರ್ಮಾದಿಗಳಲ್ಲಿ ಪ್ರವಿಷ್ಟರಾಗಿರುವ ವಾಯುದೇವರು ಅವರ ಬುದ್ಧಿಯನ್ನು ಶ್ರೀಭಾರತೀದೇವಿಯ ಬಗ್ಗೆ ಮೋಹಗೊಳಿಸಿ ವಿಹರಿಸುತ್ತಿದ್ದದ್ದರಿಂದ ಶ್ರೀಭಾರತೀದೇವಿಗೆ ಇತರ ಪುರುಷರ ಸಂಪರ್ಕವಿಲ್ಲ ಪಾದ್ದರಿಂದ ಅವಳು ಸದಾಶುದ್ಧಳೇ ಆಗಿದ್ದಾಳೆ. ಪ್ರತಿದಿನವೂ ಅಭಿಮಾನ ರಾಹಿತ್ಯ ಬರುತ್ತಿರುವದರಿಂದ ಪ್ರತಿದಿನವೂ ಮರಣವಿದ್ದಂತೆ. ಹಾಗೂ ಪ್ರತಿದಿನವೂ ಅಭಿಮಾನ ಹುಟ್ಟುವದರಿಂದ ಜನನವೂ ಇದೆ. ಹೀಗಾಗಿ ನಿತ್ಯವೂ ಕನ್ಯೆಯೇ. ಈ ಅಭಿಮಾನ ರಾಹಿತ್ಯದ ಅವಸ್ಥೆಯು ಮರಣದಂತೆ ಏಕೆಂದರೆ – ಆಗ ದೇಹ ಸ್ಮರಣೆಯು ಇಲ್ಲದಿದ್ದರೂ ಶ್ರೀಹರಿಸ್ಮರಣೆಯು ಇರುವದರಿಂದ ಆ ಅವಸ್ಥೆಯು ಸಪ್ತ್ಯವಸ್ಥೆ (ನಿದ್ರೆ) ಯಂತೆ ಮೂರ್ಛಾಪಸ್ಥೆಯಂತೆಯಾಗಲೀ ಅಲ್ಲ. ಆ ಅವಸ್ಥೆಗಳಲ್ಲಿ ಯಾವ ಸ್ಮರಣೆಯೂ ಇರುವದಿಲ್ಲ. ಆದ್ದರಿಂದ ಜ್ಞಾನಿಗಳಿಗೆ ದೇಹಾಭಿಮಾನವಿರದಿದ್ದರೂ, ಶ್ರೀಹರಿಸ್ಮರಣವಿರುವಾಗ ಮರಣದಂತೆ ಆದನ್ನು ಕರೆಯುವಂತೆ ಇಲ್ಲಿಯೂ ಹಾಗೆ ಇಟ್ಟುಕೊಳ್ಳಬೇಕು. ದೇವತೆಗಳ ವಿಹಾರವು, ಮನುಷ್ಯವಿಹಾರದಿಂದ ಪೂರ್ಣಭಿನ್ನವಾದ್ದರಿಂದ ಇದರ ಬಗ್ಗೆ ಎಳ್ಳಷ್ಟೂ ಸಂಶಯವನ್ನು ಹೊಂದಬಾರದು.

ಶ್ರೀಕೃಷ್ಣ–ಶ್ರೀವೇದವ್ಯಾಸರಿಬ್ಬರೂ ಪ್ರೀತಿಯಿಂದ ಪಾಂಡವರ ಜೊತೆಗೆ ಪಾಂಡುವಿನ ಗೃಹದಲ್ಲಿ ವಾಸಮಾಡಿಕೊಂಡಿದ್ದರು. ಅವರಿಬ್ಬರೂ ಹೇಳುವ ವೇದ–ಪುರಾಣೋಕ್ತವಾದ ತತ್ವವಿಚಾರಗಳಿಂದ ಪಾಂಡವರು ತುಂಬಾ ಸಂತೋಷದಿಂದ ಇದ್ದರು. ಪಾಂಡವರು ಇನ್ನೂ ವನದಲ್ಲಿರುವಾಗ (ದ್ರೌಪದೀ ವಿವಾಹಕ್ಕಿಂತ ಮೊದಲು) ಕಾಶೀರಾಜನ ಮಗಳಾದ ಭಾನುಮತಿಯ ಸಲುವಾಗಿ ಸ್ವಯಂವರವಿತ್ತು. ಅಲ್ಲಿ ಬಹು ರಾಜರ ಸಮಾಗಮವೂ ಆಗಿತ್ತು. ಆ ಸಭೆಯಲ್ಲಿ ಜರಾಸಂಧನ ಹೆಸರನ್ನು ಮೊದಲು ಹೇಳಿದ್ದರಿಂದ ಸಿಟ್ಟಿಗೆದ್ದ ದುರ್ಯೋಧನನು ತನ್ನ ಬಲದ ಬಗ್ಗೆ ಅಹಂಕಾರದಿಂದ ಕನ್ಯೆಯನ್ನು ಬಲಾತ್ಕಾರವಾಗಿ ಅಪಹರಿಸಿಕೊಂಡು ಹೊರಟನು. ಆಗ ಉಳಿದ ರಾಜರು ಇವನ ಜೊತೆಗೆ ಯುದ್ಧಕ್ಕೆ ಬಂದರು. ಕರ್ಣನ, ಅನುಜರ ಸಹಾಯದಿಂದ ಅವರನ್ನೆಲ್ಲ ಸೋಲಿಸಿದನು. ಸೋತ ರಾಜರೂ ಪುನಃ ಯುದ್ಧಕ್ಕೆ ಸಿದ್ಧರಾಗಿ ಬಂದಾಗ – ಕರ್ಣನು ದುರ್ಯೋಧನನಿಗೆ —"ನೀನು ಸಹೋದರ ಸಹಿತನಾಗಿ ಊರಿಗೆ ಹೋಗು. ಅಲ್ಲಿ ಭೀಷ್ಮಾದಿಗಳ ಬಲವಿದ್ದದ್ದರಿಂದ ಅಲ್ಲಿಗೆ ಬಂದು ಇವರು ಯಾರೂ ಯುದ್ಧ ಮಾಡಲಾರರು. ಜರಾಸಂಧನೂ ಕೂಡ ತನಗೆ ಜಯವಾಗುವದೆಂದು ನಿಶ್ಚಯವಿದ್ದಾಗ ಮಾತ್ರ ಯುದ್ಧಕ್ಕೆ ಹೊರಡುವನು. ನಮ್ಮ ಪುರವು ದುರ್ಗಮ್ಯವಾದ್ದರಿಂದ ಅಲ್ಲಿಗೆ ಬಂದು ಯುದ್ಧ ಮಾಡಿ ಗೆಲ್ಲುವ ವಿಶ್ವಾಸ ಅವನಿಗಿಲ್ಲ; ಮತ್ತು ಶ್ರೀಅಶ್ವತ್ಥಾಮರನ್ನು ರುದ್ರಾವತಾರಿಯೆಂದು ತಿಳಿದಿರುವ ರುದ್ರಭಕ್ತನಾದ ಈ ಜರಾಸಂಧನು ಅವನ ಜೊತೆಗೆ ಯುದ್ಧ ಮಾಡಬಯಸುವದಿಲ್ಲ. ಹೀಗಾಗಿ ಅಲ್ಲಿ ಭಯವಿಲ್ಲ. ಇಲ್ಲಿ ನಾನೊಬ್ಬನೇ ಇವರೆಲ್ಲರ ಜೊತೆಗೆ ಯುದ್ಧಮಾಡಿ ಗೆಲ್ಲುತ್ತೇನೆ. ನಾನು ಒಂದು ವೇಳೆ ಸೋತರೂ ನಿನಗೆ ಅಪಕೀರ್ತಿ ಇಲ್ಲ. ಆದರೆ ನಿಮ್ಮ ಅಣ್ಣ–ತಮ್ಮಂದಿರಲ್ಲಿ ಒಬ್ಬರು ಸೋತರೂ ನಿನಗೆ, ನಿನ್ನ ಕುಲಕ್ಕೆ ಅಪಕೀರ್ತಿ ಬರುವದು. ಯದ್ಯಪಿ ಭೀಷ್ಮರು ಈ ಜರಾಸಂಧನ ಜೊತೆಗೆ ಯುದ್ಧ ಮಾಡಲು ಸಮರ್ಥರಲ್ಲ. ಅಷ್ಟು ಬಲಿಷ್ಠನು ಈ ಜರಾಸಂಧನು. ಆದ್ದರಿಂದಲೇ ಬಾಹ್ಲೀಕರಾಜನೂ ಇವನಿಗೆ ಅಧೀನನಾಗಿರುವನು. ಭೀಷ್ಮನು ರಾಜನಲ್ಲವೆಂದು ಅವನ ಜೊತೆಗೆ ಜರಾಸಂಧನು ಯುದ್ಧಮಾಡದೇ ಇರುವದರಿಂದ ಭೀಷ್ಮನು ಅಜೇಯನೆಂದು ಪ್ರಸಿದ್ಧನಾಗಿರುವನು" ಎಂದು ಹೇಳಿದನು.

ಇತ್ಯುಕ್ತ ಆಶು ಸವಿಮೃಶ್ಯಯಯೌ ಪುರಂ ಸ್ವಂ ಕರ್ಣೋಽಪಿ ತೈಃ ಪ್ರತಿಯುಯೋಧ ಜಿಗಾಯ ಚೈತಾನ್ ॥
ಕರ್ಣಸ್ಯ ವೀರ್ಯಮಗಣಯ್ಯ ಜರಾಸುತೋಽಪಿ ಹ್ಯೇಕೈಕಮೇವ ನೃಪತಿಂ ಸದಿದೇಶಯೋದ್ಧುಂ ॥ ೧೯೫ ॥

ಇತಿ – ಈ ರೀತಿಯಾಗಿ ಉಕ್ತಃ – ಹೇಳಿಸಿಕೊಳ್ಳಲ್ಪಟ್ಟ ಸಃ ಆ ದುರ್ಯೋಧನನು ವಿಮೃಶ್ಯ – ವಿಚಾರಮಾಡಿ ಆಶು—ಕೂಡಲೇ ಸ್ವಂ ಪುರಂ—ತನ್ನ ಪಟ್ಟಣವನ್ನು ಕುರಿತು ಯಯೌ—ಹೋದನು ಕರ್ಣೋಪಿ—ಕರ್ಣನಾದರೂ ತೈಃ—ಆ ರಾಜರಿಂದ ಕೂಡಿ ಪ್ರತಿಯುಯೋಧ—ಯುದ್ಧ ಮಾಡಿದನು ಏತಾನ್—ಈ ರಾಜರನ್ನು ಜಿಗಾಯ—ಗೆದ್ದನು ಸ ಜರಾಸು

ತೋಪಿ—ಆ ಜರಾಸಂಧನಾದರೂ ಕರ್ಣಸ್ಯ—ಕರ್ಣನ ವೀರ್ಯಂ—ಪರಾಕ್ರಮವನ್ನು ಅಗಣಯ್ಯ—ಲೆಕ್ಕಿಸದೆ ಏಕೈಕಂ ನೃಪತಿಂ—ಒಬ್ಬೊಬ್ಬ ರಾಜನನ್ನೇ ಯೋದ್ಧುಂ—ಯುದ್ಧ ಮಾಡುವದಕ್ಕೋಸ್ಕರ ದಿದೇಶ—ಕಳುಹಿಸಿದನು. ॥ ೧೯೫ ॥

ಸರ್ವೇಷುತೇಷು ವಿಜಿತೇಷ್ವಭಿಜಗ್ಮಿವಾನ್ಸಯೋದ್ಧುಂ ಬೃಹದ್ರಥಸುತೋಽಪ್ಯಮುನಾರಥೇನ ॥
ತಂಚೈವರಾಮವರತೋವಿರಥಂ ವಿಶಸ್ತ್ರಂಚಕ್ರೇಸಚೈನಮುಥ ಮುಷ್ಟಿಭಿರಭ್ಯಪೇತೌ ॥ ೧೯೬ ॥

ತೇಷು ಸರ್ವೇಷು – ಆ ಎಲ್ಲಾ ರಾಜರು ವಿಜಿತೇಷುಸತ್ಸು – ಪರಾಜಿತರಾಗುತ್ತಿರಲು ಬೃಹದ್ರಥಸುತಃ – ಬೃಹದ್ರಥನ ಮಗನಾದ ಸಃ – ಆ ಜರಾಸಂಧನು ಅಮುನಾ – ಈ ಕರ್ಣನಿಂದ ಯೋದ್ಧುಂ – ಯುದ್ಧ ಮಾಡಲು ರಥೇನ – ಸ್ಯಂದನದಿಂಡ ಅಭಿಜಗ್ಮಿವಾನ್ – ಹೋದನು ಸಚ – ಆ ಕರ್ಣನೂ ಕೂಡ ರಾಮವರತಃ – ಪರಶುರಾಮ ದೇವರ ವರದಿಂದ ತಂ – ಆ ಜರಾಸಂಧನನ್ನು ವಿರಥಂ – ರಥರಹಿತನನ್ನಾಗಿಯೂ ವಿಶಸ್ತ್ರಂ ಶಸ್ತ್ರರಹಿತನನ್ನಾಗಿಯೂ ಚಕ್ರೇ – ಮಾಡಿದನು ಸಚ – ಜರಾಸಂಧನೂ ಕೂಡ ಏನಂ – ಈ ಕರ್ಣನನ್ನು ವಿರಥಂ ವಿಶಸ್ತ್ರಂ ಚಕ್ರೇ – ರಥವಿಲ್ಲದವನನ್ನಾಗಿಯೂ, ಶಸ್ತ್ರವಿಲ್ಲದವನನ್ನಾಗಿಯೂ ಮಾಡಿದನು. ಅಥ – ಅನಂತರ ಮುಷ್ಟಿಭಿಃ – ಮುಷ್ಟಿಗಳಿಂದ ಅಭ್ಯಪೇತೌ – ಯುದ್ಧ ಮಾಡಿದರು. ॥೧೯೬॥

ಸಂಧೌ ಯದೈನಜರಯಾ ಪ್ರತಿಸಂಧಿತಸ್ಯ ಕರ್ಣೋಜಘಾನ ನಪರತ್ರತುತೋಷರಾಜಾ ॥
ನಜ್ಞಾತವೇತದಪಿಹೋ ಹಲಿನಾತದೇತತ್ ಜ್ಞಾತಂತ್ವಯಾ ಭವ ತತೋವಮುಭೃತ್ಯವಿವ ॥ ೧೯೭ ॥

ಕರ್ಣಃ – ಕರ್ಣನು ಯದಾ – ಯಾವಾಗ ಜರಯಾ – ಜರೆಯೆಂಬ ರಾಕ್ಷಸಿಯಿಂದ ಸಂಧಿತಸ್ಯ ಒಟ್ಟು ಕೂಡಿಸಲ್ಪಟ್ಟ ಜರಾಸಂಧನ ಸಂಧಾವೇವ – ದೇಹದ ಸಂಧಿಯಲ್ಲಿಯೇ ಜಘಾನ – ಹೊಡೆದನೋ ಪರತ್ರ – ಸಂಧಿಯಿಂದ ಬೇರೆ ಸ್ಥಳದಲ್ಲಿ ನ ಜಘಾನ – ಹೊಡೆಯಲಿಲ್ಲವೋ ತದಾ – ಆಗ ರಾಜಾ - ಜರಾಸಂಧನು ತುತೋಷ – ಸಂತೋಷ ಪಟ್ಟನು. ಏತತ್ – ಈ ಮರ್ಮಸ್ಥಾನವು ಹಲಿನಾಪಿ – ಬಲರಾಮನಿಂದಲೂ ಕೂಡ ನ ಜ್ಞಾತಂ – ತಿಳಿಯಲ್ಪಡಲಿಲ್ಲ ತತ್ – ಬಲರಾಮನಿಂದ ತಿಳಿಯಲ್ಪಡದ ಏತತ್ – ಈ ನನ್ನ ಮರ್ಮಸ್ಥಾನವು ತ್ವಯಾ – ನಿನ್ನಿಂದ ಜ್ಞಾತಂ – ತಿಳಿಯಲ್ಪಟ್ಟಿತು ಹೋ – ಆಶ್ಚರ್ಯವು ತತಃ – ಮರ್ಮಜ್ಞನಾದ್ದರಿಂದ ತ್ವಂ – ನೀನು ಮಮ – ನನ್ನ ಭೃತ್ಯವಿವ – ಸೇವಕನೇ ಭವ – ಆಗು. ॥ ೧೯೭ ॥

ಏವಂವಿಧಂಸುಕುಶಲಂ ಬಹುಯುದ್ಧಶೌಂಡಂ ನತ್ವಾಂಹನಿಷ್ಯಉತತೇ ಪಿತುರೇವಪೂರ್ವಂ ॥
ಬಾಹ್ವೋರ್ಬಲಾದಭಿಹೃತಂ ಹಿ ಮಯಾಂಗರಾಜ್ಯಂತತ್ತ್ವಂಗೃಹಾಣ ಯುಧಿಕರ್ಮಕರಶ್ಚಮೇಸ್ಯಾಃ॥೧೯೮॥

ಏವಂವಿಧಂ – ಈ ರೀತಿಯಾಗಿ ಸುಕುಶಲಂ – ಅತಿ ನಿಪುಣನಾದ ಬಹುಯುದ್ಧಶೌಂಡಂ ಬಹಳ ಪ್ರಕಾರ ಯುದ್ಧದಲ್ಲಿ ದಕ್ಷನಾದ ತ್ವಾಂ – ನಿನ್ನನ್ನು ಅಹಂ - ನಾನು ನ ಹನಿಷ್ಯೇ – ಕೊಲ್ಲುವದಿಲ್ಲ ಉತ – ಮತ್ತು ಬಾಹ್ವೋಃ – ಬುಜಗಳ ಬಲಾತ್– ಸಾಮರ್ಥ್ಯದಿಂದ ಮಯಾ – ನನ್ನಿಂದ ತೇ – ನಿನ್ನ ಪಿತುಃ – ತಂದೆಯಾದ ಅಧಿರಥನಿಂದ ಪೂರ್ವಂ - ಹಿಂದೆ ಅಭಿಹೃತಂ – ಅಪಹರಿಸಲ್ಪಟ್ಟ ತತ್ಅಂಗರಾಜ್ಯಂ ಆ ಅಂಗ ರಾಜ್ಯವನ್ನು ತ್ವಂ ನೀನು ಗೃಹಾಣ ಸ್ವೀಕರಿಸು ಯುಧಿ - ಯುದ್ಧದಲ್ಲಿ ಮೇ ನನಗೆ ಕರ್ಮಕರಃ – ಸಹಾಯರೂಪವಾದ ಕೆಲಸವನ್ನು ಮಾಡತಕ್ಕವನು ಸ್ಯಾಃ – ಆಗು. ॥ ೧೯೮ ॥

ಇತ್ಯುಕ್ತಆಶು ಸತಥೈವಚಕಾರಕರ್ಣಃ ಪೂರ್ವಂಹಿತಸ್ಯನಿಜರಾಜ್ಯಪದೈಕದೇಶಃ ॥
ದುರ್ಯೋಧನೇನವಿಹಿತೋ ಮಗಧಾಧಿರಾಜಂ ಜಿತ್ವಾವೃಕೋದರಹೃತಃ ಪಿತುರೇವದತ್ತಃ ॥ ೧೯೯ ॥

ಇತಿ – ಈ ರೀತಿಯಾಗಿ ಉಕ್ತಃ – ಹೇಳಿಸಿಕೊಳ್ಳಲ್ಪಟ್ಟ ಸ ಕರ್ಣಃ – ಆ ಕರ್ಣನು ತಥೈವ - ಹಾಗೆಯೇ ಚಕಾರ – ಮಾಡಿದನು ಅಂದರೆ ಅಂಗ ರಾಜ್ಯವನ್ನು ಸ್ವೀಕಾರ ಮಾಡಿದನು ಪೂರ್ವಂ – ಹಿಂದೆ ಧರ್ಮರಾಜನು ಯುವರಾಜನಾಗಿರುವ ಸಮಯದಲ್ಲಿ ಮಗಧಾಧಿರಾಜಂ ಜರಾಸಂಧನನ್ನು ಜಿತ್ವಾ – ಗೆದ್ದು ವೃಕೋದರ ಹೃತಃ – ಭೀಮಸೇನನಿಂದ ವಶೀಕರಿಸಲ್ಪಟ್ಟ ಯಃ – ಯಾವ ನಿಜರಾಜ್ಯಪದೈಕ ದೇಶಃ – ಕರ್ಣನ ತಂದೆಯಾದ ಅಧಿರಥವಂಶ ಪರಂಪರಾ ಪ್ರಾಪ್ತವಾದ ರಾಜ್ಯದ ಒಂದು ಪ್ರದೇಶವೋ ಪಿತುರೇವ – ದೊಡ್ಡಪ್ಪನಾದ ಧೃತರಾಷ್ಟ್ರನಿಗೇನೇ ದತ್ತಃ - ಕೊಡಲ್ಪಟ್ಟದೋ ಸ ಏವ – ಆ ರಾಜ್ಯದ ಏಕ

ದೇಶವೇ ಪೂರ್ವ೦ – ಅಭ್ಯಾಸ ಕೌಶಲ್ಯವನ್ನು ತೋರಿಸುವ ಸಮಯದಲ್ಲಿ ದುರ್ಯೋಧನೇನ – ದುರ್ಯೋಧನನಿಂದ ವಿಹಿತಃ – ಕರ್ಣನಿಗೆ ಕೊಡಲ್ಪಟ್ಟಿತು. ಅಧಿರಥನಿಂದ ಸಂಪೂರ್ಣ ರಾಜ್ಯವನ್ನು ಜರಾಸಂಧನು ಅಪಹರಿಸಿದ್ದನು. ಭೀಮಸೇನನು ಅರ್ಧರಾಜ್ಯವನ್ನು ಗೆದ್ದ ನಂತರ ಅರ್ಧರಾಜ್ಯವು ಜರಾಸಂಧನ ಆಧೀನವಲ್ಲೇ ಇತ್ತು. ಅದನ್ನು ಜರಾಸಂಧನು ಕರ್ಣನಿಗೆ ಕೊಟ್ಟನು ಎಂದು ಹಿಂದಿನ ಶ್ಲೋಕದಲ್ಲಿ ಹೇಳಿದರು. ॥ ೧೯೯ ॥

ಅಂಗಾಧಿರಾಜ್ಯಮುಪಲಭ್ಯ ಜರಾಸುತಸ್ಯ ಸ್ನೇಹಂಚ ಸೂರ್ಯಸುತ ಆಶುಕುರೂನ್ ಜಗಾಮ ॥
ದೃಷ್ಟ್ವೈವತಂಮುಮುದಿರೇ ಧೃತರಾಷ್ಟ್ರಪುತ್ರಾ ನಾನೇನತುಲ್ಯಮಭಿಜಗ್ಮುರತೋಹರಿಂಚ ॥ ೨೦೦ ॥

ಸೂರ್ಯಸುತಃ – ಸೂರ್ಯನ ಮಗನಾದ ಕರ್ಣನು ಅಂಗಾಧಿರಾಜ್ಯ೦ – ಅಂಗದೇಶದ ಆಧಿಪತ್ಯವನ್ನೂ ಜರಾಸುತಸ್ಯ– ಜರಾಸಂಧನ ಸ್ನೇಹಂಚ ಪ್ರೀತಿಯನ್ನೂ ಕೂಡ ಉಪಲಭ್ಯ – ಹೊಂದಿ ಆಶು – ಕೂಡಲೇ ಕುರೂನ್ – ಕುರುದೇಶವನ್ನು ಕುರಿತು ಜಗಾಮ – ಹೋದನು ಧೃತರಾಷ್ಟ್ರಪುತ್ರಾಃ – ಧೃತರಾಷ್ಟ್ರನ ಮಕ್ಕಳಾದ ದುರ್ಯೋಧನಾದಿಗಳು ತಂ ಆ ಕರ್ಣನನ್ನು ದೃಷ್ಟ್ವೈವ ನೋಡಿಯೇ ಮುಮುದಿರೇ – ಸಂತೋಷಪಟ್ಟರು ಅತಃ – ಜರಾಸಂಧನನ್ನು ಗೆದ್ದ ಕಾರಣ ಅನೇನ – ಈ ಕರ್ಣನಿಂದ ತುಲ್ಯ೦ – ಸದೃಶನನ್ನಾಗಿ ಕೂಡ ಹರಿಂಚ – ಶ್ರೀಕೃಷ್ಣನನ್ನೂ ಕೂಡ ನಾಭಿಜಗ್ಮುಃ – ತಿಳಿಯಲಿಲ್ಲ. ಕೃಷ್ಣನಿಂದಲೂ ಕರ್ಣನು ಅಧಿಕನೆಂದು ದುರ್ಯೋಧನಾದಿಗಳು ತಿಳಿದರು. ॥ ೨೦೦ ॥

ಭಾ.ಅ. ೧೯೫–೨೦೦ ಆಗ ದುರ್ಯೋಧನನು ವಿಚಾರಿಸಿ ಒಪ್ಪಿ, ಊರಿಗೆ ಹೋದನು. ಕರ್ಣನು ಯುದ್ಧ ಮಾಡುತ್ತಾ ಒಬ್ಬೊಬ್ಬರಾಗಿ ಬಂದ ಎಲ್ಲ ರಾಜರನ್ನೂ ಗೆದ್ದನು. ಕರ್ಣನ ಪರಾಕ್ರಮವನ್ನು ಲೆಕ್ಕಿಸದೇ ಜರಾಸಂಧನು ಒಬ್ಬೊಬ್ಬರನ್ನಾಗಿ ಕಳಿಸಿದ್ದನು. ಎಲ್ಲರೂ ಸೋತಾಗ ಸ್ವಯಂ ಜರಾಸಂಧನು ಯುದ್ಧಕ್ಕೆ ಬಂದನು. ಕರ್ಣನು ಶ್ರೀಪರಶುರಾಮ ದೇವರ ವರದಿಂದಾಗಿ ಅವನನ್ನೂ ಕೂಡ ಶಸ್ತ್ರರಥಹೀನನನ್ನಾಗಿ ಮಾಡಿದನು. ಜರಾಸಂಧನು ಕರ್ಣನನ್ನು ಮಾಡಿದನು. ಆಗ ಮುಷ್ಟಿಯುದ್ಧ ಮಾಡಿದರು. ಕರ್ಣನು ಜರಾಸಂಧನ ದೇಹದ ಭಾಗಗಳ ಸಂಧಿಯಲ್ಲಿ ಹೊಡೆಯುತ್ತಿರುವಾಗ ಜರಾಸಂಧನು "ನನ್ನ ದೇಹದಲ್ಲಿ ಈ ರೀತಿ ಸಂಧಿ ಉಂಟು ಎಂಬುದು ಬಲರಾಮನಿಗೂ ತಿಳಿಯದು; ಅಂಥದ್ದನ್ನು ನೀನು ತಿಳಿದಿರುವೆಯಾದ್ದರಿಂದ ನೀನು ನನ್ನ ಸೇವಕನಾಗಿರು; ಈ ರೀತಿ ಯುದ್ಧ ಕುಶಲನಾದ ನಿನ್ನನ್ನು ಕೊಲ್ಲುವದಿಲ್ಲ; ಅಷ್ಟೇ ಅಲ್ಲ, ನಿನ್ನ ತಂದೆಯಿಂದ ನಾನು ಜಯಿಸಿದ ಅಂಗರಾಜ್ಯವನ್ನು ನಿನಗೆ ಕೊಡುತ್ತೇನೆ, ತೆಗೆದುಕೋ. ನನಗೆ ಯುದ್ಧ ಪ್ರಸಂಗಗಳಲ್ಲಿ ಸಹಾಯಕನಾಗಿರು." ಎಂದು ಹೇಳಿದನು. ಅದಕ್ಕೆ ಕರ್ಣನು ಒಪ್ಪಿಕೊಂಡನು. ಈ ಮೊದಲು ಅಂಗರಾಜ್ಯವನ್ನು ದುರ್ಯೋಧನನು ಕರ್ಣನಿಗೆ ವಿದ್ಯಾಭ್ಯಾಸ ಪ್ರದರ್ಶನ ಕಾಲದಲ್ಲಿ ಕೊಟ್ಟಿದ್ದಾನೆ. ಇವೆರಡನ್ನು ಕೂಡಿಸಿ ನಿರ್ಣಯ ಕೊಡುತ್ತಾರೆ. ಕರ್ಣನು ಹುಟ್ಟುವ ಮೊದಲೇ ಜರಾಸಂಧನು ಅಂಗರಾಜ್ಯವನ್ನು ಪೂರ್ಣ ಗೆದ್ದಿದ್ದನು. ಧರ್ಮರಾಜನಿಗೆ ಯುವರಾಜ ಪಟ್ಟ ಬಂದಿರುವಾಗ ಶ್ರೀಭೀಮಸೇನ ದೇವರು ದಿಗ್ವಿಜಯಮಾಡುತ್ತಾ ಜರಾಸಂಧನನ್ನು ಗೆದ್ದು ಅಂಗರಾಜ್ಯದಲ್ಲಿಯ ಕೆಲ ಭಾಗವನ್ನು ಗ್ರಹಿಸಿದ್ದರು. ಅದನ್ನು ಧೃತರಾಷ್ಟ್ರನಿಗೇ ಒಪ್ಪಿಸಿದ್ದರು. ಅದನ್ನು ದುರ್ಯೋಧನನು ಕರ್ಣನಿಗೆ ಕೊಟ್ಟಿದ್ದನು. ಉಳಿದದ್ದನ್ನು ಜರಾಸಂಧನು ಈಗ ಕೊಟ್ಟಿದ್ದಾನೆ. ಈ ರೀತಿಯಾಗಿ ಜರಾಸಂಧನ ಸ್ನೇಹವನ್ನು, ಅಂಗರಾಜ್ಯವನ್ನು ಹೊಂದಿದ ಕರ್ಣನು ಹಸ್ತಿನಾವತಿಗೆ ಬಂದನು. ಅವನನ್ನು ನೋಡಿ ಕೌರವರು ಬಹಳ ಸಂತೋಷಪಟ್ಟರು; ಬಹಳ ಪರಾಕ್ರಮಿ ಎಂದು ತಿಳಿದರು ಅಷ್ಟೇ ಅಲ್ಲ ಪರಾಕ್ರಮದಲ್ಲಿ ಇವನಿಗೆ ಸಮರೇ ಇಲ್ಲ; ಶ್ರೀಕೃಷ್ಣನೂ ಕೂಡ ಈ ಕರ್ಣನಿಗಿಂತ ಕಮ್ಮಿಯೇ ಎಂದು ತಿಳಿದರು.

ಉದ್ವಾಹ್ಯಕಾಶಿತನಯಾಂ ಗಿರಿಜಾಭಿವಿಷ್ಟಾಂ ಸಾಕ್ಷಾನ್ನರೇಷು ಜನಿತಾಂಪ್ರಥಮಾಮಲಕ್ಷ್ಮೀಂ ॥
ತಸ್ಯಾಂಸುತಂತ್ವಜನಯತ್ಪುರ ಆಸಯೋಽಕ್ಷಃ ಕನ್ಯಾಂಪುರಾಪ್ರಿಯತಮಾಂಚಷಡಾನನಸ್ಯ ॥ ೨೦೧ ॥

(ಸಃ – ಆ ದುರ್ಯೋಧನನು) ಸಾಕ್ಷಾದಲಕ್ಷ್ಮೀಂ – ಮುಖ್ಯವಾಗಿ ಅಲಕ್ಷ್ಮೀಸ್ವರೂಪಳಾದ ಪ್ರಥಮಾಂ ಸಮುದ್ರ ಮಥನದಲ್ಲಿ ಲಕ್ಷ್ಮೀಯಿಂದಲೂ ಮೊದಲು ಹುಟ್ಟಿದ ಗಿರಿಜಾಭಿವಿಷ್ಟಾಂ – ಪಾರ್ವತಿಯ ಆವೇಶದಿಂದ ಕೂಡಿದ ನರೇಷು – ಮನುಷ್ಯರಲ್ಲಿ ಜನಿತಾಂ ಹುಟ್ಟಿದ ಕಾಶಿತನಯಾಂ – ಕಾಶಿರಾಜನ ಮಗಳನ್ನು ಉದ್ವಾಹ್ಯ – ಮದುವೆ ಮಾಡಿಕೊಂಡು

ತಸ್ಯಾಂ – ಅವಳಲ್ಲಿ ಪುರಃ – ಹಿಂದೆ ರಾಮಾವತಾರ ಕಾಲದಲ್ಲಿ ಯಃ – ಯಾವನು ಅಕ್ಷಃ – ರಾವಣನ ಮಗನಾದ ಅಕ್ಷ ಕುಮಾರನು ಆಸ – ಆಗಿದ್ದನೋ ತಂ – ಅವನನ್ನು ಸುತಂ – ಮಗನನ್ನಾಗಿ ಅಜನಯತ್ – ಹುಟ್ಟಿಸಿದನು ಚ – ಮತ್ತು ಪುರಾ – ಹಿಂದೆ ಷಡಾನಸ್ಯ – ಷಣ್ಮುಖನ ಪ್ರಿಯತಮಾಂ – ಹೆಂಡತಿಯನ್ನು ಕನ್ಯಾಂ – ಮಗಳನ್ನಾಗಿ ಅಜನಯತ್ – ಹುಟ್ಟಿಸಿದನು. ॥ ೨೦೧ ॥

ಪುತ್ರೋಬಭೂವ ಸತುಲಕ್ಷಣನಾಮಧೇಯಃ ಸಾಲಕ್ಷಣೇತ್ಯಧಿಕರೂಪಗುಣಾಸಕನ್ಯಾ ॥
ತಸ್ಯಾನುಜಾಶ್ಚ ನಿಜಯೋಗ್ಯಗುಣಾ ಅವಾಪುರ್ಭಾರ್ಯಾಃ ಪುನಶ್ಚ ಸಸುಯೋಧನ ಆಪಭಾರ್ಯಾಃ ॥೨೦೨॥

ಸ ಪುತ್ರಸ್ತು – ಆ ಮಗನಾದರೂ ಲಕ್ಷಣನಾಮಧೇಯಃ – ಲಕ್ಷಣನೆಂದು ಹೆಸರುಳ್ಳವನು ಬಭೂವ – ಆದನು ಅಧಿಕ ರೂಪಗುಣಾ – ಹೆಚ್ಚಾದ ಸೌಂದರ್ಯ ಮತ್ತು ಗುಣಗಳುಳ್ಳ ಸಾ ಕನ್ಯಾ – ಆ ಮಗಳು ಲಕ್ಷಣೇತಿ–ಲಕ್ಷಣಾ ಎಂದು ಹೆಸರುಳ್ಳ ವಳು ಆಸ – ಆದಳು ತಸ್ಯ ಆ ದುರ್ಯೋಧನನ ಅನುಜಾಶ್ಚ ತಮ್ಮಂದಿರೂ ಕೂಡ ನಿಜಯೋಗ್ಯಗುಣಾಃ – ತಮಗೆ ಯೋಗ್ಯವಾದ ಗುಣಗಳುಳ್ಳ ಅಂದರೆ ಪಾಪಶೀಲರಾದ ಭಾರ್ಯಾಃ – ಹೆಂಡಂದಿರನ್ನು ಅವಾಪುಃ – ಹೊಂದಿದರು ಸ ಸುಯೋಧನಃ – ಆ ದುರ್ಯೋಧನನು ಪುನಶ್ಚ – ಮತ್ತೂ ಕೂಡ ಭಾರ್ಯಾಃ – ಬೇರೆ ಹೆಂಡಂದಿರನ್ನು ಆಪ – ಹೊಂದಿದನು. ॥ ೨೦೨ ॥

ಪೂರ್ವಂಸುರಾಂತಕ ಇತಿಪ್ರಥಿತಃ ಸುತೋಽಭೂತ್ ದುಶ್ಶಾಸನಸ್ಯತದನು ಸ್ಪೃತಿತಸ್ಯಮಾನಾಃ ॥
ದೃಷ್ಟ್ವೈವ ಪಾರ್ಥಬಲವೀರ್ಯಗುಣಾನ್ಸಮೃದ್ಧಿಂತಾಂಚೈವತೇ ಪ್ರತಿಯಯುಃಸ್ಮ ಕಲಿಂಗದೇಶಂ ॥೨೦೩॥

ಪೂರ್ವಂ – ಹಿಂದೆ ರಾಮಾವತಾರ ಕಾಲದಲ್ಲಿ ಸುರಾಂತಕಇತಿ – ದೇವಾಂತಕನೆಂದು ಪ್ರಥಿತಃ – ಪ್ರಸಿದ್ಧನಾದವನು ದುಃಶಾಸನಸ್ಯ – ದುಃಶಾಸನನಿಗೆ ಸುತಃ – ಮಗನು ಅಭೂತ್ – ಆದನು ತದನು – ಪಾಂಡವರು ಬಂದ ನಂತರ ತೇ – ಆ ದುರ್ಯೋಧನಾದಿಗಳು ಪಾರ್ಥಬಲವೀರ್ಯಗುಣಾನ್ - ಪಾಂಡವರ ಬಲವೀರ್ಯ ಗುಣಗಳನ್ನು ತಾಂ ಸಮೃದ್ಧಿಂ - ಆ ಸಂಪತ್ಸಮೃದ್ಧಿಯನ್ನೂ ಕೂಡ ದೃಷ್ಟ್ವೈವ – ನೋಡಿಯೇ ಪ್ರತಿತಪ್ಯಮಾನಾಸ್ಸಂತಃ – ಸಂತಾಪವನ್ನು ಹೊಂದಿದವರಾಗಿ ಕಲಿಂಗದೇಶಂಪ್ರತಿ – ಕಲಿಂಗ ದೇಶವನ್ನು ಕುರಿತು ಯಯುಃ – ಹೋದರು. ॥ ೨೦೩ ॥

ಆಸೀತ್ಸ್ವಯಂವರ ಉತಾತ್ರಕಲಿಂಗರಾಜಪುತ್ರ್ಯಾಃ ಸುವಜ್ರಇತಿಯಂಪ್ರವದಂತಿಭೂಪಾಃ ॥
ರೌದ್ರಾದ್ವರಾದವಿಜಿತಸ್ಯಚ ತಸ್ಯಕನ್ಯಾಂದೃಪ್ತೋ ಬಲಾತ್ಸಜಗೃಹೇಧೃತರಾಷ್ಟ್ರಸೂನುಃ ॥ ೨೦೪ ॥

ಉತ – ಮತ್ತು ಅತ್ರ – ಕಲಿಂಗದೇಶದಲ್ಲಿ ಕಲಿಂಗರಾಜಪುತ್ರ್ಯಾಃ – ಕಲಿಂಗರಾಜನ ಮಗಳ ಸ್ವಯಂವರಃ – ಸ್ವಯಂವರವು ಆಸೀತ್ – ಆಯಿತು ಯಂ – ಯಾವ ರಾಜನನ್ನು ಭೂಪಾಃ – ರಾಜರು ಸುವಜ್ರಇತಿ – ಸುವಜ್ರನೆಂದು ಪ್ರವದಂತಿ ಹೇಳುತ್ತಾರೋ ರೌದ್ರಾತ್ - ರುದ್ರನ ಸಂಬಂಧಿಯಾದ ವರಾತ್ - ವರದಿಂದ ಅವಿಜಿತಸ್ಯ – ಪರಾಜಯವಿಲ್ಲದ ತಸ್ಯ ಆ ಸುವಜ್ರನ ಕನ್ಯಾಂ – ಮಗಳನ್ನು ದೃಪ್ತಃ – ಮತ್ತನಾದ ಧೃತರಾಷ್ಟ್ರಸೂನುಃ – ಧೃತರಾಷ್ಟ್ರನ ಮಗನಾದ ದುರ್ಯೋಧನನು ಬಲಾತ್ - ಬಲಾತ್ಕಾರದಿಂದ ಜಗೃಹೇ – ಹಿಡಿದನು. ॥ ೨೦೪ ॥

ತತ್ರಾಥರುದ್ರವರತಃ ಸಜರಾಸುತೇನಯುಕ್ತೋ ಬಬಂಧಚಸುಯೋಧನಮಾಶುಜಿತ್ವಾ ॥
ಕರ್ಣಃಪರಾದ್ರವದಿಹಸ್ಮ ಸುತೇಷುಪಾಂಡೋಃ ಯಸ್ಮಾತ್ಸ್ಪೃಧಾಗಮದತಃಸಪರಾಜಿತೋಽಭೂತ್ ।೨೦೫।

ಅಥ – ಅನಂತರ ತತ್ರ – ಅಲ್ಲಿ ಸಃ – ಆ ಸುವಜ್ರನು ಜರಾಸುತೇನ – ಜರಾಸಂಧನಿಂದ ಯುಕ್ತಸ್ಸನ್ – ಕೂಡಿದವನಾಗಿ ರುದ್ರವರತಃ – ರುದ್ರದೇವರ ವರದಿಂದ ಸುಯೋಧನಂ – ದುರ್ಯೋಧನನನ್ನು ಆಶು ಕೂಡಲೇ ಜಿತ್ವಾ – ಗೆದ್ದು ಬಬಂಧ – ಕಟ್ಟಿಹಾಕಿದನು ಕರ್ಣಃ – ಕರ್ಣನು ಇಹ – ಇಲ್ಲಿ ಪರಾದ್ರವತ್ – ಓಡಿಹೋದನು ಯಸ್ಮಾತ್ – ಯಾವ ಕಾರಣದಿಂದ ಪಾಂಡೋಃ ಸುತೇಷು – ಪಾಂಡು ರಾಜನ ಮಕ್ಕಳಾದ ಪಾಂಡವರಲ್ಲಿ ಸ್ಪೃಧಾ – ಸ್ಪರ್ಧೆಯಿಂದ ಅಗಮತ್ – ಬಂದನೋ ಅತಃ – ಆ ಕಾರಣದಿಂದ ಸಃ – ಆ ಕರ್ಣನು ಪರಾಜಿತಃ – ಸೋತವನು ಅಭೂತ್ – ಆದನು. ॥ ೨೦೫ ॥

ದುರ್ಯೋಧನೇsನುಜಜನ್ಯೈಃಸಹಿತೇಗೃಹೀತೇ ಭೀಷ್ಮಾಂಬಿಕೇಯು ವಿದುರಾಗ್ರಜವಾಕ್ಯನುನ್ನಃ ॥
ಭೀಮೋವಿಜಿತ್ಯನೃಪತೀನ್ಸಜರಾಸುತಾಂಸ್ತಾನ್ ಹತ್ವಾಸುವಜ್ರಮಮುಚದ್ಧೃತರಾಷ್ಟ್ರಪುತ್ರಾನ್ ॥೨೦೬॥

ಅನುಜಜನ್ಯೈಃ – ತಮ್ಮಂದಿರಿಂದ ಸಹಿತೇ - ಕೂಡಿದ ದುರ್ಯೋಧನೇ – ದುರ್ಯೋಧನನು ಗೃಹಿತೇಸತಿ–ಹಿಡಿಯಲ್ಪಡುತ್ತಿರಲು ಭೀಷ್ಮಾಂಬಿಕೇಯ ವಿದುರಾಗ್ರಜ ವಾಕ್ಯನುನ್ನಃ – ಭೀಷ್ಮರು, ಧೃತರಾಷ್ಟ್ರನು, ವಿದುರನು, ಅಣ್ಣನಾದ ಧರ್ಮರಾಜನು ಇವರ ಮಾತಿನಿಂದ ಪ್ರೇರಿತನಾದ ಭೀಮಃ - ಭೀಮನು ಸಜರಾಸುತಾನ್ – ಜರಾಸಂಧನಿಂದ ಕೂಡಿದ ತಾನ್ ನೃಪತೀನ್ – ಆ ರಾಜರನ್ನು ವಿಜಿತ್ಯ ಗೆದ್ದು ಸುವಜ್ರಂ – ಸುವಜ್ರನನ್ನು ಹತ್ವಾ – ಕೊಂದು ಧೃತರಾಷ್ಟ್ರಪುತ್ರಾನ್ – ಧೃತರಾಷ್ಟ್ರನ ಮಕ್ಕಳಾದ ದುರ್ಯೋಧನಾದಿಗಳನ್ನು ಅಮುಚತ್ – ಬಿಡಿಸಿದನು. ॥ ೨೦೬ ॥

ಭಾ.ಅ. ೨೦೧-೨೦೬ ಈ ರೀತಿ ಸಾಕ್ಷಾತ್ ಅಲಕ್ಷ್ಮಿಯೇ ಆದ, ಗಿರಿಜಾವೇಶದಿಂದ ಕೂಡಿದ ಕಾಶೀರಾಜ ಕುಮಾರಿಯನ್ನು ಹೊಂದಿದ ದುಷ್ಟದುರ್ಯೋಧನನು ಅವಳಲ್ಲಿ ಲಕ್ಷಣನೆಂಬ ಮಗನನ್ನು, ಲಕ್ಷಣಾ ಎಂಬ ಮಗಳನ್ನು ಪಡೆದನು. ರಾಮಾಯಣ ಕಾಲದ ಅಕ್ಷ (ರಾವಣನ ಮಗ) ನೇ ಲಕ್ಷಣನಾಗಿ ಹುಟ್ಟಿದನು. ಷಣ್ಮುಖನ ಪತ್ನಿಯು ಅಧಿಕ ಸುಂದರಿಯಾದ ಲಕ್ಷಣೆಯಾಗಿ ಅವತರಿಸಿದಳು. ದುಃಶಾಸನಾದಿಗಳೂ ಕೂಡ ತಮಗೆ ಅನುರೂಪರಾದ ಹೆಂಡತಿಯರನ್ನು ಮಾಡಿಕೊಂಡು ಮಕ್ಕಳನ್ನು ಪಡೆದರು. ರಾಮಾಯಣದಲ್ಲಿ ದೇವಾಂತಕನೆಂಬ ರಾಕ್ಷಸನು ದುಃಶಾಸನನಿಗೆ ಮಗನಾಗಿ ಹುಟ್ಟಿದನು. ದುರ್ಯೋಧನನು ಬೇರೆ ಹೆಂಡಿರನ್ನೂ ಮಾಡಿಕೊಂಡಿದ್ದಾನೆ. ಅದರಲ್ಲಿ ಒಬ್ಬಳ ವಿವಾಹ ಕಥೆಯನ್ನು ಹೇಳುತ್ತಾರೆ. ದ್ರೌಪದೀ ವಿವಾಹದ ನಂತರ ಪಾಂಡವರ ಶಕ್ತಿ–ಸಾಮರ್ಥ್ಯಗಳನ್ನು, ಸಂಪತ್ತನ್ನು ನೋಡಿ ದುಃಖಪಡುತ್ತಿರುವ ದುರ್ಯೋಧನಾದಿಗಳು ಕಳಿಂಗ ರಾಜನಾದ ಸುವಜ್ರನ ಮಗಳ ಸ್ವಯಂವರಕ್ಕೆ ಹೋಗಿದ್ದರು. ಆ ಸುವಜ್ರನು ರುದ್ರವರದಿಂದ ಅಜೇಯನಾಗಿದ್ದನು. ಅಲ್ಲಿ ಆ ರಾಜಕುಮಾರಿಯನ್ನು ದುರ್ಯೋಧನನು ಬಲಾತ್ಕಾರದಿಂದ ಅಪಹರಿಸಿದನು. ಆಗ ಸುವಜ್ರನು ರುದ್ರವರದಿಂದಲೂ, ಜರಾಸಂಧನ ಸಹಾಯದಿಂದಲೂ ದುರ್ಯೋಧನನನ್ನು ಬಂಧಿಸಿದನು. ಈ ಯುದ್ಧದಲ್ಲಿ ಕರ್ಣನು ಪಾಂಡವರ ಮೇಲೆ ಸ್ಪರ್ಧಾದಿಂದ ಹೋಗಿದ್ದರಿಂದ ಸೋತು ಓಡಿ ಹೋದನು. ಹೀಗೆ ಅನುಜಸಹಿತನಾಗಿ ದುರ್ಯೋಧನನ ಬಂಧನವಾಗಿರ್ವಾಗ ಭೀಷ್ಮ, ಧೃತರಾಷ್ಟ್ರ, ವಿದುರ ಹಾಗು ಧರ್ಮರಾಜರ ಮಾತಿನ ಪ್ರಕಾರ ಶ್ರೀಭೀಮಸೇನರು ಜರಾಸಂಧ ಸಹಿತರಾದ ಎಲ್ಲರನ್ನೂ "ಗೆದ್ದು, ಸುವಜ್ರನನ್ನು ಕೊಂದು ಕೌರವರನ್ನು ಬಿಡಿಸಿಕೊಂಡು ಬಂದರು. ಆ ದುಷ್ಟರೆಲ್ಲರೂ ಕರ್ಣ ಸಹಿತವಾಗಿ ಶವಗಳಂತೆ ಊರಿಗೆ ಬಂದರು

ತೇsಪಿಸ್ಮ ಕರ್ಣ ಸಹಿತಾಮೃತಕಪ್ರತೀಕಾನಾಗಾಹ್ವಯಂ ಪುರಮುಥಾಯಯುರಪ್ಯವಿಷಾಂ ॥
ದೃಷ್ಟ್ವಾವಿರೋಧಮವದನ್ನೃಪತಿಶ್ಚ ಧರ್ಮಪುತ್ರಂ ಪುರಂದರಕೃತಸ್ಥಲ ಮಾಶುಯಾಹಿ ॥ ೨೦೭ ॥

ಕರ್ಣಸಹಿತಾಃ – ಕರ್ಣನಿಂದ ಕೂಡಿದ ತೇsಪಿ ಆ ದುರ್ಯೋಧನಾದಿಗಳು ಮೃತಕಪ್ರತೀಕಾಸ್ಸಂತಃ – ಸತ್ತವರಿಗೆ ಸಮಾನರಾಗಿ ನಾಗಾಹ್ವಯಂಪುರಂ ಹಸ್ತಿನಾವತಿ ಪಟ್ಟಣಕ್ಕೆ ಆಯಯುಃ – ಓಡಿದರು ಅಥ – ಅನಂತರ ನೃಪತಿಃ – ಧೃತರಾಷ್ಟ್ರನು ಅವಿಷಾಂ – ಈ ದುರ್ಯೋಧನಾದಿಗಳ ವಿರೋಧಂ – ಜಗಳವನ್ನು ದೃಷ್ಟ್ವಾ – ನೋಡಿ ಧರ್ಮಪುತ್ರಂ – ಯಮನ ಮಗನಾದ ಧರ್ಮರಾಜನನ್ನು ಕುರಿತು ತ್ವಂ – ನೀನು ಪುರಂದರಕೃತಸ್ಥಲಂ – ದೇವೇಂದ್ರನಿಂದ ನಿರ್ಮಿತವಾದ ಇಂದ್ರಪ್ರಸ್ಥವನ್ನು ಕುರಿತು ಆಶು – ಬೇಗನೇ ಯಾಹಿ – ಹೋಗು ಇತಿ – ಎಂದು ಅವದತ್ – ಹೇಳಿದನು. ॥ ೨೦೭ ॥

ತತ್ರಾರ್ಧರಾಜ್ಯಮನುಭುಂಕ್ಷ್ವ ಸಹಾನುಜೈಸ್ತ್ವಂ ಕೋಶಾರ್ಧಮೇವಚಗೃಹಾಣ ಪುರಾಹಿಶಕ್ರಃ ॥
ತತ್ರಾಭಿಷಿಕ್ತ ಉತಕಂಜಭವಾದಿದೇವೈಃ ತತ್ರಸ್ಥವಿವಸಚಕಾರಚಿರಂಚರಾಜ್ಯಂ ॥ ೨೦೮ ॥

ತತ್ರ ಆ ಇಂದ್ರಪ್ರಸ್ಥದಲ್ಲಿ ಅನುಜೈಃ – ತಮ್ಮಂದಿರಿಂದ ಸಹ – ಕೂಡಿಕೊಂಡು ತ್ವಂ – ನೀನು ಅರ್ಧರಾಜ್ಯಂ – ರಾಜ್ಯದ ಅರ್ಧಭಾಗವನ್ನು ಅನುಭುಂಕ್ಷ್ವ – ಅನುಭವಿಸು ಕೋಶಾರ್ಧಂ – ಕೋಶದ ಅರ್ಧಭಾಗವನ್ನು ಗೃಹಾಣ ಸ್ವೀಕರಿಸು ಪುರಾ – ಹಿಂದೆ ಶಕ್ರಃ – ಇಂದ್ರನು ತತ್ರ – ಅಲ್ಲಿ ಕಂಜಭವಾದಿದೇವೈಃ – ಬ್ರಹ್ಮ, ರುದ್ರರೇ ಮೊದಲಾಗಿ ಉಳ್ಳ ದೇವತೆ

ಗಳಿಂದ ಅಭಿಷಿಕ್ತಃ – ಅಭಿಷಿಕ್ತನಾದನು ಉತ – ಮತ್ತು ಸಃ – ಆ ಇಂದ್ರನು ತತ್ರಸ್ಥವಿವ – ಅಲ್ಲಿಯೇ ಇದ್ದವನಾಗಿ ಚಿರಂ – ಬಹಳ ಸಮಯ ರಾಜ್ಯಂಚಕಾರ – ರಾಜ್ಯವಾಳಿದನು. ॥ ೨೦೮ ॥

ತ್ವಂವೀರಶಕ್ರಸಮವಿವ ತತಸ್ತವೈವ ಯೋಗ್ಯಂಪುರಂ ತದಿತಆಶ್ವಭಿಷೇಚಯಾಮಿ ॥
ಇತ್ಯುಕ್ತಆಹಸಯುಧಿಷ್ಠಿರ ಓಮಿತಿಸ್ಮಚಕ್ರೇಭಿಷೇಕಮುಪಿತಸ್ಯಸ ಆಂಬಿಕೇಯಃ ॥ ೨೦೯ ॥

ಹೇವೀರ – ಏಲೋ ಪರಾಕ್ರಮಿಯೇ ತ್ವಂ – ನೀನು ಶಕ್ರಸಮವಿವ – ಇಂದ್ರನಿಗೆ ಸದೃಶನೇ ತತಃ–ಆದ್ದರಿಂದ ತತ್ಪುರಂ– ಆ ಪಟ್ಟಣವು ತವೈವ – ನಿನಗೇನೇ ಯೋಗ್ಯಂ – ಯುಕ್ತವು ಇತಃ – ಇಲ್ಲಿಯೇ ಆಶು – ಬೇಗನೆ ಅಭಿಷೇಚಯಾಮಿ – ಅಭಿಷೇಕ ಮಾಡುತ್ತೇನೆ. ಇತಿ – ಈ ರೀತಿಯಾಗಿ ಉಕ್ತಃ – ಹೇಳಿಸಿಕೊಳ್ಳಲ್ಪಟ್ಟ ಸ ಯುಧಿಷ್ಠಿರಃ – ಆ ಯುಧಿಷ್ಠಿರನು ಓಮಿತಿ – ಹಾಗೆಯೇ ಆಗಲಿ ಎಂದು ಆಹ – ಹೇಳಿದನು ಸ ಆಂಬಿಕೇಯಃ – ಆ ಅಂಬಿಕಾ ಪುತ್ರನಾದ ಧೃತರಾಷ್ಟ್ರನು ತಸ್ಯ – ಆ ಧರ್ಮರಾಜನಿಗೆ ಅಭಿಷೇಕಮಪಿ – ಅಭಿಷೇಕವನ್ನೂ ಕೂಡ ಚಕ್ರೇ – ಮಾಡಿದನು. ॥ ೨೦೯ ॥

ತಸ್ಯಾಭಿಷೇಕಮಕರೋತ್ಪ್ರಥಮಂ ಸಕೃಷ್ಣೋವಾಸಿಷ್ಠನಂದನ ಉರುರ್ಭವ ಚಕ್ರವರ್ತೀ ॥
ಯಷ್ಟಾಶ್ವಮೇಧನಿಖಿಲಾತ್ಮಕರಾಜಸೂಯ ಪೂರ್ವೈರ್ಮಖೈಃ ಸತತಮೇವಚ ಧರ್ಮಶೀಲಃ ॥ ೨೧೦ ॥

ವಾಸಿಷ್ಠನಂದನಃ – ಪರಾಶರರ ಮಗನಾದ ಸ ಕೃಷ್ಣಃ – ಆ ವೇದವ್ಯಾಸರು ಪ್ರಥಮಂ – ಮೊದಲು ತಸ್ಯ – ಆ ಧರ್ಮರಾಜನಿಗೆ ಅಭಿಷೇಕಂ – ಪಟ್ಟಾಭಿಷೇಕವನ್ನು ಅಕರೋತ್ – ಮಾಡಿದರು ಉರುಃ – ಉತ್ಕೃಷ್ಟನಾದ ಚಕ್ರವರ್ತೀ–ಚಕ್ರವರ್ತಿಯು ಭವ – ಆಗು ಧರ್ಮಶೀಲಃ ಧರ್ಮ ಮಾಡುವ ಸ್ವಭಾವಉಳ್ಳವನಾಗಿ ಅಶ್ವಮೇಧನಿಖಿಲಾತ್ಮಕರಾಜಸೂಯಪೂರ್ವೈಃ – ಅಶ್ವಮೇಧವು, ಎಲ್ಲಾ ಯಾಗಗಳ ಫಲಪ್ರದವಾದ ರಾಜಸೂಯವೂ ಇವುಗಳೇ ಮೆದಲಾಗಿ ಉಳ್ಳ ಮಖೈಃ – ಯಾಗಗಳಿಂದ ಯಷ್ಟಾಭವ – ಯಜ್ಞಗಳನ್ನು ಮಾಡುವವನಾಗು. ॥ ೨೧೦ ॥

ಇತ್ಥೇವಪಾರ್ಷತಸುತಾಸಹಿತೇಭಿಷಿಕ್ತೇ ಕೃಷ್ಣೋಪಿವೃಷ್ಣಿವೃಷಭಃ ಸತಥಾಭ್ಯಷಿಂಚತ್ ॥
ಏವಂಚಮಾರುತಿಶಿರಸ್ಯಭಿಷೇಕಮೇತೌ ಸಂಚಕ್ರತುಃ ಸ್ಮಯುವರಾಜಪದೇ ಸಭಾರ್ಯಂ ॥ ೨೧೧ ॥

ಇತಿ – ಈ ರೀತಿಯಾಗಿ ಪಾರ್ಷತಸುತಾಸಹಿತೇ - ದ್ರುಪದನ ಮಗಳಾದ ದ್ರೌಪದಿಯಿಂದ ಕೂಡಿದ ಧರ್ಮರಾಜನು ಅಭಿಷಿಕ್ತೇಸತಿ – ಅಭಿಷಿಕ್ತನಾಗುತ್ತಿರಲು ವೃಷ್ಣಿವೃಷಭಃ – ವೃಷ್ಣಿಗಳಲ್ಲಿ ಶ್ರೇಷ್ಠನಾದ ಸಕೃಷ್ಣೋಪಿ – ಆ ಯಾದವ ಕೃಷ್ಣನೂ ಕೂಡ ತಥಾ – ಪೂರ್ವೋಕ್ತ ಆಶೀರ್ವಾದ ಪೂರ್ವಕವಾಗಿ ಅಭ್ಯಷಿಂಚತ್ – ಅಭಿಷೇಕ ಮಾಡಿದನು ಏವಂಚ – ಇದೇ ರೀತಿ ಆಶೀರ್ವಾದ ಪೂರ್ವಕವಾಗಿ ಸಭಾರ್ಯಂ – ದ್ರೌಪದಿಯಿಂದ ಕೂಡಿದ ಮಾರುತಿಂ – ಭೀಮಸೇನನನ್ನು ಯುವರಾಜಪದೇ – ಯುವರಾಜಾಧಿಪತ್ಯ ಮಾಡುವದಕ್ಕಾಗಿ ಸಂಕಲ್ಪಿಸಿ ಮಾರುತಿಶಿರಸಿ – ವಾಯುಪುತ್ರ ಭೀಮಸೇನನ ತಲೆಯ ಮೇಲೆ ಏತೌ – ಈ ವ್ಯಾಸಕೃಷ್ಣರು ಅಭಿಷೇಕಂ ಅಭಿಷೇಕವನ್ನು ಸಂಚಕ್ರತುಃ – ಮಾಡಿದರು. ॥ ೨೧೧ ॥

ಭೀಮೋಚಪಾರ್ಷತಸುತಾ ಸಹಿತೇಭಿಷಿಕ್ತೇತಾಭ್ಯಾಮನಂತ ಸುಖಶಕ್ತಿಚಿದಾತ್ಮಕಾಭ್ಯಾಂ ॥
ಅನ್ಯೈಶ್ಚವಿಪ್ರವೃಷಭೈಃ ಸುಕೃತೇಭಿಷೇಕೇ ಧರ್ಮಾತ್ಮಜಾನು ಮುಮುದುರ್ನಿಖಿಲಾಶ್ಚಸಂತಃ ॥ ೨೧೨ ॥

ಪಾರ್ಷತಸುತಾಸಹಿತೇ – ದ್ರುಪದನ ಮಗಳಾದ ದ್ರೌಪದಿಯಿಂದ ಕೂಡಿದ ಭೀಮೋಚ – ಭೀಮನೂ ಕೂಡ ಧರ್ಮಾತ್ಮಜಾನು – ಧರ್ಮರಾಜನ ಅಭಿಷೇಕಾನಂತರದಲ್ಲಿ ಅನಂತಸುಖಶಕ್ತಿಚಿದಾತ್ಮಕಾಭ್ಯಾಂ – ಅಪರಿಮಿತವಾದ ಆನಂದವೂ, ಸಾಮರ್ಥ್ಯವೂ, ಜ್ಞಾನವೂ ಇವುಗಳೇ ಸ್ವರೂಪವಾಗಿ ಉಳ್ಳ ತಾಭ್ಯಾಂ – ಆ ವ್ಯಾಸ ಕೃಷ್ಣರಿಂದ ಅಭಿಷಿಕ್ತೇಸತಿ – ಪಟ್ಟಾಭಿಷಿಕ್ತನಾಗುತ್ತಿರಲು ಅನ್ಯೈಃ – ಇತರರಾದ ವಿಪ್ರವೃಷಭೈಶ್ಚ – ಬ್ರಾಹ್ಮಣ ಶ್ರೇಷ್ಠರಿಂದಲೂ ಕೂಡ ಅಭಿಷೇಕೇ ಸುಕೃತೇಸತಿ – ಚೆನ್ನಾಗಿ ಅಭಿಷೇಕವು ಮಾಡಲ್ಪಡುತ್ತಿರಲು ನಿಖಿಲಾಃ ಸಂತಶ್ಚ – ಎಲ್ಲಾ ಸಜ್ಜನರೂ ಕೂಡ ಮುಮುದುಃ – ಸಂತೋಷಪಟ್ಟರು. ॥ ೨೧೨ ॥

ತಸ್ಮಿನ್ಮಹೋತ್ಸವವರೇ ದಿನಸಪ್ತಕಾನುವೃತ್ತೇ ವಸಿಷ್ಠವೃಷಭೇಣಚ ವೃಷ್ಣಿಪೇನ ।।
ಕೃಷ್ಣೇನತೇಯಯುರಮಾ ಪೃಥಯಾತಯಾಚ ಪಾಂಚಾಲರಾಜಸುತಯಾಸ್ಥಲಮಿಂದ್ರವಾಸಂ ।। ೨೧೩ ।।

ದಿನಸಪ್ತಕಾನುವೃತ್ತೇ – ಏಳು ದಿನಗಳಿಂದ ನಡೆದಿರುವ ತಸ್ಮಿನ್ಮಹೋತ್ಸವೇ – ಆ ಶ್ರೇಷ್ಠ ಮಹೋತ್ಸವದಲ್ಲಿ ವಸಿಷ್ಠ ವೃಷಭೇಣ ವಸಿಷ್ಠ ಕುಲದಲ್ಲಿ ಶ್ರೇಷ್ಠರಾದ ವ್ಯಾಸರಿಂದಲೂ ವೃಷ್ಣಿಪೇನಚ – ವೃಷ್ಣಿಗಳ ಪತಿಯಾದ ಶ್ರೀಕೃಷ್ಣನಿಂದಲೂ ಪೃಥಯಾ – ಕುಂತಿಯಿಂದಲೂ ತಯಾ ಪಾಂಚಾಲರಾಜಸುತಯಾ – ಆ ದ್ರುಪದನ ಮಗಳಾದ ದ್ರೌಪದಿಯಿಂದಲೂ ಅಮಾ – ಕೂಡಿಕೊಂಡು ತೇ ಆ ಪಾಂಡವರು ಇಂದ್ರವಾಸಂ - ದೇವೇಂದ್ರನು ವಾಸವಾಗಿದ್ದ ಸ್ಥಲಂ ಇಂದ್ರಪ್ರಸ್ಥಕ್ಕೆ ಯಯುಃ – ಹೋದರು. ।। ೨೧೩ ।।

ಕೋಶಸ್ಯಚಾರ್ಧಸಹಿತಾಸ್ತು ಯದೈವಪಾರ್ಥಾ ಗಚ್ಛಂತಿತಾನನುಯಯುರ್ನಿಖಿಲಾಶ್ಚ ಪೌರಾಃ ।।
ಊಚುಶ್ಚಹಾಬತ ಸುಯೋಧನಏಷ ಪಾಪೋದೂರೇಚಕಾರನನು ಪಾಂಡುಸುತಾನ್ಗುಣಾಢ್ಯಾನ್ ।।೨೧೪।।

ಕೋಶಸ್ಯ – ಕೋಶದ ಅರ್ಧಸಹಿತಾಃ – ಅರ್ಧಭಾಗದಿಂದ ಕೂಡಿದ ಪಾರ್ಥಾಃ – ಪಾಂಡವರು ಯದಾ – ಯಾವಾಗ ಗಚ್ಛಂತಿ – ಹೋದರೋ ತದೈವ – ಆಗಲೇ ನಿಖಿಲಾಃ ಎಲ್ಲಾ ಪೌರಾಃ ಪಟ್ಟಣಿಗರು ತಾನ್ – ಆ ಪಾಂಡವರನ್ನು ಅನುಯಯುಃ ಅನುಸರಿಸಿ ಹೋದರು ಏಷಃಪಾಪಃ – ಈ ಪಾಪಿಷ್ಠನಾದ ಸುಯೋಧನಃ – ದುರ್ಯೋಧನನು ಗುಣಾಢ್ಯಾನ್ – ಗುಣ ಸಂಪನ್ನರಾದ ಪಾಂಡುಸುತಾನ್ – ಪಾಂಡುಪುತ್ರರನ್ನು ದೂರೇಚಕಾರ ನನು – ದೂರದೇಶಕ್ಕೆ ಕಳುಹಿಸಿದನಷ್ಟೆ ಹಾ - ಕಷ್ಟ ಬತ – ಆಶ್ಚರ್ಯ ಇತಿ – ಎಂದು ಊಚುಃ – ಹೇಳಿದರು. ।। ೨೧೪ ।।

ಭೀಮಪ್ರತಾಪಮವಲಂಬ್ಯ ಕಲಿಂಗಬಂಧಾನ್ಮುಕ್ತಃ ಸುತಾಮಪಿಹಿತಸ್ಯ ಪುರಂನಿನಾಯ ।।
ದ್ವೇಷ್ಟ್ಯೇವಮಪ್ಯತಿಬಲಾನ್ ಹಿಸದೈವಪಾರ್ಥಾನ್ಯಾಮೋವಯಂ ಗುಣಿಭಿರದ್ಯಸಹೈವಪಾರ್ಥೈಃ ।।೨೧೫।।

ಏಷಃ – ಈ ದುರ್ಯೋಧನನು ಭೀಮಪ್ರತಾಪಂ – ಭೀಮನ ಸಾಮರ್ಥ್ಯವನ್ನು ಅವಲಂಬ್ಯ – ಆಶ್ರಯಿಸಿ ಕಲಿಂಗ ಬಂಧಾತ್ – ಕಲಿಂಗನ ಬಂಧನದಿಂದ ಮುಕ್ತಸ್ಸನ್ ಬಿಡಲ್ಪಟ್ಟವನಾಗಿ ತಸ್ಯ ಆ ಕಲಿಂಗರಾಜನ ಸುತಾಮಪಿ – ಮಗಳನ್ನೂ ಕೂಡ ಪುರಂ – ಹಸ್ತಿನಾವತಿಗೆ ನಿನಾಯ - ಕರೆದುಕೊಂಡು ಹೋದನು ಏವಮಪಿ ಹೀಗಾದರೂ ಅತಿಬಲಾನ್ – ಅತ್ಯಂತ ಬಲಿಷ್ಠರಾದ ಪಾರ್ಥಾನ್ - ಪಾಂಡವರನ್ನು ಸದೈವ – ಯಾವಾಗಲೂ ದ್ವೇಷ್ಟಿ – ದ್ವೇಷಿಸುತ್ತಾನೆ ವಯಂ – ನಾವುಅದ್ಯ – ಈಗ ಗುಣಿಭಿಃ - ಸದ್ಗುಣಗಳುಳ್ಳ ಪಾರ್ಥೈಃ – ಪಾಂಡವರಿಂದ ಸಹೈವ - ಕೂಡಿಕೊಂಡೇ ಯಾಮಃ – ಹೋಗುವೆವು. ।।೨೧೫।।

ಭಾ.ಅ. ೨೦೭–೨೧೫ ಮದಮತ್ಸರಿಗಳಾದ ಕೌರವರು ಯಾವಾಗಲೂ ಪಾಂಡವರ ಜೊತೆಗೆ ಜಗಳವನ್ನೇ ಮಾಡುತ್ತಿದ್ದದ್ದನ್ನು ನೋಡಿದ ಧೃತರಾಷ್ಟ್ರನು ಧರ್ಮರಾಜನಿಗೆ "ನೀನು ನಿನ್ನ ತಮ್ಮಂದಿರಿಂದ ಕೂಡಿಕೊಂಡು ಇಂದ್ರಪ್ರಸ್ಥಕ್ಕೆ ಹೋಗು; ಅರ್ಧರಾಜ್ಯ, ಅರ್ಧಕೋಶವನ್ನು ನಿನಗೆ ಒಪ್ಪಿಸುತ್ತೇನೆ. ಅಲ್ಲಿ ನೀನು ಸುಖವಾಗಿರು. ಅಲ್ಲಿ ಇಂದ್ರನು ಬ್ರಹ್ಮಾದಿದೇವತೆಗಳಿಂದ ಅಭಿಷಿಕ್ತನಾಗಿ ರಾಜ್ಯವಾಳಿದ್ದಾನೆ. ನೀನು ಇಂದ್ರ ಸಮನಾದವನು; ನಿನಗೆ ಯೋಗ್ಯವಾಗಿದೆ ಆ ಊರು. ನಿನಗೆ ಅಲ್ಲಿಯ ರಾಜನನ್ನಾಗಿ ಅಭಿಷೇಕ ಮಾಡುತ್ತೇನೆ" ಎಂದನು ಆಗ ಧರ್ಮರಾಜನು ಸಮ್ಮತಿಸಿದನು. ಧೃತರಾಷ್ಟ್ರನು ಅಭಿಷೇಕವನ್ನು ಕೂಡ ಮಾಡಿದನು. ಆ ಅಭಿಷೇಕ ಕಾರ್ಯಕ್ರಮದಲ್ಲಿ ಮೊದಲು ಶ್ರೀವೇದವ್ಯಾಸದೇವರು 'ಚಕ್ರವರ್ತಿಯಾಗು, ಅಶ್ವಮೇಧ, ರಾಜಸೂಯ ಮೊದಲಾದ ಯಜ್ಞಗಳಿಂದ ಭಗವಂತನ ಆರಾಧನಾ ಮಾಡುತ್ತ, ಧರ್ಮದಿಂದ ರಾಜ್ಯವಾಳುತ್ತಾ ಇರು' ಎಂದು ಆಶೀರ್ವದಿಸುತ್ತಾ ದ್ರೌಪದೀಸಮೇತ ಧರ್ಮಜನಿಗೆ ಅಭಿಷೇಕ ಮಾಡಿದರು. ನಂತರ ಶ್ರೀಕೃಷ್ಣನು ಅದೇ ರೀತಿ ಆಶೀರ್ವದಿಸಿ ಅಭಿಷೇಕ ಮಾಡಿದನು. ನಂತರ ಶ್ರೀಭೀಮಸೇನದೇವರಿಗೆ ದ್ರೌಪದೀ ಸಹಿತವಾಗಿ ಯುವರಾಜ ಪದದಲ್ಲಿ ಅಭಿಷೇಕ ಮಾಡಿದರು. ಬೇರೆ ಬೇರೆ ವಿಪ್ರಪ್ರವರರೂ ಅಭಿಷೇಕ ಮಾಡಿದರು. ಆ ಸಂದರ್ಭದಲ್ಲಿ ಎಲ್ಲ ಸಜ್ಜನರೂ ಸಂತೋಷಪಟ್ಟಿದ್ದಾರೆ. ಏಳು ದಿನಗಳ ಪರ್ಯಂತ ಈ ಅಭಿಷೇಕ ಮಹೋತ್ಸವ ಕಾರ್ಯಕ್ರಮವು ನಡೆದಿದೆ. ನಂತರ ಪಾಂಡವರು ಶ್ರೀವೇದವ್ಯಾಸದೇವರು, ಶ್ರೀಕೃಷ್ಣದೇವರು, ತಾಯಿ ಕುಂತಿದೇವಿ, ಪತ್ನಿಯಾದ ದ್ರೌಪದೀಯಿಂದ ಸಹಿತರಾಗಿ ಇಂದ್ರಪ್ರಸ್ಥಕ್ಕೆ ಹೊರಟರು. ಆಗ ಎಲ್ಲ ಪ್ರಜೆಗಳೂ ಅವರನ್ನು ಬೆನ್ನುಹತ್ತಿ ಹೊರಟಿದ್ದಾರೆ ಹಾಗು

'ಈ ಪಾಪಿಷ್ಠನಾದ ದುರ್ಯೋಧನನು ಗುಣಶ್ರೇಷ್ಠರಾದ ಈ ಪಾಂಡವರನ್ನು ಹೊರಕಳಿಸಿ ನಮಗೆಲ್ಲ ದೂರ ಮಾಡಿದನು. ಶ್ರೀಭೀಮಸೇನದೇವರ ಶಕ್ತಿಯಿಂದಾಗಿ ಕಳಿಂಗ ಬಂಧನದಿಂದ ಮುಕ್ತನಾಗಿ ಕಳಿಂಗರಾಜಕುಮಾರಿಯನ್ನು ಹೊಂದಲು ಶಕ್ಯವಾಯಿತು. ಈ ರೀತಿ ಆ ಪಾಂಡವರಿಂದ ಯಾವಾಗಲೂ ಉಪಕೃತನಾದ ಈ ದುಷ್ಟನು ಅವರನ್ನೇ ದ್ವೇಷಿಸುತ್ತಾನೆ. ನಾವು ಮಾತ್ರ ಗುಣಿಗಳಾದ ಪಾಂಡವರನ್ನೇ ಬೆನ್ನುಹತ್ತಿ ಹೋಗೋಣ ಎಂದು ಎನ್ನುತ್ತಿದ್ದರು.

ಆಚ್ಛಾಪಯತ್ಯಪಿ ಸಭೇರಿರವೇಣ ಪಾರ್ಥಾನ್ನೈವಾನುಗಚ್ಛತ ಯದಿವ್ಯಜತಾನುವೋಽದ್ಯ ॥
ವಿತ್ತಂಹರಿಷ್ಯಇಹ ಸರ್ವಮುಪೈತಿ ತಚ್ಚ ಪಾಪಃಕರೋತು ನವಯಂವಿಜಹಾಮುಪಾರ್ಥಾನ್ ॥ ೨೧೬ ॥

(ದುರ್ಯೋಧನೇ — ದುರ್ಯೋಧನನು) ಸಭೇರಿರವೇಣ – ಭೇರಿಯ ಧ್ವನಿಯಿಂದ ಕೂಡಿದ ದೂತನಿಂದ ಪಾರ್ಥಾನ್ — ಪಾಂಡವರನ್ನು ನೈವಾನುಗಚ್ಛತ – ಅನುಸರಿಸಿ ಹೋಗಬೇಡಿರಿ ಯದಿ ಅನುವ್ರಜಥ – ಅನುಸರಿಸಿಹೋದ ಪಕ್ಷದಲ್ಲಿ ಅದ್ಯೈವ — ಈಗಲೇ ವಃ — ನಿಮ್ಮ ಸರ್ವಂ – ಎಲ್ಲಾ ವಿತ್ತಂ – ಹಣವನ್ನು ಹರಿಷ್ಯೇ — ಅಪಹರಿಸುವೆನು. ಇತಿ — ಎಂದು ಆಚ್ಛಾಪಯತಿಸತ್ಯಪಿ – ಅಪ್ಪಣೆ ಮಾಡುವವನಾದರೂ ಕೂಡ ಪಾಪಃ—ಪಾಪಿಷ್ಠನಾದ ದುರ್ಯೋಧನನು ತಚ್ಚಸರ್ವಮಪಿ— ಅವೆಲ್ಲವನ್ನೂ ಕೂಡ ಇಹ—ಇಲ್ಲಿ ಕರೋತು—ಮಾಡಲಿ ವಯಂ—ನಾವು ಪಾರ್ಥಾನ್ — ಪಾಂಡವರನ್ನು ನ ವಿಜಹಾಮ – ಬಿಡಲಾರೆವು. ॥ ೨೧೬ ॥

ಸದ್ಭಿರ್ಹಿಸಂಗತಿರಿಹೈವ ಸುಖಸ್ಯಹೇತುರ್ಮೋಕ್ಷೈಕಹೇತುರುತ ತದ್ವಿಪರೀತಮನ್ಯತ್ ॥
ತಸ್ಮಾದ್ವ್ರಜೇಮ ಸಹಪಾಂಡುಸುತೈರ್ಹಿ ಶಕ್ರಪ್ರಸ್ಥಂತ್ವಿತಿಸ್ಮ ಧೃತಚೇತಸ ಆಹ ಧರ್ಮಃ ॥ ೨೧೭ ॥

ಸದ್ಭಿಃ—ಸಜ್ಜನರಿಂದ ಸಂಗತಿಃ—ಸಂಬಂಧವು ಇಹ—ಈ ಲೋಕದಲ್ಲಿ ಸುಖಸ್ಯ—ಆನಂದಕ್ಕೆ ಹೇತುಃ—ಕಾರಣವು ಉತ—ಹಾಗೆಯೇ ಮೋಕ್ಷೈಕಹೇತುಃ—ಮೊಕ್ಷಕ್ಕೂ ಮುಖ್ಯ ಕಾರಣವು ಅನ್ಯತ್—ಸಜ್ಜನರ ಸಂಗಕ್ಕಿಂತ ಬೇರೆಯಾದ ದುರ್ಜನರ ಸಂಗವು ತದ್ವಿಪರೀತಂ—ಈ ಲೋಕದಲ್ಲಿ ದುಃಖಕ್ಕೆ ಕಾರಣವು; ಪರಲೋಕದಲ್ಲಿ ನರಕಕ್ಕೆ ಕಾರಣವು ತಸ್ಮಾತ್— ಆದ್ದರಿಂದ ವಯಂ—ನಾವು ಪಾಂಡುಸುತೈಃ—ಪಾಂಡುಪುತ್ರರಿಂದ ಸಹ—ಕೂಡಿಕೊಂಡು ಶಕ್ರಪ್ರಸ್ಥಂ—ಇಂದ್ರಪ್ರಸ್ಥವನ್ನು ವ್ರಜೇಮ — ಹೋಗುವೆವು ಇತ್ಯೇವ—ಈ ರೀತಿಯಾಗಿಯೇ ಧೃತಚೇತಸಃ — ನಿಶ್ಚಿತಾಂತಃಕರಣವುಳ್ಳ ಪಟ್ಟಣಿಗರನ್ನು ಧರ್ಮಃ—ಧರ್ಮರಾಜನು ಆಹ—ಹೇಳಿದನು. ॥ ೨೧೭ ॥

ಪ್ರೀತಿರ್ಯದಿಸ್ಮ ಭವತಾಂಮಯಿ ಸಾನುಜೇಽಸ್ತಿತಿಷ್ಠಧ್ವಮತ್ರ ಪಿತುರೇವಹಿಶಾಸನೇಮೇ ॥
ಕೀರ್ತಿರ್ಹಿವೋಽನುಗಮನಾತ್ಪಿತುರತ್ಯಯೇನ ನಶ್ಯೇನ್ನ ಇತ್ಯನುಸರಧ್ವಮಿಹಾಂಬಿಕೇಯಂ ॥ ೨೧೮ ॥

ಭವತಾಂ ನಿಮಗೆ ಸಾನುಜೇ—ತಮ್ಮಂದಿರಿಂದ ಕೂಡಿದ ಮಯಿ—ನನ್ನಲ್ಲಿ ಪ್ರೀತಿಃ—ಪ್ರೇಮವು ಯದ್ಯಸ್ತಿ— ಇರುವುದಾದರೆ ತರ್ಹಿ—ಆ ಪಕ್ಷದಲ್ಲಿ ಮೇ ನನ್ನ ಪಿತುಃ—ತಂದೆಯಾದ ಧೃತರಾಷ್ಟ್ರನ ಶಾಸನೇಏವ—ಅಪ್ಪಣೆಯಲ್ಲಿಯೇ ತಿಷ್ಠಧ್ವಂ—ನಿಲ್ಲಿರಿ ವಃ—ನಿಮ್ಮ ಅನುಗಮನಾತ್—ನಮ್ಮನ್ನು ಅನುಸರಿಸುವುದರಿಂದ ಪಿತುಃ—ತಂದೆಯ ಅತ್ಯಯೇನ— ಅತಿಕ್ರಮಣದಿಂದ ಅಂದರೆ ಮಾತನ್ನು ಮೀರುವುದರಿಂದ ನಃ—ನಮ್ಮ ಕೀರ್ತಿಃ—ಯಶಸ್ಸು ನಶ್ಯೇತ್—ನಾಶವಾಗುವುದು ಇತಿ—ಈ ಕಾರಣದಿಂದ ಇಹ—ಈ ಹಸ್ತಿನಾವತಿಯಲ್ಲಿಯೇ ಆಂಬಿಕೇಯಂ—ಆಂಬಿಕಾ ಪುತ್ರನಾದ ಧೃತರಾಷ್ಟ್ರನನ್ನು ಅನುಸರಧ್ವಂ—ಅನುಸರಿಸಿಕೊಂಡಿರಿ ಎಂದು ಧರ್ಮರಾಜನು ಹೇಳಿದನು. ॥ ೨೧೮ ॥

ಇತ್ಯೇವತೈಃಪುರಜನಾ ನಿಖಿಲೈರ್ನಿಷಿದ್ಧಾಃ ಕೃಚ್ಛ್ರೇಣತಸ್ಥುರಪಿ ತಾನ್ಮನಸಾನ್ವಗಚ್ಛನ್ ॥
ಪ್ರಾಪ್ಯಾಥಶಕ್ರಪುರಮಸ್ಮರತಾಂಚ ಕೃಷ್ಣೌ ದೇವೇಶವಾರ್ಧಕಿ ಮುಖಾಗಮದತ್ರಸೋಽಪಿ ॥ ೨೧೯ ॥

ಇತ್ಯೇವ—ಈ ರೀತಿಯಾಗಿಯೇ ನಿಖಿಲೈಃ—ಎಲ್ಲಾ ತೈಃ—ಆ ಪಾಂಡವರಿಂದ ನಿಷಿದ್ಧಾಃ—ತಡೆಯಲ್ಪಟ್ಟ ಪುರಜನಾಃ— ಪಟ್ಟಣಿಗರು ಕೃಚ್ಛ್ರೇಣ—ಕಷ್ಟದಿಂದ ತಸ್ಥುಃ—ನಿಂತರು ಅಪಿ—ಹಾಗಾದರೂ ಮನಸಾ—ಮನಸ್ಸಿನಿಂದ ತಾನ್—ಆ ಪಾಂಡವರನ್ನು ಅನ್ವಗಚ್ಛನ್—ಅನುಸರಿಸಿ ಹೋದರು ಕೃಷ್ಣೌ—ವ್ಯಾಸ ಕೃಷ್ಣರು ಅಥ—ಅನಂತರ ಶಕ್ರಪುರಂ—ಇಂದ್ರ

ಪ್ರಸ್ಥವನ್ನು ಪ್ರಾಪ್ಯ—ಹೊಂದಿ ದೇವೇಶವಾರ್ಧಕಿಂ—ದೇವತೆಗಳಿಗೆ ಸ್ವಾಮಿಯಾದ ಇಂದ್ರನ ಬಡಗಿಯಾದ ವಿಶ್ವಕರ್ಮನನ್ನು ಅಸ್ಮರತಾಂ—ಸ್ಮರಿಸಿದರು ಅಥ—ಸ್ಮರಣಾನಂತರ ಸೋಽಪಿ—ಆ ವಿಶ್ವಕರ್ಮನಾದರೂ ಅತ್ರ—ಇಂದ್ರಪ್ರಸ್ಥಕ್ಕೆ ಆಗಮತ್—ಬಂದನು. ॥ ೨೧೯ ॥

ಭಾ.ಅ. ೨೧೬-೨೧೯ ಆಗ ದುರ್ಯೋಧನನು "ಪಾಂಡವರ ಹಿಂದೆ ಹೋಗಕೂಡದು: ಹೋದವರಿಗೆ ಶಿಕ್ಷಾರೂಪವಾಗಿ ಅವರ ಸೊತ್ತನ್ನು ಅಪಹರಿಸಲಾಗುವದು" ಎಂದು ದೂತರಿಂದ ನಗಾರಿಬಡಿಸಿ ಡಂಗುರ ಹಾಕಿಸುತ್ತಿದ್ದನು. ಅದನ್ನು ಕೇಳಿದರೂ ಕೂಡ ಪ್ರಜೆಗಳು ನಮ್ಮ ಸೊತ್ತನ್ನು ಅಪಹರಿಸಿದರೂ ಚಿಂತೆಯಿಲ್ಲ; ನಾವು ಮಾತ್ರ ಪಾಂಡವರನ್ನು ಬಿಡಲಾರೆವು. ಸಜ್ಜನರಿಂದ ಓಡನಾಟವು ಐಹಿಕ ಸುಖಕ್ಕೆ, ಮೋಕ್ಷಸುಖಕ್ಕೆ ಕಾರಣವಾಗುವದು. ದುರ್ಜನ ಸಹವಾಸವು ಐಹಿಕ-ಪಾರತ್ರಿಕ ದುಃಖಕ್ಕೆ ಕಾರಣವಾಗುವುದು. ಆದ್ದರಿಂದ ಇವರ ಜೊತೆಗೆ ಹೋಗುವಾ" ಎಂದು ನಿಶ್ಚಯಮಾಡಿಕೊಂಡು ಬೆನ್ನು ಹತ್ತಿದರು. ಆಗ ಅವರನ್ನು ಕುರಿತು ಧರ್ಮರಾಜನು "ನಿಮಗೆಲ್ಲ ನಮ್ಮಲ್ಲಿ ಪ್ರೀತಿ ಇರುವದಾದರೆ ನೀವು ಇಲ್ಲಿಯೇ ಇರಬೇಕು. ನಮ್ಮ ದೊಡ್ಡಪ್ಪನ ಆಡಳಿತದಲ್ಲಿಯೇ ಇರಬೇಕು. ಹಾಗೆ ಮಾಡದೇ ನಮ್ಮ ಹಿಂದೆ ಬಂದರೆ ದೊಡ್ಡಪ್ಪನ ಆಜ್ಞಾ ಉಲ್ಲಂಘನೆಯಾಗಿ ಅಪಕೀರ್ತಿಯು ನಮಗೂ-ನಿಮಗೂ ಇಬ್ಬರಿಗೂ ಬರುವದು" ಎಂದು ಹೇಳಿದನು. ಆಗ ಪ್ರಜೆಗಳು ಧರ್ಮರಾಜನ ಮಾತನ್ನು ಮೀರಲಾರದೇ ಕಷ್ಟದಿಂದ ದೇಹದಿಂದ ಅಲ್ಲಿಯೇ: ನಿಂತರೂ ಕೂಡ ಮನಸ್ಸಿನಿಂದ ಮಾತ್ರ ಪಾಂಡವರ ಹಿಂದೆಯೇ ಹೋದರು. ಇಂದ್ರಪ್ರಸ್ಥಕ್ಕೆ ಬಂದನಂತರ ಶ್ರೀವೇದವ್ಯಾಸರು, ಶ್ರೀಕೃಷ್ಣನು ಇಬ್ಬರೂ ದೇವತಕ್ಷಕ (ಬಡಗಿ) ನಾದ ವಿಶ್ವಕರ್ಮನನ್ನು ಸ್ಮರಿಸಿದರು. ಅವನು ಕೂಡಲೇ ಬಂದನು.

ವಾಸಿಷ್ಠಪೇನ ಯದುಪೇನಚ ಪಾಂಡವಾನಾಂ ರತ್ನೋತ್ಕರಂಕುರುಪುರಂ ಪುರುಹೂತಪುರ್ಯಾಃ ॥
ಸಾದೃಶ್ಯತಸ್ತ್ವಿತಿ ನಿಯುಕ್ತಉಭೌ ಪ್ರಣಮ್ಯ ಸರ್ವೇಶ್ವರೌ ಸಕೃತವಾಂಶ್ಚ ಪುರಂತಥೈವ ॥ ೨೨೦ ॥

ವಾಸಿಷ್ಠಪೇನ-ವಸಿಷ್ಠಕುಲಪತಿಗಳಾದ ವೇದವ್ಯಾಸರಿಂದಲೂ ಯದುಪೇನ-ಯದುಪತಿಯಾದ ಕೃಷ್ಣನಿಂದಲೂ ಪಾಂಡವಾನಾಂ-ಪಾಂಡವರಿಗೆ ಪುರುಹೂತಪುರ್ಯಾಃ – ಇಂದ್ರನ ಪಟ್ಟಣವಾದ ಅಮರಾವತಿಯ ಸಾದೃಶ್ಯತಃ-ಸಾದೃಶ್ಯದಿಂದ ರತ್ನೋತ್ಕರಂ-ರತ್ನಮಯವಾದ ಪುರಂ – ಪಟ್ಟಣವನ್ನು ಕುರು – ಮಾಡು ಇತಿ – ಈ ರೀತಿಯಾಗಿ ನಿಯುಕ್ತಃ ಆಜ್ಞಾಪಿಸಲ್ಪಟ್ಟ ಸಃ – ವಿಶ್ವಕರ್ಮನು ಸರ್ವೇಶ್ವರೌ – ಎಲ್ಲರಿಗೂ ಸ್ವಾಮಿಗಳಾದ ಉಭೌ – ವ್ಯಾಸ ಕೃಷ್ಣರನ್ನು ಪ್ರಣಮ್ಯ - ನಮಸ್ಕರಿಸಿ ತಥೈವ – ಅವರು ಹೇಳಿದಂತೆಯೇ ಪುರಂ – ರತ್ನಮಯವಾದ ಪಟ್ಟಣವನ್ನು ಕೃತವಾನ್ – ಮಾಡಿದನು. ॥ ೨೨೦ ॥

ದೇಶಂಚನಾತಿಜನಸಂವೃತಮನ್ಯದೇಶಸಂಸ್ಥೈರ್ಜನೈರಭಿಪುಪೂರಿರ ಆಶುಪಾರ್ಥಾಃ ॥
ತೇಷಾಂಗುಣೈರ್ಹರಿಪದಾನತಿಹೇತುತಶ್ಚ ರಾಷ್ಟ್ರಾಂತರಾ ಇಹಶುಭಾವಸತೀಃಸ್ಮಚಕ್ರುಃ ॥ ೨೨೧ ॥

ನಾತಿಜನಸಂವೃತಂ – ಬಹಳ ಜನಸಮೃದ್ಧಿ ಇಲ್ಲದಿರುವ ಅಂದರೆ ಅಲ್ಪಜನರುಳ್ಳ ದೇಶಂ – ತಮ್ಮ ಪಟ್ಟಣವನ್ನು ಪಾರ್ಥಾಃ – ಪಾಂಡವರು ಅನ್ಯದೇಶಸಂಸ್ಥೈಃ – ಬೇರೆ ದೇಶದಲ್ಲಿರತಕ್ಕ ಜನೈಃ – ಜನರಿಂದ ಆಶು – ಕೂಡಲೇ ಅಭಿಪು ಪೂರಿರೇ – ಪೂರ್ಣ ಮಾಡಿದರು ತೇಷಾಂ – ಆ ಪಾಂಡವರ ಗುಣೈಃ – ಗುಣಗಳಿಂದಲೂ ಹರಿಪದಾನತಿಹೇತುತಶ್ಚ – ಶ್ರೀ ಕೃಷ್ಣನ ಚರಣಗಳ ನಮ್ರತಾದ ನಿಮಿತ್ತದಿಂದಲೂ ರಾಷ್ಟ್ರಾಂತರಾಃ – ಬೇರೆ ದೇಶದಲ್ಲಿರುವ ಶುಭಾಃ – ಸಜ್ಜನರು ಇಹ – ಈ ಇಂದ್ರಪ್ರಸ್ಥದಲ್ಲಿ ವಸತೀಃ – ಮನೆಗಳನ್ನು ಚಕ್ರುಃಸ್ಮ – ಮಾಡಿದರು. ॥ ೨೨೧ ॥

ಪ್ರಸ್ಥಾಪ್ಯದೂರಮನುಜಸ್ಯ ಸುತಾನ್ಸರಾಜಾ ಚಕ್ರೇಽಭಿಷೇಕಮುಪಿ ತತ್ರಸುಯೋಧನಸ್ಯ ॥
ದುಃಶಾಸನಂಚ ಯುವರಾಜಮುಸ್ಫೋವಿಧಾಯಮೇನೇ ಕೃತಾರ್ಥಮಿವಚ ಸ್ವಮುಶಾಂತಕಾಮುಃ ॥ ೨೨೨ ॥

ಸರಾಜಾ – ಆ ಧೃತರಾಷ್ಟ್ರನು ಅನುಜಸ್ಯ ತಮ್ಮನಾದ ಪಾಂಡುವಿನ ಸುತಾನ್ - ಮಕ್ಕಳನ್ನು ದೂರಂ – ದೂರ ದೇಶಕ್ಕೆ ಪ್ರಸ್ಥಾಪ್ಯ – ಕಳುಹಿಸಿ ತತ್ರ – ಆ ಹಸ್ತಿನಾವತಿಯಲ್ಲಿ ಸುಯೋಧನಸ್ಯ – ದುರ್ಯೋಧನನಿಗೆ ಅಬಿಷೇಕಮುಪಿ – ಪಟ್ಟಾಭಿಷೇಕವನ್ನೂ ಕೂಡ ಚಕ್ರೇ – ಮಾಡಿದನು ಅಶಾಂತಕಾಮುಃ – ಅಲಂಬುದ್ಧಿಯಿಲ್ಲದ ವಿಷಯಾಭಿಲಾಷೆವುಳ್ಳ ಅಸೌ –

ಈ ಧೃತರಾಷ್ಟ್ರನು ದುಃಶಾಸನಂ – ದುಃಶಾಸನನನ್ನು ಯುವರಾಜಂ – ಯುವರಾಜನನ್ನಾಗಿ ವಿಧಾಯ – ಮಾಡಿ ಸ್ವಂ – ತನ್ನನ್ನು ಕೃತಾರ್ಥಮಿವ – ಕೃತಕೃತ್ಯನೆನ್ನೆಂಬಂತೆ ಮೇನೇ – ತಿಳಿದನು. (ಕೃತಾರ್ಥನೇ ಆಗಿದ್ದರೆ ಕಾಡಿಗೆಹೋಗುತ್ತಿದ್ದನು) ॥೨೨೨॥

ಪಾರ್ಥಾಶ್ಚತೇ ಮುಮುದುರತ್ರ ವಸಿಷ್ಠವೃಷ್ಣಿವರ್ಯೋದಿತಾನಖಿಲತತ್ವವಿನಿರ್ಣಯಾಂಸ್ತು ।।
ಶೃಣ್ವಂತಏವಹ ಸದಾ ಪೃಥಿವೀಂಚ ಧರ್ಮಾದ್ಭುಂಜಂತ ಆಶ್ರಿತರಮಾಪತಿಪಾದಯುಗ್ಮಾಃ ।। ೨೨೩ ।।

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ ಶ್ರೀಮನ್ಮಹಾಭಾರತತಾತ್ಪರ್ಯ ನಿರ್ಣಯೇ ಪಾಂಡವರಾಜ್ಯಲಾಭೋನಾಮೈಕೋನವಿಂಶೋಧ್ಯಾಯಃ ॥

॥ ಶ್ರೀಕೃಷ್ಣಾರ್ಪಣಮಸ್ತು ॥

ತೇಪಾರ್ಥಾಃ – ಆ ಪಾಂಡವರು ಅತ್ರ – ಈ ಇಂದ್ರಪ್ರಸ್ಥದಲ್ಲಿ ವಸಿಷ್ಠವೃಷ್ಣಿವರ್ಯೋದಿತಾನ್ – ವಸಿಷ್ಠಕುಲ ಮತ್ತು ವೃಷ್ಣಿಕುಲಗಳಲ್ಲಿ ಶ್ರೇಷ್ಠರಾದ ವ್ಯಾಸಕೃಷ್ಣರಿಂದ ಹೇಳಲ್ಪಟ್ಟ ಅಖಿಲತತ್ವವಿನಿರ್ಣಯಾಂಸ್ತು – ಎಲ್ಲಾ ತತ್ವಗಳ ವಿಶೇಷ ನಿರ್ಣಯಗಳನ್ನಾದರೂ ಸದಾ – ಯಾವಾಗಲೂ ಶೃಣ್ವಂತಃ ಸಂತಏವ – ಕೇಳತಕ್ಕವರಾಗಿಯೇ ಪೃಥಿವೀಂ – ಭೂಮಿಯನ್ನು ಧರ್ಮಾತ್ – ಧರ್ಮದಿಂದ ಸದಾ – ಯಾವಾಗಲೂ ಭುಂಜಂತಸ್ಸಂತಃ – ಪಾಲಿಸತಕ್ಕವರಾಗಿ ಆಶ್ರಿತರಮಾಪತಿ ಪಾದಯುಗ್ಮಾಸ್ಸಂತಃ – ಆಶ್ರಯಿಸಲ್ಪಟ ಲಕ್ಷ್ಮೀಪತಿಯಾದ ಪರಮಾತ್ಮನ ಚರಣಯುಗಲವುಳ್ಳವರಾಗಿ ಮುಮುದುಃ – ಸಂತೋಷಪಟ್ಟರು. ॥ ೨೨೩ ॥

ಈ ರೀತಿಯಾಗಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಮಾಡಲ್ಪಟ್ಟ ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಪಾಂಡವರಿಗೆ ರಾಜ್ಯಲಾಭಾದಿಗಳನ್ನು ಪ್ರತಿಪಾದಿಸತಕ್ಕ ಹತ್ತೊಂಭತ್ತನೆಯ ಅಧ್ಯಾಯವು ಸಮಾಪ್ತವಾಯಿತು.

ಈ ಕೃತಿಯು ಶ್ರೀಮಧ್ವಾಂತರ್ಗತ ಶ್ರೀಕೃಷ್ಣನಿಗೆ ಅರ್ಪಿತವಾಗಲಿ ಅದರಿಂದ ಹರಿವಾಯುಗಳು ಪ್ರೀತರಾಗಲಿ.

ಭಾವಾನುವಾದ ೨೨೦–೨೨೩ "ಪಾಂಡವರಿಗಾಗಿ ಈ ಇಂದ್ರಪ್ರಸ್ಥದಲ್ಲಿ ಸ್ವರ್ಗಸದೃಶವೈಭವೋಪೇತವಾದ, ರತ್ನಖಚಿತವಾದ ಪಟ್ಟಣವನ್ನು ನಿರ್ಮಿಸು" ಎಂದು ಇಬ್ಬರೂ ಆ ವಿಶ್ವಕರ್ಮನಿಗೆ ಆಜ್ಞಾಪಿಸಿದರು. ಅವನು ಎರಡು ಭಗವದ್ರೂಪಗಳಿಗೂ ನಮಸ್ಕರಿಸಿ, ಬಂದು ಅದ್ಭುತವಾದ ಪುರದ ನಿರ್ಮಾಣ ಮಾಡಿದನು. ಈ ಊರಿನಲ್ಲಿ ಅಷ್ಟೊಂದು ಜನ ವಸತಿ ಇರಲಿಲ್ಲ. ಪಾಂಡವರು ಬೇರೆ ಬೇರೆ ದೇಶಗಳಲ್ಲಿರುವ ಪ್ರಜೆಗಳನ್ನು ಕರೆತಂದು ಪುರವನ್ನು ತುಂಬಿದರು. ಪಾಂಡವರಲ್ಲಿರುವ ವಿಷ್ಣುಭಕ್ತಿ, ಧೈರ್ಯ, ಔದಾರ್ಯ, ದಯಾ ಮೊದಲಾದ ಸದ್ಗುಣಗಳಿಂದ ಆಕರ್ಷಿತರಾದ, ಭಗವದ್ಭಕ್ತರಾದ, ಪರರಾಷ್ಟ್ರವಾಸಿ ಜನರು ಸ್ವತಃ ಬಂದು ಪಾಂಡವರ ಸನ್ನಿಧಿಯಲ್ಲಿ ವಾಸಮಾಡಿದರು. ಧೃತರಾಷ್ಟ್ರನು ಪಾಂಡವರನ್ನು ದೂರಕಳಿಸಿ ದುರ್ಯೋಧನನಿಗೆ ರಾಜನಾಗಿ, ದುಃಶಾಸನನಿಗೆ ಯುವರಾಜನಾಗಿ ಅಭಿಷೇಕವನ್ನು ಹಸ್ತಿನಾವತಿಯಲ್ಲಿ ಮಾಡಿದನು. ಇಷ್ಟು ಮಾಡಿದಾಗ ದೊಡ್ಡ ಮಹಾಕಾರ್ಯ ಮಾಡಿದವನಂತೆ, ಕೃತಾರ್ಥನಾದವನಂತೆ ಭಾವಿಸಿಕೊಂಡನು. ಪಾಂಡವರು ಶ್ರೀಲಕ್ಷ್ಮೀರಮಣನಾದ ಶ್ರೀನಾರಾಯಣನ, ಅವನ ಅವತಾರರಾದ ಶ್ರೀಕೃಷ್ಣ ಶ್ರೀವೇದವ್ಯಾಸರ ಪಾದಗಳನ್ನು ಆಶ್ರಯಿಸಿ, ಧರ್ಮದಿಂದ ರಾಜ್ಯವಾಳುತ್ತಾ, ಶ್ರೀಕೃಷ್ಣ–ಶ್ರೀವ್ಯಾಸರಿಂದ ತತ್ವನಿರ್ಣಯ ಶ್ರವಣವನ್ನು ಮಾಡುತ್ತಾ ಸಂತೋಷದಿಂದ ವಾಸಮಾಡಿದರು.

ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ರಚಿತವಾದ ಶ್ರೀಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಹತ್ತೊಂಭತ್ತನೆಯ ಅಧ್ಯಾಯದ ಭಾವಾನುವಾದವು ಮುಗಿಯಿತು.

॥ ಶ್ರೀ ಕೃಷ್ಣಾರ್ಪಣಮಸ್ತು, ಶ್ರೀಮಧ್ವೇಶಾರ್ಪಣಮಸ್ತು ॥

ತಿದ್ದುಪಡಿ

ಪುಟ	ಸಾಲು	ತಪ್ಪು	ಸರಿ
1	12	ಆರ್ಜುನ	ಅರ್ಜುನ
2	1	ಇಚ್ಚಿಸ	ಇಚ್ಛಿಸ
2	4	ದೃಚ	ದೃಢ
4	26	ಅಪಣೆ	ಅಪ್ಪಣೆ
4	28	ಮಾರ್ಯಾದಾ	ಮರ್ಯಾದಾ
5	11	ಆಜ್ಞಾಪಿಸಿದ್ದು	ಆಜ್ಞಾಪಿಸಿದ್ದು
5	23	ದೌಪದಿ	ದ್ರೌಪದಿ
5	33	ಭಗವದ್ಬಕ್ತ	ಭಗವದ್ಭಕ್ತ
6	33	ನಿಮಿತ	ನಿಮಿತ್ತ
7	8	ತಮ	ತಮ್ಮ
7	13	ಯುದ್ಧವನು	ಯುದ್ಧವನ್ನು
7	22	ಕಾರಣವದಿಂದ	ಕಾರಣದಿಂದ
7	23	ಜನಾಂತರ	ಜನ್ಮಾಂತರ
8	11	ಧರ್ಮವಲ್ಲಿ	ಧರ್ಮದಲ್ಲಿ
8	26	ಭಾಗವಂ	ಭಾರ್ಗವಂ
9	9	ತೋರಿದನು	ತೋರಿಸಿದನು
9	28	ಕಂತಿ	ಕುಂತಿ
9	29	ಅ ವತ್ಥಾಮ	ಅಶ್ವತ್ಥಾಮ
9	33	ತಿಳಿದ	ತಿಳಿದರೂ
12	23	ಸಿದ್ಧರಾದರು,	ಸಿದ್ಧರಾದರು.
15	22	ಸ್ತ್ರೀಯೋ	ಸ್ತ್ರಿಯೋ
18	7	ನಿರಾಯಧೌ	ನಿರಾಯುಧೌ
20	10	ಅಪೆಕ್ಷಿಸುತ್ತೇನೆ	ಅಪೇಕ್ಷಿಸುತ್ತೇನೆ
21	9	ಅರ್ಜುನನ್ನು	ಅರ್ಜುನನನ್ನು
21	32	ದುರ್ಯೋಧನದಿಗಳ	ದುರ್ಯೋಧನಾದಿಗಳ
24	6	ಆಶ್ರಯಿಸಿ	ಆಶ್ರಯಿಸಿ
24	29	ಅಂ ದಿಂಪ	ಅಂಶದಿಂದ
25	7	ಭತೃಭಿ	ಭರ್ತೃಭಿಃ
25	14	ಸ್ಮರ್ಶ	ಸ್ಪರ್ಶ
26	34	ಸಮಯದ	ಸಮಯದಲ್ಲಿ
32	27	ಪಾಪ್ಯ	ಪ್ರಾಪ್ಯ
33	1	ಭಾರತೀದೇವಿಗೆ ಕೊಟ್ಟನು	ಭಾರತೀದೇವಿಗೆ ವರವನ್ನು ಕೊಟ್ಟನು.
38	16	ದೇವತೆಗಗಳು	ದೇವತೆಗಳು
38	19	ಪೀತಿಯನ್ನು	ಪ್ರೀತಿಯನ್ನು
38	30	ಏಲ್ಲಾ	ಎಲ್ಲಾ
40	18	ಯುಶ್ಚ	ಯಶ್ಚ
42	13	ಕರ್ತಿನಾಶಃ	ಕೀರ್ತಿನಾಶಃ
42	17	ನಮನ್ನು	ನಮ್ಮನ್ನು
47	23	ರುಚಿಶ	ರುಚಿಶ್ಚ

ಪುಟ	ಸಾಲ	ತಪ್ಪು	ಸರಿ
50	7	ದದಕ್ಕೆ	ದಕ್ಕೆ
50	15	ವಜೋ	ವಜೋ
51	9	ಯಷ್ಮಾಸು	ಯುಷ್ಮಾಸು
51	14	ಘೃತ	ಘೃತ
51	30	ಊಪತುಂಬ್ದಕಾರ್ಧಂ	ಊಪತುರಬ್ದಕಾರ್ಧಂ ।
54	8	ಪ್ರವೇಶಿಸಿತು	ಪ್ರವೇಶಿಸಿತು
55	4	ದುಖಃ	ದುಃಖ
56	32	ನಾಳೆಯೇ	ನಾಡಿದ್ದೇ
61	7	ಕಾಲತ ಇತಿ	ಕಾಲ ಇತಿ
63	2	ಭಾರ್ಯೈ	ಭಾಯ್ರೈ
66	23	ಲೊಕ	ಲೋಕ
72	32	ಶೃಣ್ಣಂತ	ಶೃಣ್ವಂತ
73	1	ಮಗಲೋತ್ಸವ	ಮಂಗಲೋತ್ಸವ
73	3	ಎರಪಮ	ಪರಮ
73	4	ಮಾರ್ಗ	ಮಾರ್ಗದ
73	5	ರಡು	ಎರಡು
73	4	ಪಾಂಡವರುದ	ಪಾಂಡವರು
84	21	ದ್ರುಪದ:	ಸದ್ರುಪದಃ
85	10	ಕೃತ್ರಿಯ	ಕ್ಷತ್ರಿಯ
89	25	ದೌಪದಿ	ದ್ರೌಪದಿ
~~90~~	~~14~~	~~ದೌಪದಿ~~	~~ದ್ರೌಪದಿ~~
90	18	ಸಹಿತಾನ್	ಸಹಿತಾನಿ
91	1	ದಾಶೀಶ್ಚ	ದಾಸೀಶ್ಚ
91	2	ಆಶ್ಚರ್ಯಕರಗವಾದ	ಆಶ್ಚರ್ಯಕರವಾದ
91	17	ಸರ್ವಾಭಿವೃದ್ಧಿ	ಸರ್ವಾಭಿವೃದ್ಧಿ
96	29	ಭೆದದಿಂದ	ಭೇದದಿಂದ
98	30	ಮೃತೇಸ್ವರೂಪ	ಮೃತೇಃಸ್ವರೂಪ
99	1	ಹರಿಸರಣೆಯು	ಹರಿಸ್ಮರಣೆಯು
101	9	ಸಪ್ತ್ಯವಸ್ಥೆ	ಸುಪ್ತ್ಯವಸ್ಥೆ
103	18	ಆಂಥದ್ದನ್ನು	ಅಂಥದ್ದನ್ನು
103	19	ನಿನ	ನಿನ್ನ
103	32	ಆಲಕ್ಷಿಲ್ರೀ	ಅಲಕ್ಷಿಲ್ರೀ
104	3	ಪಡಾನಸ್ಯ	ಪಡಾನನಸ್ಯ
104	10	ದುಶ್ಯಾಸನಸ್ಯ	ದುಃಶಾಸನಸ್ಯ
105	3	ಗೃಹಿತೇ	ಗೃಹೀತೇ
105	7	ದುಯೋಧವಾ	ದುರ್ಯೋಧನಾ
106	15	ವೆ ದಲಾಗಿ	ಮೊದಲಾಗಿ
107	18	ಬಂಧ ತ್	ಬಂಧಾತ್
108	17	ದು ಖಕ್ಕೆ	ದುಃಖಕ್ಕೆ

ಪುಟ	ಸಾಲು	ತಪ್ಪು	ಸರಿ
109	32	ಅಬಿಷೇಕಮುಖಿ	ಅಭಿಷೇಕಮುಖಿ
110	12	ಆಶ್ರಯಿಸಲ್ಪಟ	ಆಶ್ರಯಿಂಸಲ್ಪಟ್ಟ